
ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ

ಸಂಪಾದಕರು
ಬಿ. ಶೇಷಾದ್ರಿ
ಟಿ.ಆರ್. ಚಂದ್ರಶೇಖರ





ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ

ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ

ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ

ಸಂಪಾದಕರು
ಬಿ. ಶೇಷಾದ್ರಿ
ಟಿ.ಆರ್. ಚಂದ್ರಶೇಖರ

ಜಿಲ್ಲಾ ಆಡಳಿತ, ಬಳ್ಳಾರಿ ಪರವಾಗಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

BELLARY JILLEYA SWATANTRYA HORĀTA
(Freedom Movement in Bellary District)

Edited by
B. Sheshadri and T. R. Chandrasekhara
Department of Development Studies,

Published by

Prof. A. V. Navada
The Director, Prasaranga,
Kannada University, Hampi
Vidyaranaya-583221

Pages : 16 + 154

First Impression 1998.

Rs. 50

ಪ್ರಕಾಶಕರು

ಪ್ರೊ. ಎ.ವಿ. ನಾವಡ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೨೧

ಬೆಲೆ ರೂ. ೫೦

ಮುಖಪುಟ ಕೆ. ಕೆ. ಮಕಾಳಿ

ಡಿ. ಟಿ. ಪಿ. ಸಂಯೋಜನೆ
ಸಂಧ್ಯಾ ಕಂಪ್ಯೂಟರ್ ಗ್ರಾಫಿಕ್ಸ್, ಹೊಸಪೇಟೆ

ಮುದ್ರಣ

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್, ಗದಗ

ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ

ಸಂಪಾದಕರು

ಬಿ. ಶೇಷಾದ್ರಿ, ಟಿ.ಆರ್. ಚಂದ್ರಶೇಖರ

●

ಸಹ ಸಂಪಾದಕರು

ಶೌಕತ್ ಅಝೀಮ್, ಶ್ರೀಧರ ಎ., ಸಿದ್ದಗಂಗಮ್ಮ

ಸಂಶೋಧನ ಸಹಾಯಕರು

ಕೃಷ್ಣ ಜೆ.	ಆರ್. ಎರ್ರಣ್ಣ
ಸಿ. ಅಶೋಕ	ಹೊನ್ನೂರ್ ಅಲಿ
ಗುರುಬಸವರಾಜ ಎಚ್.	ಮಂಜುನಾಥ
ಯರ್‍ರಿಸ್ವಾಮಿ ಎಂ.	ಮಲ್ಲಪ್ಪ
ಪೀರ್ ಭಾಷ	ಚಂದ್ರಪ್ಪ
ನಾಗಭೂಷಣ ಪಾಟೀಲ	ವಿರೂಪಾಕ್ಷ
ಜಗದೀಶ ಮಠದ	ಜನಾರ್ದನ

'ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ' ಪುಸ್ತಕ ಸಮಿತಿ ಸದಸ್ಯರು

ವಿ. ಮಂಜುಲ
ಜಿಲ್ಲಾಧಿಕಾರಿಗಳು, ಬಳ್ಳಾರಿ

ಡಾ. ಎಂ.ಎಂ. ಕಲಬುರ್ಗಿ
ಕುಲಪತಿಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಗೋಪಾಲ್ ಬಿ. ಹೊಸೂರ್
ಜಿಲ್ಲಾ ಪೊಲೀಸ್ ಅಧಿಕಾರಿಗಳು,
ಬಳ್ಳಾರಿ

ಶೋಹಬ್ ಹಸನ್
ಉಪ ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ

ಹಬೀಬುಲ್ಲಾ
ಕೇಂದ್ರ ಸ್ಥಾನಿಕ ಸಹಾಯಕ ಆಯುಕ್ತರು
ಜಿಲ್ಲಾಧಿಕಾರಿ ಕಛೇರಿ, ಬಳ್ಳಾರಿ

ಎಸ್.ಜಿ. ಪಾಟೀಲ್
ಸಹಾಯಕ ಆಯುಕ್ತರು, ಬಳ್ಳಾರಿ

ಆರ್.ಎಚ್.ಎಂ. ಸಿದ್ದಲಿಂಗಯ್ಯ
ಕಮಾಂಡೆಂಟ್, ಜಿಲ್ಲಾಗೃಹ ರಕ್ಷಕ ದಳ
ಪುಸ್ತಕ ಸಮಿತಿ ಸದಸ್ಯ ಕಾರ್ಯದರ್ಶಿ,
ಬಳ್ಳಾರಿ

ಬಿ.ಎಚ್. ದ್ಯಾವನೂರ್
ಜಿಲ್ಲಾ ಗ್ರಂಥಪಾಲಕರು
ಜಿಲ್ಲಾ ಕೇಂದ್ರ ಗ್ರಂಥಾಲಯ, ಬಳ್ಳಾರಿ

ಟಿ. ಕೊಟ್ರಪ್ಪ
ಸಹಾಯಕ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬಳ್ಳಾರಿ

ಐ. ಬಸವರಾಜ
ನಿವೃತ್ತ ನ್ಯಾಯಾಧೀಶರು
ಅಧ್ಯಕ್ಷರು, ಸ್ವಾತಂತ್ರ್ಯ ಹೋರಾಟಗಾರರ
ಸಂಘ, ಬಳ್ಳಾರಿ

ಬಿಂದು ಮಾಧವ್ ರಾವ್
ಗಾಂಧೀ ಭವನ, ಬಳ್ಳಾರಿ

ಬಹದ್ದೂರು ಶೇಷಗಿರಿ ರಾವ್
ಗಾಂಧೀ ಭವನ, ಬಳ್ಳಾರಿ

ಟಿ.ಜಿ. ವಿಠಲ್,
ಗಾಂಧೀ ಭವನ, ಬಳ್ಳಾರಿ

ಕೆ.ಎಚ್. ಸಿದ್ಧೇಶ್ವರಪ್ಪ
ಮುಖ್ಯಸ್ಥರು, ಇತಿಹಾಸ ವಿಭಾಗ,
ವೀರಶೈವ ಕಾಲೇಜು, ಬಳ್ಳಾರಿ

ಎಚ್.ಎಮ್. ವೀರಭದ್ರಯ್ಯ
ಹರಪನಹಳ್ಳಿ

ರಾಜೇಂದ್ರ ಪ್ರಸಾದ್
ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಳ್ಳಾರಿ
(೧೯೯೭-೯೭)

ಜಗದೀಶ್ ಮಠದ
ಶಿಕ್ಷಕರು ಮತ್ತು ಮಾಹಿತಿ ಕೇಂದ್ರ
ಕಾರ್ಯಕರ್ತರು, ಬಳ್ಳಾರಿ

ನಲವಾಡ ಬಸಪ್ಪ
ಕಾರ್ಯದರ್ಶಿ
ಸ್ವಾತಂತ್ರ್ಯ ಹೋರಾಟಗಾರರ ಸಂಘ,
ಬಳ್ಳಾರಿ

ವಿರೂಪಾಕ್ಷ ಪೂಜಾರಹಳ್ಳಿ
ಶಿಕ್ಷಕರು ಮತ್ತು ಕ್ಷೇತ್ರಕಾರ್ಯಕರ್ತರು
ಏಳುಬೆಂಚಿ, ಬಳ್ಳಾರಿ

ಕೃತಜ್ಞತೆಗಳು

ಈ ಯೋಜನೆಯನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ನೀಡಿ, ಅಧ್ಯಯನದ ಎಲ್ಲ ಹಂತಗಳಲ್ಲಿಯೂ ಸಲಹೆ, ಸಹಕಾರ ಹಾಗೂ ಪ್ರಕಟಣೆಗೆ ಹಣಕಾಸು ನೆರವು ನೀಡಿದ ಬಳ್ಳಾರಿಯ ಜಿಲ್ಲಾ ಆಡಳಿತಕ್ಕೆ ವಿಶ್ವವಿದ್ಯಾಲಯ ಕೃತಜ್ಞತೆ ಸಲ್ಲಿಸುತ್ತದೆ.

*

ದೇಸಿಯೊಳ್ ಪುಗುವುದು

ಡಾ. ಎಂ. ಎಂ. ಕಲಬುರ್ಗಿ
ಕುಲಪತಿಗಳು

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ 'ಕನ್ನಡ ಸಂಸ್ಕೃತಿ'ಯ ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ. ಆದಿಕವಿ ಪಂಪ, ಸಾಹಿತ್ಯಕ್ಕೆ ಅನ್ವಯಿಸಿ ಹೇಳಿರುವ 'ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' ಎಂಬ ಮಾತು ಪರ್ಯಾಯವಾಗಿ ಇದನ್ನೇ ಧ್ವನಿಸುತ್ತದೆ.

ಮೂಲತಃ ಸಮಾಜವೊಂದು ಸ್ವ-ರೂಪ, ಸ್ವ-ಭಾವ ವಿಶಿಷ್ಟವಾಗಿರುತ್ತದೆ. ಹೀಗಿದ್ದೂ ಅದು ತನ್ನಷ್ಟಕ್ಕೆ ತಾನು ಪ್ರತ್ಯೇಕವಾಗಿ ನಿಲ್ಲದೆ, ಅನ್ಯಸಂಸ್ಕೃತಿಗಳನ್ನು ಸ್ವೀಕರಿಸುತ್ತ, ನಿರಾಕರಿಸುತ್ತ ಒಮ್ಮೊಮ್ಮೆ ತಿರಸ್ಕರಿಸುತ್ತ ಮುಂದುವರಿಯುತ್ತದೆ. ಪ್ರಧಾನವಾಗಿ ಆರ್ಯ-ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತ ಬಂದ ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ ಬದುಕುಮಾಡಿದೆ. ಹಿಂದಿನದು ಕನ್ನಡ-ಸಂಸ್ಕೃತ ದ್ವಿಭಾಷಾ ಸಂದರ್ಭ, ಇಂದಿನದು ಕನ್ನಡ-ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲಿಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವನಾಡಿಗಳನ್ನು ದಿನೇದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶೀ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ ವಿಸ್ಮೃತಿಯ ಸಾಗರದಲ್ಲಿ ಮುಳುಗಿಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ, ಪ್ರಕ್ರಿಯೆ ರೂಪದ 'ಸ್ವದೇಶೀ ಸತ್ಯ'ಗಳನ್ನು ಶೋಧಿಸುವುದು; ಬಳಿಕ ಅಲ್ಲಿ ಸೇರಿಕೊಂಡಿರುವ ದೋಷಗಳನ್ನು ದೂರ ಸರಿಸಿ ಗುಣಾಂಶಗಳನ್ನು ಗುರುತಿಸುವುದು; ಜೊತೆಗೆ ಪೂರ್ಣ ಬದುಕಿಗೆ ಅವಶ್ಯವಿರುವ ಕೊರತೆಗಳನ್ನು ಅನ್ಯಸಂಸ್ಕೃತಿಯಿಂದ ಎಚ್ಚರ ವಹಿಸಿ ತುಂಬಿಕೊಳ್ಳುವುದು. ಒಟ್ಟಾರೆ ಅನ್ಯಸಂಸ್ಕೃತಿಗಳ ಸಹಯೋಗದಲ್ಲಿಯೂ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು ಕನ್ನಡವನ್ನು ಬದುಕಿಸಬೇಕಾಗಿದೆ, ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ

ಮಾತ್ರ ಕನ್ನಡತ್ವವನ್ನು ನಾಶ ಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ.

ಹಗಲ ಮೇಲೆ ಈ ಹೊಣೆಯನ್ನು ಹೊತ್ತು, ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ, 'ಎಲ್ಲ ರಸ್ತೆಗಳು ರೋಮ್‌ನ ಕಡೆಗೆ' ಎಂಬಂತೆ ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ ಕೇಂದ್ರೀಕರಣಗೊಳ್ಳುವ ಮತ್ತು ಇಲ್ಲಿಂದಲೇ ಜಗತ್ತಿನ ಅಂಚಿನತ್ತ ವಿಕೇಂದ್ರೀಕರಣಗೊಳ್ಳುವ ವಾತಾವರಣವನ್ನು ನಿರ್ಮಾಣಮಾಡಬೇಕಾಗಿದೆ. ಈ ರೀತಿ ಐತಿಹಾಸಿಕ ಪರಂಪರೆ ಮತ್ತು ಭೌಗೋಳಿಕ ಪರಿಸರಗಳಲ್ಲಿ ಶ್ರಮಿಸಬೇಕಾಗಿರುವ ಕನ್ನಡ ವಿಶ್ವವಿದ್ಯಾಲಯ "ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಪ್ರಜ್ಞೆ ಕನ್ನಡಿಗರಲ್ಲಿ ಜಾಗೃತವಾಗಿರುವಂತೆಯೂ ನೋಡಿಕೊಳ್ಳಬೇಕಾಗಿದೆ.

ಈ ಎಲ್ಲ ನೆಲೆಗಳಲ್ಲಿ ಸೃಷ್ಟಿಯಾಗುವ ತನ್ನ ಶೋಧನೆ-ಚಿಂತನೆಗಳನ್ನು ದಾಖಲಿಸಬೇಕೆಂಬ ಮತ್ತು ಸಂವಹನಗೊಳಿಸಬೇಕೆಂಬ ತೀವ್ರ ಹಂಬಲದಿಂದ ಈ ವಿಶ್ವವಿದ್ಯಾಲಯ 'ಪ್ರಸಾರಾಂಗ' ಹೆಸರಿನ ಪ್ರಸಾರಮಾಧ್ಯಮ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದಿದೆ. ಶ್ರವ್ಯ, ದೃಶ್ಯ, ವಾಚನ ಸಾಮಗ್ರಿಗಳ ಉತ್ಪಾದನೆ-ವಿತರಣೆ ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಂಡಿರುವ ಇದು, ವಾಚನ ಸಾಮಗ್ರಿಯಾಗಿರುವ ಪುಸ್ತಕಗಳ ಉತ್ಪಾದನೆಗೆ ವಿಶೇಷ ಕಾಳಜಿವಹಿಸಿದೆ. ಆಂತರಿಕ ಸತ್ವ, ಬಾಹ್ಯ ಸೌಂದರ್ಯಗಳಿಂದ ಕೂಡಿರುವ ವಿಶಿಷ್ಟ 'ಪುಸ್ತಕಸಂಸ್ಕೃತಿ'ಯನ್ನು ಅಸ್ತಿತ್ವಕ್ಕೆ ತರುತ್ತಲಿರುವ ಈ ಪ್ರಸಾರಾಂಗದ ಇತ್ತೀಚಿನ ಕೃತಿಯಾಗಿದೆ 'ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ'.

ಭಾರತದ ಸ್ವಾತಂತ್ರ್ಯ ಹೋರಾಟ ಜಾಗತಿಕ ಮಹತ್ವದ ಒಂದು ಚಳುವಳಿಯಾಗಿದೆ. ಈ ರಕ್ತರಹಿತ ಕ್ರಾಂತಿಯಲ್ಲಿ ಕರ್ನಾಟಕ ವಹಿಸಿದ ಪಾತ್ರ ಸಣ್ಣದೇನಲ್ಲ. ಇದರ ಅಂಗವಾಗಿ ಹಳೆಯ ಬಳ್ಳಾರಿ ಜಿಲ್ಲೆ ದುಡಿದ ರೀತಿ ಏನು? ನಡೆದ ದಾರಿ ಯಾವುದು? ಇತ್ಯಾದಿ ಪ್ರಶ್ನೆಗಳಿಗೆ ನೀಡಿದ ಉತ್ತರವಾಗಿದೆ, ಈ ಪುಸ್ತಕ. ಬಳ್ಳಾರಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಆಶಯದ ಮೇರೆಗೆ ನಮ್ಮ ವಿಶ್ವವಿದ್ಯಾಲಯದ 'ಅಭಿವೃದ್ಧಿ ಅಧ್ಯಯನ ವಿಭಾಗ' ಈ ಕೃತಿ ಕಟ್ಟಡವನ್ನು ನಿರ್ಮಿಸಿದೆ. ಪ್ರಸ್ತುತ ಯೋಜನೆಗೂ, ಪ್ರಕಟನೆಗೂ ಧನಸಹಾಯ ನೀಡಿದ ಅಂದಿನ ಜಿಲ್ಲಾಧಿಕಾರಿ ಶ್ರೀಮತಿ ಮಂಜುಲ ಅವರಿಗೂ, ಇಂದಿನ ಜಿಲ್ಲಾಧಿಕಾರಿ ಶ್ರೀ ರಾಜಕಮಲ್ ಅವರಿಗೂ, ಕೃತಿರಚನೆಯ ಹೊಣೆಯನ್ನು ಶ್ರದ್ಧೆಯಿಂದ ಪೂರೈಸಿದ ಪ್ರೊ. ಬಿ. ಶೇಷಾದ್ರಿ, ಟಿ.ಆರ್. ಚಂದ್ರಶೇಖರ ಅವರಿಗೂ, ಸಲಹಾ ಸಮಿತಿ ಸದಸ್ಯರಿಗೂ ಕನ್ನಡ ವಿಶ್ವವಿದ್ಯಾಲಯ ಋಣಿಯಾಗಿದೆ.

ಸಂಪಾದಕರ ನುಡಿ

ಭಾರತಕ್ಕೆ ಸ್ವಾತಂತ್ರ್ಯವು ಬಂದು ಇಂದಿಗೆ ೫೦ ವರ್ಷಗಳಾದವು. ಸ್ವಾತಂತ್ರ್ಯದ ಸುವರ್ಣೋತ್ಸವದ ಈ ಶುಭಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆಗಳನ್ನು ನೆನಪಿಸಿಕೊಳ್ಳುವುದು ಹಾಗೂ ಅವರಿಗೆ ನಮ್ಮ ಕೃತಜ್ಞತೆ ಸಲ್ಲಿಸುವುದು ಅಭಿಮಾನದ ಸಂಗತಿಯಾಗಿದೆ. ಅದು ನಮ್ಮ ಕರ್ತವ್ಯವಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ನೋವು, ಹಿಂಸೆ, ಅವಮಾನಗಳನ್ನು ಅನುಭವಿಸಿದ ಹಾಗೂ ಅಪಾರ ತ್ಯಾಗಮಾಡಿದ ಜನರಲ್ಲಿ ಅನೇಕರು ಇಂದು ನಮ್ಮೊಂದಿಗಿದ್ದಾರೆ. ಅನೇಕರು ನಮ್ಮನ್ನು ಅಗಲಿದ್ದಾರೆ. ಅವರೆಲ್ಲರಿಗೂ ನಮ್ಮ ನಮನಗಳು ಸಲ್ಲಬೇಕು. ಪ್ರಸ್ತುತ ಅಧ್ಯಯನವು ಅಂತಹ ಒಂದು ಪ್ರಯತ್ನವಾಗಿದೆ.

ಭಾರತ ಸರ್ಕಾರವು ಆಗಸ್ಟ್ ೧೫, ೧೯೯೭ರಿಂದ ಆಗಸ್ಟ್ ೧೫, ೧೯೯೮ರ ಅವಧಿಯನ್ನು 'ಸ್ವಾತಂತ್ರ್ಯದ ಸುವರ್ಣೋತ್ಸವ ವರ್ಷ' ವೆಂದು ಘೋಷಿಸಿದೆ. ಸ್ವಾತಂತ್ರ್ಯದ ಸುವರ್ಣೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನೇಕ ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಬಳ್ಳಾರಿ ಜಿಲ್ಲೆಯಲ್ಲೂ ಸ್ವಾತಂತ್ರ್ಯದ ಸುವರ್ಣೋತ್ಸವವನ್ನು ಆಚರಿಸಲು ಜಿಲ್ಲಾ ಆಡಳಿತವು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಸ್ವಾತಂತ್ರ್ಯ ಹೋರಾಟದ ಗತ ಇತಿಹಾಸವನ್ನು ನೆನಪಿಸುವಂತಹ ಹಾಗೂ ಸ್ವಾತಂತ್ರ್ಯ ಹೋರಾಟಗಾರರಿಗೆ ಸೂಕ್ತ ರೀತಿಯಲ್ಲಿ ಗೌರವ-ನಮನ ಸಲ್ಲಿಸುವಂತಹ ಅನೇಕ ಕಾರ್ಯಕ್ರಮಗಳನ್ನು ಜಿಲ್ಲಾ ಆಡಳಿತವು ರೂಪಿಸಿತು. ಸ್ವಾತಂತ್ರ್ಯದ ಸುವರ್ಣೋತ್ಸವದ ಸವಿನೆನಪಿಗೆ ಒಂದು ಸ್ಮರಣ ಸಂಚಿಕೆ ಸಿದ್ಧಪಡಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಯಿತು.. ಡಾ. ಬಿ.ಶೇಷಾದ್ರಿ, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಅಧ್ಯಕ್ಷತೆಯಲ್ಲಿ 'ಸ್ಮರಣ ಸಂಚಿಕೆ' ಸಮಿತಿಯನ್ನು ರಚಿಸಲಾಯಿತು. ಸ್ಮರಣ ಸಂಚಿಕೆ ಸಮಿತಿಯ ಮೊದಲ ಸಭೆಯಲ್ಲಿ ಸ್ಮರಣ ಸಂಚಿಕೆಯ ಇತಿಮಿತಿಗಳ ಬಗ್ಗೆ ಚರ್ಚೆ ನಡೆಯಿತು. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಸಮಗ್ರ ಚಿತ್ರವನ್ನು ಸ್ಮರಣ ಸಂಚಿಕೆಯಲ್ಲಿ ನೀಡುವುದು ಸಾಧ್ಯವಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಸೂಕ್ಷ್ಮ ಹಾಗೂ ಸಮಗ್ರ ಚರಿತ್ರೆಯನ್ನು ಪ್ರಮಾಣಭೂತವಾಗಿ ನೀಡುವಂತಹ ಅಧ್ಯಯನ ಪ್ರಧಾನ ಗ್ರಂಥವನ್ನು ತರುವುದೇ ಸೂಕ್ತವೆಂದು ಸಮಿತಿ ತೀರ್ಮಾನಿಸಿತು. ಬಳ್ಳಾರಿ ಜಿಲ್ಲೆಯಲ್ಲಿ ನಡೆದ

ಸ್ವಾತಂತ್ರ್ಯ ಹೋರಾಟದ ಪಾತ್ರ ಮತ್ತು ಮಹತ್ವವನ್ನು ಅಧಿಕೃತವಾಗಿ ಗುರುತಿಸುವ ದಿಕ್ಕಿನಲ್ಲಿ ಇದೊಂದು ಅಪೂರ್ವವಾದ ಹಾಗೂ ಚಿರಕಾಲ ಉಳಿಯುವ ಕಾರ್ಯವಾಗುತ್ತದೆಯೆಂದು ತೀರ್ಮಾನಿಸಲಾಯಿತು. ಈ ಬಗೆಯ ಅಧ್ಯಯನವು ಒಂದು ಆಕರ ಮೂಲವಾಗಿ ಉಳಿಯುತ್ತವೆ ಎಂದು ಭಾವಿಸಲಾಯಿತು.

'ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ' ಎಂಬ ಅಧ್ಯಯನವನ್ನು ಸಿದ್ಧ ಪಡಿಸಿಕೊಡುವಂತೆ ಹಂಪಿಯ ಕನ್ನಡ ವಿಶ್ವವಿದ್ಯಾಲಯವನ್ನು ಜಿಲ್ಲಾಧಿಕಾರಿಗಳು ಕೇಳಿಕೊಂಡರು. ಜಿಲ್ಲಾಧಿಕಾರಿಗಳ ಮನವಿಯನ್ನು ಒಪ್ಪಿಕೊಂಡ ಕನ್ನಡ ವಿಶ್ವವಿದ್ಯಾಲಯದ ಹಿಂದಿನ ಕುಲಪತಿಗಳಾದ ಚಂದ್ರಶೇಖರ ಕಂಬಾರ ಅವರು ಸದರಿ ಅಧ್ಯಯನವನ್ನು ಪೂರೈಸಿಕೊಡಲು ಅಭಿವೃದ್ಧಿ ಅಧ್ಯಯನ ವಿಭಾಗವನ್ನು ಕೇಳಿಕೊಂಡರು. ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರು ಆಗಿರುವ ಡಾ. ಬಿ.ಶೇಷಾದ್ರಿ ಮತ್ತು ಅದೇ ವಿಭಾಗದಲ್ಲಿ ಪ್ರವಾಚಕರಾಗಿರುವ ಟಿ.ಆರ್.ಚಂದ್ರಶೇಖರ ಅವರುಗಳು ಸಂಪಾದಕರಾಗಿ ಮತ್ತು ಸದರಿ ವಿಭಾಗದಲ್ಲಿ ಅಧ್ಯಾಪಕರುಗಳಾಗಿ ಸೇವೆ ಸಲ್ಲಿಸುತ್ತಿರುವ ಡಾ.ಶೌಕತ್ ಅಜೀಮ್, ಎ.ಶ್ರೀಧರ ಮತ್ತು ಸಿದ್ದಗಂಗಮ್ಮ ಅವರುಗಳು ಸಹಾಯಕ ಸಂಪಾದಕರುಗಳಾಗಿ ಕೆಲಸ ನಿರ್ವಹಿಸಿದರು. ಕ್ಷೇತ್ರಕಾರ್ಯ ಕೈಗೊಳ್ಳಲು ಮತ್ತು ಮಾಹಿತಿ ಸಂಗ್ರಹಕ್ಕಾಗಿ ಸಂಶೋಧನ ಸಹಾಯಕರುಗಳು ಕೆಲಸಮಾಡಿದ್ದಾರೆ. ಈ ಅಧ್ಯಯನದ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲು ಜಿಲ್ಲಾಧಿಕಾರಿಗಳು ನೇಮಿಸಿದ್ದ ಪುಸ್ತಕ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿ ಆರ್.ಎಚ್.ಎಂ. ಸಿದ್ದಲಿಂಗಯ್ಯ, ಕಮಾಂಡೆಂಟ್, ಜಿಲ್ಲಾ ಗೃಹರಕ್ಷಕದಳ, ಇವರು ಕೆಲಸ ಮಾಡಿದ್ದಾರೆ.

ಈ ಅಧ್ಯಯನವು ಸಾಕಾರಗೊಳ್ಳಲು ಕಾರಣರಾದ ಬಳ್ಳಾರಿ ಜಿಲ್ಲೆಯ ಹಿಂದಿನ ಜಿಲ್ಲಾಧಿಕಾರಿಗಳಾಗಿದ್ದ ವಿ. ಮಂಜುಲ ಹಾಗೂ ಸದ್ಯ ಜಿಲ್ಲಾಧಿಕಾರಿಗಳಾಗಿರುವ ರಾಜ್‌ಕಮಲ್ ಅವರಿಗೆ ಮೊದಲು ಕೃತಜ್ಞತೆ ಸಲ್ಲಿಸುವುದು ನಮ್ಮ ಕರ್ತವ್ಯವಾಗಿದೆ. ನಮ್ಮ ವಿಭಾಗಕ್ಕೆ ಈ ಕೆಲಸವನ್ನು ವಹಿಸಿಕೊಟ್ಟ ನಮ್ಮ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ ಅವರಿಗೆ ಮತ್ತು ಈ ಯೋಜನೆಯ ಹಸ್ತಪ್ರತಿಯನ್ನು ಪರಿಶೀಲಿಸಿ, ಸೂಕ್ತ ಸಲಹೆ, ಸಹಕಾರ ನೀಡಿದ ಇಂದಿನ ಕುಲಪತಿಗಳಾದ ಡಾ. ಎಂ.ಎಂ. ಕಲಬುರ್ಗಿ ಅವರಿಗೆ ನಮ್ಮ ವಂದನೆಗಳು ಸಲ್ಲಬೇಕು.

ಈ ಅಧ್ಯಯನ ಸಿದ್ಧಪಡಿಸುವಲ್ಲಿ ಅನೇಕರು ಅನೇಕ ಬಗೆಯಲ್ಲಿ ನೆರವಾಗಿದ್ದಾರೆ. ಪುಸ್ತಕ ಸಮಿತಿಯ ಎಲ್ಲ ಸದಸ್ಯರುಗಳಿಗೆ, ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಆರ್.ಹೆಚ್.ಎಂ. ಸಿದ್ದಲಿಂಗಯ್ಯ ಅವರಿಗೆ, ಖ್ಯಾತ ಜಾನಪದ ತಜ್ಞರಾದ ಮುದೇನೂರ ಸಂಗಣ್ಣ, ಡಾ. ಬಸವರಾಜ ಮಲಶೆಟ್ಟಿ ಅವರುಗಳಿಗೆ, ಪತ್ರಕರ್ತರಾದ ಟಿ. ಸತ್ಯನಾರಾಯಣ ರಾವ್, ಎಸ್. ಶ್ಯಾಂ ಸುಂದರ್ ಅವರುಗಳಿಗೆ, ಜಿಲ್ಲಾ ಕೇಂದ್ರ ಗ್ರಂಥಾಲಯದ ಬಿ.ಹೆಚ್. ದ್ಯಾವನೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಟಿ. ಕೊಟ್ರಪ್ಪ, ಗಾಂಧೀ ಭವನದ ಟಿ.ಜಿ. ವಿಠ್ಠಲ್, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಗೋಪಾಲ್ ಬಿ. ಹೊಸೂರ್, ಹರಪನಹಳ್ಳಿಯ ಹೆಚ್.ಎಂ.

ವೀರಭದ್ರಯ್ಯ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಶೋಹಬ್ ಹಸನ್ ಇವರೆಲ್ಲರ ಸಹಕಾರಕ್ಕೂ ನಾವು ಋಣಿಗಳಾಗಿದ್ದೇವೆ.

ಈ ನಮ್ಮ ಕೆಲಸದಲ್ಲಿ ಅಖಿಲ ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಬಳ್ಳಾರಿ ಶಾಖೆಯು ಉಪಯುಕ್ತ ಮಾಹಿತಿ ನೀಡಿ ಸಹಕರಿಸಿದೆ. ಅದರ ಅಧ್ಯಕ್ಷರಾದ ಬಸವರಾಜ್, ಉಪಾಧ್ಯಕ್ಷರಾದ ಎಸ್. ಗಣಪತಿ, ಕಾರ್ಯದರ್ಶಿಗಳಾದ ನಲವಾಡ ಬಸಪ್ಪ ಮತ್ತು ಎಸ್. ನಾರಾಯಣರಾವ್ ಅವರುಗಳಿಗೆ ನಮ್ಮ ನಮನಗಳು ಸಲ್ಲಬೇಕು.

ನಮ್ಮ ವಿಶ್ವವಿದ್ಯಾಲಯದ ಕುಲಸಚಿವರಾದ ಮಲ್ಲೇಪುರಂ ಜಿ. ವೆಂಕಟೇಶ, ಪ್ರಸಾರಾಂಗದ ನಿರ್ದೇಶಕರಾದ ಎ.ವಿ. ನಾವಡ, ನಮ್ಮ ಸಹೋದ್ಯೋಗಿಗಳಾದ ಡಾ. ಎಂ. ಚಂದ್ರ ಪೂಜಾರಿ, ಡಾ. ಟಿ.ಪಿ. ವಿಜಯ್, ಗ್ರಂಥಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ, ಕಲಾವಿದ ಮಕಾಳಿ, ತಾಂತ್ರಿಕ ನೆರವು ನೀಡಿದ ಗುರುಬಸಪ್ಪ, ಸೋಮಣ್ಣ ಸೂಡಿ, ಸೋಮಶೇಖರ ಕಣವಿ, ಅಕ್ಷರ ಜೋಡಣೆ ಮಾಡಿಕೊಟ್ಟ ಸಂಧ್ಯಾ ಕಂಪ್ಯೂಟರ್ ಗ್ರಾಫಿಕ್ಸ್, ಹೊಸಪೇಟೆ ಇವರೆಲ್ಲರ ಸಹಕಾರಕ್ಕೆ ನಾವು ವಂದಿಸುತ್ತೇವೆ.

ಪ್ರಸ್ತುತ ಅಧ್ಯಯನವು ಭಾರತದ ಸ್ವಾತಂತ್ರ್ಯದ ಸುವರ್ಣೋತ್ಸವ ಸಂದರ್ಭದಲ್ಲಿ ಜಿಲ್ಲಾ ಆಡಳಿತವು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಅಪಾರ ನೋವು ಹಿಂಸೆ ಅನುಭವಿಸಿದ ಹಾಗೂ ತ್ಯಾಗ ಬುದ್ಧಿಯಿಂದ ದುಡಿದ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ಪೂರ್ವಕವಾಗಿ ನೀಡುತ್ತಿರುವ ಕಾಣಿಕೆಯಾಗಿದೆ. ಇಂತಹ ಅಭಿನಂದನೀಯ ಕಾರ್ಯದಲ್ಲಿ ಭಾಗಿಯಾಗುವುದರ ಮೂಲಕ ಕನ್ನಡ ವಿಶ್ವವಿದ್ಯಾಲಯವು ಸ್ವಾತಂತ್ರ್ಯ ಹೋರಾಟಗಾರರಿಗೆ ತನ್ನ ಕೃತಜ್ಞತಾಪೂರ್ಣ ನಮನಗಳನ್ನು ಸಲ್ಲಿಸುತ್ತಿದೆ.

ಬಿ. ಶೇಷಾದ್ರಿ
ಟಿ.ಆರ್. ಚಂದ್ರಶೇಖರ
ಅಭಿವೃದ್ಧಿ ಅಧ್ಯಯನ ವಿಭಾಗ
ಸಂಪಾದಕರು

ಆಗಸ್ಟ್ ೧೯೯೮
ವಿದ್ಯಾರಣ್ಯ



ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು

ಪರಿವಿಡಿ

ಬಳ್ಳಾರಿ ಜಿಲ್ಲೆ - ೧೯೯೧



೧. ಅಧ್ಯಯನದ ಆಯಾಮಗಳು

ಭಾರತದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ವಿಶ್ವದಲ್ಲಿ ಅನನ್ಯವಾದ ಸ್ಥಾನ ಸಿಕ್ಕಿದೆ. ಬ್ರಿಟಿಷರ ಪ್ರಭುತ್ವ ಕಟ್ಟಿದ್ದ 'ಸೂರ್ಯ ಮುಳುಗದ' ಸಾಮ್ರಾಜ್ಯವನ್ನು ಅಹಿಂಸೆ-ಸತ್ಯಾಗ್ರಹಗಳ ಮೂಲಕ ಭಾರತವು ಮಣಿಸಿದ್ದು ನಿಜಕ್ಕೂ ಅದ್ವಿತೀಯವಾದ ಸಂಗತಿಯಾಗಿದೆ. ಇದು ಹೇಗೆ ಸಾಧ್ಯವಾಯಿತು? ಇಡೀ ದೇಶ- ಜನತೆ ಸ್ವಾತಂತ್ರ್ಯ ಹೋರಾಟದಲ್ಲಿ ಹೇಗೆ ಭಾಗಿಯಾಗಿತ್ತು? ಸ್ವಾತಂತ್ರ್ಯ ಹೋರಾಟದ ಚರಿತ್ರೆಯು ಅತ್ಯಂತ ಕುತೂಹಲ ಕೆರಳಿಸುವ ಹಾಗೂ ರೋಮಾಂಚನ ಉಂಟುಮಾಡುವ ವೀರಗಾಥೆಯಾಗಿದೆ. ಭಾರತದ ಸ್ವಾತಂತ್ರ್ಯದ ಹೋರಾಟವೆಂದರೆ ಅದೊಂದು ಪವಾಡ. ಈ ದೇಶದ ಸಾವಿರಾರು ಹಳ್ಳಿಗಳನ್ನು, ಆ ಹಳ್ಳಿಗಳ ಲಕ್ಷಾವಧಿ ಮುಗ್ಧ ಜನರನ್ನು ಅದು ಒಳಗೊಂಡಿತ್ತು ಎಂಬುದು ಒಂದು ವಿಸ್ಮಯಕಾರಿ ಸಂಗತಿಯಾಗಿದೆ.

'ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯಹೋರಾಟ' ಎಂಬ ಪ್ರಸ್ತುತ ಅಧ್ಯಯನವನ್ನು ವಿಶಾಲ ನೆಲೆಗಟ್ಟಿನಲ್ಲಿ ರಚಿಸಲಾಗಿದೆ. ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಯಾವತ್ತೂ ಘಟನೆಗಳ ಬಗ್ಗೆ ಪ್ರಮಾಣಭೂತ ವಿವರಣೆ ನೀಡಲು ಇಲ್ಲಿ ಪ್ರಯತ್ನಿಸಲಾಗಿದೆ. ಭೌಗೋಳಿಕವಾಗಿ ಪ್ರಸ್ತುತ ಅಧ್ಯಯನವು, ಹಳೆಯ ಬಳ್ಳಾರಿ ಜಿಲ್ಲೆಯನ್ನು ಒಳಗೊಂಡಿದೆ. ಮೊದಲಿನಿಂದ ಬಳ್ಳಾರಿ ಜಿಲ್ಲೆಯ ಭಾಗಗಳಾಗಿದ್ದು, ಇಂದು ನೆರೆಯ ಆಂಧ್ರಪ್ರದೇಶದಲ್ಲಿ ಸೇರಿಹೋಗಿರುವ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲ್ಲೂಕುಗಳಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ವಿವರಗಳನ್ನೂ ಈ ಅಧ್ಯಯನದಲ್ಲಿ ಸೇರಿಸಲಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗವಹಿಸಿ, ಜೈಲುಶಿಕ್ಷೆ ಅನುಭವಿಸಿದ ಹೋರಾಟಗಾರರ ವಿವರವನ್ನು ಕಲೆ ಹಾಕುವುದರ ಜೊತೆಗೆ ಸ್ವಾತಂತ್ರ್ಯ ಹೋರಾಟಕ್ಕೆ ವಿವಿಧ ರೀತಿಯಲ್ಲಿ ನೆರವು ನೀಡಿದ, ಜೈಲಿಗೆ ಹೋಗದಿದ್ದರೂ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಿದ ಅನೇಕ ಹೋರಾಟಗಾರರ ವಿವರಗಳನ್ನು ಇಲ್ಲಿ ನೀಡಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಅನೇಕ ಹೊಸ ಸಂಗತಿಗಳನ್ನು ಪ್ರಥಮ ಭಾರಿಗೆ ಇಲ್ಲಿ ನೀಡುವುದು ನಮಗೆ ಸಾಧ್ಯವಾಗಿದೆ. ಈ ದಿಶೆಯಲ್ಲಿ ನಮ್ಮ ಪ್ರಯತ್ನ ಸಂಪೂರ್ಣವಾಗಿ ಯಶಸ್ವಿಯಾಗಿದೆ ಅಥವಾ ಇದೊಂದು ಪರಿಪೂರ್ಣವಾದ ಪ್ರಯತ್ನ ಮತ್ತು ಇದೇ

ಅಂತಿಮವಾದದ್ದು ಎಂದು ಹೇಳುವ ಧೈರ್ಯ ನಮಗಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಅನೇಕ ವಿಷಯಗಳು ನಮ್ಮ ಗಮನದಿಂದ ತಪ್ಪಿಸಿಕೊಂಡಿರ ಬಹುದು. ಈ ಕುರಿತು ಇನ್ನೂ ಹೆಚ್ಚಿನ ಪ್ರಯತ್ನಗಳು ಮುಂದೆ ನಡೆಯಬಹುದು.

ಚರಿತ್ರೆಯೆನ್ನುವುದು ಗತಕಾಲಕ್ಕೆ ಸಂಬಂಧಿಸಿದ ವ್ಯಾಖ್ಯಾನ ಅಥವಾ ಆಗಿಹೋದ ಘಟನೆಗಳ ದಾಖಲೆಯೆಂದು ಪರಿಭಾವಿಸುವ ಪ್ರವೃತ್ತಿಯೊಂದಿದೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಚರಿತ್ರೆಯನ್ನು ಜೀವಂತ ಪ್ರಕ್ರಿಯೆಯೆಂದು, ಚಲನಶೀಲ ಪ್ರಕ್ರಿಯೆಯೆಂದು ಪರಿಭಾವಿಸಲಾಗಿದೆ. ಗತಕಾಲವನ್ನು ಕುರಿತ ಅಧ್ಯಯನಗಳು ಹೊರಹಾಕುವ ಒಳನೋಟಗಳು ಹಾಗೂ ಸೂಕ್ಷ್ಮ ತಥ್ಯಗಳು ಸಮಾಜವೊಂದು ತನ್ನ ವರ್ತಮಾನವನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತವೆ. ಸ್ವಾತಂತ್ರ್ಯ ಹೋರಾಟಗಾರರು ನಿಸ್ವಾರ್ಥ ಮನೋಭಾವದಿಂದ, ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ದೇಶಪ್ರೇಮದಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. ಅನೇಕ ಬಗೆಯ ಹಿಂಸೆ-ನೋವು-ಅವಮಾನಗಳನ್ನು ಅನುಭವಿಸಿದರು. ಜಾತಿ-ಮತ-ಧರ್ಮ ಭೇದಗಳನ್ನು ಮರೆತು ಜನರು ಒಂದುಗೂಡಿ ಹೋರಾಡಿದರು. ಸ್ವಾತಂತ್ರ್ಯ ಹೋರಾಟಗಾರರು ನಡೆಸಿದ ಸಾಹಸ, ಅವರು ಅನುಭವಿಸಿದ ಹಿಂಸೆ-ಅವಮಾನಗಳು ಇಂದು ಚರಿತ್ರೆಯ ಭಾಗಗಳಾಗಿ ಹೋಗಿವೆ. ಈ ಸ್ವಾತಂತ್ರ್ಯ ಹೋರಾಟದ ಚರಿತ್ರೆಯ ಅಧ್ಯಯನದಿಂದ ಇಂದಿನ ಪೀಳಿಗೆಯು, ಮುಖ್ಯವಾಗಿ ಯುವಕರು, ವಿದ್ಯಾರ್ಥಿಗಳು ಪ್ರೇರಣೆ ಪಡೆಯಬಹುದಾಗಿದೆ. ಏಕೆಂದರೆ ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯಾರ್ಥಿಗಳ ಪಾತ್ರ ನಿರ್ಣಾಯಕವಾಗಿತ್ತು. ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಹೇಳುವುದಾದರೆ ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಸಂದರ್ಭದಲ್ಲಿ ಜಿಲ್ಲೆಯ ವಿದ್ಯಾರ್ಥಿ ಸಮುದಾಯ ಅದ್ವಿತೀಯ ಸಾಹಸವನ್ನು ಮೆರೆಯಿತು. ಶಾಲಾ ಮಕ್ಕಳು ಕೂಡ ಚಳುವಳಿಯಲ್ಲಿ ಪಾಲುಗೊಂಡರು. ಸ್ವಾತಂತ್ರ್ಯ ಹೋರಾಟದಲ್ಲಿ ಶಾಲಾ ಅಧ್ಯಾಪಕ ವರ್ಗದ ಪಾತ್ರವನ್ನು ಮರೆಯುವಂತಿಲ್ಲ. ಜಿಲ್ಲೆಯ ಪ್ರತಿಯೊಬ್ಬ ಶಾಲಾ ಅಧ್ಯಾಪಕರೂ ಸ್ವಾತಂತ್ರ್ಯ ಹೋರಾಟ ಗಾರರಾಗಿದ್ದರು ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಏಕೆಂದರೆ ಅವರ ಪಾತ್ರ ಅಷ್ಟೊಂದು ನಿರ್ಣಾಯಕವಾದುದಾಗಿತ್ತು. ಈ ಬಗ್ಗೆ ನಮಗೆ ವರ್ಣಮಯವಾದ ಹಾಗೂ ಮೈನವಿರೇಳಿಸುವ ವಿವರಗಳು ದೊರೆಯುತ್ತವೆ.

ಸಮಾಜ ಸುಧಾರಣಾ ಪ್ರಕ್ರಿಯೆಗೆ ಭಾರತದ ಸ್ವಾತಂತ್ರ್ಯ ಹೋರಾಟವು ನೀಡಿದ ಪ್ರೇರಣೆ ಅದರ ಒಂದು ವಿಶಿಷ್ಟವಾದ ಸ್ವರೂಪವಾಗಿದೆ. ಸಮಾಜ ಸುಧಾರಣೆಯು ಸ್ವಾತಂತ್ರ್ಯ ಚಳುವಳಿಯ ಅವಿಭಾಜ್ಯ ಅಂಗವಾಗಿತ್ತು. ಹರಿಜನರ ಸುಧಾರಣೆ, ಅಸ್ಪೃಶ್ಯತೆಯ ನಿವಾರಣೆ, ವಿಧವಾ ವಿವಾಹ ಮುಂತಾದವು ಸಮಾಜ ಸುಧಾರಣೆಯ ಅಂಗಗಳಾಗಿದ್ದವು. ಈ ದಿಶೆಯಲ್ಲಿ ಬಳ್ಳಾರಿ ಜಿಲ್ಲೆಯ ಕೊಡುಗೆಯು ಅವಿಸ್ಮರಣೀಯವಾದುದಾಗಿದೆ. ಕೊಟ್ಟೂರಿನ ಗೂರ್ಲಿ ಶರಣಪ್ಪನವರು ಕೇವಲ ಒಬ್ಬ ನಿಷ್ಠಾವಂತ ಸ್ವಾತಂತ್ರ್ಯ ಹೋರಾಟಗಾರರಷ್ಟೇ ಆಗಿರಲಿಲ್ಲ. ಬಾಲವಿಧವೆ ಕೋಗಳಿ ರುದ್ರಮ್ಮನವರನ್ನು ವಿವಾಹವಾಗಿ ಅವರೊಬ್ಬ ಸಮಾಜ ಸುಧಾರಕರೆನಿಸಿದರು. ನಿಜವಾಗಿ

ಹೇಳಬೇಕೆಂದರೆ ಕೊಟ್ಟೂರು ಅಂದು ಸ್ವಾತಂತ್ರ್ಯ ಹೋರಾಟಕ್ಕೆ ಕಾರ್ಯಕರ್ತರನ್ನು ಒದಗಿಸುವ ಒಂದು ಪ್ರಮುಖ ಕೇಂದ್ರವಾಗಿತ್ತು.

ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರ ಪಾತ್ರವನ್ನು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ತಮ್ಮದೇ ಆದ ಸೀಮಿತ ನೆಲೆಯಲ್ಲಿ ಮಹಿಳೆಯರು ಅಪೂರ್ವ ಕಾಣಿಕೆ ಸಲ್ಲಿಸಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ಇದನ್ನು ಗುರುತಿಸಲು ವಿಶೇಷ ಪ್ರಯತ್ನ ನಡೆಸಲಾಗಿದೆ. ಹೀಗೆ ಬಹುಮುಖಿ ಅಧ್ಯಯನಕ್ಕೆ ಇಲ್ಲಿ ಅವಕಾಶ ಕಲ್ಪಿಸಿಕೊಡಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರರೆಂದರೆ ಯಾರು?

'ಸ್ವಾತಂತ್ರ್ಯ ಹೋರಾಟಗಾರರು' ಎಂಬುದನ್ನು ನಿರ್ವಚಿಸುವುದು ಕಷ್ಟ ಸಾಧ್ಯ. ಇದರ ಅರ್ಥ, ವ್ಯಾಪ್ತಿ ಬಹಳ ವಿಶಾಲವಾದುದು. ಸ್ವಾತಂತ್ರ್ಯ ಹೋರಾಟಗಾರರು ಯಾರು? ಎಂಬುದನ್ನು ಗುರುತಿಸುವ -ನಿರ್ವಚಿಸುವ ಪ್ರಮೇಯ ಸ್ವಾತಂತ್ರ್ಯ ನಂತರ ಉಂಟಾಯಿತು. ಸ್ವಾತಂತ್ರ್ಯ ಹೋರಾಟಗಾರರಿಗೆ ಭೂಮಿ, ಮಾಸಾಶನ, ತಾಮ್ರಪತ್ರ ಮುಂತಾದ ಗೌರವವನ್ನು ನೀಡುವುದಕ್ಕಾಗಿ ಸ್ವಾತಂತ್ರ್ಯ ಹೋರಾಟಗಾರರನ್ನು ಗುರುತಿಸುವ ಕೆಲಸವನ್ನು ಸರ್ಕಾರವು ಮಾಡಬೇಕಾಯಿತು. ಸರ್ಕಾರವು ತನ್ನ ಆಡಳಿತಾತ್ಮಕ ಅನುಕೂಲಕ್ಕಾಗಿ ಸ್ವಾತಂತ್ರ್ಯ ಹೋರಾಟಗಾರರೆಂದರೆ ಯಾರು? ಎಂಬುದನ್ನು ಖಚಿತಪಡಿಸಿಕೊಂಡಿತು. ಸರ್ಕಾರವು ನೀಡಿದ ವ್ಯಾಖ್ಯೆ ತುಂಬಾ ಸೀಮಿತ ಸ್ವರೂಪದ್ದಾಗಿತ್ತು. ಮದರಾಸು ಸರ್ಕಾರ ದಿನಾಂಕ ೨೨-೧೨-೧೯೪೭ ರಷ್ಟು ಮುಂಚೆಯೆ ಹೊರಡಿಸಿದ ಒಂದು ಆದೇಶದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಹೀಗೆ ನಿರ್ವಚಿಸಿತ್ತು:

> "ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಘಟಿಸಿದ್ದ ಅಥವಾ ಅದರ ನಿರ್ದೇಶನದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದವರು ಸ್ವಾತಂತ್ರ್ಯ ಹೋರಾಟಗಾರರು"

ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಘಟಿಸಿದ್ದ ಸ್ವಾತಂತ್ರ್ಯ ಚಳುವಳಿಯಲ್ಲಿ ಕೆಳಕಂಡ ಪ್ರಕರಣಗಳನ್ನು ಸರ್ಕಾರ ಪಟ್ಟಿಮಾಡಿತ್ತು:

೧೯೨೦ರ ಅಸಹಕಾರ ಚಳುವಳಿ.

ನಾಗಪುರ ಧ್ವಜಸತ್ಯಾಗ್ರಹ.

೧೯೨೮-೨೯ರಲ್ಲಿ ಸೈಮನ್ ಆಯೋಗದ ಬಹಿಷ್ಕಾರ ಚಳುವಳಿ.

೧೯೩೦ರ ಉಪ್ಪಿನ ಸತ್ಯಾಗ್ರಹ.

೧೯೪೦-೪೧ರ ವೈಯಕ್ತಿಕ ಚಳುವಳಿ

೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿ.

ಮೇಲ್ಕಂಡ ವ್ಯಾಖ್ಯೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಕ್ಕೆ ಜೈಲು ಶಿಕ್ಷೆಯನ್ನು ಪ್ರಧಾನವಾಗಿ ಬಳಸಲಾಗಿದೆ. ಅನೇಕ ಸಂದರ್ಭಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರೂ ಜೈಲು ಶಿಕ್ಷೆ ಬಂಧನವಾಗದಿರುವ ಪ್ರಸಂಗಗಳಿವೆ. ಜೈಲು ಶಿಕ್ಷೆಯನ್ನು ಏಕೈಕ ಮಾನದಂಡವಾಗಿ ಬಳಸುವುದು ಸರಿಯಲ್ಲ. ಜೈಲಿಗೆ ಹೋಗದೆಯೂ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡವರಿದ್ದಾರೆ. ಅವರುಗಳನ್ನೂ ಸ್ವಾತಂತ್ರ್ಯ ಹೋರಾಟಗಾರರೆಂದು ಪರಿಭಾವಿಸಬೇಕಾಗುತ್ತದೆ.

ಈ ಸಂಗತಿಯನ್ನು ಪರಿಗಣಿಸಿ ಮದರಾಸು ಪ್ರಾಂತ ಸರ್ಕಾರವು ತಾನು ೨೨-೧೨-೧೯೪೭ರಲ್ಲಿ ಹೊರಡಿಸಿದ್ದ ಆದೇಶದಲ್ಲಿ ಒಂದು ವಿಶೇಷ ಭಾಗವನ್ನು ಸೇರಿಸಿತು. ಅದರ ಪ್ರಕಾರ ಜೈಲು ಶಿಕ್ಷೆಯು ಕಡ್ಡಾಯವೇನಲ್ಲ. ಕೆಳಕಂಡ ಸಂದರ್ಭಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾಗಿದ್ದವರನ್ನೂ ಸ್ವಾತಂತ್ರ್ಯ ಹೋರಾಟಗಾರರೆಂದು ಪರಿಗಣಿಸಬೇಕೆಂದು ಆದೇಶದಲ್ಲಿ ಸೂಚಿಸಲಾಯಿತು:

೧) ೧೯೪೦-೪೧ರ ವೈಯಕ್ತಿಕ ಕಾಯಿದೆ ಭಂಗ ಚಳುವಳಿಗಾಗಿ ಗಾಂಧೀಜಿಯವರು ಸ್ವತಃ ಸಿದ್ಧಪಡಿಸಿದ್ದ ಚಳುವಳಿಗಾರರ ಪಟ್ಟಿಯಲ್ಲಿ ಯಾರ ಹೆಸರು ಸೇರಿದೆಯೋ ಅವರೆಲ್ಲರೂ ಸ್ವಾತಂತ್ರ್ಯ ಹೋರಾಟಗಾರರು.

೨) ಕಾಂಗ್ರೆಸ್ ಸಂಸ್ಥೆಯ ಪ್ರಾಂತೀಯ ಸಮಿತಿಗಳ ಅಧಿಕೃತ ನಿರ್ದೇಶನ ಅಥವಾ ಅನುಮತಿ ಮೂಲಕ ೧೯೪೨ರಲ್ಲಿ ಭೂಗತರಾಗಿ ಚಳುವಳಿಯಲ್ಲಿ ಭಾಗಿಗಳಾದವರೆಲ್ಲಾ ಸ್ವಾತಂತ್ರ್ಯ ಹೋರಾಟಗಾರರು.

೩) ಸ್ವಾತಂತ್ರ್ಯ ಚಳುವಳಿಯಲ್ಲಿ ಲಾಠಿ ಏಟು, ಗುಂಡಿನೇಟು ತಿಂದವರು ಸ್ವಾತಂತ್ರ್ಯ ಹೋರಾಟಗಾರರು.

ಒಟ್ಟಾರೆ ಸ್ವಾತಂತ್ರ್ಯ ಹೋರಾಟಗಾರರೆನಿಸಿಕೊಳ್ಳಲು ಎರಡು ನಿಬಂಧನೆಗಳನ್ನು ನಿಯಮಿಸಲಾಯಿತು.

೧) ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲುಗೊಂಡು ಜೈಲುಶಿಕ್ಷೆ ಅನುಭವಿಸಿದ್ದಕ್ಕೆ ಪ್ರಮಾಣ ಪತ್ರ.

೨) ಜೈಲು ಶಿಕ್ಷೆಗೆ ಒಳಗಾಗದಿದ್ದ ಪಕ್ಷದಲ್ಲಿ, ಬೇರೆ ವಿಧಾನದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಕ್ಕೆ ಪ್ರಾಂತ ಕಾಂಗ್ರೆಸ್ ಸಮಿತಿಯಿಂದ ಪ್ರಮಾಣಪತ್ರ.

ಸ್ವಾತಂತ್ರ್ಯ ಹೋರಾಟಗಾರರೆಂದರೆ ಯಾರು ಎಂಬುದನ್ನು ನಿರ್ವಚಿಸಿರುವ ಮೇಲ್ಕಂಡ ಸರ್ಕಾರಿ ಆದೇಶವು ಸ್ವಲ್ಪಮಟ್ಟಿಗೆ ವಿಶಾಲವಾದುದಾಗಿದೆ. ಸರ್ಕಾರವು ಮೇಲ್ಕಂಡ ವ್ಯಾಖ್ಯೆಯನ್ನು ಕೇವಲ ಭೂಮಿ, ಮಾಸಾಶನ, ತಾಮ್ರಪತ್ರ ನೀಡುವ ಸಲುವಾಗಿ ಮಾತ್ರ ಉಪಯೋಗಿಸಿತು. ಇದೊಂದು ಆಡಳಿತಾತ್ಮಕ ವ್ಯಾಖ್ಯೆಯಾಗಿದೆ. ಈ ವ್ಯಾಖ್ಯೆಯ ಪ್ರಕಾರ ಜೈಲು ಶಿಕ್ಷೆಯಾಗಿರಲಿ ಅಥವಾ ಜೈಲುಶಿಕ್ಷೆಯಾಗದಿರಲಿ, ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗವಹಿಸಿದವರೆಲ್ಲಾ

ಸ್ವಾತಂತ್ರ್ಯ ಹೋರಾಟಗಾರರು. ಅಷ್ಟರ ಮಟ್ಟಿಗೆ ಈ ವ್ಯಾಖ್ಯೆಯ ವ್ಯಾಪ್ತಿ ವಿಶಾಲವಾದುದಾಗಿದೆ.

ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗವಹಿಸದಿದ್ದರೂ ಅದಕ್ಕೆ ಅಪ್ರತ್ಯಕ್ಷವಾಗಿ ಬೆಂಬಲ ನೀಡಿದವರಿದ್ದಾರೆ. ಅದಕ್ಕಾಗಿ ತ್ಯಾಗಮಾಡಿದವರೂ ಇದ್ದಾರೆ. ಯಾರು ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗಿಗಳಾಗಿದ್ದರೊ, ಜೈಲುಶಿಕ್ಷೆ ಅನುಭವಿಸಿದ್ದರೊ, ಅಂತಹ ಹೋರಾಟಗಾರರಿಗೆ ನೆರವು- ಬೆಂಬಲ ನೀಡಿದವರಿದ್ದಾರೆ. ಗಂಡ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಜೈಲು ಸೇರಿದಾಗ ಹೆಂಡತಿ ತನ್ನ ಕುಟುಂಬದ ಜವಾಬ್ದಾರಿ ಹೊತ್ತಿದ್ದಾಳೆ. ಮಕ್ಕಳು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲುಸೇರಿದಾಗ ತಂದೆ-ತಾಯಂದಿರು ಅಂತಹ ಹೋರಾಟಗಾರರ ಹೆಂಡತಿ-ಮಕ್ಕಳನ್ನು ಸಾಕುವ ಜವಾಬ್ದಾರಿ ನಿರ್ವಹಿಸಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಿಗೆ ಹಣಕಾಸು ನೆರವು-ಪ್ರೇರಣೆ ನೀಡಿದವರಿದ್ದಾರೆ. ಅವರ ಕೋರ್ಟು-ಕೇಸುಗಳನ್ನು ಉಚಿತವಾಗಿ ನಡೆಸಿಕೊಟ್ಟ ವಕೀಲರುಗಳು ಹಾಗೂ ಅವರನ್ನು ಸಹಾನುಭೂತಿಯಿಂದ ಕಂಡ ಸರ್ಕಾರಿ ಅಧಿಕಾರಿಗಳಿದ್ದಾರೆ. ಸರ್ವೇ ಸಾಮಾನ್ಯವಾಗಿ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಶಾಲಾ ಅಧ್ಯಾಪಕರುಗಳು ಅದ್ವಿತೀಯಪಾತ್ರ ನಿರ್ವಹಿಸಿದ್ದಾರೆ. ಅವರೆಲ್ಲರೂ ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗವಹಿಸಲಿಲ್ಲ. ಜೈಲು ಶಿಕ್ಷೆ ಅನುಭವಿಸಲಿಲ್ಲ. ಇವೆಲ್ಲಾ ನಿಜ.

ಈ ಕಾರಣಗಳಿಂದ 'ಸ್ವಾತಂತ್ರ್ಯ ಹೋರಾಟಗಾರರು' ಎಂಬುದರ ವ್ಯಾಖ್ಯೆಯನ್ನು ವಿಶಾಲ ನೆಲೆಯಲ್ಲಿ ಪರಿಭಾವಿಸುವ ಅಗತ್ಯವಿದೆ. ಆಡಳಿತಾತ್ಮಕವಾಗಿ ಸರ್ಕಾರವು ಮಾಡಿಕೊಂಡಿರುವ ಸ್ವಾತಂತ್ರ್ಯ ಹೋರಾಟಗಾರರ ವ್ಯಾಖ್ಯೆ ಸರಿಯಿದೆ. ಆದರೆ ಸ್ವಾತಂತ್ರ್ಯ ಹೋರಾಟಗಾರರು ಎಂಬುದರ ವ್ಯಾಪ್ತಿಯನ್ನು ಅಷ್ಟಕ್ಕೆ ಸೀಮಿತಗೊಳಿಸಿರುವುದರಿಂದ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಪಾತ್ರ-ಕೊಡುಗೆ ಹೊರಗುಳಿದು ಬಿಡುತ್ತದೆ. ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಇಂತಹ ಅನೇಕ ನಿದರ್ಶನಗಳು ದೊರೆಯುತ್ತವೆ.

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬನ್ನಿಕಲ್ಲು ಗ್ರಾಮದ ವೀರಾಪುರದ ಸಾಹುಕಾರ್ ಈಶ್ವರಪ್ಪನವರು ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗವಹಿಸಲಿಲ್ಲ ಹಾಗೂ ಜೈಲಿಗೆ ಹೋಗಲಿಲ್ಲ. ಆದರೆ ಅವರು ೧೯೩೪ರಲ್ಲಿ ಗಾಂಧೀಜಿಯವರು ಬಳ್ಳಾರಿ ಜಿಲ್ಲೆಯ ಪ್ರವಾಸ ಕೈಗೊಂಡಾಗ ಅವರನ್ನು ತಮ್ಮ ಸ್ವಂತ ಕಾರಿನಲ್ಲಿ ತಾವೇ ಸ್ವತಃ 'ಡ್ರೈವ್' ಮಾಡಿಕೊಂಡು ದಾವಣಗೆರೆಯಿಂದ ಬಳ್ಳಾರಿಗೆ ಕರೆದುಕೊಂಡು ಬಂದರು. (ಈ ಕಾರಣಕ್ಕಾಗಿಯೆ ಅವರು ಕಾರನ್ನು ಖರೀದಿಸಿದರು ಎನ್ನಲಾಗಿದೆ. ಖಚಿತವಾದ ಮಾಹಿತಿ ದೊರೆತಿಲ್ಲ)

ಗಾಂಧೀಜಿಯವರ ಎರಡು ದಿನದ ಪ್ರವಾಸದ ಕಾಲದಲ್ಲಿ ಕಾರನ್ನು ಈಶ್ವರಪ್ಪನವರೇ ಓಡಿಸಿದರು. ಗಾಂಧೀಜಿಯವರಿಗೆ ಕಾರಿನ ಸೌಲಭ್ಯ ನೀಡಿದ್ದಲ್ಲದೆ ಈಶ್ವರಪ್ಪನವರು 'ಹರಿಜನ ನಿಧಿ'ಗೆ ಅಪಾರ ಕಾಣಿಕೆ ನೀಡಿದರು. ಈ ಕಾರ್ಯವನ್ನು ಮೆಚ್ಚಿದ ಗಾಂಧೀಜಿಯವರು ಸ್ವಹಸ್ತದಿಂದ ಈಶ್ವರಪ್ಪನವರಿಗೆ ಪತ್ರ ಬರೆದು ತಮ್ಮ ಕೃತಜ್ಞತೆ ಸಲ್ಲಿಸಿದ್ದಾರೆ. ಈ ರೀತಿಯಲ್ಲಿ ಸ್ವಾತಂತ್ರ್ಯ

ಚಳುವಳಿಗೆ ಸಹಾಯಮಾಡಿದ ಹೀರಾಪುರದ ಸಾಹುಕಾರ ಈಶ್ವರಪ್ಪನವರನ್ನು ಸ್ವಾತಂತ್ರ್ಯ ಹೋರಾಟಗಾರರೆಂದು ಪರಿಗಣಿಸುವುದರಲ್ಲಿ ತಪ್ಪೇನಿದೆ? ಈಶ್ವರಪ್ಪನವರು ಅಷ್ಟೊಂದು ಕಾಳಜಿವಹಿಸಿ ಗಾಂಧೀಜಿಯವರ ಪ್ರವಾಸಕ್ಕೆ ತಮ್ಮ ಕಾರನ್ನು ನೀಡಬೇಕಿತ್ತು ಯಾಕೆ? ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮದೇ ರೀತಿಯಲ್ಲಿ ಅವರು ಕಾಣಿಕೆ ನೀಡಿದ್ದಾರೆ. ಅವರನ್ನು ಸ್ವಾತಂತ್ರ್ಯ ಹೋರಾಟಗಾರರಲ್ಲವೆಂದು ಹೇಳುವುದು ಹೇಗೆ?

೧೯೪೨ರ ಚಳುವಳಿ ಸಂದರ್ಭದಲ್ಲಿ ಶ್ರೀಯುತರಾದ ವಿ.ಶಾಂತವೀರಪ್ಪನವರು ಶಿಕ್ಷಣಾಧಿಕಾರಿಗಳಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಇವರು ನೇರವಾಗಿ ಭಾಗವಹಿಸಲಿಲ್ಲ. ಜೈಲುಶಿಕ್ಷೆ ಅನುಭವಿಸಲಿಲ್ಲ, ಆದರೆ ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿ ಬಂದ ಅನೇಕ ಶಿಕ್ಷಕರನ್ನು ಸೇವೆಗೆ ವಾಪಸ್ಸು ತೆಗೆದುಕೊಂಡರು. ಅವರು ಶಿಕ್ಷಕರನ್ನು ವಾಪಸ್ಸು ತೆಗೆದುಕೊಳ್ಳುವ ಪ್ರಮೇಯವೇನಿರಲಿಲ್ಲ. ಆದರೆ ಸ್ವಾತಂತ್ರ್ಯದ ಬಗ್ಗೆ, ಸ್ವಾತಂತ್ರ್ಯ ಹೋರಾಟದ ಬಗ್ಗೆ ಒಲವು- ಸಹಾನುಭೂತಿ ಇದ್ದುದರಿಂದ ಶಾಂತವೀರಪ್ಪನವರು ಅನೇಕ ಸ್ವಾತಂತ್ರ್ಯ ಹೋರಾಟಗಾರರ ನೌಕರಿಗಳನ್ನು ರಕ್ಷಿಸಿದರು. ಇವರನ್ನು ಸ್ವಾತಂತ್ರ್ಯ ಹೋರಾಟಗಾರರೆಂದು ಯಾಕೆ ಕರೆಯಬಾರದು?

ಕೋಗಳಿಯ ಬಿ.ಎಂ. ಅಜ್ಜಯ್ಯನವರ ತಂಗಿ ರುದ್ರಮ್ಮ. ಅವರೊಬ್ಬ ಬಾಲವಿಧವೆಯಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಕುಟುಂಬವಾದುದರಿಂದ ರುದ್ರಮ್ಮನವರನ್ನು ತರಬೇತಿಗಾಗಿ ವಾರ್ಧಾದಲ್ಲಿ ಜಮನಲಾಲ್ ಬಜಾಜ್ ರವರು ನಡೆಸುತ್ತಿದ್ದ ಮಹಿಳಾ ಆಶ್ರಮಕ್ಕೆ ಕಳುಹಿಸಿದರು. ಇವರು ವರ್ಧಾದಿಂದ ವಾಪಸ್ಸು ಬಂದ ಮೇಲೆ ಖಾದಿ ಧಾರಿಗಳಾಗಿ ಗಾಂಧೀಜಿ ವಿಚಾರಗಳನ್ನು ಪ್ರಚಾರ ಮಾಡುತ್ತಿದ್ದರು. ಉಗ್ರಗಾಂಧೀವಾದಿಗಳಾಗಿದ್ದ ಕೊಟ್ಟೂರಿನ ಗೋರ್ಲಿ ಶರಣಪ್ಪನವರು ವಿಧವೆಯಾಗಿದ್ದ ರುದ್ರಮ್ಮನವರನ್ನು ವಿವಾಹವಾದರು. ಆ ದಿನಗಳಲ್ಲಿ ಅದೊಂದು ಕ್ರಾಂತಿಕಾರಿ ಘಟನೆಯಾಗಿತ್ತು. ಇವರಿಬ್ಬರ ವಿವಾಹವು ಸಮಾಜ ಸುಧಾರಣೆಗೆ ಒಂದು ಜೀವಂತ ನಿದರ್ಶನವಾಗಿತ್ತು. ರುದ್ರಮ್ಮನವರು ಜೈಲಿಗೆ ಹೋಗಲಿಲ್ಲ. ಆದರೆ ಇವರ ಸಹೋದರ ಹಾಗೂ ಗಂಡ ಅನೇಕ ಬಾರಿ ಜೈಲುಶಿಕ್ಷೆ ಅನುಭವಿಸಿದರು. ರುದ್ರಮ್ಮನವರನ್ನು ಸ್ವಾತಂತ್ರ್ಯ ಹೋರಾಟಗಾರ್ತಿಯೆಂದು ಯಾಕೆ ಪರಿಗಣಿಸಬಾರದು?

ಮೃತ್ಯುಂಜಯ ಶಾಸ್ತ್ರಿಗಳು ಬಳ್ಳಾರಿಯ ಪ್ರಸಿದ್ಧ ಸರ್ಕಾರಿ ವಕೀಲರು, ಸರ್ಕಾರಿ ವಕೀಲರಾಗಿದ್ದರೂ ಇವರು ಖಾದಿಧರಿಸುತ್ತಿದ್ದರು. ಇವರು ವಿಧವೆಯಾಗಿದ್ದ ಡಾ. ಲಕ್ಷ್ಮಿದೇವಿಯನ್ನು ವಿವಾಹವಾಗಿದ್ದರು. ೧೯೬೭ರಲ್ಲಿ ಡಾ. ಲಕ್ಷ್ಮಿದೇವಿಯವರು ಮಹಿಳಾ ಕ್ಷೇತ್ರದಿಂದ ಆಯ್ಕೆಯಾಗಿ ಮದರಾಸು ಶಾಸನಸಭೆಯಲ್ಲಿ ಸದಸ್ಯರಾಗಿದ್ದರು. ಅದೆಷ್ಟೋ ಸ್ವಾತಂತ್ರ್ಯ ಹೋರಾಟಗಾರರ ಮೊಕದ್ದಮೆಗಳಲ್ಲಿ ಶಾಸ್ತ್ರಿಗಳು ನೆರವು ನೀಡಿದರು. ಇವರು ಜೈಲಿಗೆ ಹೋಗಲಿಲ್ಲ, ಹೋರಾಟದಲ್ಲಿ ನೇರವಾಗಿ ಭಾಗವಹಿಸಲಿಲ್ಲ ಎಂಬ ಕಾರಣದ ಮೇಲೆ ಸ್ವಾತಂತ್ರ್ಯ ಹೋರಾಟಗಾರರಲ್ಲವೆಂದು ಕರೆದರೆ ಸ್ವಾತಂತ್ರ್ಯ ಹೋರಾಟಕ್ಕೆ ಗೌರವ ಬರುವುದಿಲ್ಲ ಹಾಗೂ ನ್ಯಾಯ ಒದಗಿಸಿದಂತಾಗುವುದಿಲ್ಲ.

ಅಪ್ರತ್ಯಕ್ಷವಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಕಾಣಿಕೆ ನೀಡಿದ ಒಬ್ಬ ಹೆಣ್ಣುಮಗಳ ಕಥೆಯನ್ನು ಬಳ್ಳಾರಿ ಜಿಲ್ಲೆಯ. ಕಟ್ಟಾ ಗಾಂಧೀವಾದಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಬಿಂದು ಮಾಧವರಾವ್ ಅತ್ಯಂತ ಅಭಿಮಾನದಿಂದ ಇಂದಿಗೂ ಹೇಳುತ್ತಿರುತ್ತಾರೆ. ೧೯೪೨ರ ಚಳುವಳಿಯಲ್ಲಿ ಕೂಡ್ಲಿಗಿಯಲ್ಲಿ ಬಿಂದು ಮಾಧವರಾವ್ ಮಾಸ್ತರ್ ಬಂಧನಕ್ಕೊಳಗಾದರು. ಬಿಂದು ಮಾಧವರಾವ್ ಜೈಲಿನಿಂದ ಬಿಡುಗಡೆಯಾಗಿ ವಾಪಸ್ಸು ಬರುವ ವರೆವಿಗೂ ಅವರ ಮನೆಗೆ ಉಚಿತವಾಗಿ ಒಬ್ಬ ತರಕಾರಿ ಮಾರುವ ಹೆಣ್ಣು ಮಗಳು ಕಾಯಿಪಲ್ಯ ಸರಬರಾಜು ಮಾಡುತ್ತಿದ್ದಳು. ಆಕೆಯ ಹೆಸರು ಗೊತ್ತಿಲ್ಲ. ಆಕೆಗೆ ಸ್ವಾತಂತ್ರ್ಯ ಹೋರಾಟವೆಂದರೆ ಗೊತ್ತಿಲ್ಲ. ಆದರೆ ಒಳ್ಳೆಯ ಕೆಲಸವನ್ನು ಗುರುತಿಸಬಲ್ಲವಳಾಗಿದ್ದಳು. ಸ್ವಾತಂತ್ರ್ಯ ಹೋರಾಟವು ಒಳ್ಳೆಯ ಕೆಲಸವೆಂದು ಭಾವಿಸಿದ ಈಕೆ ಸ್ವಾತಂತ್ರ್ಯ ಹೋರಾಟಗಾರರಿಗೆ ತನ್ನ ಕೈಲಾದ ಸಹಾಯ ನೀಡಿದ್ದಾಳೆ. ಇಂತಹ ವ್ಯಕ್ತಿಗಳನ್ನು ಸ್ವಾತಂತ್ರ್ಯ ಹೋರಾಟಗಾರರೆಂದು ಕರೆಯುವುದರಲ್ಲಿ ತಪ್ಪೇನಿದೆ?

ಸ್ವಾತಂತ್ರ್ಯ ಹೋರಾಟವನ್ನು 'ವರ್ಗಸ್ವರೂಪಿ' ಯೆಂದೂ, ಅದು ಕೇವಲ ಉನ್ನತ ವರ್ಗದ ಒಂದು ಹೋರಾಟವಾಗಿತ್ತೆಂದು ಟೀಕಿಸುವ ವಾಡಿಕೆಯಿದೆ. ವಾಸ್ತವವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಉನ್ನತ ವರ್ಗದ ಪ್ರಾಬಲ್ಯವಿತ್ತು ಎಂಬುದು ಕೇವಲ ಅರೆ ಸತ್ಯ. ನಿಜವಾಗಿ, ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ, ಅದರಲ್ಲೂ ಗ್ರಾಮಗಳಲ್ಲಿ, ಪುಟ್ಟ ನಗರಗಳಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯಲ್ಲಿ ಪೋಲೀಸರು ಕೇವಲ ಗಣ್ಯರನ್ನು, ಜಮೀನ್ದಾರರನ್ನು, ಮುಂದಾಳುಗಳನ್ನು ಮಾತ್ರ ಬಂಧಿಸುತ್ತಿದ್ದರಂತೆ. ಅವರುಗಳ ಮೇಲೆ ಮಾತ್ರ ಕೋರ್ಟು ಖಟ್ಲೆ ಹಾಕುತ್ತಿದ್ದರಂತೆ. ಕೂಲಿ-ನಾಲಿ ಮಾಡಿಕೊಂಡಿದ್ದವರು ಚಳುವಳಿಯಲ್ಲಿ ಭಾಗವಹಿಸುತ್ತಿದ್ದರೂ ಸಹ ಅವರನ್ನು ಬಂಧಿಸುತ್ತಿರಲಿಲ್ಲವಂತೆ! ಇದರಿಂದಾಗಿ ಸಾಮಾನ್ಯ ಜನರು, ಕೆಳ ಜಾತಿ-ವರ್ಗದ ಜನರು ಸ್ವಾತಂತ್ರ್ಯ ಚಳುವಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿಲ್ಲವೆಂಬ ಅಭಿಪ್ರಾಯ ಗಟ್ಟಿಯಾಗಿ ನೆಲೆಯೂರಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಅನೇಕ ಬಡವರು ಕೂಲಿಯಾಳುಗಳು, ಭೂರಹಿತರು ಮುಂತಾದವರನ್ನು ಪೋಲೀಸರು ಬಂಧಿಸಲಿಲ್ಲ, ಜೈಲಿಗೆ ಹಾಕಲಿಲ್ಲ. ಖಟ್ಲೆ ನಡೆಸಲಿಲ್ಲ. ಇದರಿಂದಾಗಿ ಸಾಮಾನ್ಯ ಜನರಿಗೆ, ಕೆಳ ಜಾತಿ ವರ್ಗದ ಜನರು ಸ್ವಾತಂತ್ರ್ಯ ಹೋರಾಟಗಾರರೆಂಬ ಪ್ರಮಾಣ ಪತ್ರ ದೊರೆತಿಲ್ಲ. ಈ ಕಾರಣಕ್ಕೆ ನಾವು ಹೇಳುವುದು ಸ್ವಾತಂತ್ರ್ಯ ಹೋರಾಟಗಾರರೆನಿಸಿಕೊಳ್ಳಲು ಜೈಲು ಶಿಕ್ಷೆಯೊಂದೆ ಮಾನದಂಡವಾಗಲಾರದು.

ಬೆಲ್ಲೊಣ ಭೀಮರಾವ್ ಅವರು ೧೯೩೭ ರಿಂದ ೧೯೫೨ರ ವರೆಗೆ ಬಳ್ಳಾರಿ ಜಿಲ್ಲೆಯ ಪ್ರತಿನಿಧಿಗಳಾಗಿ ಮದರಾಸು ಪ್ರಾಂತ ವಿಧಾನ ಪರಿಷತ್‌ನ ಸದಸ್ಯರಾಗಿದ್ದರು. ಇವರೊಬ್ಬ ಸಕ್ರಿಯ ಕಾಂಗ್ರೆಸ್ ಕಾರ್ಯಕರ್ತರಾಗಿದ್ದರು. ೧೯೨೭ರಲ್ಲಿ ಬಳ್ಳಾರಿಯಲ್ಲಿ ಜರುಗಿದ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ಅಧಿವೇಶನದ ಉಪಾಧ್ಯಕ್ಷರಾಗಿ ಇವರು ಕೆಲಸ ಮಾಡಿದರು. ಬಳ್ಳಾರಿ ಜಿಲ್ಲೆಯಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಸಂಘಟಿಸುವುದರಲ್ಲಿ ಇವರ ಪಾಲು ಅಪಾರವಾದುದು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಅನೇಕ ಸತ್ಯಾಗ್ರಹಿಗಳ ಪರವಾಗಿ ನ್ಯಾಯಾಲಯಗಳಲ್ಲಿ

ಇವರು ವಕೀಲಿ ನಡೆಸಿದರು. ಕೆಲವು ಕಾರಣಗಳಿಂದ ಇವರು ಜೈಲಿಗೆ ಹೋಗಲಿಲ್ಲ. ಇವರನ್ನು ಸ್ವಾತಂತ್ರ್ಯ ಹೋರಾಟಗಾರರಲ್ಲವೆಂದು ಹೇಳಬಹುದೆ?

'ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಜೈಲು ಶಿಕ್ಷೆ ಅನುಭವಿಸಿದವರು ಮಾತ್ರವೇ ಸ್ವಾತಂತ್ರ್ಯ ಹೋರಾಟಗಾರರಲ್ಲ. ಜೈಲಿಗೆ ಹೋಗದೆ-ಬಂಧನಕ್ಕೊಳಗಾಗದೆ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಿಯಾಶೀಲರಾಗಿ ದುಡಿದವರಿದ್ದಾರೆ' ಎಂದು 'ನೆಹರು ಸ್ಮಾರಕ ವಸ್ತು ಸಂಗ್ರಹಾಲಯ ಮತ್ತು ಗ್ರಂಥಾಲಯ' (ದೆಹಲಿ) ಎಂಬ ಸಂಸ್ಥೆಯ ಸಂಶೋಧನ ವಿಭಾಗದ ಮುಖ್ಯಸ್ಥರಾದ ಡಾ.ಹರಿದೇವ್ ಶರ್ಮ ಬರೆಯುತ್ತಾರೆ. (ಬಳ್ಳಾರಿ ಭೀಮರಾಯರ ಮಗ ಬಳ್ಳಾರಿ ರಘುನಾಥರಾವ್ ಅವರು ಸ್ವಾತಂತ್ರ್ಯ ಹೋರಾಟಗಾರರೆಂದರೆ ಯಾರು! ನನ್ನ ತಂದೆ ಸ್ವಾತಂತ್ರ್ಯ ಹೋರಾಟಗಾರರಲ್ಲವೆ' ಎಂದು ಪ್ರಶ್ನೆ ಹಾಕಿ ಬರೆದ ಪತ್ರಕ್ಕೆ ಹರಿದೇವ್ ಶರ್ಮ ಬರೆದ ಉತ್ತರದಲ್ಲಿ ಹೀಗೆ ತಿಳಿಸಿದ್ದಾರೆ.)

ಬಳ್ಳಾರಿ ರಾಘವರ ಹೆಸರನ್ನು ಯಾರು ಕೇಳಿಲ್ಲ? ಅವರೊಬ್ಬ ಪ್ರಸಿದ್ಧ ನಟರಾಗಿದ್ದರು. ಅಂತಾರಾಷ್ಟ್ರೀಯ ಮಟ್ಟದ ಮನ್ನಣೆ ಪಡೆದಿದ್ದರು. ನಟನೆ ಜೊತೆಗೆ ಇವರು ವಕೀಲಿಯನ್ನು ನಡೆಸುತ್ತಿದ್ದರು. ಅನೇಕ ಸ್ವಾತಂತ್ರ್ಯ ಹೋರಾಟಗಾರರ ಮೊಕದ್ದಮೆಗಳನ್ನು ಇವರು ಉಚಿತವಾಗಿ ನಡೆಸಿಕೊಟ್ಟರು. 'ಹರಿಜನ ಸೇವಾ ಸಂಘ'ದ ಅಧ್ಯಕ್ಷರಾಗಿ ಇವರು ಸೇವೆ ಸಲ್ಲಿಸಿದ್ದಾರೆ. ಹರಿಜನ ಬಾಲಕನೊಬ್ಬನನ್ನು ದತ್ತು ತೆಗೆದುಕೊಂಡು ಸಾಕುತ್ತಿದ್ದರು ಎಂದು ಹೇಳಲಾಗಿದೆ. ಇವರು ಜೈಲಿಗೆ ಹೋಗಲಿಲ್ಲ. ಅಂದ ಮಾತ್ರಕ್ಕೆ ಇವರು ಸ್ವಾತಂತ್ರ್ಯ ಹೋರಾಟಗಾರರಲ್ಲವೇ?

ಕೋಲಾಚಲಂ ವೆಂಕಟರಾವ್ ಅವರನ್ನು ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಪಿತಾಮಹರೆಂದು ಕರೆಯಬಹುದು. ಏಕೆಂದರೆ ೧೮೮೫ ರಲ್ಲಿ ಸ್ಥಾಪನೆಯಾದ ಕಾಂಗ್ರೆಸ್‌ನ ಪ್ರಥಮ ಅಧಿವೇಶನದಲ್ಲಿ ಭಾಗವಹಿಸಿದ್ದ ೭೨ ಜನ ಭಾರತೀಯರಲ್ಲಿ ಇವರೂ ಒಬ್ಬರಾಗಿದ್ದರು. ಇವರು ಕರ್ನಾಟಕದ ಪ್ರತಿನಿಧಿಗಳಾಗಿದ್ದರು. ಇವರು ಬಾಲಗಂಗಾಧರ ತಿಲಕರ ಆಪ್ತರಾಗಿದ್ದರು. ಪ್ರಸಿದ್ಧ ಸಮಾಜ ಸುಧಾರಕ ವೀರೇಶಲಿಂಗಂ ಪಂತುಲುರವರ ಆಪ್ತರಾಗಿದ್ದರು. ಬ್ರಿಟಿಷ್ ಸರ್ಕಾರದ ದಮನಕಾರಿ ನೀತಿಗಳನ್ನು ಪ್ರತಿಭಟಿಸಿ, ಬ್ರಿಟಿಷ್ ಸರ್ಕಾರ ನೀಡಿದ್ದ 'ರೈಟ್ ಆನರಬಲ್' ಪ್ರಶಸ್ತಿಯನ್ನು ಇವರು ೧೯೦೭ರಲ್ಲಿ ಹಿಂತಿರುಗಿಸಿದ್ದರು. ವಿಧವಾ ಆಶ್ರಮಕ್ಕೆ ಧನಸಹಾಯ ನೀಡಿದ್ದರು. ವಿಧವಾ ವಿವಾಹಗಳನ್ನು ಸ್ವಂತ ಖರ್ಚಿನಲ್ಲಿ ನಡೆಸುತ್ತಿದ್ದರು. ಇವರನ್ನು ಸ್ವಾತಂತ್ರ್ಯ ಹೋರಾಟಗಾರರಲ್ಲವೆಂದು ಹೇಗೆ ತಾನೆ ಪರಿಗಣಿಸಲಾದೀತು? ಇವರನ್ನು ಸ್ವಾತಂತ್ರ್ಯ ಹೋರಾಟಗಾರರಲ್ಲವೆಂದು ಪರಿಗಣಿಸಿದರೆ, ಅದು ಇತಿಹಾಸಕ್ಕೆ ಬಗೆದ ದ್ರೋಹವಾದೀತು.

ಈ ಗ್ರಂಥದ ಕೊನೆಯಲ್ಲಿ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಒಂದು ಪರಿಷ್ಕೃತ ಪಟ್ಟಿಯನ್ನು ಅನುಬಂಧದ ರೂಪದಲ್ಲಿ ನೀಡಿದ್ದೇನೆ. ನನ್ನ ಅಧ್ಯಯನದಲ್ಲಿ 'ಸ್ವಾತಂತ್ರ್ಯ ಹೋರಾಟಗಾರರು' ಎಂಬುದಕ್ಕೆ ಕೊಟ್ಟುಕೊಂಡಿರುವ ವಿಸ್ತೃತ ವ್ಯಾಖ್ಯೆಯ ಆಧಾರದ ಮೇಲೆ

ಸದರಿ ಸೂಚಿಯನ್ನು ಸಿದ್ಧಪಡಿಸಲಾಗಿದೆ. ಈ ಸೂಚಿಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗವಹಿಸಿ ಜೈಲುಶಿಕ್ಷೆ ಅನುಭವಿಸಿದವರ ಹೆಸರುಗಳಿವೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದೂ ಜೈಲುಶಿಕ್ಷೆಗೊಳಗಾಗದ ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳೂ ಇವೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹೋರಾಟಕ್ಕೆ ಅಪ್ರತ್ಯಕ್ಷವಾಗಿ-ಪರೋಕ್ಷವಾಗಿ ನೆರವು ನೀಡಿದ ಚಳುವಳಿಗಾರರ ಹೆಸರುಗಳೂ ಇವೆ. ಸರ್ಕಾರವು ಆಡಳಿತಾತ್ಮಕ ಅನುಕೂಲಕ್ಕೆ ಸ್ವಾತಂತ್ರ್ಯ ಹೋರಾಟಗಾರರೆಂದರೆ ಯಾರು? ಎಂಬುದಕ್ಕೆ ಕೊಟ್ಟುಕೊಂಡಿರುವ ವ್ಯಾಖ್ಯೆಯನ್ನು ಇಲ್ಲಿ ವಿಸ್ತೃತ ಗೊಳಿಸಿಕೊಳ್ಳಲಾಗಿದೆ. ಹೀಗೆ ಸ್ವಾತಂತ್ರ್ಯ ಹೋರಾಟಗಾರರೆಂದರೆ ಯಾರು? ಎಂಬುವುದರ ವ್ಯಾಖ್ಯೆಯನ್ನು ವಿಸ್ತೃತ ಗೊಳಿಸಿಕೊಳ್ಳುವಲ್ಲಿ ನಮಗಿರುವ ಮುಖ್ಯ ಉದ್ದೇಶವೆಂದರೆ ಸ್ವಾತಂತ್ರ್ಯ ಹೋರಾಟಕ್ಕೆ ಅಪ್ರತ್ಯಕ್ಷವಾಗಿ ಅಲ್ಪ-ಸ್ವಲ್ಪ ಕಾಣಿಕೆ ನೀಡಿದವರನ್ನೂ ಗುರುತಿಸುವುದು ಹಾಗೂ ಅವರಿಗೆ ಸ್ವಾತಂತ್ರ್ಯದ ಸುವರ್ಣೋತ್ಸವದ ಸಂದರ್ಭದಲ್ಲಿ ಗೌರವ-ಕೃತಜ್ಞತೆ ಸಲ್ಲಿಸುವುದಾಗಿದೆ. ಕೇವಲ ಅಧ್ಯಯನದ ದೃಷ್ಟಿಯಿಂದ ಇಲ್ಲಿ 'ಸ್ವಾತಂತ್ರ್ಯ ಹೋರಾಟಗಾರರು' ಎಂಬುದರ ವ್ಯಾಪ್ತಿಯನ್ನು ವಿಸ್ತೃತ ಗೊಳಿಸಿಕೊಳ್ಳಲಾಗಿದೆ. ನಾವು ಇಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಪ್ರಮಾಣ ಪತ್ರವನ್ನು ನೀಡುತ್ತಿಲ್ಲ. ನಮ್ಮ ಪ್ರಸ್ತುತ ಅಧ್ಯಯನದಲ್ಲಿ ಸಿದ್ಧಪಡಿಸಿರುವ ಸ್ವಾತಂತ್ರ್ಯ ಹೋರಾಟಗಾರರ ಪಟ್ಟಿಯನ್ನು ಪ್ರಮಾಣಪತ್ರವೆಂದು ಯಾರೂ ಭಾವಿಸಬಾರದು. ಸ್ವಾತಂತ್ರ್ಯ ಹೋರಾಟಗಾರರಿಗೆ ಪ್ರಮಾಣಪತ್ರ ನೀಡುವುದು ಪ್ರಸ್ತುತ ಅಧ್ಯಯನದ ಉದ್ದೇಶವಲ್ಲ. ನಮ್ಮದು ಕೇವಲ ಶೈಕ್ಷಣಿಕ ಹಾಗೂ ಅಧ್ಯಯನಾತ್ಮಕ ಉದ್ದೇಶವಾಗಿದೆ.

ಅಧ್ಯಯನದ ಉದ್ದೇಶಗಳು

'ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ' ಎಂಬ ಪ್ರಸ್ತುತ ಅಧ್ಯಯನ ಕೆಳಕಂಡ ಉದ್ದೇಶ ಗಳನ್ನು ಹೊಂದಿದೆ:

೧) ಅಧ್ಯಯನದ ಅನುಕೂಲಕ್ಕಾಗಿ ಪ್ರಸ್ತುತ ಅಧ್ಯಯನವು ಸ್ವಾತಂತ್ರ್ಯ ಹೋರಾಟಗಾರರು ಎಂದರೆ ಯಾರು? ಎಂಬುದನ್ನು ಗುರುತಿಸುವ ಉದ್ದೇಶವನ್ನು ಇಟ್ಟುಕೊಂಡಿದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಜೈಲುಶಿಕ್ಷೆ ಅನುಭವಿಸಿದವರು ಮಾತ್ರವೇ ಸ್ವಾತಂತ್ರ್ಯ ಹೋರಾಟಗಾರರು ಎಂಬ ತಿಳುವಳಿಕೆಯನ್ನು, ಗಡಿರೇಖೆಯನ್ನು ಮುರಿಯುವ ಉದ್ದೇಶ ಪ್ರಸ್ತುತ ಅಧ್ಯಯನಕ್ಕಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಜೈಲು ಶಿಕ್ಷೆ ಅನುಭವಿಸಿದವರ ಪಾತ್ರ-ಕೊಡುಗೆ ಅಮೂಲ್ಯವಾದುದು. ಇದರ ಜೊತೆಗೆ ಜೈಲಿಗೆ ಹೋಗದಿದ್ದರೂ ಸ್ವಾತಂತ್ರ್ಯ ಹೋರಾಟಕ್ಕೆ ಅದ್ವಿತೀಯ ಕಾಣಿಕೆ ಸಲ್ಲಿಸಿದ ಅನೇಕ ವ್ಯಕ್ತಿಗಳಿದ್ದಾರೆ-ಶಕ್ತಿಗಳಿದ್ದಾವೆ. ಅಂತಹ ವ್ಯಕ್ತಿಗಳ -ಶಕ್ತಿಗಳ ಕಾಣಿಕೆ -ಪಾತ್ರಗಳನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

೨) ಭಾರತ ಸ್ವಾತಂತ್ರ್ಯ ಹೋರಾಟವು ಅಖಂಡವೂ, ಅದ್ಭುತವೂ ಮತ್ತು ಅಭೂತ ಪೂರ್ವವೂ ಆದ ಒಂದು ಹೋರಾಟವಾಗಿತ್ತು. ಮೂಲಭೂತವಾಗಿ ಅದೊಂದು ರಾಷ್ಟ್ರ ಮಟ್ಟದ

ಹೋರಾಟವಾಗಿತ್ತು. ಪ್ರಸ್ತುತ ಅಧ್ಯಯನವು ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಪ್ರಾದೇಶಿಕ ಸ್ವರೂಪವನ್ನು ಗುರುತಿಸುವ ಉದ್ದೇಶವನ್ನು ಇಟ್ಟುಕೊಂಡಿದೆ.

೩) ವಸಾಹತುಶಾಹಿ ಆಳ್ವಿಕೆಯಲ್ಲಿ ಜಿಲ್ಲೆ-ಪ್ರಾಂತಗಳ ಗಡಿರೇಖೆಗಳು ಅನೇಕ ಬಾರಿ ಪುನಾರಚಿತಗೊಂಡವು. ಸ್ವಾತಂತ್ರ್ಯ ಹೋರಾಟಕ್ಕೆ ಪ್ರಾಂತ-ಜಿಲ್ಲೆ ಎಂಬ ಗಡಿರೇಖೆಗಳಿರಲಿಲ್ಲ. ಒಂದು ಪ್ರಾಂತ ಅಥವಾ ಜಿಲ್ಲೆಗೆ ಸೇರಿದವರು ಅನೇಕ ಕಾರಣಗಳಿಂದಾಗಿ ಬೇರೊಂದು ಪ್ರಾಂತ-ಜಿಲ್ಲೆಯಲ್ಲಿ ಹೋರಾಟ ನಡೆಸಿದ ನಿದರ್ಶನಗಳು ನಮಗೆ ಸಿಗುತ್ತವೆ. ಪ್ರಾಂತಗಳ ಗಡಿಭಾಗಗಳಲ್ಲಿ ಇದು ವ್ಯಾಪಕವಾಗಿತ್ತು. ಬಳ್ಳಾರಿ ಜಿಲ್ಲೆಯು ದೀರ್ಘಕಾಲದಿಂದ ಗಡಿ ಜಿಲ್ಲೆಯಾಗಿದೆ. ಇದು ಆಂಧ್ರಪ್ರದೇಶದ ಅನೇಕ ಜಿಲ್ಲೆಗಳೊಂದಿಗೆ ಅಂಟಿಕೊಂಡಿದೆ. ಒಂದು ರಾಜ್ಯಕ್ಕೆ ಸೇರಿದ ಜನರು ಇನ್ನೊಂದು ರಾಜ್ಯದಲ್ಲಿ ಹಾಗೂ ಪ್ರಾಂತದೊಳಗೆ, ಒಂದು ಜಿಲ್ಲೆಗೆ ಸೇರಿದ ಜನರು ಇನ್ನೊಂದು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ನಿದರ್ಶನಗಳು ನಮಗೆ ಸಾಕಷ್ಟು ದೊರೆಯುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಈ ಬಗೆಯ ಸ್ವರೂಪವನ್ನು ಗುರುತಿಸುವುದು ನಮ್ಮ ಅಧ್ಯಯನದ ಉದ್ದೇಶವಾಗಿದೆ.

೪) ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅಸಂಖ್ಯಾ ಹೋರಾಟಗಾರರು ಭಾಗವಹಿಸಿದ್ದರೆಂಬುದು ನಿಜ. ಆದರೆ ಇಲ್ಲಿ ವ್ಯಕ್ತಿಗಳಿಗಿಂತ ಅವರ ಹೋರಾಟ ಮುಖ್ಯವಾಗುತ್ತದೆ. ಸ್ವಾತಂತ್ರ್ಯ ಹೋರಾಟಗಾರರ ನೆಲೆಯಿಂದ ಸ್ವಾತಂತ್ರ್ಯ ಹೋರಾಟವನ್ನು ಪರಿಭಾವಿಸುವುದು ಒಂದು ವಿಧಾನವಾದರೆ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಮುಖ್ಯ ಘಟನೆಗಳು ಅಥವಾ ಹಂತಗಳ ನೆಲೆಯಿಂದ ಸ್ವಾತಂತ್ರ್ಯ ಹೋರಾಟವನ್ನು ಪರಿಶೀಲಿಸುವುದು ಇನ್ನೊಂದು ವಿಧಾನ. ಪ್ರಸ್ತುತ ಅಧ್ಯಯನದಲ್ಲಿ ಎರಡನೆಯ ವಿಧಾನವನ್ನು ಅನುಸರಿಸಲಾಗಿದೆ. ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಘಟನೆ-ಪ್ರಸಂಗ-ಪ್ರಕರಣಗಳ ವಿವರಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಪಾತ್ರವನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಸ್ವಾತಂತ್ರ್ಯ ಹೋರಾಟದ ವಿವಿಧ ಕಾಲಘಟ್ಟಗಳಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ವಿವರಗಳು ಹಾಗೂ ಅದರಲ್ಲಿ ಭಾಗವಹಿಸಿದ ಹೋರಾಟಗಾರರ ಪಾತ್ರ ಮುಂತಾದವುಗಳನ್ನು ವಿವರಿಸುವುದು ಹಾಗೂ ಗುರುತಿಸುವುದು ಅಧ್ಯಯನದ ಉದ್ದೇಶವಾಗಿದೆ.

೫) ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರಾಷ್ಟ್ರ ಮಟ್ಟದಲ್ಲಿ, ಪ್ರಾಂತ ಮಟ್ಟದಲ್ಲಿ ಹಾಗೂ ಸ್ಥಳೀಯವಾಗಿ ಅನೇಕ ಸಂಘ-ಸಂಸ್ಥೆಗಳು ಹುಟ್ಟಿಕೊಂಡವು. ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ಅವು ಕಾರ್ಯ ಪ್ರವೃತ್ತವಾಗಿದ್ದವು. ವ್ಯಾಯಾಮಶಾಲೆಗಳು, ಗರಡಿ ಮನೆಗಳು, ಗ್ರಂಥಾಲಯಗಳು, ಭಜನಾಮಂದಿರಗಳು, ಸಂಗೀತ-ನಾಟಕ ಸಂಸ್ಥೆಗಳು, ಖಾದಿಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಮುಂತಾದವು ತಮ್ಮದೇ ಆದ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಕಾಣಿಕೆ ನೀಡಿವೆ. ಇಂತಹ ಸಂಸ್ಥೆಗಳಿಗೆ ಪ್ರೇರಣೆ ವಿವಿಧ ಮೂಲಗಳಿಂದ ಬಂದಿರುವುದು ತಿಳಿದು ಬರುತ್ತದೆ. ಸ್ವಾತಂತ್ರ್ಯ ಈ ಸಂಘ-ಸಂಸ್ಥೆಗಳ ಮೂಲ ಉದ್ದೇಶವಲ್ಲದಿದ್ದರೂ ಅವು ಸ್ವಾತಂತ್ರ್ಯ ಚಳುವಳಿಗೆ

ಬೆನ್ನೆಲುಬಾಗಿ ಕೆಲಸ ಮಾಡಿವೆ. ಜನಜಾಗೃತಿಯಲ್ಲಿ ಅವುಗಳ ಪಾತ್ರ ಆಯಕಟ್ಟಿನದಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಹುಟ್ಟಿಕೊಂಡ ಸಂಘ-ಸಂಸ್ಥೆಗಳಾವುವು? ಅವುಗಳ ಸ್ವರೂಪ ಯಾವ ಬಗೆಯದು? ಮುಂತಾದ ಪ್ರಶ್ನೆಗಳನ್ನು ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

೬) ಬ್ರಿಟಿಷರು ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ ಸರ್ಕಾರಿ ಅಧಿಕಾರಿಗಳೆಲ್ಲಾ ಬ್ರಿಟಿಷರಾಗಿರಲಿಲ್ಲ. ಬ್ರಿಟಿಷ್ ಸರ್ಕಾರದ ಆಡಳಿತ ಸೇವೆಯಲ್ಲಿ ಅನೇಕ ಭಾರತೀಯರೂ ಇದ್ದರು. ಬ್ರಿಟಿಷ್‌ರ ಸರ್ಕಾರದ ಆಡಳಿತದಲ್ಲಿ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದ ಭಾರತೀಯರೆಲ್ಲಾ ಸ್ವಾತಂತ್ರ್ಯ ಹೋರಾಟಕ್ಕೆ ವಿರೋಧಿಗಳಾಗಿರಲಿಲ್ಲ. ಅಂದು ಶಾಲಾ-ಕಾಲೇಜುಗಳಲ್ಲಿದ್ದ ಅಧ್ಯಾಪಕರುಗಳಂತೂ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿ-ಪ್ರೇರಣೆಯ ಸೆಲೆಗಳಾಗಿದ್ದರು. ಅನೇಕ ಪೋಲೀಸು ಅಧಿಕಾರಿಗಳು. ಶಿಕ್ಷಣಾಧಿಕಾರಿಗಳು. ತಹಶೀಲ್ದಾರರು ಮುಂತಾದವರು ತಮ್ಮದೇ ಆದ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ನೆರವು, ಬೆಂಬಲ ನೀಡಿದ್ದಾರೆ. ಖಾದಿ ಧರಿಸುತ್ತಿದ್ದ ಅಧಿಕಾರಿಗಳು ಸಹ ಇದ್ದರು. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸರ್ಕಾರಿ ಅಧಿಕಾರಿಗಳು ನಡೆದುಕೊಂಡ ರೀತಿ, ಅವರು ನೀಡಿದ ನೆರವು ಮುಂತಾದವುಗಳನ್ನು ಗುರುತಿಸುವುದೂ ಸಹ ಈ ಅಧ್ಯಯನದ ಉದ್ದೇಶವಾಗಿದೆ.

೭) ಇಂದು ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕಾಗಿರುವ ಸಂಡೂರು ಸ್ವಾತಂತ್ರ್ಯಪೂರ್ವದಲ್ಲಿ ದೇಶೀಯ ರಾಜ ಸಂಸ್ಥಾನವಾಗಿತ್ತು. ೧೯೪೮ರಲ್ಲಿ ಇದು ಭಾರತ ಗಣರಾಜ್ಯದಲ್ಲಿ ವಿಲೀನಗೊಂಡಿತು. ಬಳ್ಳಾರಿ ಜಿಲ್ಲೆಯು ಸಂಪೂರ್ಣವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾಗಿ ತೊಡಗಿಕೊಂಡಿದ್ದಾಗ ಸಂಡೂರು ರಾಜ ಸಂಸ್ಥಾನದಲ್ಲಿ ಪ್ರಜೆಗಳು ಅನೇಕ ಬಗೆಯ ನಿರ್ಬಂಧ ಹಾಗೂ ಸರ್ವಾಧಿಕಾರಿ ಆಳ್ವಿಕೆಯಿಂದ ನರಳುತ್ತಿದ್ದರು. ಸಂಡೂರಿನ ಮಹಾರಾಜರು ಅಂದು ಇಬ್ಬಗೆಯ ನೀತಿ ಅನುಸರಿಸುತ್ತಿದ್ದರು. ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶಕ್ಕೆ ಅವಕಾಶ ನೀಡಿ ಗಾಂಧೀಜಿಯಿಂದ ಮೆಚ್ಚಿಗೆಗಳಿಸಿಕೊಂಡಿದ್ದರು. ಆದರೆ ತಮ್ಮ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳಿಗೆ ಅವಕಾಶ ಕೊಡುತ್ತಿರಲಿಲ್ಲ.

ಇದೇ ರೀತಿ ತುಂಗಭದ್ರಾನದಿಯ ಉತ್ತರ ಭಾಗದ ರಾಯಚೂರು, ಗುಲಬರ್ಗಾ ಮತ್ತು ಬೀದರ ಜಿಲ್ಲೆಗಳು ಹೈದರಾಬಾದ್ ನಿಜಾಮನ ಸಂಸ್ಥಾನದ ಭಾಗಗಳಾಗಿದ್ದವು. ಆ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟ ಹಾಗೂ ನಿಜಾಮನ ನಿರಂಕುಶಾಧಿಕಾರದ ವಿರುದ್ಧದ ಹೋರಾಟ ಜೊತೆ ಜೊತೆಯಲ್ಲಿ ನಡೆಯುತ್ತಿದ್ದವು. ರಾಯಚೂರು ಜಿಲ್ಲೆಯಲ್ಲಿ ನಡೆಯುತ್ತಿದ್ದ ಹೈದರಾಬಾದ್ ಸಂಸ್ಥಾನದ ವಿಮೋಚನಾ ಚಳುವಳಿ ಹಾಗೂ ರಜಾಕಾರರ ವಿರುದ್ಧದ ಹೋರಾಟದಲ್ಲಿ ಬಳ್ಳಾರಿ ಜಿಲ್ಲೆಯು ತನ್ನದೇ ಆದ ರೀತಿಯಲ್ಲಿ ಕಾಣಿಕೆ ನೀಡಿದೆ. ಸಂಡೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ ಹಾಗೂ ಅದು ಭಾರತ ಗಣರಾಜ್ಯದಲ್ಲಿ ವಿಲೀನವಾದ ಬಗೆ ಮತ್ತು ಹೈದರಾಬಾದ್ ಸಂಸ್ಥಾನದ ವಿಮೋಚನಾ ಚಳುವಳಿಯಲ್ಲಿ ಬಳ್ಳಾರಿ ಜಿಲ್ಲೆ ವಹಿಸಿದ ಪಾತ್ರವನ್ನು ಗುರುತಿಸುವ ಉದ್ದೇಶವನ್ನೂ ಪ್ರಸ್ತುತ ಅಧ್ಯಯನ ಒಳಗೊಂಡಿದೆ.

೮) ಸರ್ವೇಸಾಮಾನ್ಯವಾಗಿ ಸ್ವಾತಂತ್ರ್ಯ ಹೋರಾಟದ ಚರಿತ್ರೆಯನ್ನು ಆಗಸ್ಟ್ ೧೫, ೧೯೪೭ಕ್ಕೆ ಮುಗಿಸಿ ಬಿಡುವುದು ವಾಡಿಕೆ. ಆದರೆ ದೇಶೀಯ ಸಂಸ್ಥಾನಗಳಿಗೆ ಸಂಬಂಧ ಪಟ್ಟಂತೆ ಇದು ೧೯೪೮ರ ಕೊನೆಯ ವರೆಗೂ ಹರಿಯುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಹೋರಾಟಗಾರರಿಗೆ ಚಳುವಳಿಗಾರರಿಗೆ, ಸ್ವತಂತ್ರ ಭಾರತದ ಬಗ್ಗೆ ಕನಸುಗಳಿದ್ದವು, ನಿರೀಕ್ಷೆಗಳಿದ್ದವು. ಸ್ವಾತಂತ್ರ್ಯ ಹೋರಾಟಗಾರರು ಕಲ್ಪಿಸಿಕೊಂಡಿದ್ದ ಭಾರತ ರೂಪುಗೊಂಡಿದೆಯೇ? ಸ್ವಾತಂತ್ರ್ಯಾನಂತರ ಭಾರತ ಹಿಡಿದ ದಾರಿ ಯಾವುದು? ಈ ಬಗ್ಗೆ ಇನ್ನೂ ನಮ್ಮೊಂದಿಗಿರುವ ಸ್ವಾತಂತ್ರ್ಯ ಹೋರಾಟಗಾರರ ಅಭಿಪ್ರಾಯವೇನು? ಅವರಿಗೆ ಭ್ರಮನಿರಸನವಾಗಿದೆಯೇ? ಈ ಸಂಗತಿಗಳನ್ನು ಕಲೆ ಹಾಕುವ ಹಾಗೂ ಚರ್ಚಿಸುವ ಉದ್ದೇಶವೂ ನಮ್ಮ ಅಧ್ಯಯನಕ್ಕಿದೆ.

೯) ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ, ಜೈಲು ಶಿಕ್ಷೆ ಅನುಭವಿಸಿದ್ದ, ಬೆಂಬಲ- ಸಹಕಾರ ನೀಡಿದ್ದ, ಎಲೆಮರೆಯ ಕಾಯಿಯಂತೆ ಅಪ್ರತ್ಯಕ್ಷವಾಗಿ ಕಾಣಿಕೆ ಸಲ್ಲಿಸಿದ್ದ ಸ್ವಾತಂತ್ರ್ಯ ಹೋರಾಟಗಾರರ ಒಂದು ವಿಸ್ತೃತವಾದ ಪಟ್ಟಿಯನ್ನು ತಯಾರಿಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನ ಹೊಂದಿದೆ. ಈ ಪಟ್ಟಿಯನ್ನು ತಾಲ್ಲೂಕುವಾರಾಗಿ ತಯಾರಿಸುವ ಗುರಿಹೊಂದಿದೆ.

೧೦) ಈ ಅಧ್ಯಯನದಲ್ಲಿ ಪ್ರಥಮ ಬಾರಿಗೆ ೧೮ನೇ ಶತಮಾನದ ಕೊನೆಯ ಭಾಗದಿಂದ ಇಲ್ಲಿಯ ವರೆಗೆ ಬಳ್ಳಾರಿ ಜಿಲ್ಲೆಯ ಗಡಿರೇಖೆಗಳು, ತಾಲ್ಲೂಕುಗಳು, ಆಡಳಿತ ವ್ಯವಸ್ಥೆ ಬದಲಾಗುತ್ತಾ ಬಂದ ಬಗೆಯನ್ನು ಕೂಲಂಕಷವಾಗಿ ಚರ್ಚಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಏಕೆಂದರೆ ಈ ಬಗೆಯ ಬದಲಾವಣೆಗಳು ಸ್ವಾತಂತ್ರ್ಯ ಹೋರಾಟದ ಮೇಲೆ ತನ್ನದೇ ಆದ ಪ್ರಭಾವ ಬೀರಿದೆ. 'ದತ್ತಮಂಡಲದ' (ceded districts) ಭಾಗವಾಗಿ ಬಳ್ಳಾರಿ ಸೇರಿದ್ದು, ಮುಂದೆ ಅದು ಸ್ವತಂತ್ರ ಜಿಲ್ಲೆಯಾದುದು, ಅಲ್ಲಿಪುರ ಜೈಲು, ಹೊಸ ತಾಲ್ಲೂಕುಗಳ ರಚನೆ ಮುಂತಾದ ಸಂಗತಿಗಳನ್ನು ವಿವರಿಸುವ ಉದ್ದೇಶವನ್ನು ಈ ಅಧ್ಯಯನ ಇಟ್ಟುಕೊಂಡಿದೆ.

ಅಧ್ಯಯನ ವಿಧಾನ

ಈ ಅಧ್ಯಯನಕ್ಕೆ ಅಳವಡಿಸಿಕೊಂಡಿರುವ ಅಧ್ಯಯನ ವಿಧಾನವು ವಿಶಿಷ್ಟವಾದುದಾಗಿದೆ. ಸಮಾಜವಿಜ್ಞಾನ ಶಿಸ್ತುಗಳಲ್ಲಿ ವಾಡಿಕೆಯಲ್ಲಿರುವ ಅಧ್ಯಯನ ವಿಧಾನವನ್ನು ಇಲ್ಲಿ ಬಳಸಲಾಗಿದೆ. ಅಧ್ಯಯನಕ್ಕೆ ಅಗತ್ಯವಾದ ಮಾಹಿತಿ ರಾಶಿಯನ್ನು ಪ್ರಾಥಮಿಕ ಹಾಗೂ ಆನುಷಂಗಿಕ ಮೂಲಗಳಿಂದ ಸಂಗ್ರಹಿಸಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಬಗ್ಗೆ ವಿವರಗಳಿರುವ, ಉಲ್ಲೇಖಗಳಿರುವ ಚಾರಿತ್ರಿಕ ದಾಖಲೆ ಮತ್ತು ಆಕರಗಳಿಂದಲೂ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸರ್ಕಾರದ ಗೆಜೆಟಿಯರುಗಳು, ಸಂಶೋಧನ ಪ್ರಬಂಧಗಳು, ಕರ್ನಾಟಕ ಚರಿತ್ರೆ ಸಂಪುಟಗಳು, ಗಾಂಧಿಸ್ಮಾರಕ ನಿಧಿಯ ಪ್ರಕಟಣೆಗಳು, ಗಾಂಧೀಜಿಯವರ ಸಮಗ್ರ ಕೃತಿಸಂಪುಟಗಳು ಮುಂತಾದವುಗಳನ್ನು ನಮ್ಮ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಬಳ್ಳಾರಿ

ಜಿಲ್ಲೆಯ ಸ್ವಾತಂತ್ರ್ಯ ಹೋರಟದ ಬಗ್ಗೆ ಪ್ರಕಟವಾದ ಕಿರು ಹೊತ್ತಿಗೆಗಳನ್ನು ಇಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ಈಗಾಗಲೆ ತೀವ್ರ ಬೆಳಕಿಗೆ ತಂದಿರುವ ಸಂಗತಿಗಳನ್ನು ಚರ್ಚಿಸುವ ಜೊತೆಗೆ ಈಗ ಬೆಳಕಿಗೆ ಬರದಿರುವ, ಅಲಕ್ಷ್ಯಕ್ಕೆ ಗುರಿಯಾಗಿರುವ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಸಂಗತಿಗಳನ್ನು ಇಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ.

ಕ್ಷೇತ್ರಕಾರ್ಯ

ಪ್ರಸ್ತುತ ಅಧ್ಯಯನದಲ್ಲಿ ಪ್ರಾಥಮಿಕ ಮೂಲಗಳಿಂದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಮಾಹಿತಿಯ ಸಂಗ್ರಹಕ್ಕೆ ಕ್ಷೇತ್ರಕಾರ್ಯ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯವನ್ನು ಬಳ್ಳಾರಿ ಜಿಲ್ಲೆಯ ೮ ಜಿಲ್ಲೆಗಳನ್ನು ಹಾಗೂ ೧೯೫೩ಕ್ಕೆ ಹಿಂದೆ ಬಳ್ಳಾರಿ ಜಿಲ್ಲೆಯ ಭಾಗಗಳಾಗಿದ್ದ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲ್ಲೂಕುಗಳನ್ನು ಸೇರಿಸಿ ಕೊಳ್ಳಲಾಗಿದೆ. ಕ್ಷೇತ್ರಕಾರ್ಯದಲ್ಲಿ ಸ್ವಾತಂತ್ರ್ಯ ಹೋರಾಟವಲ್ಲಿ ಭಾಗವಹಿಸಿ ಇಂದು ನಮ್ಮೊಂದಿಗೆ ಇರುವ ಸ್ವಾತಂತ್ರ್ಯ ಹೋರಾಟಗಾರರನ್ನು ಸಂದರ್ಶಿಸಿ ವಿವರಗಳನ್ನು ಕಲೆಹಾಕಲಾಗಿದೆ. ಸ್ವಾತಂತ್ರ್ಯ ಹೋರಾಟಗಾರರು ಮೃತರಾಗಿದ್ದ ಸಂದರ್ಭದಲ್ಲಿ ಅವರ ಹೆಂಡತಿ ಅಥವಾ ಮಕ್ಕಳು ಅಥವಾ ಅವರ ನೆರೆಹೊರೆಯವರು, ಅವರ ಒಡನಾಟವಿರುವವರು ಮುಂತಾದವರನ್ನು ಸಂಪರ್ಕಿಸಿ ಅಮೂಲ್ಯವಾದ ಮಾಹಿತಿ ಸಂಗ್ರಹಿಸಲಾಗಿದೆ. ಇದಲ್ಲದೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕ್ರಿಯಾಶೀಲರಾಗಿದ್ದ ಪತ್ರಕರ್ತರನ್ನು ಮತ್ತು ನಿವೃತ್ತ ಶಿಕ್ಷಕರನ್ನು ಪ್ರಸ್ತುತ ಅಧ್ಯಯನಕ್ಕಾಗಿ ಸಂದರ್ಶಿಸಲಾಗಿದೆ.

ಬಳ್ಳಾರಿ ಜೈಲಿನಲ್ಲಿ ದೊರೆತ ದಾಖಲೆಗಳು, ರಾಜ್ಯ ಪತ್ರಾಗಾರದಲ್ಲಿ ದೊರೆತ ಮಾಹಿತಿ, ಜಿಲ್ಲಾಧಿಕಾರಿಗಳ ಗ್ರಂಥಾಲಯದಲ್ಲಿ ಕಂಡುಬಂದ ಕಡತಗಳನ್ನು ಇಲ್ಲಿ ಉಪಯೋಗಿಸಿ ಕೊಳ್ಳಲಾಗಿದೆ. ಅನೇಕ ಸಂಗತಿಗಳ ಬಗ್ಗೆ ನಿಖರವಾದ ಮಾಹಿತಿ ದೊರೆಯುತ್ತಿಲ್ಲ. ದೊರೆತ ಮಾಹಿತಿಯನ್ನು ಕೂಲಂಕಷವಾಗಿ ಪರಾಮರ್ಶಿಸಿ ಇಲ್ಲಿ ಬಳಸಲಾಗಿದೆ. ನಾವು ಸಂಗ್ರಹಿಸಿದ ಮಾಹಿತಿಗಳ ಯಥಾರ್ಥತೆಯನ್ನು ಮತ್ತು ಸಪ್ರಮಾಣವನ್ನು ಎಷ್ಟು ಸಾಧ್ಯವೋ ಅಷ್ಟು ಪರೀಕ್ಷಿಸಿ ಬಳಸಿದ್ದೇವೆ. ಇಷ್ಟಾದರೂ ಕೆಲವು ಸಂಗತಿಗಳು ಯಥಾರ್ಥತೆಗೆ ದೂರವಿರಬಹುದು. ಅವು ಕೇವಲ ಮಾಹಿತಿಯ ಕೊರತೆಯಿಂದ ಸಂಭವಿಸಿರಬಹುದಾದ ತಪ್ಪುಗಳಾಗಿವೆ. ಸಮಯದ ಅಭಾವ ಮತ್ತು ಸಂಪನ್ಮೂಲಗಳ ಕೊರತೆಯಿಂದ ಇನ್ನೂ ಆಳವಾದ ಅಧ್ಯಯನ ಕೈಗೊಳ್ಳಲು ಸಾಧ್ಯವಾಗಲಿಲ್ಲ. ಆದರೆ ಅಂತಹ ಅಧ್ಯಯನದ ಅವಶ್ಯಕತೆ ಇದೆ ಎಂದು ಮಾತ್ರ ನಾವು ಹೇಳಬಹುದು.

ಅಧ್ಯಯನದ ವ್ಯಾಪ್ತಿ

೧) ಭೌಗೋಳಿಕವಾಗಿ ಪ್ರಸ್ತುತ ಅಧ್ಯಯನವು ಬಳ್ಳಾರಿ ಜಿಲ್ಲೆಯ ಸದ್ಯದ ೮ ತಾಲ್ಲೂಕುಗಳು ಹಾಗೂ ೧೯೫೩ಕ್ಕೆ ಹಿಂದೆ ಬಳ್ಳಾರಿ ಜಿಲ್ಲೆಯ ಭಾಗಗಳಾಗಿದ್ದ ಆಲೂರು, ಆದವಾನಿ ಮತ್ತು

ರಾಯದುರ್ಗ ತಾಲ್ಲೂಕುಗಳನ್ನು ಒಳಗೊಂಡಿದೆ. ಇಂದು ರಾಯದುರ್ಗವು ನೆರೆಯ ರಾಜ್ಯವಾದ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಭಾಗವಾಗಿದ್ದರೆ ಆಲೂರು ಮತ್ತು ಆದವಾನಿಗಳು ಕರ್ನೂಲು ಜಿಲ್ಲೆಯ ಭಾಗಗಳಾಗಿವೆ. ೧೯೪೭ಕ್ಕೆ ಹಿಂದೆ ಬಳ್ಳಾರಿ ಜಿಲ್ಲೆಯಲ್ಲಿ ೯ ತಾಲ್ಲೂಕುಗಳಿದ್ದವು. ಅವುಗಳಾವುವೆಂದರೆ ಬಳ್ಳಾರಿ, ಶಿರಗುಪ್ಪ, ಹೊಸಪೇಟೆ, ಕೂಡ್ಲಿಗಿ, ಹಡಗಲಿ, ಹರಪನಹಳ್ಳಿ, ಆದವಾನಿ, ಆಲೂರು ಮತ್ತು ರಾಯದುರ್ಗ. ಸಂಡೂರು ಒಂದು ದೇಶೀಯ ರಾಜ ಸಂಸ್ಥಾನವಾಗಿತ್ತು. ಹಗರಿಬೊಮ್ಮನಹಳ್ಳಿಯು ಇತ್ತೀಚೆಗೆ ತಾಲ್ಲೂಕಾಗಿ ರೂಪುಗೊಂಡಿದೆ.

೧೯೫೩ರ ವರೆಗೆ ಬಳ್ಳಾರಿ ಜಿಲ್ಲೆಯು ಮದರಾಸು ಪ್ರಾಂತದ ಒಂದು ಪ್ರಸಿದ್ಧ ಜಿಲ್ಲೆಯಾಗಿತ್ತು. ಬಳ್ಳಾರಿಯು ಒಂದು ಸ್ವತಂತ್ರ ಜಿಲ್ಲೆಯಾಗಿ ೧೮೮೨ರಲ್ಲಿ ಅಸ್ತಿತ್ವಕ್ಕೆ ಬಂತು, ಅಂದ ಮೇಲೆ ಬಳ್ಳಾರಿಯು ಜಿಲ್ಲೆಯಾಗಿ ರೂಪುಗೊಂಡು ೧೦೦ ವರ್ಷಗಳ ಮೇಲಾಗಿದೆ.

ಬಳ್ಳಾರಿ ಜಿಲ್ಲೆಯ ಈ ಬಗೆಯ ಭೌಗೋಳಿಕ ಮತ್ತು ಆಡಳಿತಾತ್ಮಕ ವಿಶಿಷ್ಟತೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ.

೨) ಕಾಲದ ದೃಷ್ಟಿಯಿಂದ ಈ ಅಧ್ಯಯನವು ೧೮೮೫ ರಿಂದ ೧೯೪೮ರ ಕಾಲಾವಧಿಯನ್ನು ಒಳಗೊಂಡಿದೆ. ಪ್ರಾಸಂಗಿಕವಾಗಿ ೧೮೦೦ರಿಂದ ೧೮೮೫ರ ವರೆಗೆ ನಡೆದ ರಾಜಕೀಯ ಘಟನಾವಳಿಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ಇದೇ ರೀತಿ ಸ್ವಾತಂತ್ರ್ಯಾನಂತರ ಭಾರತವು ಹಿಡಿದ ದಾರಿ, ಸ್ವಾತಂತ್ರ್ಯ ಹೋರಾಟಗಾರರ ಕನಸು ಮುಂತಾದವುಗಳನ್ನು ಚರ್ಚಿಸಲಾಗಿದೆ.

ಒಟ್ಟಾರೆ ಕಾಲದ ದೃಷ್ಟಿಯಿಂದ ಪ್ರಸ್ತುತ ಅಧ್ಯಯನವು ಕೆಳಕಂಡ ಕಾಲಘಟ್ಟಗಳನ್ನು ಒಳಗೊಂಡಿದೆ.

೧. ೧೮೦೦ರಿಂದ ೧೮೫೭ ರ ನಡುವಿನ ಕಾಲಾವಧಿ.
೨. ೧೮೫೭ ರ ಮಂಡರಿಗಿ ಭೀಮರಾಯನ ಬಂಡಾಯ.
೩. ೧೮೮೫ರಲ್ಲಿ ಕಾಂಗ್ರೆಸ್ ಸ್ಥಾಪನೆ. ಅದರ ಪ್ರಥಮ ಅಧಿವೇಶನದಲ್ಲಿ ಬಳ್ಳಾರಿ ಪ್ರತಿನಿಧಿಗಳು.
೪. ೧೯೨೦ರ ಅಸಹಕಾರ ಚಳುವಳಿ.
೫. ೧೯೨೧ರಲ್ಲಿ ಬಳ್ಳಾರಿಗೆ ಗಾಂಧೀಜಿ ಪ್ರಥಮ ಭೇಟಿ.
೬. ೧೯೨೪ ರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್‌ನ ಅಧಿವೇಶನ.
೭. ೧೯೩೦ರ ಕಾನೂನು ಭಂಗ ಚಳುವಳಿ.
೮. ೧೯೩೪ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಗಾಂಧೀಜಿ ಪ್ರವಾಸ.
೯. ವೈಯಕ್ತಿಕ ಸತ್ಯಾಗ್ರಹ.
೧೦. ೧೯೪೨ ರ 'ಭಾರತ ಬಿಟ್ಟು ತೊಲಗಿ' ಚಳುವಳಿ.
೧೧. ಸ್ವಾತಂತ್ರ್ಯೋತ್ಸವ -೧೯೪೭
೧೨. ಭಾರತ ಗಣರಾಜ್ಯದಲ್ಲಿ ಸಂಡೂರು ಸಂಸ್ಥಾನದ ವಿಲೀನ.

೩) ಅಧ್ಯಯನ ವಿಷಯದ ದೃಷ್ಟಿಯಿಂದ ಇಲ್ಲಿ 'ಸ್ವಾತಂತ್ಯ ಹೋರಾಟ' ವನ್ನು ಬಳ್ಳಾರಿ ಜಿಲ್ಲೆಗೆ ಸೀಮಿತಗೊಳಿಸಿಕೊಂಡು ಅಧ್ಯಯನ ನಡೆಸಲಾಗಿದೆ. 'ಸ್ವಾತಂತ್ರ್ಯ ಹೋರಾಟಗಾರರು' ಎಂಬುದನ್ನು ತುಂಬಾ ವಿಸ್ತೃತ ನೆಲೆಯಲ್ಲಿ ಪರಿಭಾವಿಸಲಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗವಹಿಸಿ ಜೈಲುಶಿಕ್ಷೆ ಅನುಭವಿಸಿದವರನ್ನು, ಜೈಲುಶಿಕ್ಷೆ ಅನುಭವಿಸದಿದ್ದರೂ ಸ್ವಾತಂತ್ರ್ಯ ಹೋರಾಟಕ್ಕೆ ಕಾಣಿಕೆ ನೀಡಿದವರನ್ನು ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದಿದ್ದರು, ಸ್ವಾತಂತ್ರ್ಯ ಹೋರಾಟಗಾರರಿಗೆ ಪರೋಕ್ಷವಾಗಿ ಬೆಂಬಲ ನೀಡಿದವರನ್ನೂ ಇಲ್ಲಿ ಸ್ವಾತಂತ್ರ್ಯ ಹೋರಾಟಗಾರರೆಂದು ಪರಿಗಣಿಸಲಾಗಿದೆ. ಅಧ್ಯಯನದ ದೃಷ್ಟಿಯಿಂದ ಹಾಗೂ ಶೈಕ್ಷಣಿಕ ಉದ್ದೇಶದಿಂದ ಇಂತಹ ನಿರ್ವಚನ ಮಾಡಿಕೊಳ್ಳಲಾಗಿದೆ. ನಮ್ಮ ಅಧ್ಯಯನದಲ್ಲಿ ಸ್ವಾತಂತ್ರ್ಯ ಹೋರಾಟ, ಬಳ್ಳಾರಿ ಜಿಲ್ಲೆಯ ಸಂದರ್ಭದಲ್ಲಿ, ವರ್ಗ- ಜಾತಿ-ಲಿಂಗ-ಧರ್ಮ-ವಯಸ್ಸು ಮುಂತಾದ ಮಿತಿಮೇರೆಗಳನ್ನು -ಗಡಿರೇಖೆಗಳನ್ನು ಮೀರಿ ಇಡೀ ಜನಸ್ತೋಮವನ್ನು ಒಳಗೊಂಡಿತ್ತು ಎಂಬ ನೆಲೆಯಲ್ಲಿ ವಿಶ್ಲೇಷಣೆ ನಡೆಸಲಾಗಿದೆ.

ಅಧ್ಯಯನದ ಪ್ರಾಮುಖ್ಯತೆ

ಪ್ರಸ್ತುತ ಅಧ್ಯಯನವು ಅನೇಕ ದೃಷ್ಟಿಯಿಂದ ಮಹತ್ವವಾದುದಾಗಿದೆ. ಸ್ವಾತಂತ್ರ್ಯ ಹೋರಾಟವು ಜಿಲ್ಲಾಮಟ್ಟದಲ್ಲಿ ಹೇಗೆ ಸಂಘಟಿತವಾಗಿತ್ತು ಹಾಗೂ ಅದರ ಸ್ವರೂಪ-ಬೆಳವಣಿಗೆ ಯಾವ ಸ್ವರೂಪದ್ದಾಗಿತ್ತು ಎಂಬುದನ್ನು ಇಲ್ಲಿ ದಾಖಲಿಸಲಾಗಿದೆ. ಈ ಕಾರಣದಿಂದ ಪ್ರಸ್ತುತ ಅಧ್ಯಯನ ಮುಖ್ಯವಾಗುತ್ತದೆ. ಎರಡನೆಯದಾಗಿ ಸದರಿ ಅಧ್ಯಯನಕ್ಕೆ ಅಗತ್ಯವಾದ ಮಾಹಿತಿ ಯನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿಕೊಳ್ಳಲಾಗಿದೆ. ಇಲ್ಲಿ ಅಳವಡಿಸಿಕೊಂಡಿರುವ ಅಧ್ಯಯನ ವಿಧಾನವು ವಿಶಿಷ್ಟವಾದುದಾಗಿದೆ. ಈ ದೃಷ್ಟಿಯಿಂದ ನಮ್ಮ ಅಧ್ಯಯನಕ್ಕೆ ಮಹತ್ವ ಪ್ರಾಪ್ತವಾಗುತ್ತದೆ.

'ಸ್ವಾತಂತ್ರ್ಯ ಹೋರಾಟ'ವನ್ನು ಪರಿಮಿತಗೊಳಿಸಿಕೊಂಡಿರುವುದರಲ್ಲಿ ಹಾಗೂ 'ಸ್ವಾತಂತ್ರ್ಯ ಹೋರಾಟಗಾರರು' ಎಂಬುದನ್ನು ವಿಸ್ತೃತಗೊಳಿಸಿಕೊಂಡಿರುವುದರಲ್ಲಿ ಈ ಅಧ್ಯಯನದ ಮಹತ್ವವಿದೆ ಎಂದು ನಾವು ಭಾವಿಸಿದ್ದೇವೆ.

ಈ ಅಧ್ಯಯನದಲ್ಲಿ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಡೆದ ಸಮಾಜ ಸುಧಾರಣಾ ಕಾರ್ಯಕ್ರಮ- ಚಳುವಳಿಯನ್ನು ಕೂಲಂಕಷವಾಗಿ ಚರ್ಚಿಸಲಾಗಿದೆ. ಸಮಾಜ ಸುಧಾರಣೆಯನ್ನು ಸ್ವಾತಂತ್ರ್ಯ ಹೋರಾಟದ ಅವಿಭಾಜ್ಯ ಅಂಗವಾಗಿ ಪರಿಗಣಿಸಿರುವುದರಲ್ಲಿ ಈ ಅಧ್ಯಯನದ ಮಹತ್ವ ಅಡಗಿದೆ. ಏಕೆಂದರೆ ಸಮಾಜ ಸುಧಾರಣಾ ಕಾರ್ಯಕ್ರಮಗಳಾದ ಅಸ್ಪೃಶ್ಯತಾ ನಿವಾರಣೆ. ವಿಧವಾವಿವಾಹ, ಹರಿಜನರ ಸಂಘಟನೆ ಮುಂತಾದವು ಸ್ವಾತಂತ್ರ್ಯ ಹೋರಾಟಕ್ಕೆ ತನ್ನದೇ ಕಾಣಿಕೆ ನೀಡಿವೆ.

ಪ್ರಸ್ತುತ ಅಧ್ಯಯನದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ ಮತ್ತು ಕೊಡುಗೆಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಸ್ಥಳೀಯ ಮಟ್ಟದಲ್ಲೂ ಮಹಿಳೆಯರು ತಮ್ಮದೇ ಆದ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಕಾಣಿಕೆ ನೀಡಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರವನ್ನು ಕಡೆಗಣಿಸುವುದು ಸಾಧ್ಯವಿಲ್ಲ. ಅನೇಕ ಬಗೆಯ ಇತಿಮಿತಿಗಳು, ನಿರ್ಬಂಧಗಳ ನಡುವೆಯೂ ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಿಯಾಶೀಲರಾಗಿ ಭಾಗಿಗಳಾಗಿದ್ದರು ಎಂಬುದು ತುಂಬಾ ಮಹತ್ವದ ಸಂಗತಿಯಾಗಿದೆ. ಸ್ಥಳೀಯ ಮಟ್ಟದ ಸ್ವಾತಂತ್ರ್ಯ ಹೋರಾಟವನ್ನು ಕುರಿತ ಬರಹ-ಅಧ್ಯಯನಗಳಲ್ಲಿ ಮಹಿಳೆಯರ ಪಾತ್ರ ಸಾಮಾನ್ಯವಾಗಿ ಅಲಕ್ಷ್ಯಕ್ಕೆ ಗುರಿಯಾಗಿದೆ. ಅಲಕ್ಷ್ಯಕ್ಕೆ ಗುರಿಯಾದ ಸಂಗತಿಗಳನ್ನು ಚರ್ಚೆಯ ಮುಂಚೂಣಿಗೆ ತರಲು ನಡೆಸಿದ ಪ್ರಯತ್ನದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಮಹತ್ವವಿದೆ ಎಂದು ಭಾವಿಸಬಹುದಾಗಿದೆ.

ಇಡೀ ಕರ್ನಾಟಕದಲ್ಲಿ ಬಳ್ಳಾರಿ ಜಿಲ್ಲೆಗೆ ವಿಶಿಷ್ಟ ಸ್ಥಾನವಿದೆ. ಏಕೆಂದರೆ 'ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ'ವನ್ನು ಕುರಿತು ಅಧ್ಯಯನ ಮಾಡುವಾಗ ಸದ್ಯ ಇರುವ ರಾಜ್ಯ ಗಡಿರೇಖೆಗಳನ್ನು ಮೀರಬೇಕಾಗುತ್ತದೆ. ೧೯೫೬ರ ವರೆವಿಗೂ ಬಳ್ಳಾರಿ ಜಿಲ್ಲೆಯ ಭಾಗಗಳಾಗಿದ್ದ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲ್ಲೂಕುಗಳು ರಾಜ್ಯ ಪುನರ್ವಿಂಗಡಣೆ ಪ್ರಯುಕ್ತ ನೆರೆಯ ಆಂಧ್ರಪ್ರದೇಶಕ್ಕೆ ವರ್ಗಾಯಿಸಲ್ಪಟ್ಟವು. 'ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ' ಎಂಬ ಅಧ್ಯಯನವು ಆಲೂರು, ಆದವಾನಿ ಮತ್ತು ರಾಯದುರ್ಗ ತಾಲ್ಲೂಕುಗಳನ್ನು ಒಳಗೊಳ್ಳದಿದ್ದರೆ ಅಪರಿಪೂರ್ಣವಾಗಿ ಬಿಡುತ್ತದೆ. ಇದನ್ನು ಗಮನಿಸಿ ನಮ್ಮ ಅಧ್ಯಯನದಲ್ಲಿ ೧೯೫೬ಕ್ಕೆ ಹಿಂದಿನ ಬಳ್ಳಾರಿ ಜಿಲ್ಲೆಯನ್ನು ಗುರುತಿಸಿಕೊಂಡು ವಿಷಯ ಸಂಗ್ರಹ ಹಾಗೂ ವಿಶ್ಲೇಷಣೆ ನಡೆಸಿದ್ದೇವೆ. ಹೀಗೆ ಪ್ರಸ್ತುತ ಅಧ್ಯಯನವು 'ಅಂತರರಾಜ್ಯ' ಆಯಾಮ ಪಡೆದಿರುವುದರಿಂದ ಇದು ಮಹತ್ವ ಪಡೆದುಕೊಂಡುಬಿಡುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ ಕುರಿತಂತೆ ಈ ನಮ್ಮ ಅಧ್ಯಯನ ಪರಿಪೂರ್ಣವೆಂಬ, ಇಲ್ಲಿ ಗುರುತಿಸಲ್ಪಟ್ಟ ಸಂಗತಿಗಳೇ ಅಂತಿಮವಾದವು ಎಂಬ ಅಥವಾ ಇಲ್ಲಿ ಮಂಡಿಸಲಾಗುತ್ತಿರುವ ಸಂಗತಿಗಳೆಲ್ಲಾ ಪ್ರಥಮ ಬಾರಿಗೆ ಬೆಳಕು ಕಾಣುತ್ತಿವೆ ಎಂಬ ಹಮ್ಮುಬಿಮ್ಮುಗಳು ನಮಗಿಲ್ಲ. ಇಲ್ಲಿ ಹೇಳಿದ್ದೆ ಅಂತಿಮ ಸತ್ಯವಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳು ಇತಿಹಾಸದ ಪುಟಗಳಲ್ಲಿ ಮುಚ್ಚಿಹೋಗಿವೆ. ಕಾಲದ ಆಘಾತಕ್ಕೆ ಸಿಕ್ಕಿ ಕಣ್ಮರೆಯಾಗಿವೆ. ಈ ಬಗ್ಗೆ ಹೆಚ್ಚಿನ ಅಧ್ಯಯನದ ಅಗತ್ಯವಿದೆ. ಇನ್ನೂ ವಿಸ್ತೃತವಾದ-ಆಳವಾದ ಅಧ್ಯಯನಕ್ಕೆ ನಮ್ಮ ಈ ಪುಟ್ಟ ಪ್ರಯತ್ನ ಪ್ರೇರಣೆ ನೀಡಿದರೆ ನಮ್ಮ ಪ್ರಯತ್ನ ಸಾರ್ಥಕವಾಯಿತು ಎಂದು ಭಾವಿಸುತ್ತೇವೆ.

ಅಧ್ಯಾಯಗಳ ವಿನ್ಯಾಸ

ಈ ಅಧ್ಯಯನವನ್ನು ಒಟ್ಟು ೯ ಅಧ್ಯಾಯಗಳಲ್ಲಿ ನಿರೂಪಿಸಲಾಗಿದೆ. ಪೀಠಿಕೆಯೋಪಾದಿ

ಯಲ್ಲಿರುವ ಮೊದಲನೆಯ ಅಧ್ಯಾಯವು ಇಡೀ ಅಧ್ಯಯನವ ಆಶಯವನ್ನು ಒಳಗೊಂಡಿದೆ. ಈ ಅಧ್ಯಯನವು ಒಳಗೊಂಡಿರುವ ವಿಷಯವನ್ನು ಸ್ಥೂಲವಾಗಿ ಅಲ್ಲಿ ಮಂಡಿಸಲಾಗಿದೆ. ಈ ಅಧ್ಯಯನದ ಉದ್ದೇಶ, ವಿಧಾನ, ಅದರ ವ್ಯಾಪ್ತಿ ಮುಂತಾದವುಗಳನ್ನು ಅದು ಒಳಗೊಂಡಿದೆ. ಈ ಅಧ್ಯಾಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರೆಂದರೆ ಯಾರು? ಎಂಬುದನ್ನು ಖಚಿತವಾಗಿ ವಿವರಿಸಲಾಗಿದೆ. ಇದಲ್ಲದೆ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ಸ್ವರೂಪವನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ರೂಢಿಗತ ನೆಲೆಯಲ್ಲಿ ಇಂತಹ ವಿಷಯಗಳು ಅನಗತ್ಯವೆನಿಸಿದರೂ ಅಧ್ಯಯನದ ಶಿಸ್ತಿನ ದೃಷ್ಟಿಯಿಂದ ತುಂಬಾ ಪ್ರಸ್ತುತವಾಗಿದೆ. ಈ ಅಧ್ಯಾಯವು ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ 'ಏನು-ಹೇಗೆ -ಏಕೆ' ಎಂಬ ಪ್ರಶ್ನೆಗಳಿಗೆ ಉತ್ತರ ನೀಡುತ್ತದೆ. ಏನನ್ನು ಕುರಿತು ಇಲ್ಲಿ ಅಧ್ಯಯನ ನಡೆಸಲಾಗಿದೆ? ಹೇಗೆ ಅಧ್ಯಯನ ನಡೆಸಲಾಗಿದೆ? ಮತ್ತು ಯಾವ ಕಾರಣಕ್ಕೆ ಈ ಅಧ್ಯಯನ ಕೈಗೊಳ್ಳಲಾಗಿದೆ? ಎಂಬ ಪ್ರಶ್ನೆಗಳಿಗೆ ಇಲ್ಲಿ ಉತ್ತರ ದೊರೆಯುತ್ತದೆ.

ಎರಡನೆಯ ಅಧ್ಯಾಯದಲ್ಲಿ ಬಳ್ಳಾರಿ ಜಿಲ್ಲೆಯ ಭೌಗೋಳಿಕ ಹಾಗೂ ಆಡಳಿತಾತ್ಮಕ ಸ್ವರೂಪವನ್ನು ಕಾಲಾನುಕ್ರಮಣಿಕೆಯಲ್ಲಿ ವಿವರಿಸಲಾಗಿದೆ. ಕ್ರಿ.ಶ.೧೮ನೇ ಶತಮಾನದಲ್ಲಿ ಬಳ್ಳಾರಿ ಪ್ರದೇಶಕ್ಕೆ ಸಂಬಂಧಿಸಿದಂತೆ ಉಂಟಾದ ರಾಜಕೀಯ ಬದಲಾವಣೆಗಳು, ಅದು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ರೀತಿ ಹಾಗೂ ೧೯ನೇ ಶತಮಾನದ ಕೊನೆ ಭಾಗದಲ್ಲಿ ಅದು ಸ್ವತಂತ್ರ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದ ರೀತಿ, ೨೦ನೇ ಶತಮಾನದ ಆದಿ ಭಾಗದಲ್ಲಿ ಉಂಟಾದ ಜಿಲ್ಲೆಯ ಗಡಿ ರೇಖೆಗಳ ಬದಲಾವಣೆ ಮುಂತಾದವುಗಳನ್ನು ಇಲ್ಲಿ ಚರ್ಚಿಸಲಾಗಿದೆ. ಈ ರೀತಿಯ ಬಳ್ಳಾರಿ ಜಿಲ್ಲೆಯ ಗಡಿರೇಖೆಗಳ ಬದಲಾವಣೆಗೂ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಗೂ ಸಂಬಂಧವಿದೆ.

ಮೂರನೆಯ ಅಧ್ಯಾಯವು ಪ್ರಸ್ತುತ ಅಧ್ಯಯನದ ಹೃದ್ಯಭಾಗವಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಸಮಗ್ರ ಚಿತ್ರವನ್ನು ಇಲ್ಲಿ ಮಂಡಿಸಲಾಗಿದೆ. ಸ್ವಾತಂತ್ರ್ಯ ಹೋರಾಟದ ವಿವಿಧ ಘಟ್ಟಗಳಲ್ಲಿ ಬಳ್ಳಾರಿ ಜಿಲ್ಲೆಯು ಹೇಗೆ ಸ್ಪಂದಿಸಿತು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಜಿಲ್ಲೆಯ ಮುಖ್ಯ ನಗರಗಳಲ್ಲಿ ನೆಲೆಯೂರಿದ್ದ ಸ್ವಾತಂತ್ರ್ಯ ಹೋರಾಟ, ಕಾಲಕ್ರಮೇಣ ಹೇಗೆ ವಿವಿಧ ತಾಲ್ಲೂಕುಗಳಿಗೆ ಹಬ್ಬಿ, ತದನಂತರ ಜಿಲ್ಲೆಯ ಹಳ್ಳಿಗಾಡನ್ನು ಆವರಿಸಿ ಕೊಂಡಿತು ಎಂಬುದನ್ನು ವಿವರವಾಗಿ ಇಲ್ಲಿ ಚರ್ಚಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಮುಖ್ಯ ಪ್ರಸಂಗಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಬ್ರಿಟಿಷರ ನೇರ ಆಳ್ವಿಕೆಯಲ್ಲಿದ್ದ ಕನ್ನಡ ಭಾಷೆಯನ್ನಾಡುವ ವಿವಿಧ ಪ್ರದೇಶಗಳ ನಡುವೆ ಸಂಪರ್ಕ-ಸಂಬಂಧವಿತ್ತು. ಅಂದು ನಡೆಯುತ್ತಿದ್ದ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನ, ಪ್ರಾಂತ ರಾಜಕೀಯ ಸಮಾವೇಶಗಳು, ಸಂಘ-ಸಂಸ್ಥೆಗಳ ವಾರ್ಷಿಕೋತ್ಸವಗಳು ಮುಂತಾದ ಸಂದರ್ಭಗಳಲ್ಲಿ ಜನರು ಪ್ರಾಂತ-ಜಿಲ್ಲೆಗಳ ಗಡಿಗಳನ್ನು ಮೀರಿ ಭಾಗವಹಿಸುತ್ತಿದ್ದರು. ಅನೇಕ

ಕಾರಣಗಳಿಂದಾಗಿ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಜಿಲ್ಲೆಯ ಹೊರಗೆ ಹೋರಾಟ ನಡೆಸಿದ್ದುಂಟು. ಅದೇ ರೀತಿ ಅನ್ಯ ಜಿಲ್ಲೆಗಳಿಗೆ ಸೇರಿದ ಕಾರ್ಯಕರ್ತರು ಬಳ್ಳಾರಿ ಜಿಲ್ಲೆಯಲ್ಲಿ ನೆಲೆನಿಂತು ಸ್ವಾತಂತ್ರ್ಯ ಹೋರಾಟ ನಡೆಸಿದ್ದುಂಟು. ಈ ಎಲ್ಲಾ ಸಂಗತಿಗಳನ್ನು ನಾಲ್ಕನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹೋರಾಟಕ್ಕೆ ಸಂಬಂಧಿಸಿದಂತೆ ಅನೇಕ ಸಂಘ-ಸಂಸ್ಥೆಗಳು ಹುಟ್ಟಿಕೊಂಡವು. ಈ ಸಂಸ್ಥೆಗಳು ಜನರನ್ನು ಸಂಘಟಿಸುವ, ಸ್ವಾತಂತ್ರ್ಯ ಹೋರಾಟದ ಬಗ್ಗೆ ಜಾಗೃತಿ ಮೂಡಿಸುವ, ಕಾಂಗ್ರೆಸ್‌ನ ಧ್ಯೇಯ ಧೋರಣೆಗಳನ್ನು ಪ್ರಚುರ ಪಡಿಸುವ ಕೆಲಸ ಮಾಡಿದವು. ಈ ಸಂಸ್ಥೆಗಳ ಹಿಂದೆ ಇದ್ದ ಶಕ್ತಿಗಳಾವುವು? ಅವರಿಗೆ ದೊರೆತ ಪ್ರೇರಣೆ ಯಾವುದು? ಈ ಬಗೆಯ ವಿವರಗಳನ್ನು ಐದನೆಯ ಅಧ್ಯಾಯದಲ್ಲಿ ನೋಡಬಹುದು. ಈ ಅಧ್ಯಾಯದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಡೆದ ಸಮಾಜ ಸುಧಾರಣೆ-ಗಾಂಧೀಜಿ ವಿಧಾಯಕ ಕಾರ್ಯಕ್ರಮಗಳ ಸ್ವರೂಪವನ್ನು ಹಿಡಿದಿಡಲು ಪ್ರಯತ್ನಿಸಲಾಗಿದೆ.

ಆರನೆಯ ಅಧ್ಯಾಯವು ಸರ್ಕಾರದ ಅಧಿಕಾರಿಗಳು ಮತ್ತು ಸ್ವಾತಂತ್ರ್ಯ ಹೋರಾಟಗಾರರ ನಡುವಿನ ಸಂಬಂಧವನ್ನು ಒಳಗೊಂಡಿದೆ. (ಬ್ರಿಟಿಷ್ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಅನೇಕ ಭಾರತೀಯರಿದ್ದರು. ಅವರೆಲ್ಲರೂ ಸ್ವಾತಂತ್ರ್ಯ ಹೋರಾಟಕ್ಕೆ ವಿರೋಧಿಗಳಾಗಿರಲಿಲ್ಲ.) ಅನೇಕ ಉನ್ನತ ಅಧಿಕಾರದಲ್ಲಿದ್ದ ಜನರು ಸ್ವಾತಂತ್ರ್ಯ ಹೋರಾಟಕ್ಕೆ ಪರೋಕ್ಷವಾಗಿ ಸಹಾಯ ಮಾಡಿದ್ದುಂಟು. ಈ ಸಂಬಂಧದ ಸಂಗತಿಗಳನ್ನು ಏಳನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ -ಜೈಲು ಶಿಕ್ಷೆ ಅನುಭವಿಸಿದ್ದ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಇಂದು ನಮ್ಮೊಂದಿಗಿದ್ದಾರೆ. ಇವರೆಲ್ಲರ ಹೋರಾಟದ ಫಲವಾಗಿ ನಮಗೆ ಸ್ವಾತಂತ್ರ್ಯ ಪ್ರಾಪ್ತವಾಯಿತು. ಸ್ವಾತಂತ್ರ್ಯಪೂರ್ವದ ಕಾಲಘಟ್ಟ ಹಾಗೂ ಸ್ವಾತಂತ್ರ್ಯೋತ್ತರ ಕಾಲಘಟ್ಟಗಳ ನಡುವಿನ ಕೊಂಡಿ ಇವರಾಗಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರ ಮುಖ್ಯ ಉದ್ದೇಶವಿದ್ದುದು ಬ್ರಿಟಿಷರನ್ನು ಹೊಡೆದೋಡಿಸುವುದು ಮತ್ತು ಭಾರತವನ್ನು ಸ್ವತಂತ್ರಗೊಳಿಸುವುದು. ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಕೊಂಡಿದ್ದ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ವತಂತ್ರ ಭಾರತದ ಬಗ್ಗೆ ಕನಸುಗಳಿದ್ದವು. ಸ್ವತಂತ್ರ ಭಾರತವೆನ್ನುವ ಆದರ್ಶವೊಂದಿತ್ತು. ಈ ಕನಸು -ಆದರ್ಶ ಸ್ವಾತಂತ್ರ್ಯಾನಂತರ ಪೂರ್ಣಗೊಂಡಿದೆಯೇ? ಸ್ವಾತಂತ್ರ್ಯ ಹೋರಾಟಗಾರರ ಕನಸು ನನಸಾಗಿದೆಯೇನು? ಅವರೇನಾದರೂ ಭ್ರಮನಿರಸನಗೊಂಡಿದ್ದಾರೆಯೇ? ಈ ಕನಸು-ನನಸುಗಳ ಸಂಬಂಧವನ್ನು ಬಿಡಿಸಲು ಏಳನೆಯ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ.

ಕೊನೆಯ ಅಧ್ಯಾಯದಲ್ಲಿ ಇಡೀ ಅಧ್ಯಯನದ ಮುಖ್ಯ ತಥ್ಯಗಳನ್ನು ಸಾರಾಂಶ ರೂಪದಲ್ಲಿ ನೀಡಲಾಗಿದೆ. ಅನುಬಂಧಗಳಲ್ಲಿ ಸಂಡೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಸಂಕ್ಷಿಪ್ತ ವಿವರವನ್ನು ನೀಡಲಾಗಿದೆ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ವಿಸ್ತೃತ ಪಟ್ಟಿಯನ್ನು ನೀಡಲಾಗಿದೆ.

೨. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಭೌಗೋಳಿಕ-ಸಾಮಾಜಿಕ ಸ್ವರೂಪ

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಹಂಪಿಯು ಈ ಜಿಲ್ಲೆಯಲ್ಲಿ ನೆಲೆಗೊಂಡಿದೆ. ಬಳ್ಳಾರಿ ಪ್ರದೇಶವು ಒಂದು ಜಿಲ್ಲೆಯಾಗಿ ರೂಪುಗೊಂಡ ಚರಿತ್ರೆ ಕುತೂಹಲಕಾರಿಯಾಗಿದೆ. ಬಳ್ಳಾರಿ ಪ್ರದೇಶದ ಚರಿತ್ರೆಯನ್ನು ಮಧ್ಯಯುಗೀನ ಮುಸ್ಲಿಮರ ಆಕ್ರಮಣದ ಕಾಲಕ್ಕೆ ಒಯ್ಯಬಹುದಾಗಿದೆ. ಬಿಜಾಪುರದ ಸುಲ್ತಾನನು ಕ್ರಿ.ಶ.೧೬೪೦ರಲ್ಲಿ ಬಳ್ಳಾರಿ ಪ್ರದೇಶವನ್ನು, ಮುಖ್ಯವಾಗಿ ಬಳ್ಳಾರಿ ಮತ್ತು ಆದವಾನಿ ಕೋಟೆಗಳನ್ನು ಶಿವಾಜಿಗೆ ಬಳುವಳಿಯಾಗಿ ನೀಡಿದ ಎಂಬುದು ಚರಿತ್ರೆಯಿಂದ ತಿಳಿದು ಬರುತ್ತದೆ. (ಮ್ಯಾಕಲೀನ್, ೧೮೮೫). ಅಲ್ಲಿಂದ ಈ ಪ್ರದೇಶವು ಒಂದು ಖಚಿತವಾದ ಚರಿತ್ರೆಯನ್ನು ಪಡೆಯಿತು ಎಂದು ಹೇಳಬಹುದು. ಶಿವಾಜಿಯ ಮರಣದ ನಂತರ, ಕ್ರಿ.ಶ.೧೬೮೦ರಲ್ಲಿ ಇಡೀ ದಕ್ಷಿಣ ಭಾರತವು ಔರಂಗಜೇಬನ ವಶವಾಯಿತು. ಆದರೆ ದಕ್ಷಿಣ ಭಾರತದ ಪ್ರದೇಶದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಲು ಔರಂಗಜೇಬನಿಗೆ ಸಾಧ್ಯವಾಗಲಿಲ್ಲ. ಇವನ ಆಳ್ವಿಕೆ ಕಾಲದಲ್ಲಿ ಈ ಪ್ರದೇಶದ ಪಾಳೆಯಗಾರರು ಹೆಚ್ಚು ಪ್ರಬಲ ರಾದರು.

ಕ್ರಿ.ಶ.೧೭೬೮ರಲ್ಲಿ ಮೈಸೂರಿನ ಹೈದರಾಲಿಯು ಬಳ್ಳಾರಿಯ ಮೇಲೆ ಆಕ್ರಮಣ ನಡೆಸಿ ಅದನ್ನು ತನ್ನ ವಶಕ್ಕೆ ತೆಗೆದುಕೊಂಡನು. ಮುಂದೆ ಅವನ ಮಗನಾದ ಟಿಪ್ಪು ಸುಲ್ತಾನನು ೧೭೮೬ರಲ್ಲಿ ಆದವಾನಿಯ ಮೇಲೆ ಆಕ್ರಮಣ ನಡೆಸಿ ಅದನ್ನು ವಶಪಡಿಸಿಕೊಂಡನು. ಈ ಪ್ರದೇಶದ ಹರಪನಹಳ್ಳಿ, ರಾಯದುರ್ಗ, ಹಿಂದೂಪುರ, ಮಡಕಶಿರ, ಗುತ್ತಿ ಮುಂತಾದ ಪಾಳೆಯಗಾರರನ್ನು ಸೋಲಿಸಿ ತನ್ನ ಆಧಿಪತ್ಯದೊಳಗೆ ಸೇರಿಸಿಕೊಂಡನು. ಒಟ್ಟಾರೆ ಬಳ್ಳಾರಿ ಪ್ರದೇಶವು ೧೮ನೇ ಶತಮಾನದ ಕೊನೆಯ ಭಾಗದಲ್ಲಿ ಹೈದರಾಲಿ-ಟಿಪ್ಪು ಸುಲ್ತಾನರ ವಶದಲ್ಲಿತ್ತು.

ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿ, ಹೈದರಾಬಾದಿನ ನಿಜಾಮ ಮತ್ತು ಮರಾಠರು-ಮೂವರು ಒಪ್ಪಂದ ಮಾಡಿಕೊಂಡು ಒಟ್ಟಾಗಿ ಟಿಪ್ಪು ಸುಲ್ತಾನನ ಮೇಲೆ ಕ್ರಿ.ಶ.೧೭೯೨ರಲ್ಲಿ ಆಕ್ರಮಣ ನಡೆಸಿದರು. ಯುದ್ಧದಲ್ಲಿ ಟಿಪ್ಪು ಸುಲ್ತಾನನು ಸೋತನು. ಇದರಿಂದಾಗಿ ಹರಪನಹಳ್ಳಿ, ರಾಯದುರ್ಗ, ಸಂಡೂರು ಆಯಾ ಪಾಳೆಯಗಾರರಿಗೆ ಹಿಂತಿರುಗಿಸಲ್ಪಟ್ಟವು. ಉಳಿದ ಪ್ರದೇಶವು ನಿಜಾಮನ ವಶವಾಯಿತು.

ಮುಂದೆ ೧೭೯೯ರಲ್ಲಿ ಟಿಪ್ಪು ಸುಲ್ತಾನನ ಮೇಲೆ ಬ್ರಿಟಿಷರು, ಮರಾಠರು, ಹಾಗೂ ಹೈದರಾಬಾದ್ ನಿಜಾಮ ಇವರುಗಳ ಸೈನ್ಯ ಆಕ್ರಮಣ ನಡೆಸಿತು. ಈ ಯುದ್ಧದಲ್ಲಿ ಹೋರಾಟ ಮಾಡುತ್ತಾ ಟಿಪ್ಪು ಶ್ರೀರಂಗಪಟ್ಟಣದಲ್ಲಿ ಹತನಾದನು. ಯುದ್ಧದ ನಂತರ ಒಪ್ಪಂದದಂತೆ ಬಳ್ಳಾರಿ ಪ್ರದೇಶವು ಹೈದರಾಬಾದು ನಿಜಾಮನ ವಶವಾಯಿತು. ಅಂದು ಬ್ರಿಟಿಷರ ವಸಾಹತು ಅಧಿಪತ್ಯವು ಗಟ್ಟಿಯಾಗಿ ನೆಲಯೂರಿರಲಿಲ್ಲ. ಈಸ್ಟ್ ಇಂಡಿಯಾ ಕಂಪನಿಯು ಒಂದು ಖಾಸಗಿ ಸಂಸ್ಥೆಯಾಗಿತ್ತು. ಈ ಖಾಸಗಿ ವ್ಯಾಪಾರ ಸಂಸ್ಥೆಯು ಸ್ಥಳೀಯ ರಾಜಸಂಸ್ಥಾನಗಳ ರಾಜಕೀಯ ವಿಷಯಗಳಲ್ಲಿ ಹಸ್ತಕ್ಷೇಪ ನಡೆಸಿ ತನ್ನ ಪ್ರಭಾವವನ್ನು ಬೆಳೆಸಿಕೊಳ್ಳುತ್ತಿತ್ತು. ಸ್ಥಳೀಯ ರಾಜ-ಮಹಾರಾಜರುಗಳ ನಡುವಿನ ಕಿತ್ತಾಟಗಳು ಬ್ರಿಟಿಷರಿಗೆ ಅನುಕೂಲಕರ ಪರಿಸ್ಥಿತಿಯನ್ನು ಒದಗಿಸಿದವು.

ಹೀಗೆ ಕಳೆದ ೨೦೦-೩೦೦ ವರ್ಷಗಳ ಕಾಲಾವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಗಡಿರೇಖೆಗಳನ್ನು ಪುನರ್‌ರಚಿಸಲಾಗಿದೆ. ಅನೇಕ ಅಧಿಪತ್ಯಗಳ ಆಳ್ವಿಕೆಯ ಅನುಭವವು ಸದರಿ ಜಿಲ್ಲೆಗಿದೆ. ಈ ಜಿಲ್ಲೆಯ ಗಡಿರೇಖೆಗಳನ್ನು ಪುನರ್‌ರಚಿತಗೊಂಡಂತೆ ಇಲ್ಲಿನ ಆಡಳಿತ ವ್ಯವಸ್ಥೆಯೂ ಪುನರ್ ಸಂಘಟಿತಗೊಂಡಿದೆ. ಈ ರೀತಿಯ ಗಡಿರೇಖೆಗಳ ಹಾಗೂ ಆಡಳಿತ ವ್ಯವಸ್ಥೆಗಳ ಪುನರ್ ಸಂಘಟನೆಗಳು ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಮೇಲೆ ತೀವ್ರ ಪ್ರಭಾವ ಬೀರಿವೆ. ಆದ್ದರಿಂದ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಬಗೆಗಿನ ಅಧ್ಯಯನದಲ್ಲಿ ಜಿಲ್ಲೆಯ ಸೀಮಾರೇಖೆಗಳ ಹಾಗೂ ಆಡಳಿತ ವ್ಯವಸ್ಥೆಯಲ್ಲಿನ ಬದಲಾವಣೆಗಳನ್ನು ಸ್ಥೂಲವಾಗಿ ಪರಿಶೀಲಿಸುವುದು ತುಂಬಾ ಅವಶ್ಯಕ. ಬಳ್ಳಾರಿ ಜಿಲ್ಲೆಯಲ್ಲಿ ಸದ್ಯ ೮ ತಾಲ್ಲೂಕುಗಳಿವೆ (ಹರಪನಹಳ್ಳಿಯನ್ನು ಸೇರಿಸಿಕೊಂಡು) ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವನ್ನು ಕುರಿತ ಅಧ್ಯಯನ ಸದರಿ ಎಂಟು ತಾಲೂಕುಗಳಿಗೆ ಸೀಮಿತಗೊಳ್ಳುವುದು ಸಾಧ್ಯವಿಲ್ಲ. ಒಂದು ವೇಳೆ ಹಾಗೇನಾದರೂ ಮಾಡಿದರೆ ಅದು ಅರ್ಥ ರಹಿತ ಪ್ರಯತ್ನವೆನಿಸಿಕೊಂಡುಬಿಡುತ್ತದೆ. ಕ್ರಿ.ಶ.೧೯೫೩ರ ವರೆಗೂ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲ್ಲೂಕುಗಳು ಬಳ್ಳಾರಿ ಜಿಲ್ಲೆಯ ಅವಿಭಾಜ್ಯ ಅಂಗಗಳಾಗಿದ್ದವು. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲ್ಲೂಕುಗಳ ಪಾತ್ರ ತುಂಬಾ ಮಹತ್ವದ್ದಾಗಿದೆ. ಸ್ವಾತಂತ್ರ್ಯಾನಂತರ ಅಕ್ಟೋಬರ್ ೧, ೧೯೫೩ರಂದು ಈ ಮೂರು ತಾಲ್ಲೂಕುಗಳು ನೆರೆಯ ಆಂಧ್ರ ಪ್ರದೇಶಕ್ಕೆ ವರ್ಗಾವಣೆಯಾದವು. ಅಂದಮೇಲೆ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಅಧ್ಯಯನವು ಸದರಿ ತಾಲ್ಲೂಕುಗಳನ್ನು ಕೈಬಿಟ್ಟರೆ ಅಪೂರ್ಣವಾಗಿಬಿಡುತ್ತದೆ. ಒಟ್ಟಾರೆ ನಮ್ಮ ಅಧ್ಯಯನದ ದೃಷ್ಟಿಯಿಂದ ೧೯೫೩ಕ್ಕೆ ಪೂರ್ವದ ಅಂದರೆ ಹಳೆಯ ಬಳ್ಳಾರಿ ಜಿಲ್ಲೆಯು ಮುಖ್ಯವಾಗುತ್ತದೆ.

ಬ್ರಿಟಿಷ್ ಕರ್ನಾಟಕ

ಬ್ರಿಟಿಷರ ನೇರ ಆಳ್ವಿಕೆಯಲ್ಲಿದ್ದ ಕನ್ನಡ ಭಾಷಿಕರ ಪ್ರದೇಶಗಳನ್ನು ಒಟ್ಟಾಗಿ 'ಬ್ರಿಟಿಷ್

ಕರ್ನಾಟಕ'ವೆಂದು ಕರೆಯಬಹುದು. ಅಖಿಲ ಭಾರತ ಮಟ್ಟದಲ್ಲಿ ಕಂಡುಬಂದಂತೆ ಕರ್ನಾಟಕದಲ್ಲೂ ಸಹ ಸ್ವಾತಂತ್ರ್ಯ ಹೋರಾಟದ ಕಿಡಿಗಳು ಮೊದಲು ಸಿಡಿದಿದ್ದು ಬ್ರಿಟಿಷರ ನೇರ ಆಳ್ವಿಕೆಯಿದ್ದ ಪ್ರದೇಶಗಳಲ್ಲಿ ಎಂಬುದನ್ನು ಈಗಾಗಲೆ ತಿಳಿದುಕೊಂಡಿದ್ದೇವೆ. ದೇಶೀಯ ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ಹೋರಾಟದ ಸ್ವರೂಪವು ತೀವ್ರ ವಿಭಿನ್ನವಾಗಿತ್ತು. ಅನೇಕ ವರ್ಷಗಳ ಕಾಲ ಕಾಂಗ್ರೆಸ್ ದೇಶೀಯ ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಘರ್ಷಣಾತ್ಮಕ ಸ್ವರೂಪದಲ್ಲಿ ಸಂಘಟಿಸಲು ತನ್ನ ಕಾರ್ಯಕರ್ತರಿಗೆ ಅನುಮತಿ-ಅವಕಾಶ ನೀಡಿರಲಿಲ್ಲ. ಅಲ್ಲಿ ಕಾಂಗ್ರೆಸ್‌ಗೆ ವಿಧಾಯಕ ಕಾರ್ಯಕ್ರಮಗಳನ್ನು ಮಾತ್ರ ಕೈಗೊಳ್ಳಲು ಅವಕಾಶವಿತ್ತು. ದೇಶೀಯ ಸಂಸ್ಥಾನಗಳ ಬಗ್ಗೆ ಕಾಂಗ್ರೆಸ್ ಪ್ರಾರಂಭದಿಂದಲೂ ಒಂದು ಬಗೆಯ ಸಹಾನುಭೂತಿ ಹಾಗೂ ಸೌಹಾರ್ದಯುತ ಭಾವನೆಯನ್ನು ಬೆಳೆಸಿಕೊಂಡು ಬಂತು.

ಬ್ರಿಟಿಷರ ನೇರ ಆಳ್ವಿಕೆಯಲ್ಲಿ ಬಳ್ಳಾರಿ ಜಿಲ್ಲೆ

೧೮ನೇ ಶತಮಾನದ ಕೊನೆಯ ಭಾಗದಲ್ಲಿ ಬಳ್ಳಾರಿ ಪ್ರದೇಶವು, ಅಂದರೆ ಬಳ್ಳಾರಿ, ಅನಂತಪುರ, ಕರ್ನೂಲು ಮತ್ತು ಕಡಪ ಜಿಲ್ಲೆಗಳು ಹೈದರಾಬಾದ್ ನಿಜಾಮನ ಆಧಿಪತ್ಯಕ್ಕೆ ಸೇರಿದ್ದವು. ಆದರೆ ಕ್ರಿ.ಶ.೧೮೦೦ರಲ್ಲಿ 'ಸಹಾಯಕ-ಸೈನ್ಯ ಪದ್ಧತಿ'ಯನ್ನು ಒಪ್ಪಿಕೊಂಡ ಹೈದರಾಬಾದ್ ನಿಜಾಮನು ಬಳ್ಳಾರಿ, ಅನಂತಪುರ, ಕರ್ನೂಲು ಮತ್ತು ಕಡಪ ಜಿಲ್ಲೆಗಳನ್ನು ಸಂಭಾವನೆ ಬಾಬ್ತು ಬ್ರಿಟಿಷರಿಗೆ ಕಾಣಿಕೆಯಾಗಿ ನೀಡಿದನು. ಹೀಗೆ ಬ್ರಿಟಿಷರಿಗೆ ಪ್ರಾಪ್ತವಾದ ಜಿಲ್ಲೆಗಳನ್ನು 'Ceded districts' (ದತ್ತಮಂಡಲ)ಗಳೆಂದು ಕರೆಯಲಾಯಿತು. ಹೀಗೆ ಬಳ್ಳಾರಿ ಪ್ರದೇಶವು ಕ್ರಿ.ಶ.೧೮೦೦ರಲ್ಲಿ ಬ್ರಿಟಿಷರ ನೇರ ಆಳ್ವಿಕೆಗೆ ಒಳಗಾಯಿತು. ಬ್ರಿಟಿಷರು ಬಳ್ಳಾರಿ ಪ್ರದೇಶವನ್ನು ಮದರಾಸು ಪ್ರಾಂತಕ್ಕೆ ಸೇರಿಸಿಕೊಂಡರು. ಬಳ್ಳಾರಿ ಪ್ರದೇಶವನ್ನು ಬ್ರಿಟಿಷರು ೧೪೭ ವರ್ಷಗಳ ಕಾಲ ಆಳಿದರು. ಕ್ರಿ.ಶ.೧೮೦೦ರಿಂದ ೧೮೫೮ರ ವರೆಗೆ ಈಸ್ಟ್ ಇಂಡಿಯಾ ಕಂಪನಿಯೂ, ತದನಂತರ ಬ್ರಿಟಿಷ್ ಚಕ್ರಾಧಿಪತ್ಯವೂ ಬಳ್ಳಾರಿ ಪ್ರದೇಶವನ್ನು ಆಳಿದವು. ಕ್ರಿ.ಶ.೧೮೦೦ರಲ್ಲಿ ಬಳ್ಳಾರಿ ಪ್ರದೇಶವು ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟಾಗ ಅದರ ಪ್ರಥಮ ಕಲೆಕ್ಟರ್ ಆಗಿ ಥಾಮಸ್ ಮನ್ರೋ ಅಧಿಕಾರ ವಹಿಸಿಕೊಂಡನು. ಈ ಪ್ರದೇಶದಲ್ಲಿ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದ ಬಂಡಾಯಗಳನ್ನೆಲ್ಲಾ ಇವನು ಹತ್ತಿಕ್ಕಿದನು. ಇವನು ಪ್ರದೇಶದಲ್ಲಿ ಏಕರೂಪದ ಆಡಳಿತವನ್ನು ಜಾರಿಗೆ ತಂದನು. ಈ ಪ್ರದೇಶದಲ್ಲಿ ೧೮೦೦ರಲ್ಲಿ ಒಟ್ಟು ೧೮ ತಾಲ್ಲೂಕುಗಳಿದ್ದವು ಎನ್ನಲಾಗಿದೆ. ಆದರೆ ೧೮೦೮ರಲ್ಲಿ ತಾಲ್ಲೂಕುಗಳ ಸಂಖ್ಯೆ ೧೫ಕ್ಕೆ ಇಳಿಯಿತು. ಅವು: ೧.ಧರ್ಮಾವರಂ ೨.ಗೂಟಿ ೩.ತಾಡಪತ್ರಿ ೪.ಪೆನುಗೊಂಡ ೫.ಹಿಂದೂಪುರ ೬.ಮಡಕಶಿರ ೭.ಅನಂತಪುರ ೮.ಬಳ್ಳಾರಿ ೯.ಹೊಸಪೇಟೆ ೧೦.ಕೂಡ್ಲಿಗಿ ೧೧.ಹಡಗಲಿ ೧೨.ಹರಪನಹಳ್ಳಿ ೧೩.ರಾಯದುರ್ಗ ೧೪.ಆಲೂರು ೧೫.ಆದವಾನಿ

ಈ ೧೫ ತಾಲ್ಲೂಕುಗಳನ್ನು ಪಡೆದಿದ್ದ ಬಳ್ಳಾರಿ ಪ್ರದೇಶವನ್ನು ೧೮೮೨ರಲ್ಲಿ ಎರಡು ಜಿಲ್ಲೆಗಳನ್ನಾಗಿ ವಿಂಗಡಿಸಲಾಯಿತು. ಅವುಗಳಾವುವೆಂದರೆ ಬಳ್ಳಾರಿ ಮತ್ತು ಅನಂತಪುರ. ಮೇಲಿನ

ಪಟ್ಟಿಯಲ್ಲಿರುವ ೧೫ ತಾಲ್ಲೂಕುಗಳಲ್ಲಿ ಮೊದಲ ೭ ತಾಲ್ಲೂಕುಗಳನ್ನು ಸೇರಿಸಿ ಅನಂತಪುರ ಜಿಲ್ಲೆಯನ್ನು ರಚಿಸಲಾಯಿತು.

ಮದರಾಸು ಪ್ರಾಂತದಲ್ಲಿ ಬಳ್ಳಾರಿ ಜಿಲ್ಲೆಯು ಭೌಗೋಳಿಕ ನೆಲೆಯು ಆಯಕಟ್ಟಿನದಾಗಿತ್ತು. ಆದ್ದರಿಂದ ಇಲ್ಲಿ ಅನೇಕ ಬಗೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬ್ರಿಟಿಷರು ಕೈಗೊಂಡರು. ೧೮೭೧ರಲ್ಲಿ ಬಳ್ಳಾರಿ-ಗುಂತಕಲ್ಲು ರೈಲುಮಾರ್ಗವನ್ನು ನಿರ್ಮಿಸಿ, ಬಳ್ಳಾರಿಗೆ ರೈಲು ಸಾರಿಗೆ ಸಂಪರ್ಕ ಒದಗಿಸಲಾಯಿತು. ೧೮೮೪ರಲ್ಲಿ ಬಳ್ಳಾರಿ-ಹೊಸಪೇಟೆ ರೈಲುಮಾರ್ಗ ನಿರ್ಮಿಸಲಾಯಿತು. ೧೯ನೇ ಶತಮಾನದ ಕೊನೆಯ ಭಾಗದಲ್ಲೇ ಬಳ್ಳಾರಿ ನಗರದಲ್ಲಿ ಭದ್ರವಾದ ಕಾರಾಗೃಹವೊಂದನ್ನು ನಿರ್ಮಿಸಲಾಗಿತ್ತು. ಬಳ್ಳಾರಿಯಲ್ಲಿ ಒಂದು ದಂಡು ಪ್ರದೇಶವನ್ನು ಬ್ರಿಟಿಷರು ನಿರ್ಮಿಸಿದರು.

೧೯೦೦ರ ನಂತರ ಬಳ್ಳಾರಿ ಜಿಲ್ಲೆ

ಕ್ರಿ.ಶ. ೧೮೮೨ರಲ್ಲಿ ಬಳ್ಳಾರಿ ಜಿಲ್ಲೆ ನಿರ್ಮಾಣವಾದಾಗ, ಅಲ್ಲಿ ೮ ತಾಲ್ಲೂಕುಗಳಿದ್ದವು. ಈ ಜಿಲ್ಲೆಯೊಳಗೆ ಬ್ರಿಟಿಷರ ನಿಯಂತ್ರಣದಲ್ಲಿದ್ದ ಸಂಡೂರು ದೇಶೀಯ ರಾಜಸಂಸ್ಥಾನವಾಗಿತ್ತು. ಬಳ್ಳಾರಿ ಜಿಲ್ಲೆಯಲ್ಲಿದ್ದ ೮ ತಾಲ್ಲೂಕುಗಳನ್ನು ಆಡಳಿತದ ಅನುಕೂಲಕ್ಕಾಗಿ ಮೂರು ಉಪವಿಭಾಗಗಳಾಗಿ ಸಂಘಟಿಸಲಾಗಿತ್ತು. ಬಳ್ಳಾರಿ, ಆದವಾನಿ ಮತ್ತು ಹೊಸಪೇಟೆಗಳು ಮೂರು ಉಪವಿಭಾಗಗಳು. ಬಳ್ಳಾರಿ ಉಪವಿಭಾಗದಲ್ಲಿ ಬಳ್ಳಾರಿ ಮತ್ತು ರಾಯದುರ್ಗ ತಾಲ್ಲೂಕುಗಳು, ಆದವಾನಿ ಉಪವಿಭಾಗದಲ್ಲಿ ಆದವಾನಿ ಮತ್ತು ಆಲೂರು ತಾಲ್ಲೂಕುಗಳು ಮತ್ತು ಹೊಸಪೇಟೆ ಉಪವಿಭಾಗದಲ್ಲಿ ಹೊಸಪೇಟೆ, ಹರಪನಹಳ್ಳಿ, ಕೂಡ್ಲಿಗಿ ಮತ್ತು ಹಡಗಲಿ ತಾಲ್ಲೂಕುಗಳು ಸೇರಿದ್ದವು. ಹೊಸಪೇಟೆ ಉಪವಿಭಾಗದ ವ್ಯಾಪ್ತಿ ವಿಶಾಲವಾಗಿದ್ದುದರಿಂದ ಅಲ್ಲಿ ಉಪಕಲೆಕ್ಟರ್ ಅವರ ಕಛೇರಿಯನ್ನು ತೆರೆಯಲಾಯಿತು.

೧೯೧೦ರಲ್ಲಿ ಶಿರಗುಪ್ಪ ತಾಲ್ಲೂಕು ಅಸ್ತಿತ್ವಕ್ಕೆ ಬಂದಿತು. ಇದರಿಂದ ಜಿಲ್ಲೆಯ ತಾಲ್ಲೂಕುಗಳ ಸಂಖ್ಯೆ ೯ಕ್ಕೆ ಏರಿತು. ಸ್ವತಂತ್ರ ದೇಶೀಯ ರಾಜಸಂಸ್ಥಾನವಾಗಿದ್ದ ಸಂಡೂರು ೧೯೪೮ರಲ್ಲಿ ಭಾರತ ಗಣರಾಜ್ಯದಲ್ಲಿ ವಿಲೀನಗೊಂಡಿತು. ಹೀಗೆ ವಿಲೀನಗೊಂಡ ಸಂಡೂರು ೧೯೪೮ರಲ್ಲಿ ಪ್ರತ್ಯೇಕ ತಾಲ್ಲೂಕು ಸ್ಥಾನ ಪಡೆಯಿತು. ಹೀಗೆ ಬಳ್ಳಾರಿ ಜಿಲ್ಲೆಯಲ್ಲಿ ೧೦ ತಾಲ್ಲೂಕುಗಳು ಅಸ್ತಿತ್ವಕ್ಕೆ ಬಂದವು. ತುಂಗಭದ್ರಾ ನೀರಾವರಿ ಯೋಜನೆ ನಿರ್ಮಾಣದ ಹಂತದಲ್ಲಿ ಮಲ್ಲಪುರಂ ಎಂಬ ಉಪತಾಲ್ಲೂಕನ್ನು ರಚಿಸಲಾಗಿತ್ತು. ಆದರೆ ಮುಂದೆ ೧೯೬೦ರ ದಶಕದಲ್ಲಿ ಮಲ್ಲಪುರ ಉಪ ತಾಲ್ಲೂಕನ್ನು ರದ್ದುಗೊಳಿಸಿ ಹಗರಿಬೊಮ್ಮನಹಳ್ಳಿ ತಾಲ್ಲೂಕನ್ನು ರಚಿಸಲಾಯಿತು.

ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ ಕುರಿತ ಅಧ್ಯಯನದಲ್ಲಿ ಇಷ್ಟು ತಾಲ್ಲೂಕು ಪ್ರದೇಶಗಳನ್ನು ಅಧ್ಯಯನ ವ್ಯಾಪ್ತಿಯೊಳಗೆ ಸೇರಿಸಿಕೊಳ್ಳಬೇಕಾಗುತ್ತದೆ. ೧೯೫೩ರಲ್ಲಿ ಆಲೂರು,



ಕ್ರಿ.ಶ. ೧೮೦೦ರಲ್ಲಿ ಸೀಡೆಡ್ ಜಿಲ್ಲೆಗಳು

ಆದವಾನಿ ಮತ್ತು ರಾಯದುರ್ಗಗಳು ಆಂಧ್ರಪ್ರದೇಶಕ್ಕೆ ವರ್ಗಾವಣೆಯಾದವು ನಿಜ. ನೆರೆಯ ರಾಜ್ಯದ ಭಾಗಗಳನ್ನು ಸೇರಿಸಿಕೊಂಡು ಈ ಅಭ್ಯಯನವನ್ನು ನಡೆಸಿರುವುದರಿಂದ ಇದೊಂದು ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವ ಅಧ್ಯಯನವಾಗಿದೆ. ಈ ಅಧ್ಯಯನದಲ್ಲಿ ಆಂಧ್ರಪ್ರದೇಶ, ಕರ್ನಾಟಕ, ಮದರಾಸು ಮುಂತಾದ ಭಾಷಾವಾರು ಪ್ರಾಂತಗಳ ಭಿನ್ನ-ಭೇದಗಳನ್ನು ಮೀರಲಾಗಿದೆ. ಬ್ರಿಟಿಷರ ವಿರುದ್ಧ ಈ ಜಿಲ್ಲೆಯಲ್ಲಿ ಜನರು ಹೇಗೆ ಹೋರಾಟ ನಡೆಸಿದರು ಎಂಬುದು ಮಾತ್ರ ನಮಗೆ ಮುಖ್ಯವಾಗಿದೆ.

ಅಲ್ಲಿಪುರ ಜೈಲು

ಬ್ರಿಟಿಷರ ವಸಾಹತುಶಾಹಿ ಆಳ್ವಿಕೆ ಸಂದರ್ಭದಲ್ಲಿ ಭಾರತದ ಉದ್ದಗಲಕ್ಕೂ ನಿರ್ಮಿಸಲಾಗಿದ್ದ ಜೈಲುಗಳು ಇಂದು ಸ್ವಾತಂತ್ರ್ಯ ಹೋರಾಟದ ಸ್ಮಾರಕಗಳಾಗಿವೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಜೈಲುಗಳೂ 'ಎರಡನೆಯ ಮನೆ'ಗಳಾಗಿ ಬಿಟ್ಟಿದ್ದವು. ಜೈಲುಗಳದ್ದೇ ಒಂದು ವರ್ಣರಂಜಿತ ಇತಿಹಾಸವಿದೆ. ಅಂಡಮಾನ್ -ನಿಕೋಬಾರ್ ದ್ವೀಪಗಳಲ್ಲಿನ ಪೋರ್ಟ್ ಬ್ಲೆರ್‌ನ ಇತಿಹಾಸ ಪ್ರಸಿದ್ಧ ಜೈಲು ಇಂದು ರಾಷ್ಟ್ರೀಯ ಸ್ಮಾರಕವಾಗಿದೆ. ವಸಾಹತುಶಾಹಿ ಕಾಲದ ಜೈಲುಗಳ ಚರಿತ್ರೆಯೆಂದರೆ ಸ್ವಾತಂತ್ರ್ಯ ಹೋರಾಟದ ಚರಿತ್ರೆಯೇ ಆಗಿದೆ.

ಕ್ರಿ.ಶ.೧೮೦೦ರಲ್ಲಿ ದತ್ತಮಂಡಲಗಳನ್ನು ಈಸ್ಟ್ ಇಂಡಿಯಾ ಕಂಪನಿ ತನ್ನ ವಶಕ್ಕೆ ತೆಗೆದುಕೊಂಡಾಗ ಬಳ್ಳಾರಿಯಲ್ಲಿ ಜೈಲು ಇರಲಿಲ್ಲ. ಪ್ರಥಮ ಕಲೆಕ್ಟರ್ ಆಗಿ ಬಂದ ಥಾಮಸ್ ಮನ್ರೋ ಜೈಲುಗಳ ಅಗತ್ಯವನ್ನು ಮನಗಂಡನು. ಈ ಬಗ್ಗೆ ಸರ್ಕಾರಕ್ಕೆ ಮನವಿಯೊಂದನ್ನು ಸಲ್ಲಿಸಿದನು. ೧೮೬೬ರಲ್ಲಿ ಬಳ್ಳಾರಿಯಲ್ಲಿ ಕಾರಾಗೃಹವೊಂದನ್ನು ನಿರ್ಮಿಸುವ ಯೋಜನೆ ತಯಾರಾಗಿತ್ತು. ಆದರೆ ಕೆಲವು ಕಾರಣಗಳಿಂದ ಅದು ವೆಲ್ಲೂರಿಗೆ ವರ್ಗಾವಣೆಯಾಯಿತು. ಮುಂದೆ ೧೮೮೪ರಲ್ಲಿ ಬಳ್ಳಾರಿ ನಗರದಲ್ಲಿ ಒಂದು ಜೈಲನ್ನು ಸ್ಥಾಪಿಸಲಾಯಿತು. ಸಿ.ಡಿ.ಮ್ಯಾಕಲೀನ್ ನ ಕೈಪಿಡಿ ಪ್ರಕಾರ ೧೮೮೪ರಲ್ಲಿ ಬಳ್ಳಾರಿ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಖೈದಿಗಳ ಸಂಖ್ಯೆ ೩೫೦ (ಮ್ಯಾಕಲೀನ್. ಸಿ.ಡಿ.೧೮೮೫). ೧೯೦೫ರಲ್ಲಿ ಬಳ್ಳಾರಿಯಲ್ಲಿದ್ದ ಜೈಲನ್ನು ಕೇಂದ್ರ ಕಾರಾಗೃಹವೆಂದು ಘೋಷಿಸಲಾಯಿತು.

ಇದಲ್ಲದೆ ಬ್ರಿಟಿಷ್ ಸರ್ಕಾರವು ಬಳ್ಳಾರಿ ನಗರದ ಹೊರವಲಯದ 'ಅಲ್ಲಿಪುರ' ಎಂಬಲ್ಲಿ ವಿಶಿಷ್ಟವಾದ ಜೈಲೊಂದನ್ನು ನಿರ್ಮಿಸಿತು. ಇದನ್ನು ಮೊದಲ ಮಹಾಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಸ್ಥಾಪಿಸಲಾಯಿತು. ಅಲ್ಲಿಪುರ ಜೈಲು ಎರಡು ವಿಶಿಷ್ಟ ಸಂಗತಿಗಳಿಗೆ ಪ್ರಸಿದ್ಧವಾಗಿದೆ. ಮೊದಲನೆಯದಾಗಿ ೧೯೨೧ರ ಆಗಸ್ಟ್ ೩೦ರಂದು ಕೇರಳದಲ್ಲಿ ನಡೆದ 'ಮಾಪಿಳ್ಳಾಗಳ ದಂಗೆ'ಯಲ್ಲಿ ಸೆರೆಸಿಕ್ಕಿದ ಸಾವಿರಾರು ಮುಸ್ಲಿಮ್ ಗೇಣಿದಾರರನ್ನು ಬಳ್ಳಾರಿಗೆ ಕರೆತಂದು ಅಲ್ಲಿಪುರ ಜೈಲಿನಲ್ಲಿ ಹಾಕಲಾಗಿತ್ತು. ಎರಡನೆಯದಾಗಿ ಆಂಗ್ಲೋ-ಟರ್ಕಿ ಯುದ್ಧದಲ್ಲ ಭಾಗಿಗಳಾಗಿದ್ದ ಟರ್ಕಿ ದೇಶದ ಯುದ್ಧ ಖೈದಿಗಳನ್ನು ಸಹ ಬಳ್ಳಾರಿಗೆ ಕರೆತಂದು ಅಲ್ಲಿಪುರ ಜೈಲಿನಲ್ಲಿಡಲಾಗಿತ್ತು.

ಈ ಜೈಲಿನಲ್ಲಿ ಬಂಧಿಸಲಾಗಿದ್ದ ಸುಮಾರು ೨೦೦೦ ಟರ್ಕಿ ಯುದ್ಧ ಖೈದಿಗಳ ಸಮಾಧಿಗಳು ಇಂದಿಗೂ ಅಲ್ಲಿಪುರದಲ್ಲಿ ನೋಡಲು ದೊರೆಯುತ್ತವೆ. ಇತ್ತೀಚೆಗೆ ಟರ್ಕಿ ದೇಶದ ರಾಯಭಾರ ಕಛೇರಿಯು ಕೇಂದ್ರದೊಂದಿಗೆ ಅಲ್ಲಿಪುರದ ಬಳಿಯಿರುವ ಟರ್ಕಿ ದೇಶದ ನಾಗರಿಕರ ಸಮಾಧಿಗಳಿರುವ ಸ್ಥಳವನ್ನು ಭವ್ಯ ಸ್ಮಾರಕವಾಗಿ ಅಭಿವೃದ್ಧಿಪಡಿಸಲಾಗಿದೆ. ಇಲ್ಲಿರುವ ಸಮಾಧಿಗಳಲ್ಲಿ ಅಬ್ದುಲ್ ಸಲಾ ಬಹಾದ್ದೂರ್ ಎಂಬುವ ಟರ್ಕಿ ಯುವರಾಜನೊಬ್ಬನ ಸಮಾಧಿಯೂ ಇದೆ (ಪ್ರಜಾವಾಣಿ, ೨೮.೦೩.೧೯೯೮).

ಅಲ್ಲಿಪುರ ಜೈಲು ವಿಶಾಲವಾದ ಹಾಗೂ ಭದ್ರವಾದ ಕಾರಾಗೃಹವಾಗಿತ್ತು. ಈ ಜೈಲಿನಲ್ಲಿ ಸುಮಾರು ೫೦೦೦ ಖೈದಿಗಳನ್ನು ಏಕಕಾಲದಲ್ಲಿ ಇಡಬಹುದಾಗಿತ್ತು. ಭದ್ರತೆಯ ದೃಷ್ಟಿಯಿಂದ ಈ ಜೈಲಿನ ಸುತ್ತ ಹಾಕಲಾಗಿದ್ದ ಮುಳ್ಳು ತಂತಿ ಬೇಲಿಗೆ ೧೯೩೨ರಿಂದ ವಿದ್ಯುತ್ ಹರಿಸುವ ಕ್ರಮ ಜಾರಿಗೆ ಬಂದಿತು. ಸ್ವಾತಂತ್ರ್ಯ ಹೋರಾಟದ ದೃಷ್ಟಿಯಿಂದ ಅಲ್ಲಿಪುರ ಜೈಲಿಗೆ ಚಾರಿತ್ರಿಕ ಮಹತ್ವವಿದೆ. ಈ ಜೈಲಿಗೆ ಅಂಟಿಕೊಂಡೇ ಬ್ರಿಟಿಷರ ದಂಡು ಪ್ರದೇಶವಿತ್ತು. ಈ ಜೈಲಿಗೆ ಅಂಟಿಕೊಂಡು ಅನೇಕ 'ಸೈನಿಕರ ಬ್ಯಾರಕ್'ಗಳಿದ್ದವು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನೂರಾರು ಸತ್ಯಾಗ್ರಹಿಗಳನ್ನು ಈ ಜೈಲಿನಲ್ಲಿ ಕೂಡಿಡಲಾಗುತ್ತಿತ್ತು. ಚಕ್ರವರ್ತಿ ರಾಜಗೋಪಾಲಾಚಾರಿ, ಕಾಮರಾಜ, ಟಿ.ಪಿ. ಸುಬ್ಬಾಶೆಟ್ಟಿ, ಜಿ.ಲಚ್ಚಣ್ಣ, ಒ.ವಿ.ಅಳಗೇಶನ್, ಬೆಜವಾಡ ಗೋಪಾಲರೆಡ್ಡಿ, ಪೊಟ್ಟಿ ಶ್ರೀರಾಮುಲು, ಬುಲುಸು ಸಾಂಬಮೂರ್ತಿ ಮುಂತಾದ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರೆಲ್ಲ ಇಲ್ಲಿ ಜೈಲುವಾಸ ಅನುಭವಿಸಿದರು.

ಸ್ವಾತಂತ್ರ್ಯಾನಂತರ ಅಲ್ಲಿಪುರ ಜೈಲು ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿತು. ವಸಾಹತುಶಾಹಿಯ ಪಳೆಯುಳಿಕೆಯಾಗಿದ್ದ ಅಲ್ಲಿಪುರ ಕಾರಾಗೃಹವನ್ನು ೧೯೫೮ರಲ್ಲಿ ಬಳ್ಳಾರಿ ವೈದ್ಯಕೀಯ ಕಾಲೇಜಿಗೆ ನೀಡಲಾಯಿತು. ಅಲ್ಲಿದ್ದ ಸೈನಿಕರ ಬ್ಯಾರಕ್ಕುಗಳನ್ನು ವೈದ್ಯರ ವಾಸದ ಮನೆಗಳನ್ನಾಗಿ ಮಾಡಲಾಗಿದೆ. ಸ್ವಾತಂತ್ರ್ಯ ಹೋರಾಟದ ನೆನಪಿಗಾಗಿ ಅಲ್ಲಿಪುರ ಜೈಲಿದ್ದ ಸ್ಥಳದಲ್ಲಿ ಸ್ಮಾರಕವೊಂದನ್ನು ನಿರ್ಮಿಸಬಹುದಾಗಿತ್ತು. ಅಲ್ಲಿ ಜೈಲೊಂದಿತ್ತು, ಸ್ವಾತಂತ್ರ್ಯ ಹೋರಾಟಗಾರರು ಅಲ್ಲಿ ಸೆರೆಮನೆವಾಸ ಅನುಭವಿಸಿದರು ಎಂಬುದನ್ನು ನೆನಪಿಸುವಂತಹ ಗುರುತುಗಳು ಈಗ ಅಲ್ಲಿ ಇಲ್ಲವಾಗಿದೆ. ಚರಿತ್ರೆಯ ಗುರುತುಗಳನ್ನು ಹೀಗೆ ಅಳಿಸಿ ಹಾಕುವುದು ಸಾಧುವಲ್ಲ.

ದ್ವಿಭಾಷಾ ಪ್ರದೇಶ

ಬಳ್ಳಾರಿ ಜಿಲ್ಲೆಯು ಬಹುಮಟ್ಟಿಗಿನಲ್ಲೂ ಕನ್ನಡ ಮತ್ತು ತೆಲುಗು ಭಾಷೆಗಳನ್ನಾಡುವ ದ್ವಿಭಾಷಾ ಪ್ರದೇಶವಾಗಿದೆ. ಅನೇಕ ಶತಮಾನಗಳ ಕಾಲ ಬಳ್ಳಾರಿ ಜಿಲ್ಲೆ ಹಾಗೂ ಇಂದು ಆಂಧ್ರ ರಾಜ್ಯದಲ್ಲಿರುವ ಕರ್ನೂಲು, ಕಡಪ ಮತ್ತು ಅನಂತಪುರ ಜಿಲ್ಲೆಗಳು ಒಂದೇ ಆಡಳಿತದಲ್ಲಿದ್ದವು.

ಈ ಪ್ರದೇಶವನ್ನು ಕ್ರಿ.ಶ.೧೮೦೦ರಲ್ಲಿ ಹೈದರಾಬಾದ್ ನಿಜಾಮನು ಬ್ರಿಟಿಷರಿಗೆ ನೀಡಿದ್ದರಿಂದ ಇವುಗಳನ್ನು 'ಸೀಡೆಡ್ ಡಿಸ್ಟ್ರಿಕ್ಟ್' ಎಂದು ಕರೆಯಲಾಗಿದೆ. ಕನ್ನಡ ಮತ್ತು ತೆಲುಗು ಭಾಷಿಕರು ಇಲ್ಲಿ ಇಂದಿಗೂ ಜೊತೆಯಲ್ಲಿ ಬದುಕುತ್ತಿದ್ದಾರೆ. ಒಂದು ವಿಚಿತ್ರವೆಂದರೆ ಕನ್ನಡ ಮತ್ತು ತೆಲುಗು ಭಾಷಿಕ ಪ್ರದೇಶಗಳು ತಮಿಳು ಭಾಷಿಕರ ಪ್ರದೇಶವಾದ ಮದರಾಸು ಪ್ರಾಂತದ ಭಾಗವಾಗಿದ್ದುದು ತುಂಬಾ ಗಮನಾರ್ಹವಾದ ವಿಷಯವಾಗಿದೆ. ಬ್ರಿಟಿಷರು ಪ್ರಾಂತಗಳನ್ನು ಕೇವಲ ತಮ್ಮ ಆಡಳಿತದ ಅನುಕೂಲಕ್ಕೆ ತಕ್ಕಂತೆ ನಿರ್ಮಿಸಿದ್ದರು. ಅವರಿಗೆ ಪ್ರದೇಶಗಳ ಭೌಗೋಳಿಕ ಲಕ್ಷಣಗಳಾಗಲಿ, ಭಾಷಿಕ ಸಂಗತಿಗಳಾಗಲಿ, ಸಾಂಸ್ಕೃತಿಕ ಪರಂಪರೆಗಳಾಗಲಿ ಮುಖ್ಯವಾಗಿರಲಿಲ್ಲ. ಇದಕ್ಕಿಂತ ಮುಖ್ಯವಾಗಿ 'ಕರ್ನಾಟಕ ಪ್ರಾಂತ'ವೆಂಬುದು ಬ್ರಿಟಿಷರ ಆಡಳಿತ ಕಾಲದಲ್ಲಿ ಇರಲಿಲ್ಲ. ಕರ್ನಾಟಕದ ಕೆಲವು ಭಾಗಗಳು ಮದರಾಸು ಪ್ರಾಂತದಲ್ಲಿ ಮತ್ತು ಮುಂಬೈ ಪ್ರಾಂತದಲ್ಲಿ ಹಂಚಿಹೋಗಿದ್ದವು. ಮೈಸೂರು ಸಂಸ್ಥಾನ ಹಾಗೂ ಹೈದರಾಬಾದ್ ನಿಜಾಮನ ಸಂಸ್ಥಾನಗಳಲ್ಲಿ ಉಳಿದ ಭಾಗಗಳು ಹಂಚಿ ಹೋಗಿದ್ದವು.

ಬಳ್ಳಾರಿ ಜಿಲ್ಲೆಯು ದ್ವಿಭಾಷಾ ವಲಯವಾಗಿದ್ದುದರಿಂದ ಅಲ್ಲಿ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತಿದ್ದವು. ಕನ್ನಡ ಮತ್ತು ತೆಲುಗು ಬಾಷೆಗಳನ್ನಾಡುವ ಕಾಂಗ್ರೆಸಿಗರ ನಡುವೆ ಸೌಹಾರ್ದಯುತ ಸಂಬಂಧವಿರಲಿಲ್ಲ. ೧೯೨೧ರಲ್ಲಿ ಭಾಷಾವಾರು ಪ್ರಾಂತೀಯ ಕಾಂಗ್ರೆಸ್ ಸಮಿತಿಗಳನ್ನು ರಚಿಸಲು ತೀರ್ಮಾನಿಸಿದಾಗ (ನಾಗಪುರ ಕಾಂಗ್ರೆಸ್ ಅಧಿವೇಶನದ ನಿರ್ಣಯದ ಹಿನ್ನೆಲೆಯಲ್ಲಿ) ಬಳ್ಳಾರಿಯು ಯಾವ ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ಸೇರಬೇಕು ಎಂಬ ಸಮಸ್ಯೆ ಉದ್ಭವಿಸಿತು. ತೆಲುಗು ಭಾಷಿಕರು ಮತ್ತು ಆಂಧ್ರವಾದಿಗಳು ಬಳ್ಳಾರಿ ಜಿಲ್ಲೆಯು ಆಂಧ್ರಪ್ರದೇಶ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಗೆ ಸೇರಬೇಕು ಎಂದು ಒತ್ತಾಯಿಸತೊಡಗಿದರು. ಕನ್ನಡಿಗರು ಇಡೀ ಜಿಲ್ಲೆಯು ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಯಲ್ಲಿರಬೇಕು ಎಂದು ವಾದ ಮಾಡುತ್ತಿದ್ದರು. ಈ ವಿವಾದವನ್ನು ಬಗೆಹರಿಸಲು 'ಕೇಳ್ಕರ್ ಸಮಿತಿ'ಯನ್ನು ರಚಿಸಲಾಯಿತು. ಬಳ್ಳಾರಿ ಜಿಲ್ಲೆಯ ಭಾಷಾವಾರು ಜನಸಂಖ್ಯೆಯನ್ನು ಪರಿಶೀಲಿಸಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಹೊಸಪೇಟೆ, ಶಿರಗುಪ್ಪ, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ ತಾಲ್ಲೂಕುಗಳು ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಯಲ್ಲಿರಬೇಕೆಂದೂ ಮತ್ತು ಉಳಿದ ಮೂರು ತಾಲ್ಲೂಕುಗಳು ಅಂದರೆ ಆಲೂರು, ಆದವಾನಿ ಮತ್ತು ರಾಯದುರ್ಗಗಳು ಆಂಧ್ರಪ್ರದೇಶ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಯಲ್ಲಿರಬೇಕೆಂದೂ ಕೇಳ್ಕರ್ ಸಮಿತಿಯು ಶಿಫಾರಸ್ಸು ಮಾಡಿತು. ಈ ಶಿಫಾರಸ್ಸಿಗನುಗುಣವಾಗಿ ಬಳ್ಳಾರಿ ನಗರದಲ್ಲಿ ಎರಡು ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಕೆಲಸ ಮಾಡುತ್ತಿದ್ದವು:

೧. ಕರ್ನಾಟಕ ಪ್ರದೇಶ ಜಿಲ್ಲಾ ಕಾಂಗ್ರೆಸ್ ಸಮಿತಿ, ಬಳ್ಳಾರಿ

೨. ಆಂಧ್ರ ಪ್ರದೇಶ ಜಿಲ್ಲಾ ಕಾಂಗ್ರೆಸ್ ಸಮಿತಿ, ಬಳ್ಳಾರಿ

ಬಳ್ಳಾರಿ ಜಿಲ್ಲೆಯ ವಿಭಜನೆ

ಸ್ವಾತಂತ್ರ್ಯಾನಂತರ ಭಾಷಾವಾರು ಪ್ರಾಂತರಚನೆ ಪ್ರಾರಂಭವಾಯಿತು. ೧೯೫೨ರಲ್ಲಿ ಕೇಳ್ಕರ್ ಸಮಿತಿಯು ನೀಡಿದ ವರದಿಯ ಆಧಾರದ ಮೇಲೆ ಆಲೂರು, ಆದವಾನಿ ಹಾಗೂ ರಾಯದುರ್ಗಗಳು ತೆಲುಗು ಭಾಷಿಕರ ಪ್ರದೇಶವೆಂದು ಮತ್ತು ಅವು ಬಳ್ಳಾರಿ ಜಿಲ್ಲೆಯಿಂದ ಆಂಧ್ರಪ್ರದೇಶಕ್ಕೆ ವರ್ಗಾವಣೆಯಾಗಬೇಕೆಂಬ ಪ್ರಬಲವಾದ ಕೂಗೆದ್ದಿತು. ಈ ಸಮಸ್ಯೆಯ ಪರಿಹಾರಕ್ಕೆ ನೇಮಿಸಿದ್ದ ವಾಂಛೂ ಸಮಿತಿಯು ಬಳ್ಳಾರಿ ಜಿಲ್ಲೆಯ ಆಲೂರು, ಆದವಾನಿ ಹಾಗೂ ರಾಯದುರ್ಗ ತಾಲ್ಲೂಕುಗಳು ಆಂಧ್ರಕ್ಕೆ ವರ್ಗಾವಣೆಯಾಗಬೇಕೆಂದು ಶಿಫಾರಸ್ಸು ಮಾಡಿತು. ವಾಂಛೂ ಸಮಿತಿಯ ವರದಿಯನ್ನು ಆಧರಿಸಿ ಬಳ್ಳಾರಿ ಜಿಲ್ಲೆಯ ವಿಭಜನೆಯನ್ನು ೨೫.೩.೧೯೫೩ರಂದು ಲೋಕಸಭೆಯಲ್ಲಿ ಘೋಷಿಸಲಾಯಿತು. ಈ ಸಮಿತಿಯು ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗದ ತಾಲ್ಲೂಕುಗಳಾದ ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ, ಹಡಗಲಿ, ಸಂಡೂರು ಹಾಗೂ ಪೂರ್ವ ಭಾಗದ ಶಿರಗುಪ್ಪ ತಾಲ್ಲೂಕು ಮತ್ತು ಮಲ್ಲಪುರ ಉಪತಾಲ್ಲೂಕು - ಇವುಗಳನ್ನು ಮೈಸೂರು ರಾಜ್ಯಕ್ಕೆ ಸೇರಿಸಲು ಶಿಫಾರಸ್ಸು ಮಾಡಿತ್ತು. ಇವೆಲ್ಲ ವಿಭಜನೆ ಮಾಡಿದ ವಾಂಛೂ ಸಮಿತಿಯು ಬಳ್ಳಾರಿ ತಾಲ್ಲೂಕಿನ ಬಗ್ಗೆ ಯಾವುದೇ ತೀರ್ಮಾನವನ್ನು ನೀಡದೆ ಅತಂತ್ರ ಪರಿಸ್ಥಿತಿ ಉಂಟಾಗಲು ಕಾರಣವಾಯಿತು.

ಬಳ್ಳಾರಿ ಜಿಲ್ಲೆಯ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲ್ಲೂಕುಗಳನ್ನು ಆಂಧ್ರ ರಾಜ್ಯಕ್ಕೆ ವರ್ಗಾಯಿಸಿದ್ದರಿಂದ ಒಂದು ಸಮಸ್ಯೆ ಬಗೆಹರಿಯಿತು. ಅದೇ ರೀತಿ ಬಳ್ಳಾರಿ ಜಿಲ್ಲೆಯ ಶಿರಗುಪ್ಪ, ಸಂಡೂರು, ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ, ಹಡಗಲಿ, ಮಲ್ಲಪುರ ತಾಲ್ಲೂಕುಗಳನ್ನು ಮೈಸೂರು ರಾಜ್ಯಕ್ಕೆ ವರ್ಗಾಯಿಸಿದ್ದರಿಂದ ಇನ್ನೊಂದು ಸಮಸ್ಯೆಯೂ ಬಗೆಹರಿಯಿತು. ಆದರೆ ಬಳ್ಳಾರಿ ತಾಲ್ಲೂಕಿನ ಸಮಸ್ಯೆಯು ಆತಂಕಕಾರಿ ಸ್ವರೂಪ ತಳೆಯಿತು. ಇದನ್ನು ಗಮನಿಸಿ ಭಾರತದ ರಾಷ್ಟ್ರಪತಿಗಳು ಹೈದರಾಬಾದ್ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಎಲ್.ಎಸ್.ಮಿಶ್ರಾ ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ಪ್ರಶ್ನೆಯನ್ನು ಬಗೆಹರಿಸಲು ಕೇಳಿಕೊಂಡರು. ಚಾರಿತ್ರಿಕ ಹಾಗೂ ಆಡಳಿತಾತ್ಮಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಿಶ್ರಾರವರು 'ಬಳ್ಳಾರಿ ತಾಲ್ಲೂಕು ಸಂಪೂರ್ಣವಾಗಿ ಮೈಸೂರು ರಾಜ್ಯಕ್ಕೆ ಸೇರಬೇಕೆಂದು' ಶಿಫಾರಸ್ಸು ಮಾಡಿದರು. ಅದರಂತೆ ಅನೇಕ ಸಮಸ್ಯೆಗಳ ನಡುವೆ ೧.೧೦.೧೯೫೩ರಂದು ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳು, ಅಂದರೆ ಬಳ್ಳಾರಿ, ಶಿರಗುಪ್ಪ, ಸಂಡೂರು, ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ, ಹಡಗಲಿ, ಮಲ್ಲಪುರ ತಾಲ್ಲೂಕುಗಳು ಮೈಸೂರು ರಾಜ್ಯದೊಂದಿಗೆ ವಿಲೀನಗೊಂಡು ಏಕೀಕರಣ ಪ್ರಕ್ರಿಯೆಗೆ ನಾಂದಿ ಹಾಕಿದವು.

ಭಾಷಾವಾರು ಪ್ರಾಂತ ರಚನೆಗನುಗುಣವಾಗಿ ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ ಒಂದು ಭಾಗವನ್ನು ಆಂಧ್ರ ಪ್ರಾಂತಕ್ಕೂ ಇನ್ನೊಂದು ಭಾಗವನ್ನು ಮೈಸೂರು ಪ್ರಾಂತಕ್ಕೂ ಸೇರಿಸಲಾಯಿತು.

ಆದರೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಇಡೀ ಬಳ್ಳಾರಿ ಜಿಲ್ಲೆಯು ಅಖಂಡವಾಗಿ ಬ್ರಿಟಿಷರ ವಿರುದ್ಧ ಹೋರಾಡಿತು. ಸ್ವಾತಂತ್ರ್ಯ ಹೋರಾಟದ ದೃಷ್ಟಿಯಿಂದ ನಾವು ಅಖಂಡ ಬಳ್ಳಾರಿ ಜಿಲ್ಲೆಯನ್ನು ಅಂದರೆ ಹಳೆಯ ಬಳ್ಳಾರಿ ಜಿಲ್ಲೆಯನ್ನು ಪರಿಗಣಿಸಬೇಕಾಗುತ್ತದೆ.

ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ಸ್ವರೂಪ

ಯಾವುದೇ ಹೋರಾಟವಾದರೂ, ಅದು ಸಾಮಾಜಿಕ ಚೌಕಟ್ಟು- ನೆಲೆಯಿಂದ ಪ್ರತ್ಯೇಕವಾಗಿರಲು ಸಾಧ್ಯವಿಲ್ಲ. ಸಮಾಜವೆನ್ನುವುದು ಏಕಕಾರಿಯಾದ ಏಕ ಸ್ತರವುಳ್ಳ-ಅಖಂಡವಾದ ಒಂದು ವ್ಯವಸ್ಥೆಯೇನಲ್ಲ. ನಮ್ಮದು ಮೂಲಭೂತವಾಗಿ ಏಣಿ ಶ್ರೇಣಿಗಳಿಂದ ಕೂಡಿದ ಸಮಾಜವಾಗಿದೆ. ಹೋರಾಟಗಳು ಇಡೀ ಸಮಾಜವನ್ನು ಸಂಪೂರ್ಣವಾಗಿ ಒಳಗೊಳ್ಳುವುದು ಕಷ್ಟ. ಏಕೆಂದರೆ ಹೋರಾಟಗಳು ಸಾಮಾನ್ಯವಾಗಿ ಸಮಾಜದ ಕೆಲವೇ ಹಿತಾಸಕ್ತಿಗಳನ್ನು ಪೋಷಿಸುವಂತಹ ಸ್ವರೂಪದಲ್ಲಿರುತ್ತವೆ. ಇಂತಹ ಹೋರಾಟಗಳಿಗೆ ಉದಾಹರಣೆ ನೀಡುವುದೇನು ಕಷ್ಟವಾಗುವುದಿಲ್ಲ. ಸಮಾಜದ ಎಲ್ಲ ವರ್ಗ-ಜಾತಿ-ಲಿಂಗಗಳ ಹಿತಾಸಕ್ತಿಗಳನ್ನು ಒಳಗೊಳ್ಳುವಂತಹ ಹೋರಾಟಗಳು ಇತಿಹಾಸದಲ್ಲಿ ದೊರಕುವುದು ಅಪರೂಪ. ಅಂತಹ ಒಂದು ಅಪರೂಪದ ಹಾಗೂ ಅಪೂರ್ವವಾದ ಸಂಘರ್ಷವೆಂದರೆ ಭಾರತದ ಸ್ವಾತಂತ್ರ್ಯ ಹೋರಾಟವಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ನೆಲೆಗಟ್ಟುಗಳು ಸೀಮಿತವಾಗಿದ್ದವು ಎಂಬ ಟೀಕೆಗಳೂ ಇವೆ. ಭಾರತದ ಸ್ವಾತಂತ್ರ್ಯ ಹೋರಾಟವು ಮೂಲಭೂತ ವಾಗಿ 'ವರ್ಗಸ್ವರೂಪ' ದಿಂದ ಕೂಡಿತ್ತು ಎನ್ನುವ ಅಧ್ಯಯನಗಳೂ ಇವೆ. ಈ ಬಗೆಯ ವ್ಯಾಖ್ಯಾನ-ವಿವರಣೆಗಳು ಮುಖ್ಯವಾಗಿ ಕೆಲವು ನಿರ್ದಿಷ್ಟ ವಿಚಾರ ಪ್ರಣಾಳಿಕೆಯ ನೆಲೆಯಿಂದ ಪ್ರೇರಿತಗೊಂಡಿವೆ ಎಂಬುದನ್ನು ಮರೆಯಬಾರದು.

ಭಾರತದ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ನೆಲಗಟ್ಟು 'ಸಮೂಹ' ಸ್ವರೂಪದ್ದಾಗಿತ್ತು. ಪ್ರಾರಂಭದಲ್ಲಿ ಅದು ನಗರಕೇಂದ್ರಿತವಾಗಿತ್ತು. ಕೆಲವೇ ವೃತ್ತಿಯಲ್ಲಿದ್ದವರ ವಶದಲ್ಲಿತ್ತು. ಉನ್ನತ ವರ್ಗ-ಜಾತಿಗಳ ವಶದಲ್ಲಿತ್ತು ಎಂಬುದೆಲ್ಲಾ ನಿಜ. ಆದರೆ ಕಾಲ ಕ್ರಮೇಣ, ಮುಖ್ಯವಾಗಿ ತುರೀಯಾವಸ್ಥೆ ತಲುಪಿದಾಗ ಅದು ಇಡೀ ಸಮಾಜವನ್ನು ತಬ್ಬಿಕೊಂಡಿತ್ತು. ಒಟ್ಟಾರೆ ಭಾರತದ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ನೆಲೆಗಟ್ಟಿನ ಹರಹು ವಿಶಾಲವಾಗಿತ್ತು. ಈ ವಿಶಾಲ ಸಾಮಾಜಿಕ ನೆಲಗಟ್ಟು ಕಾಲಕ್ರಮೇಣ ಜನಮುಖಿಯೂ, ಗ್ರಾಮಮುಖಿಯೂ ಆಗಿ ಬೆಳೆಯಿತು.

ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ಸ್ವರೂಪವು ರಾಷ್ಟ್ರ ಮಟ್ಟದಲ್ಲಿ ಹಾಗೂ ಪ್ರಾಂತಮಟ್ಟದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ಸ್ವರೂಪಕ್ಕಿಂತ ಭಿನ್ನವಾಗಿರಲಿಲ್ಲ. ರಾಷ್ಟ್ರಮಟ್ಟದಲ್ಲಿ ಹಾಗೂ ಪ್ರಾಂತಮಟ್ಟದಲ್ಲಿ, ೧೯೨೦ರ ವರೆಗೆ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ನೆಲೆಗಟ್ಟು ತುಂಬಾ ಸೀಮಿತವಾಗಿತ್ತು. ಈ ಹಂತದಲ್ಲಿ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದವರು ಸರ್ವೇಸಾಮಾನ್ಯವಾಗಿ ಸಮಾಜದ ಉನ್ನತ

ವರ್ಗ-ಜಾತಿಗೆ ಸೇರಿದವರಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿದ್ದವರೆಲ್ಲ ಬಹುಪಾಲು ವಕೀಲ ವೃತ್ತಿಯಲ್ಲಿದ್ದವರಾಗಿದ್ದರು. ಇದು ಸಹಜವಾಗಿತ್ತು. ಏಕೆಂದರೆ ವಸಾಹತುಶಾಹಿ ಆಡಳಿತದಲ್ಲಿ ಆಧುನಿಕ ಸೌಲಭ್ಯ-ಸವಲತ್ತುಗಳು ಸಮಾಜದ ಉನ್ನತ ವರ್ಗಕ್ಕೆ ದೊರೆಯುತ್ತಿದ್ದವು. ಮುಖ್ಯವಾಗಿ ಸಮಾಜದ ಉನ್ನತವರ್ಗ-ಜಾತಿಗಳು ಆಧುನಿಕ ಶಿಕ್ಷಣದ ಸೌಲಭ್ಯವನ್ನು ಮೊದಲು ಪಡೆಯುವುದರಲ್ಲಿ ಯಶಸ್ವಿಯಾದವು. ಇದರಿಂದಾಗಿ ಸ್ವಾತಂತ್ರ್ಯ-ಸ್ವರಾಜ್ಯ-ಮುಂತಾದ ವಿಚಾರಗಳಲ್ಲಿನ ಜಾಗೃತಿ ಮೊದಲು ಸಮಾಜದ ಉನ್ನತ ವರ್ಗ-ಜಾತಿಗಳಲ್ಲಿ ಮೂಡಿದ್ದು ಆಶ್ಚರ್ಯವೇನಲ್ಲ. ಸಮಾಜದ ಕೆಳಸ್ತರದಲ್ಲಿದ್ದವರಿಗೆ ಸ್ವಾತಂತ್ರ್ಯದ ಬಗ್ಗೆ ಕಾಳಜಿ ಇರಲಿಲ್ಲ ಎಂದಾಗಲಿ ಅಥವಾ ಅವರು ದೇಶ ಪ್ರೇಮಿಗಳಾಗಿರಲಿಲ್ಲ ಎಂದಾಗಲಿ ವಾದಿಸುವುದು ಸರಿಯೆನಿಸುವುದಿಲ್ಲ. ಆಧುನಿಕ ಶಿಕ್ಷಣ ಮತ್ತು ಆಧುನೀಕರಣಕ್ಕೆ ತುಂಬಾ ತಡವಾಗಿ ತೆರೆದುಕೊಂಡ ಕಾರಣ ಈ ವರ್ಗಗಳು ಸ್ವಾತಂತ್ರ್ಯ ಹೋರಾಟದಲ್ಲಿ ತುಂಬಾ ತಡವಾಗಿ ಭಾಗವಹಿಸಿದವು.

ಭೌಗೋಳಿಕವಾಗಿ ೧೯೨೦ರ ವರೆಗೆ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳು ಸುಮಾರಾಗಿ ನಗರ-ಪಟ್ಟಣಗಳಿಗೆ ಪರಿಮಿತವಾಗಿದ್ದವು. ಕ್ರಿ.ಶ.೧೮೮೫ರಲ್ಲಿ ಸ್ಥಾಪನೆಗೊಂಡ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿನ ಉನ್ನತಸ್ಥಾನಗಳಲ್ಲಿ ಸಮಾಜದ ಉನ್ನತವರ್ಗದವರೇ ತುಂಬಿಕೊಂಡಿದ್ದರು. ಕಾಂಗ್ರೆಸ್ ಸಂಸ್ಥೆಯು ದೇಶದ ಸಾಮಾಜಿಕ ಸಮಸ್ಯೆಗಳನ್ನು, ಸಾಮಾಜಿಕ ಸುಧಾರಣೆಯನ್ನು ತನ್ನ ಕಾರ್ಯಸೂಚಿಯಲ್ಲಿ ಸೇರಿಸಿಕೊಳ್ಳಲು ೧೯೨೦ರ ವರೆಗೆ ಸಿದ್ಧವಿರಲಿಲ್ಲ. ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶಿಸಿದ ನಂತರವೇ ಕಾಂಗ್ರೆಸ್ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸತೊಡಗಿತು. ಗಾಂಧೀಜಿಯವರ ಪ್ರವೇಶದ ತರುವಾಯವೆ ಸಮಾಜದ ಕೆಳಸ್ತರದ ವರ್ಗ-ಜಾತಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶಿಸತೊಡಗಿದವು. ಸಮಾಜದ ಕೆಳಸ್ತರದಲ್ಲಿದ್ದ ಜಾತಿ-ವರ್ಗಗಳು ಸ್ವಾತಂತ್ರ್ಯ ಹೋರಾಟದಲ್ಲಿ ತುಂಬ ತಡವಾಗಿ ಪ್ರವೇಶಿಸಿದ್ದಕ್ಕೆ ಕಾರಣವೇನೆಂದರೆ ಈ ವರ್ಗ-ಜಾತಿಗಳಿಗೆ ಬ್ರಿಟಿಷರ ಆಳ್ವಿಕೆಗಿಂತ ಜಮೀನ್ದಾರಿ ಪಾಳೇಗಾರಿಕೆಯ-ಉನ್ನತ ವರ್ಗದ ದಮನಕಾರಿ ನಡವಳಿಕೆಗಳೇ ಹೆಚ್ಚು ಆತಂಕಕಾರಿಯಾಗಿದ್ದವು. ಈ ಕಾರಣಕ್ಕೆ ಬಾಂಬೆ ಪ್ರಾಂತದಲ್ಲಿದ್ದ ಬ್ರಾಹ್ಮಣೇತರರ ಪರಿಷತ್ತು ಮತ್ತು ಮದರಾಸು ಪ್ರಾಂತದಲ್ಲಿದ್ದ ಜಸ್ಟೀಸ್ ಪಕ್ಷಗಳು ಬ್ರಿಟಿಷರಿಗೆ ಬೆಂಬಲ ನೀಡುತ್ತಿದ್ದವು. ಇವೆರಡೂ ಸಂಘಟನೆಗಳು ಕಾಂಗ್ರೆಸ್‌ಗೆ ವಿರೋಧಿಗಳಾಗಿದ್ದವು. ಆದರೆ ಅವು ಸ್ವಾತಂತ್ರ್ಯಕ್ಕೆ ವಿರೋಧಿಗಳಾಗಿರಲಿಲ್ಲ.

ಆದರೆ ಗಾಂಧೀಜಿಯವರು ಪ್ರವೇಶಿಸಿದ ಮೇಲೆ ಭಾರತದ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ಸ್ವರೂಪ ತೀವ್ರ ಬದಲಾಗತೊಡಗಿತು. ನಿಧಾನವಾಗಿ ಕಾಂಗ್ರೆಸ್ ಪಕ್ಷ ೧೯೨೦ರ ನಂತರ ಸಮೂಹ ಸ್ವರೂಪ ಪಡೆದುಕೊಳ್ಳತೊಡಗಿತು. ಸಮಾಜದ ಕೆಳಸ್ತರದ, ಕೆಳಜಾತಿ-ವರ್ಗಗಳ ಜನರು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರವೇಶಿಸತೊಡಗಿದರು. ೧೯೩೦ ರ ನಂತರ ಗಾಂಧೀಜಿಯವರು ದೊಡ್ಡ ಪ್ರಮಾಣದಲ್ಲಿ ಅಸ್ಪೃಶ್ಯತೆ ನಿವಾರಣೆ, ಹರಿಜನರ ಸುಧಾರಣೆ ಕಾರ್ಯಕ್ರಮಗಳನ್ನು ಕೈಗೊಂಡರು. ಸಮಾಜದ ಹೀನ-ದೀನ-ಕಂಗಾಲು ವರ್ಗಗಳ ಜೊತೆ ಗಾಂಧೀಜಿಯವರು ತಮ್ಮನ್ನು ತಾವು ಸಮೀಕರಿಸಿಕೊಂಡರು.

ಈ ಶತಮಾನದ ಆರಂಭದ ಎರಡು ದಶಕಗಳಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಸಂಸ್ಥೆಯು ಬ್ರಾಹ್ಮಣರಿಂದ ತುಂಬಿ ಹೋಗಿತ್ತು. ಅದನ್ನು ಬ್ರಾಹ್ಮಣರ ಸಂಘಟನೆಯೆಂದೇ ಕರೆಯಲಾಗುತ್ತಿತ್ತು (ಕರ್ನಾಟಕ ಸ್ಟೇಟ್ ಗೆಜೆಟೀಯರ್, ಭಾಗ-೧ ಪು. ೩೬೪) ಬಾಂಬೆ ಪ್ರಾಂತದಲ್ಲಿ ಕ್ರಿಯಾಶೀಲವಾಗಿದ್ದ ಬ್ರಾಹ್ಮಣೇತರರ ಪರಿಷತ್ತು ತನ್ನ ಅನುಯಾಯಿಗಳಿಗೆ ಕಾಂಗ್ರೆಸ್ ಸೇರದಂತೆ ಮನವೊಲಿಸುವ ಕೆಲಸ ಮಾಡುತ್ತಿತ್ತು. ಆದರೆ ಮುಂದೆ ಇದೆಲ್ಲಾ ಬದಲಾಯಿತು. ಇದೇ ರೀತಿ ೧೯೩೦ ರಲ್ಲಿ ಹಾವೇರಿಯಲ್ಲಿ ಜರುಗಿದ ವೀರಶೈವ ಪರಿಷತ್‌ನಲ್ಲಿ ಹರ್ಡೇಕರ್ ಮಂಜಪ್ಪನವರ ಮುಂದಾಳತ್ವದಲ್ಲಿ ಅದರ ಸದಸ್ಯರಿಗೆ ಕಾಂಗ್ರೆಸ್ ಸೇರಲು ಅನುಮತಿ ನೀಡಲಾಯಿತು. ೧೯೩೧ ರಲ್ಲಿ ಬೆಳಗಾಂನಲ್ಲಿ ನಡೆದ ತನ್ನ ವಾರ್ಷಿಕ ಅಧಿವೇಶನದಲ್ಲಿ ಬ್ರಾಹ್ಮಣೇತರರ ಪರಿಷತ್ತು ತನ್ನ ಸದಸ್ಯರಿಗೆ ವಿಧಿಸಿದ್ದ ನಿರ್ಬಂಧವನ್ನು ತೆಗೆದು ಹಾಕಿತು ಹಾಗೂ ಕಾಂಗ್ರೆಸ್ ಪಕ್ಷವನ್ನು ಸೇರುವಂತೆ ತಾಕೀತುಮಾಡಿತು. (ಕರ್ನಾಟಕ ಸ್ಟೇಟ್ ಗೆಜೆಟೀಯರ್, ಭಾಗ-೧ ಪು. ೩೬೫).

ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ಸ್ವರೂಪವು ರಾಷ್ಟ್ರಮಟ್ಟದಲ್ಲಿ ಹಾಗೂ ಪ್ರಾಂತಮಟ್ಟದಲ್ಲಿ ಹೇಗೆ ವಿಕಾಸಾತ್ಮಕವಾಗಿ ಬೆಳೆಯಿತೋ ಅದೇ ರೀತಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲೂ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ನೆಲೆಗಟ್ಟು ಬದಲಾಗುತ್ತಾ, ವಿಸ್ತೃತಗೊಳ್ಳುತ್ತಾ ನಡೆಯಿತು. ಅಖಿಲ ಭಾರತ ಮಟ್ಟದಲ್ಲಿದ್ದಂತೆ ಬಳ್ಳಾರಿ ಜಿಲ್ಲೆಯಲ್ಲೂ ಆರಂಭದಲ್ಲಿ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ಸ್ವರೂಪವು ಸಮಾಜದ ಉನ್ನತ ವರ್ಗವನ್ನು ಮಾತ್ರ ಒಳಗೊಂಡು ತುಂಬಾ ಸೀಮಿತವಾಗಿತ್ತು. ೧೯ನೆಯ ಶತಮಾನದ ಕೊನೆಯ ಭಾಗ ಹಾಗೂ ೨೦ನೆಯ ಶತಮಾನದ ಮೊದಲ ದಶಕಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿ ಉನ್ನತ ಜಾತಿ-ವರ್ಗದ ಜನರೇ ತುಂಬಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಕ್ರಿಯಾಶೀಲರಾಗಿದ್ದ ವರೆಲ್ಲ ವೃತ್ತಿಯಲ್ಲಿ ವಕೀಲರಾಗಿದ್ದರು. ಈ ಶತಮಾನದ ಮೊದಲ ಎರಡು ದಶಕಗಳ ಕಾಲಾವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರೆಂದರೆ ಶ್ರೀಯುತರುಗಳಾದ ಕೋಲಾಚಲಂ ವೆಂಕಟರಾವ್, ಕಲ್ಲೂರು ಸುಬ್ಬರಾವ್, ನೇತ್ರಹಳ್ಳಿ ಸಂಜೀವರಾಯರು, ವೆಂಕಟರಮಣಾಚಾರ್ಲು, ಬಾದನಹಟ್ಟಿ ವೆಂಕೋಬರಾಯರು, ಟೇಕೂರು ನಾರಾಯಣಶಾಸ್ತ್ರಿಗಳು, ಲ್ಯಾಂಗ್ಲಿ ಭೀಮಸೇನರಾವ್ ಮುಂತಾದವರು ಸಮಾಜದ ಉನ್ನತ ವರ್ಗಕ್ಕೆ ಸೇರಿದವರಾಗಿದ್ದರು.

೧೯೨೦ ರ ದಶಕದಲ್ಲಿ ಮದರಾಸು ಪ್ರಾಂತದಲ್ಲಿ ಪ್ರಭಾವಶಾಲಿಯಾಗಿದ್ದ, 'ಆತ್ಮ ಗೌರವ' ಚಳುವಳಿ ಸಂಘಟಿಸಿದ್ದ 'ಜಸ್ಟೀಸ್ ಪಕ್ಷದ' ಪ್ರಭಾವವಾಗಲಿ ಅಥವಾ ಬಾಂಬೆ ಪ್ರಾಂತದಲ್ಲಿ ಕ್ರಿಯಾಶೀಲವಾಗಿದ್ದ ಬ್ರಾಹ್ಮಣೇತರರ ಪರಿಷತ್‌ನ ಪ್ರಭಾವವಾಗಲಿ ಬಳ್ಳಾರಿ ಜಿಲ್ಲೆಯಲ್ಲಿ ನಡೆದಿದ್ದ ಸ್ವಾತಂತ್ರ್ಯ ಹೋರಾಟವನ್ನು ತಟ್ಟಲಿಲ್ಲ.

ಜನಾಂದೋಳನವಾದ ಸ್ವಾತಂತ್ರ್ಯ ಹೋರಾಟ

೧೯೨೦ ರ ದಶಕದ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ನೆಲೆಗಟ್ಟು ತುಂಬಾ

ವಿಶಾಲವೂ, ವಿಸ್ತೃತವೂ, ಜನಮುಖಿಯೂ ಆದ ಸ್ವರೂಪವನ್ನು ಪಡೆದುಕೊಳ್ಳತೊಡಗಿತು. ಸಮಾಜದ ಎಲ್ಲಾ ವರ್ಗ-ಜಾತಿಗಳ ಜನರೂ, ನಗರ -ಗ್ರಾಮವಾಸಿಗಳೆಲ್ಲರೂ, ಮುಸ್ಲಿಮರು, ಮಹಿಳೆಯರು-ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸ ತೊಡಗಿದರು. ೧೯೩೦ರ ನಂತರವಂತೂ ಸ್ವಾತಂತ್ರ್ಯ ಹೋರಾಟವು ಸಂಪೂರ್ಣವಾಗಿ ಸಮಾಜಮುಖಿಯಾಯಿತು. ಈ ಕಾಲಘಟ್ಟದಲ್ಲಿ ಬಳ್ಳಾರಿ ಜಿಲ್ಲೆಯ ಸಣ್ಣಪುಟ್ಟ ಹಳ್ಳಿಗಳಿಗೂ ಸ್ವಾತಂತ್ರ್ಯ ಚಳುವಳಿ ಹಬ್ಬಿತು. ಬಳ್ಳಾರಿ ನಗರ, ಹರಪನಹಳ್ಳಿ, ಹೊಸಪೇಟೆ ಮುಂತಾದ ಕೆಲವೇ ಕೆಲವು ನಗರ ಕೇಂದ್ರಗಳಲ್ಲಿ ನೆಲೆಗೊಂಡಿದ್ದ ಸ್ವಾತಂತ್ರ್ಯ ಹೋರಾಟವು ೧೯೩೦ ರ ನಂತರ ಹಡಗಲಿ, ಕೂಡ್ಲಿಗಿ, ಆಲೂರು, ಆದವಾನಿ, ರಾಯದುರ್ಗ ಮುಂತಾದ ತಾಲ್ಲೂಕುಗಳಿಗೂ ಹರಡಿತು. ಈ ಕಾಲಘಟ್ಟದಲ್ಲಿ ಜಿಲ್ಲೆಯ ಹರಿಜನರು, ವೀರಶೈವರು, ವೈಶ್ಯರು, ವಾಲ್ಮೀಕಿ ಮತಸ್ಥರು, ಗಂಗಾ ಮತಸ್ಥರು, ರೆಡ್ಡಿ ಜನಾಂಗ, ಮರಾಠರು, ಮುಸ್ಲಿಮರು- ಹೀಗೆ ನೂರಾರು ಬಗೆಯ ಜನವರ್ಗ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸತೊಡಗಿತು. ಬಳ್ಳಾರಿ ಜಿಲ್ಲೆಯ ಕಂಚಿಕೆರೆ, ಹರಾಳು, ತೆಲಿಗಿ, ತೂಲಹಳ್ಳಿ, ಕೊಟ್ಟೂರು, ಬೆಳಗಲ್, ಅರಸನಾಳು, ದಾಸನಪುರ, ರಾಮಸಾಗರ, ಬೆಣ್ಣೆಹಳ್ಳಿ, ಉಜ್ಜಿನಿ, ಶೃಂಗಾರ ತೋಟ, ಸೀಗೇನಹಳ್ಳಿ, ಕಂಪ್ಲಿ, ಕುರಗೋಡು, ಚಿಗಟೇರಿ, ಹುಲಿಕೆರೆ, ರೂಪನಗುಡಿ, ಅನಂತಶಯನಗುಡಿ, ಕಲ್ಲುದೇವನಕುಂಟೆ, ರೇಕಟ್ಲಾ, ಬಾಚಿಗೊಂಡನಹಳ್ಳಿ ಮುಂತಾದ ಗ್ರಾಮಗಳಿಗೂ ಸ್ವಾತಂತ್ರ್ಯ ಹೋರಾಟದ ಜ್ವಾಲೆ ಹಬ್ಬಿತು.

ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಮುಸ್ಲಿಮರು ಭಾಗವಹಿಸಿದ್ದರು. ನೆಗಳೂರು ಇಮಾಮಸಾಬ್, ಬಳ್ಳಾರಿಯ ಹಯಾತ್ ಸಾಬ್, ಸುಲ್ತಾನ್ ಮೊಹಿದ್ದೀನ್, ಅಕ್ಬರ್ ಸಾಹೇಬ, ಹೊಸಪೇಟೆಯ ಎಲ್.ಪೀರಾನ್ ಸಾಹೇಬ ಮುಂತಾದ ಮುಸ್ಲಿಮರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಜೈಲುಶಿಕ್ಷೆ ಅನುಭವಿಸಿದರು. ಬಳ್ಳಾರಿ ಜಿಲ್ಲೆಯ ಮಹಿಳೆಯರೂ ಹಿಂದೆ ಬೀಳಲಿಲ್ಲ. ಜಯಲಕ್ಷ್ಮಿಬಾಯಿ, ಡಾ. ಲಕ್ಷ್ಮಿದೇವಿ, ಕೋಗಳಿ ರುದ್ರಮ್ಮ ಮುಂತಾದ ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಿಯಾಶೀಲರಾಗಿದ್ದರು. ಡಾ.ಲಕ್ಷ್ಮಿದೇವಿ ಹಾಗೂ ಕೋಗಳಿ ರುದ್ರಮ್ಮ ಇವರಿಬ್ಬರದೂ ವಿಧವಾ ಪುನರ್ವಿವಾಹವಾಗಿತ್ತು.

ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಸಾಮಾಜಿಕ ಸ್ವರೂಪವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದರ ಜನಮುಖಿ-ಸಮಾಜಮುಖಿ ಸ್ವರೂಪದ ದರ್ಶನವಾಗುತ್ತದೆ. ಭಾರತದ ಸ್ವಾತಂತ್ರ್ಯ ಹೋರಾಟದ ಬೇರುಗಳು ದೇಶದ ಸಣ್ಣ-ಪುಟ್ಟ-ಮೂಲೆಕಟ್ಟಿನ ಗ್ರಾಮಗಳವರೆಗೂ ಹಬ್ಬಿದ್ದವು ಎಂಬುದು ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಅಧ್ಯಯನದಿಂದ ತಿಳಿದು ಬರುತ್ತದೆ. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಯಾವುದೋ ಒಂದು ಜಾತಿ ಅಥವಾ ವರ್ಗದ ಪ್ರಾಬಲ್ಯವಿತ್ತು ಎಂದು ಹೇಳಲು ಸಾಧ್ಯವಿಲ್ಲ. ನಿಜವಾದ ಅರ್ಥದಲ್ಲಿ ಅದೊಂದು ಜನಾಂದೋಳನವಾಗಿತ್ತು. ಅದು ಸಮೂಹ ಸ್ವರೂಪಿಯಾಗಿತ್ತು, ಸಮಾಜಮುಖಿ ಆಂದೋಳನವಾಗಿತ್ತು.

೩. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ನೆಲೆಗಳು

ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ನಿಜ ದರ್ಶನ ಮಾಡಿಸುವುದು ಪ್ರಸ್ತುತ ಅಧ್ಯಾಯದ ಉದ್ದೇಶವಾಗಿದೆ. ಇಡೀ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಬಳ್ಳಾರಿ ಜಿಲ್ಲೆಗೆ ಅಗ್ರಗಣ್ಯ ಸ್ಥಾನ ಸಲ್ಲಬೇಕಾಗಿದೆ. ಏಕೆಂದರೆ ಕ್ರಿ.ಶ. ೧೮೮೫ರಲ್ಲಿ ಕಾಂಗ್ರೆಸ್ ಸ್ಥಾಪನೆ ಗೊಂಡು ಅದರ ಪ್ರಥಮ ಸಮ್ಮೇಳನ ಮುಂಬಯಿಯಲ್ಲಿ ನಡೆದಾಗ ಇಡೀ ಕನ್ನಡ ಭಾಷಿಕ ಪ್ರದೇಶಗಳಿಂದ ನಾಲ್ವರು ಪ್ರತಿನಿಧಿಗಳಾಗಿ ಹೋಗಿದ್ದರು. ಹೀಗೆ ಹೋಗಿದ್ದ ನಾಲ್ವರು ಪ್ರತಿನಿಧಿಗಳಲ್ಲಿ ಮೂವರು ಬಳ್ಳಾರಿಯವರಾಗಿದ್ದರು. ಈ ದೃಷ್ಟಿಯಿಂದ ರಾಜ್ಯದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಬಳ್ಳಾರಿಗೆ ಮಹತ್ವದ ಸ್ಥಾನ ಸಲ್ಲಬೇಕಾಗಿದೆ.

ಹಿಂದಿನ ಅಧ್ಯಾಯಗಳಲ್ಲಿ ತಿಳಿಸಿರುವಂತೆ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ರಾಷ್ಟ್ರಮಟ್ಟದಲ್ಲಿ ಹಾಗೂ ಪ್ರಾಂತಮಟ್ಟದಲ್ಲಿ ಸಂಭವಿಸಿದ ಎಲ್ಲಾ ಬೆಳವಣಿಗೆ-ಬದಲಾವಣೆ-ಆಸ್ಫೋಟಗಳಿಗೆ ಬಳ್ಳಾರಿ ಜಿಲ್ಲೆಯು ಸೂಕ್ತವಾಗಿ ಪ್ರತಿಸ್ಪಂಧಿಸುತ್ತಲೇ ಬಂದಿದೆ. ಸ್ವಾತಂತ್ರ್ಯ ಹೋರಾಟದ ದೃಷ್ಟಿಯಿಂದ ಇದೊಂದು ಜಾಗೃತ-ಚೈತನ್ಯಶಾಲಿ ಜಿಲ್ಲೆಯಾಗಿತ್ತು. ಕರ್ನಾಟಕದಲ್ಲಿ ಅತಿ ಹೆಚ್ಚು ವರ್ಷಗಳ ಕಾಲ ಬ್ರಿಟಿಷ್‌ರ ಆಳ್ವಿಕೆಯಲ್ಲಿದ್ದ ಬಳ್ಳಾರಿ ಜಿಲ್ಲೆ ಸ್ವಾತಂತ್ರ್ಯ ಹೋರಾಟದಲ್ಲಿ ಜೀವಂತವಾಗಿದ್ದ ಜಿಲ್ಲೆಯಾಗಿದೆ. ಸುಮಾರು ೧೪೭ ವರ್ಷಗಳ ಕಾಲ ಬಳ್ಳಾರಿ ಜಿಲ್ಲೆಯು ಬ್ರಿಟಿಷ್‌ರ ಆಳ್ವಿಕೆಯಲ್ಲಿತ್ತು. (ಕ್ರಿ.ಶ. ೧೮೦೦ ರಿಂದ ೧೯೪೭ರ ವರೆಗೆ).

ದೇಶದ ಬೇರೆ ಬೇರೆ ಭಾಗಗಳಲ್ಲಿದ್ದಂತೆ ಬಳ್ಳಾರಿ ಜಿಲ್ಲೆಯಲ್ಲೂ ಸಹ ೧೯ನೇ ಶತಮಾನದ ಆದಿಭಾಗದಿಂದಲೇ ಬ್ರಿಟಿಷರ ವಿರುದ್ಧ ಜನರ ಆಕ್ರೋಶ ಸಿಡಿಯುತ್ತಲೇ ಬಂದಿತು. ಆದರೆ ಅವೆಲ್ಲಾ ಸ್ವಾತಂತ್ರ್ಯವನ್ನು ಉದ್ದೇಶವಾಗಿಟ್ಟುಕೊಂಡಿರಲಿಲ್ಲ. ಆದರೆ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಮುಂಡರಿಗಿ ಭೀಮರಾಯನು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಹುತಾತ್ಮನೆನಿಸಿಕೊಂಡನು. ಮುಂಡರಿಗಿ ಭೀಮರಾಯನು ಸ್ವಾತಂತ್ರ್ಯ ಹೋರಾಟಗಾರರೆನೆನಿಸಿ ಕೊಳ್ಳದಿದ್ದರೂ, ಅವನು ಬ್ರಿಟಿಷರ ವಿರುದ್ಧ ಹೋರಾಡಿದ ಕಾರಣ ಹುತಾತ್ಮ ನೆನಿಸಿಕೊಂಡನು.

ಕ್ರಿ.ಶ.೧೮೦೦ರಿಂದ ೧೮೮೫ರ ವರೆಗಿನ ಕಾಲಾವಧಿಯನ್ನು ಸ್ವಾತಂತ್ರ್ಯ ಹೋರಾಟದ ಸಿದ್ಧತಾ ಯುಗವೆಂದು ಕರೆಯಬಹುದು. ಸಾಮಾನ್ಯವಾಗಿ ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯನ್ನು

೧೮೫೭ರಿಂದ ಪ್ರಾರಂಭಿಸುವುದು ವಾಡಿಕೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ, ಸ್ವಾತಂತ್ರ್ಯ ಹೋರಾಟವನ್ನು ಕಿತ್ತೂರುರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ೧೮೨೪ರಲ್ಲಿ ನಡೆಸಿದ ಹೋರಾಟದಿಂದ ಪ್ರಾರಂಭಿಸುವುದು ವಾಡಿಕೆ. ಆದರೆ ಕ್ರಿ.ಶ.೧೮೦೦ರಿಂದ ೧೮೫೭ರ ವರೆಗೆ ದೇಶದ ನಾನಾ ಭಾಗಗಳಲ್ಲಿನ ಬ್ರಿಟಿಷರ ವಿರುದ್ಧ ನಡೆದ ಹೋರಾಟ ಬಂಡಾಯ-ದಂಗೆಗಳನ್ನು ಸ್ವಾತಂತ್ರ್ಯ ಹೋರಾಟವೆಂದು ಕರೆಯುವುದು ಸಾಧ್ಯವಿಲ್ಲ. ಕ್ರಿ.ಶ. ೧೮೫೭ರ ಪ್ರಕರಣವನ್ನು ರಾಷ್ಟ್ರೀಯವಾದಿಗಳು 'ಮೊದಲ ಸ್ವಾತಂತ್ರ್ಯ ಹೋರಾಟ' ವೆಂದು ಕರೆಯುತ್ತಾರೆ. ೧೯ನೆಯ ಶತಮಾನದ ಆರಂಭದಿಂದಲೂ ದೇಶದ ವಿವಿಧ ಭಾಗಗಳಲ್ಲಿ ಬ್ರಿಟಿಷರಿಂದ ಪದಚ್ಯುತಗೊಂಡ ರಾಜ-ಮಹಾರಾಜರು, ಪುಂಡು ಪಾಳೆಯಗಾರರು, ಬ್ರಿಟಿಷರ ದೌರ್ಜನ್ಯಕ್ಕೆ ತುತ್ತಾದ ನಾಗರಿಕರು, ಆದಿವಾಸಿಗಳು, ರೈತರು, ಕಾರ್ಮಿಕರು ಬ್ರಿಟಿಷರ ವಿರುದ್ಧ ಸಿಡಿದೆದ್ದದ್ದನ್ನು ಇತಿಹಾಸ ನಮಗೆ ತಿಳಿಸುತ್ತದೆ. ಹೀಗೆ ನಡೆದ ಬಂಡಾಯ-ದಂಗೆ ಹೋರಾಟಗಳ ಉದ್ದೇಶ-ಗುರಿ-ಕಾರಣಗಳು ಒಂದೇ ತೆರನಾಗಿರಲಿಲ್ಲ. ಈ ರೀತಿಯಲ್ಲಿ ನಡೆದ ಹೋರಾಟ-ಬಂಡಾಯಗಳಿಗೆ ಸಂಘಟಿತ ಸ್ವರೂಪವೂ ಇರಲಿಲ್ಲ. ಈ ಹೋರಾಟಗಳಿಗೆ ಅಖಿಲ ಭಾರತ ನೆಲಗಟ್ಟೂ ಇರಲಿಲ್ಲ. ಈ ಎಲ್ಲಾ ಹೋರಾಟ-ಬಂಡಾಯಗಳ ಉದ್ದೇಶ 'ಭಾರತದ ಸ್ವಾತಂತ್ರ್ಯ'ವಾಗಿರಲಿಲ್ಲ. ಇವೆಲ್ಲಾ ಬ್ರಿಟಿಷರ ವಿರುದ್ಧದ ಹೋರಾಟಗಳೇ ಆಗಿದ್ದರೂ ಅವುಗಳ ಮೂಲ ಉದ್ದೇಶ ಬ್ರಿಟಿಷರನ್ನು ದೇಶದಿಂದ ಹೊಡೆದೋಡಿಸಬೇಕೆಂಬುದಾಗಿರಲಿಲ್ಲ. ಪಾರತಂತ್ರ್ಯದಿಂದ ಭಾರತವನ್ನು ಮುಕ್ತಗೊಳಿಸಬೇಕೆಂಬ ಉದ್ದೇಶವೂ ಅವುಗಳಿಗಿರಲಿಲ್ಲ. ಅಂತಹ ಉದ್ದೇಶಗಳು ಅವುಗಳಿಗಿದ್ದವು ಎಂದು ಭಾವಿಸಿದರೆ ಅದು ಕೇವಲ ಉತ್ಪ್ರೇಕ್ಷೆಯಾದೀತು. ಹಾಗೆ ನೋಡಿದರೆ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟ ಸಂಘಟನೆಯೆಂಬ ಕೀರ್ತಿಗೆ ಪಾತ್ರವಾಗಿರುವ ಕಾಂಗ್ರೆಸ್ಸಿಗೆ ೧೮೮೫ರಿಂದ ೧೯೧೦ರ ವರೆವಿಗೂ 'ಸ್ವಾತಂತ್ರ್ಯ' ಪಡೆಯುವುದು ಮೂಲ ಉದ್ದೇಶವಾಗಿರಲಿಲ್ಲ. ಈ ಅವಧಿಯಲ್ಲಿ ಕಾಂಗ್ರೆಸ್ ತನ್ನ ವಾರ್ಷಿಕ ಅಧಿವೇಶನಗಳಲ್ಲಿ ತೆಗೆದುಕೊಂಡ ನಿರ್ಣಯಗಳಲ್ಲಿ 'ಸ್ವಾತಂತ್ರ್ಯ'ವನ್ನು ಒತ್ತಾಯಿಸುವ ಒಂದೇ ಒಂದು ಪ್ರಯತ್ನ ನಮಗೆ ದೊರಕುವುದಿಲ್ಲ (Freedom Struggle Betrayed, ೧೮೮೫-೧೯೪೭).

೧೮೦೦ ರಿಂದ ೧೮೫೭ರ ವರೆಗೆ ಅಖಿಲ ಭಾರತ ಮಟ್ಟದಲ್ಲಿ ಬ್ರಿಟಿಷರ ವಿರುದ್ಧ ನಡೆದ ಬಂಡಾಯ-ದಂಗೆ-ಪ್ರತಿಭಟನೆಗಳಂತೆ ಬಳ್ಳಾರಿ ಜಿಲ್ಲೆಯಲ್ಲೂ ಸಹ ಅನೇಕ ಬಗೆಯ ಘರ್ಷಣೆಗಳು ನಡೆದವು. ಮದರಾಸು ಪ್ರಾಂತ, ಬಾಂಬೆ ಪ್ರಾಂತ, ಹೈದರಾಬಾದ್ ನಿಜಾಮನ ಸಂಸ್ಥಾನ, ಸಣ್ಣ-ಪುಟ್ಟ ಅರಸರುಗಳ ಆಳ್ವಿಕೆಯಲ್ಲಿ ಹರಿದು -ಹಂಚಿ ಹೋಗಿದ್ದ ಕನ್ನಡ ಭಾಷಾ ಪ್ರದೇಶ-ಕರ್ನಾಟಕದಲ್ಲೂ ೧೯ನೇ ಶತಮಾನದ ಆದಿ ಭಾಗದಲ್ಲೇ ಬ್ರಿಟಿಷರ ವಿರುದ್ಧದ ಬಂಡಾಯ-ದಂಗೆ-ಹೋರಾಟಗಳು ಪ್ರಾರಂಭವಾದವು. ಉಳಿದೆಲ್ಲಾ ಪ್ರಾಂತಗಳಿಗಿಂತ ಕರ್ನಾಟಕವನ್ನು ಬ್ರಿಟಿಷರು ಹೆಚ್ಚು ಕ್ರೂರವಾಗಿ ನಡೆಸಿಕೊಂಡರು ಎಂದು ಇತಿಹಾಸಕಾರರು ಹೇಳುತ್ತಾರೆ (ಎಸ್.ಚಂದ್ರ ಶೇಖರ್, ೧೯೯೭:೫೦) ಕ್ರಿ.ಶ.೧೮೫೭ರ ತನಕ ಕರ್ನಾಟಕದ ಒಂದಲ್ಲಾ ಒಂದು ಭಾಗ ಬ್ರಿಟಿಷ್ ಸರ್ಕಾರದೊಡನೆ ಕದನ ಮಾಡುತ್ತಲೇ ಇತ್ತು. ಕ್ರಿ.ಶ. ೧೭೯೯ರಲ್ಲಿ ಟಿಪ್ಪು

ಸುಲ್ತಾನನ ಹೋರಾಟ, ೧೮೨೪ರಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಹೋರಾಟ, ೧೮೩೧ರಲ್ಲಿ ಮೈಸೂರು ಹೋರಾಟ, ೧೮೫೮ರಲ್ಲಿ ನರಗುಂದ ಬಂಡಾಯ, ೧೮೫೮ರಲ್ಲಿ ಮುಂಡರಗಿ ಭೀಮರಾಯನ ಬಂಡಾಯ ಮುಂತಾದವು ಬ್ರಿಟಿಷರ ವಿರುದ್ಧ ಕರ್ನಾಟಕದಲ್ಲಿ ನಡೆದ ಬಂಡಾಯಗಳು. ಈ ಎಲ್ಲಾ ಬಂಡಾಯಗಳನ್ನೂ ಬ್ರಿಟಿಷರು ಹತ್ತಿಕ್ಕಿದರು.

ಈ ರೀತಿಯಲ್ಲಿ ೧೮ನೆಯ ಶತಮಾನದ ಕೊನೆಯ ಭಾಗ ಹಾಗೂ ೧೯ನೆಯ ಶತಮಾನದ ಆದಿಭಾಗಗಳ ಕಾಲಘಟ್ಟದಲ್ಲಿ ಬ್ರಿಟಿಷರ ವಿರುದ್ಧ ನಡೆದ ಬಂಡಾಯಗಳನ್ನು ಏನೆಂದು ಕರೆಯುವುದು? ಹೇಗೆ ಪರಿಭಾವಿಸುವುದು? ಒಂದಂತು ಸ್ಪಷ್ಟ. ಅವು ಸ್ವಾತಂತ್ರ್ಯ ಹೋರಾಟಗಳಾಗಿರಲಿಲ್ಲ. ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಪ್ರಾರಂಭವಾದ ಸ್ವಾತಂತ್ರ್ಯ ಹೋರಾಟವು ಈ ಹಿಂದೆ ಬ್ರಿಟಿಷರ ವಿರುದ್ಧ ನಡೆದ ಬಂಡಾಯಗಳನ್ನು ಒಂದು ರೀತಿಯ ಸ್ಫೂರ್ತಿಯ -ಪ್ರೇರಣೆಯ ಸಂಗತಿಗಳಾಗಿ ಪರಿಭಾವಿಸಿತು. ಈ ಹಿಂದೆ ನಡೆದ ಬಂಡಾಯಗಳಲ್ಲಿ ಬ್ರಿಟಿಷರ ಜೊತೆ ಹೋರಾಡುತ್ತಾ ಮರಣ ಹೊಂದಿದ ವೀರರನ್ನೆಲ್ಲಾ 'ಆದರ್ಶ' ನಾಯಕರನ್ನಾಗಿ ಮಾಡಲಾಯಿತು. ಅಂತಹ ಬಂಡಾಯಗಳನ್ನು ಕುರಿತು ಲಾವಣಿಗಳನ್ನು ಕಟ್ಟಲಾಯಿತು. ಈ ದೃಷ್ಟಿಯಿಂದ ನಾವು ಅಂದು ನಡೆದ ಬಂಡಾಯ-ದಂಗೆ-ಪ್ರತಿಭಟನೆಗಳನ್ನು ನೋಡಬೇಕು.

ಮೇಲ್ಕಂಡ ಸಂಗತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ನಮಗೆ ಒಂದು ಮುಖ್ಯವಾದ ಸಂಗತಿ ತಿಳಿಯುತ್ತದೆ. ಈ ಬಂಡಾಯ-ದಂಗೆಗಳೆಲ್ಲವೂ ಬ್ರಿಟಿಷರ ವಿರುದ್ಧ ನಡೆದದ್ದರಿಂದ ಅವೆಲ್ಲವೂ ಬ್ರಿಟಿಷರ ನೇರ ಆಳ್ವಿಕೆಯಿದ್ದ ಪ್ರದೇಶದಲ್ಲೇ ಜರುಗಿದವು. ಇದು ಬಹಳ ಮುಖ್ಯವಾದ ಸಂಗತಿಯಾಗಿದೆ. ಏಕೆಂದರೆ ಮುಂದೆ ೧೮೮೫ರ ನಂತರ ಸ್ವಾತಂತ್ರ್ಯ ಹೋರಾಟದ ಪ್ರಥಮ ಕಿಡಿಗಳು ಸಿಡಿದದ್ದು ಬ್ರಿಟಿಷರ ನೇರ ಆಳ್ವಿಕೆಯಿದ್ದ ಪ್ರದೇಶಗಳಲ್ಲಿ ಎಂಬುದು ಇಂದು ಸ್ಪಷ್ಟವಾಗಿದೆ. ಕನ್ನಡ ಭಾಷೆಯನ್ನಾಡುವ ೭ ಜಿಲ್ಲೆಗಳು ಅಂದು ಬ್ರಿಟಿಷರ ನೇರ ಆಳ್ವಿಕೆಯಲ್ಲಿದ್ದವು. ಅವುಗಳಲ್ಲಿ ಧಾರವಾಡ, ಬಿಜಾಪುರ, ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಮುಂಬೈ ಪ್ರಾಂತದಲ್ಲಿದ್ದರೆ ಮಂಗಳೂರು ಮತ್ತು ಬಳ್ಳಾರಿ ಮದರಾಸು ಪ್ರಾಂತದಲ್ಲಿದ್ದವು. ಕೊಡಗು ಪ್ರತ್ಯೇಕ ಸ್ಥಾನಮಾನ ಪಡೆದುಕೊಂಡು ಬ್ರಿಟಿಷರ ನಿಯಂತ್ರಣದಲ್ಲಿತ್ತು. ದಕ್ಷಿಣ ಕರ್ನಾಟಕ ಭಾಗವು ಮೈಸೂರು ರಾಜ ಸಂಸ್ಥಾನದ ಆಳ್ವಿಕೆಯಲ್ಲಿತ್ತು. ೧೮೮೫ರ ನಂತರ ಕಾಂಗ್ರೆಸ್ ಚಟುವಟಿಕೆಗಳು ಪ್ರಾರಂಭವಾದುದು ಹಾಗೂ ಸ್ವಾತಂತ್ರ್ಯ ಹೋರಾಟ ಆರಂಭಗೊಂಡಿದ್ದು ಬ್ರಿಟಿಷರ ನೇರ ಆಳ್ವಿಕೆಯಿದ್ದ ಜಿಲ್ಲೆಗಳಲ್ಲಿ ಎಂಬುದು ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಅಧ್ಯಯನದ ದೃಷ್ಟಿಯಿಂದ ಮುಖ್ಯವಾಗುತ್ತದೆ. ಕ್ರಿ.ಶ. ೧೮೦೦ರಲ್ಲೇ ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟ ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟವು ೧೯ನೇ ಶತಮಾನದ ಕೊನೆಯ ಭಾಗದಲ್ಲೇ ಪ್ರಾರಂಭವಾಯಿತು. ೧೯೦೫ ರಲ್ಲಿ ಬಾಲಗಂಗಾಧರ ತಿಲಕರು ಬಳ್ಳಾರಿಗೆ ಭೇಟಿ ನೀಡಿ ಬ್ರಿಟಿಷರ ವಿರುದ್ಧ ಜನರನ್ನು ರೊಚ್ಚಿಗೆಬ್ಬಿಸಿದ್ದರು. ಈ ಅಧ್ಯಾಯದಲ್ಲಿ ಅಖಿಲ ಭಾರತ ಮಟ್ಟದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಮುಖ್ಯ ಘಟ್ಟಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

ಮುಂಡರಗಿ ಭೀಮರಾಯನ ಬಂಡಾಯ

೧೮೫೭ಕ್ಕೆ ಮುಂಚೆ ಭಾರತದ ಅನೇಕ ಭಾಗಗಳಲ್ಲಿ ಬ್ರಿಟಿಷರ ವಿರುದ್ಧ ಬಂಡಾಯಗಳು ನಡೆದದ್ದು ಇತಿಹಾಸದಿಂದ ತಿಳಿದು ಬರುತ್ತದೆ. ಇಂತಹ ಬಂಡಾಯಗಳೆಲ್ಲಾ ಸ್ವಾತಂತ್ರ್ಯ ಹೋರಾಟ ಗಳೆನಿಸಿಕೊಳ್ಳುವುದಿಲ್ಲ, ನಿಜ. ಆದರೆ ಬ್ರಿಟಿಷರ ವಿರುದ್ಧ ನಡೆದ ಬಂಡಾಯಗಳಾಗಿರುವುದರಿಂದ ಈ ಬಂಡಾಯಗಳಲ್ಲಿ ಪ್ರಾಣತೆತ್ತವರು ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಯ ಸೆಲೆಗಳಾದರು. ೧೮೫೭ಕ್ಕೆ ಪೂರ್ವದಲ್ಲಿ ನಡೆದ ಬಂಡಾಯ- ದಂಗೆ -ಪ್ರತಿಭಟನೆಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸುವುದು ವಾಡಿಕೆ. ಮೊದಲನೆಯದು ಪೌರ-ನಾಗರಿಕ ಹೋರಾಟ. ಎರಡನೆಯದು ಆದಿವಾಸಿಗಳು-ಬುಡಕಟ್ಟು ಜನಾಂಗದವರ ಹೋರಾಟ. ಮೂರನೆಯದು ರೈತ-ಕಾರ್ಮಿಕರ ಹೋರಾಟ. ಮುಂಡರಿಗಿ ಭೀಮರಾಯನದು ಮೊದಲನೆಯ ಗುಂಪಿಗೆ ಸೇರಿದ ಬಂಡಾಯವಾಗಿದೆ. ಸರ್ಕಾರದ ದೌರ್ಜನ್ಯಕ್ಕೆ ಒಳಗಾದ, ನೌಕರಿಯಿಂದ ವಜಾ ಮಾಡಲ್ಪಟ್ಟ ಜನರ ಪ್ರತಿಭಟನೆ-ಬಂಡಾಯಗಳನ್ನು ಪೌರ-ನಾಗರಿಕ ಪ್ರತಿಭಟನೆಗಳೆಂದು ಕರೆಯಲಾಗಿದೆ.

ಮುಂಡರಿಗಿ ಭೀಮರಾಯನ ಬಂಡಾಯವು ತುಂಗಭದ್ರಾನದಿಯ ಉತ್ತರ ಭಾಗದಲ್ಲಿನ ಕೊಪ್ಪಳ-ಡಂಬಳ ಪ್ರದೇಶದಲ್ಲಿ ನಡೆಯಿತು. ಈ ಬಂಡಾಯದಲ್ಲಿ ಮುಂಡರಿಗಿ ಭೀಮರಾಯನು ತನ್ನ ಪ್ರಾಣ ಬಲಿದಾನ ಮಾಡಿದನು. ಮುಂಡರಿಗಿ ಭೀಮರಾಯನ ಬಂಡಾಯಕ್ಕೂ ಮತ್ತು ಬಳ್ಳಾರಿ ಜಿಲ್ಲೆಗೂ ನಿಕಟವಾದ ಸಂಬಂಧವಿದೆ. ಏಕೆಂದರೆ ಇವನು ಬ್ರಿಟಿಷ್ ಸರ್ಕಾರದಲ್ಲಿ ಕಂದಾಯ ಅಧಿಕಾರಿಯಾಗಿ ಹರಪನಹಳ್ಳಿ ಮತ್ತು ಬಳ್ಳಾರಿಗಳಲ್ಲಿ ಸೇವೆ ಸಲ್ಲಿಸಿದ್ದನು. ತಾನು ಬಂಡಾಯವನ್ನು ಸಂಘಟಿಸುವಾಗ ತನ್ನ ಸೈನ್ಯಕ್ಕೆ ಯುವಕರನ್ನು ಬಳ್ಳಾರಿ ಜಿಲ್ಲೆಗೆ ಸೇರಿದ ಕಂಪ್ಲಿ, ಕಮಲಾಪುರ, ಹರಪನಹಳ್ಳಿ, ಹೊಸಪೇಟೆ ಮುಂತಾದ ಸ್ಥಳಗಳಿಂದ ಕರೆತಂದಿದ್ದನು.

ಹಣದ ವ್ಯವಹಾರಕ್ಕೆ ಸಂಬಂಧಿಸಿದ ಆಪಾದನೆ ಮೇಲೆ ಬ್ರಿಟಿಷ್ ಸರ್ಕಾರವು ಭೀಮರಾಯ ನನ್ನು ನೌಕರಿಯಿಂದ ವಜಾ ಮಾಡಿತ್ತು. ಈ ಅವಮಾನವನ್ನು ಸಹಿಸಲಾರದ ಭೀಮರಾಯನು ಬ್ರಿಟಿಷರ ವಿರುದ್ಧ ಬಂಡಾಯ ಸಾರಿದನು. ಭೀಮರಾಯನಂತೆ ಅವಮಾನಿತರಾಗಿದ್ದ ಹಮ್ಮಿಗೆ ಕೆಂಚನಗೌಡ ಹಾಗೂ ಡಂಬಳದ ದೇಸಾಯರು ಅವನ ಜೊತೆ ಗೂಡಿದರು. ಭೀಮರಾಯನು ಒಳ್ಳೆಯ ಗುರಿಕಾರನಾಗಿದ್ದನು. ತಾನು ಕಟ್ಟಿದ್ದ ಪುಟ್ಟ ಸೈನ್ಯಕ್ಕೆ ಒಳ್ಳೆಯ ತರಬೇತಿ ನೀಡಿದ್ದನು. ಭೀಮರಾಯನ ತಂಡವು ಮೊದಲು ಡಂಬಳವನ್ನು ಕೈವಶ ಮಾಡಿಕೊಂಡಿತು. ನಂತರ ಕೊಪ್ಪಳದ ಕೋಟೆಯನ್ನು ವಶಪಡಿಸಿಕೊಂಡಿತು. ಭೀಮರಾಯನ ರಾಜಕೀಯ ವಿದ್ರೋಹವನ್ನು ಸಹಿಸದ ಬ್ರಿಟಿಷ್ ಸರ್ಕಾರ ಕೊಪ್ಪಳ ಕೋಟೆಯ ಮೇಲೆ ಮುತ್ತಿಗೆ ಹಾಕಿತು. ಬ್ರಿಟಿಷರ ವಿರುದ್ಧ ಹೋರಾಡುತ್ತಾ ಭೀಮರಾಯನು ೨೫-೫-೧೮೫೮ರಂದು ಹುತಾತ್ಮನಾದನು. ಭೀಮರಾಯನ ಆಸ್ತಿ-ಪಾಸ್ತಿಗಳನ್ನು ಬ್ರಿಟಿಷ್ ಸರ್ಕಾರವು ಮುಟ್ಟುಗೋಲು ಮಾಡಿಕೊಂಡಿತು. ಸೆರೆಸಿಕ್ಕಿದ ಭೀಮ ರಾಯನ ತಂಡದ ಬಂಡಾಯಗಾರರನ್ನೆಲ್ಲಾ ಗಲ್ಲಿಗೇರಿಸಲಾಯಿತು. ಹೀಗೆ ಗಲ್ಲಿಗೇರಿದವರಲ್ಲಿ ಅನೇಕರು ಬಳ್ಳಾರಿ ಜಿಲ್ಲೆಗೆ ಸೇರಿದವರಾಗಿದ್ದರು.

೧೮೫೭ರಲ್ಲಿ ಉತ್ತರ ಭಾರತದಲ್ಲಿ ನಡೆದ ಸಿಪಾಯಿ ದಂಗೆ ಅಥವಾ ಮೊದಲ ಸ್ವಾತಂತ್ರ್ಯ ಹೋರಾಟಕ್ಕೂ ಮತ್ತು ೧೮೫೮ರಲ್ಲಿ ನಡೆದ ಭೀಮರಾಯನ ಬಂಡಾಯಕ್ಕೂ ಮತ್ತು ಕರ್ನಾಟಕದಲ್ಲೇ ನಡೆದ ೧೮೫೮ರ ನರಗುಂದ ಬಂಡಾಯಕ್ಕೂ ಮತ್ತು ಭೀಮರಾಯನ ಬಂಡಾಯಕ್ಕೂ ಸಂಬಂಧವಿದ್ದುದನ್ನು ಬಿ.ಆರ್. ಗೋಪಾಲ್ (೧೯೮೬) ಗುರುತಿಸಿದ್ದಾರೆ. ಭೀಮರಾಯನ ಹೋರಾಟವು ಮುಂದೆ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಯ ನೆಲೆಯಾಯಿತು. (ಟಿ.ಬಿ.ಕೇಶವರಾವ್, ೧೯೭೫).

ಸ್ವಾತಂತ್ರ್ಯ ಹೋರಾಟವು ರಾಷ್ಟ್ರಮಟ್ಟದಲ್ಲಿ ಹಾಗೂ ಪ್ರಾಂತ ಮಟ್ಟದಲ್ಲಿ ಹೇಗೆ ಸಂಘಟಿತವಾಗಿತ್ತೋ ಅದೇ ರೀತಿಯಲ್ಲಿ ಹಾಗೂ ಅಲ್ಲಿ ಅದು ಹೇಗೆ ವಿಕಾಸಗೊಳ್ಳುತ್ತಾ ಬೆಳೆಯಿತೊ ಅದೇ ಮಾದರಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲೂ ಸ್ವಾತಂತ್ರ್ಯ ಹೋರಾಟವು ವಿಕಾಸ ಹೊಂದುತ್ತಾ ಬೆಳೆಯಿತು. ರಾಷ್ಟ್ರಮಟ್ಟದಲ್ಲಿ ಹಾಗೂ ಪ್ರಾಂತ ಮಟ್ಟದಲ್ಲಿ ಸಂಘಟಿತವಾಗಿದ್ದ ಸ್ವಾತಂತ್ರ್ಯ ಹೋರಾಟ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಗಳ ನಡುವೆ ಕ್ರಿಯಾಶೀಲ ಸಂಬಂಧವಿತ್ತು. ಈ ಸಂಬಂಧ ಅವಿನಾಭಾವ ಸ್ವರೂಪದ್ದಾಗಿತ್ತು. ರಾಷ್ಟ್ರ ಹಾಗೂ ಪ್ರಾಂತಮಟ್ಟಗಳಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಿಂದ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವನ್ನು ಪ್ರತ್ಯೇಕವಾಗಿ ಮತ್ತು ಬಿಡಿಯಾಗಿ ನೋಡಲು ಸಾಧ್ಯವಿಲ್ಲ. ರಾಷ್ಟ್ರಮಟ್ಟದ್ದಲಿ ಸಂಘಟಿತವಾಗಿದ್ದ ಸ್ವಾತಂತ್ರ್ಯ ಹೋರಾಟವನ್ನು ಅನುಸರಿಸಿಕೊಂಡೆ ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ ಸಂಘಟಿತವಾಗಿತ್ತು. ಆದ್ದರಿಂದ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವನ್ನು ಅಖಿಲ ಭಾರತ ಹಿನ್ನೆಲೆಯಲ್ಲೇ ಪರಿಭಾವಿಸಿಕೊಳ್ಳ ಬೇಕಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿನ ಸ್ವಾತಂತ್ರ್ಯ ಹೋರಾಟಕ್ಕೆ ಮಾರ್ಗದರ್ಶನ ಹಾಗೂ ಸಂಪನ್ಮೂಲಗಳು ಪ್ರಾಂತ ಹಾಗೂ ರಾಷ್ಟ್ರ ಮಟ್ಟದ ಸಂಘಟನೆಗಳಿಂದ ಪ್ರಾಪ್ತವಾಗುತ್ತಿತ್ತು. ಸಂಪನ್ಮೂಲವನ್ನು ಸ್ಥಳೀಯವಾಗಿಯೂ ಸಂಗ್ರಹಿಸಲಾಗುತ್ತಿತ್ತು.

ಈ ಶತಮಾನದ ಆರಂಭದಲ್ಲಿ ಸ್ವಾತಂತ್ರ್ಯ ಹೋರಾಟವು ಭೌಗೋಳಿಕವಾಗಿ ನಗರ-ಪಟ್ಟಣ ಕೇಂದ್ರಗಳಿಗೆ ಸೀಮಿತಗೊಂಡಿತ್ತು. ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟವು ೨೦ನೇ ಶತಮಾನದ ಮೊದಲ ಎರಡು ದಶಕಗಳವರೆಗೆ ಮುಖ್ಯವಾಗಿ ಬಳ್ಳಾರಿ, ಹರಪನಹಳ್ಳಿ, ಹೊಸಪೇಟೆ ನಗರಗಳಿಗೆ ಸೀಮಿತಗೊಂಡಿತ್ತು. ನಂತರದ ದಶಕಗಳಲ್ಲಿ ಅದು ಜಿಲ್ಲೆಯಲ್ಲಿನ ಇತರೆ ತಾಲ್ಲೂಕು ಕೇಂದ್ರಗಳಿಗೆ ಹಬ್ಬಿತು. ೧೯೩೦ರ ಹೊತ್ತಿಗೆ ಸ್ವಾತಂತ್ರ್ಯ ಚಳುವಳಿಯು ಬಳ್ಳಾರಿ ಜಿಲ್ಲೆಯ ಆಲೂರು, ಆದವಾನಿ, ರಾಯದುರ್ಗ, ಕೂಡ್ಲಿಗಿ, ಹಡಗಲಿ ಮುಂತಾದ ತಾಲ್ಲೂಕು ಕೇಂದ್ರಗಳಿಗೆ ಹರಡಿತು. ಅಖಿಲ ಭಾರತ ಮಟ್ಟದಲ್ಲಿ, ಪ್ರಾಂತಮಟ್ಟಗಳಲ್ಲಿ ಸ್ವಾತಂತ್ರ್ಯ ಚಳುವಳಿಯು ೧೯೪೦ರ ದಶಕದಲ್ಲಿ ಹೇಗೆ ನಿಜವಾದ ಅರ್ಥದಲ್ಲಿ ಜನರ ಆಂದೋಳನವಾಗಿ ರೂಪುಗೊಂಡಿತೋ ಅದೇ ರೀತಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿಯೂ ಸಹ ೧೯೪೦ರ ದಶಕದಲ್ಲಿ ಅದು ಜನಾಂದೋಳನ ಸ್ವರೂಪ ಪಡೆದುಕೊಂಡಿತು. ಸಮಾಜದ ಎಲ್ಲಾ ವರ್ಗವನ್ನೂ ಸ್ವಾತಂತ್ರ್ಯ ಹೋರಾಟವು ೧೯೪೦ರ

ಜೊತ್ತಿಗೆ ತನ್ನ ತೆಕ್ಕೆಗೆ ತೆಗೆದುಕೊಂಡಿತ್ತು. ಸಮಾಜದ ಕೆಳವರ್ಗ, ಕೆಳಜಾತಿ, ಮಹಿಳೆ, ಗ್ರಾಮವಾಸಿ, ರೈತರು, ಕಾರ್ಮಿಕರು ಮುಂತಾದವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಳ್ಳತೊಡಗಿದರು. ೧೯೨೦ರಲ್ಲಿ ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟಿದ್ದ ಸ್ವಾತಂತ್ರ್ಯ ಹೋರಾಟಗಾರರ ಸಂಖ್ಯೆ ೧೯೪೦ರಲ್ಲಿ ಸರಿಸುಮಾರು ಸಾವಿರದ ಗಡಿದಾಟಿತ್ತು.

ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟವು ಸಾಮಾನ್ಯವಾಗಿ ನಾವು ತಿಳಿದುಕೊಂಡಿರುವಂತೆ ಆಗಸ್ಟ್ ೧೫, ೧೯೪೭ರಂದು ಮುಗಿಯಲಿಲ್ಲ. ಹೈದರಾಬಾದ್ ನಿಜಾಮನು ತನ್ನ ಸಂಸ್ಥಾನವನ್ನು ಭಾರತ ಗಣರಾಜ್ಯದಲ್ಲಿ ವಿಲೀನಗೊಳಿಸಲು ಹಿಂಜರಿದನು. ಸ್ವಾತಂತ್ರ್ಯ ಘೋಷಿಸಿಕೊಳ್ಳುವ ಪ್ರಯತ್ನ ನಡೆಸಿದನು. ಹೈದರಾಬಾದ್ ಸಂಸ್ಥಾನದಲ್ಲಿ ಆಗಸ್ಟ್ ೧೫, ೧೯೪೭ರ ನಂತರವೂ ವಿಮೋಚನಾ ಹೋರಾಟ ಮುಂದುವರಿಯಿತು. ನಿಜಾಮನ ಸಂಸ್ಥಾನದ ಗಡಿ ಭಾಗವಾದ ಬಳ್ಳಾರಿ ಜಿಲ್ಲೆಯ ಮೇಲೆ ಹೈದರಾಬಾದ್ ಸಂಸ್ಥಾನದ ವಿಮೋಚನಾ ಹೋರಾಟವು ತೀವ್ರ ಪ್ರಭಾವ ಬೀರಿತು. ಬಳ್ಳಾರಿ ಜಿಲ್ಲೆಯೊಳಗೆ ಸಂಡೂರು ರಾಜ ಸಂಸ್ಥಾನವಿತ್ತು. ಅದರ ವಿಲೀನದ ಪ್ರಶ್ನೆಯೂ ಉದ್ಭವಿಸಿತು.

ಹೀಗೆ ಪ್ರಸ್ತುತ ಅಧ್ಯಾಯದಲ್ಲಿ ಕ್ರಿ.ಶ.೧೮೮೫ರಿಂದ ೧೯೪೮ರ ವರೆಗೆ ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ವರ್ಣರಂಜಿತ ಹಾಗೂ ಕುತೂಹಲಕಾರಿ ಚರಿತ್ರೆಯನ್ನು ಮೂರು ಭಾಗಗಳಲ್ಲಿ ಮಂಡಿಸಲಾಗಿದೆ. ಈ ಅಧ್ಯಾಯದ ಮೊದಲನೆಯ ಭಾಗದಲ್ಲಿ ೧೮೮೫ರಿಂದ ೧೯೪೦ರವರೆಗಿನ ಕಾಲಘಟ್ಟದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ವಿವರಗಳನ್ನು ಕಾಣಬಹುದು. ೧೯೨೦-೨೧ ಅಸಹಕಾರ ಚಳುವಳಿ, ೧೯೩೦ರ ಸವಿನಯ ಕಾಯಿದೆ ಭಂಗಚಳುವಳಿ, ಉಪ್ಪು ಸತ್ಯಾಗ್ರಹ, ೧೯೩೦ರಲ್ಲಿ ಕಾಯಿದೆ ಭಂಗ ಚಳುವಳಿಯಲ್ಲಿ ಭಾಗವಹಿಸಿ ಶಿಕ್ಷೆಗೊಳಗಾದ ೭೭ ಸತ್ಯಾಗ್ರಹಿಗಳ ಪಟ್ಟಿ ಮುಂತಾದವುಗಳನ್ನು ಈ ಅಧ್ಯಾಯದಲ್ಲಿ ಮಂಡಿಸಲಾಗಿದೆ.

ಎರಡನೆಯ ಭಾಗದಲ್ಲಿ ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯ ವಿವರಣೆ ನೀಡಲಾಗಿದೆ. ಇದರ ಜೊತೆಗೆ ಈ ಭಾಗದಲ್ಲಿ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರವನ್ನು ಕೂಲಂಕಷವಾಗಿ ವಿವರಿಸಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಹೊಸ ಸಂಗತಿಗಳನ್ನು ನಾವು ಇಲ್ಲಿ ಬೆಳಕಿಗೆ ತಂದಿದ್ದೇವೆ. ಪ್ರಮಾಣಭೂತ ವಿವರಣೆ ದೃಷ್ಟಿಯಿಂದ ಈ ಭಾಗದಲ್ಲಿ ಆಗಸ್ಟ್ ೧೦, ೧೯೪೨ರಿಂದ ಡಿಸೆಂಬರ್ ೪, ೧೯೪೨ರ ವರೆಗೆ ಬಳ್ಳಾರಿ ಜಿಲ್ಲೆಯಲ್ಲಿ ನಡೆದ 'ಭಾರತ ಬಿಟ್ಟು ತೊಲಗಿ' ಚಳುವಳಿ ಕುರಿತ ಸರ್ಕಾರದ ರಹಸ್ಯವರದಿಯ ವಿವರಗಳನ್ನು ಯಥಾವತ್ತಾಗಿ ನೀಡಿದ್ದೇವೆ. ಈ ವಿವರಣೆಯು ದಿನಚರಿ ಸ್ವರೂಪದಲ್ಲಿದೆ. ಇಲ್ಲಿ ಚಳುವಳಿಗಾರರ ಹೆಸರುಗಳು ಇಲ್ಲ. ಹಾಗಾದರೆ ಅಂತಹ ದಿನಚರಿ ಪಟ್ಟಿಯನ್ನು ಇಲ್ಲಿ ಯಾಕೆ ನೀಡಲಾಗಿದೆ? ಈ ಪ್ರಶ್ನೆಗೂ ವಿವರಣೆಯನ್ನು ಭಾಗ-೨ರಲ್ಲಿ ನೀಡಲಾಗಿದೆ.

ಈ ಅಧ್ಯಾಯದ ಭಾಗ-೩ ಹೈದರಾಬಾದ್ ವಿಮೋಚನಾ ಚಳುವಳಿಯಲ್ಲಿ ಬಳ್ಳಾರಿ ಜಿಲ್ಲೆಯ ಪಾತ್ರವನ್ನು ಒಳಗೊಂಡಿದೆ. ಬಳ್ಳಾರಿ ಜಿಲ್ಲೆ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಬೇರ್ಪಡಿಸುವ ತುಂಗಭದ್ರಾನದಿಯು ಇವೆರಡೂ ಜಿಲ್ಲೆಗಳ ನಡುವೆ ಸಂಪರ್ಕದ ಸಾಧನವೂ ಆಗಿದೆ. ರಾಯಚೂರು ಜಿಲ್ಲೆಯ ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಯ ಬಾಚಿಗೊಂಡನ ಹಳ್ಳಿಗಳ ನಡುವಿನ ಸಂಬಂಧ ಹಾಗೂ ರಜಾಕಾರರ ಹಾವಳಿ ಮುಂತಾದವುಗಳಿಗೆ ಸಂಬಂಧಿಸಿದ ಸ್ಥೂಲ ವಿವರಣೆ ಇಲ್ಲಿದೆ.

ಭಾಗ ೧

೧೮೮೫ರಲ್ಲಿ ಕಾಂಗ್ರೆಸ್ ಸ್ಥಾಪನೆ

ಅಖಿಲ ಭಾರತ ಮಟ್ಟದಲ್ಲಿ ನಡೆದ ಎಲ್ಲ ಬದಲಾವಣೆ-ಬೆಳವಣಿಗೆಗಳಿಗೆ ಬಳ್ಳಾರಿಯು ಸ್ಪಂದಿಸುತ್ತಾ ಬಂದಿದೆಯೆಂಬುದಕ್ಕೆ ಕಾಂಗ್ರೆಸ್ ಸಂಸ್ಥೆಯ ಪ್ರಥಮ ಸಂಸ್ಥಾಪನಾ ಅಧಿವೇಶನದಲ್ಲಿ ಈ ಜಿಲ್ಲೆಯ ಪ್ರತಿನಿಧಿಗಳು ಭಾಗವಹಿಸಿದ ಸಂಗತಿಯೇ ಸಾಕ್ಷಿಯಾಗಿದೆ. ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಸಂಸ್ಥೆಯು ಸ್ಥಾಪನೆಯಾದದ್ದು ಒಂದು ಅದ್ಭುತ ಘಟನೆಯಾಗಿದೆ. ಮುಂದೆ ಅದು ಭಾರತದ ಸ್ವಾತಂತ್ರ್ಯ ಹೋರಾಟದ ಸೂತ್ರದಾರನಾಗುತ್ತದೆಯೆಂದು ಅದನ್ನು ಸ್ಥಾಪಿಸಿದ ವ್ಯಕ್ತಿಗಳು ಊಹಿಸಿರಲಿಕ್ಕಿಲ್ಲ. ಭಾರತ ರಾಷ್ಟ್ರೀಯ ಕಾಂಗ್ರೆಸ್ ಡಿಸೆಂಬರ್ ೧೮೮೫ ರಲ್ಲಿ ಸ್ಥಾಪನೆಯಾಯಿತು. ಅದರ ಪ್ರಥಮ ಅಧಿವೇಶನವು ಮುಂಬಯಿಯಲ್ಲಿ ಡಿಸೆಂಬರ್ ೨೮-೩೦, ೧೮೮೫ರಲ್ಲಿ ಜರುಗಿತು. ಬಂಗಾಳದ ಉಮೇಶಚಂದ್ರ ಬ್ಯಾನರ್ಜಿಯವರು ಕಾಂಗ್ರೆಸ್‌ನ ಪ್ರಥಮ ಅಧಿವೇಶನದ ಅಧ್ಯಕ್ಷರಾಗಿದ್ದರು. ದೇಶಾದ್ಯಂತ ಬಂದಿದ್ದ ೭೨ ಜನ ಪ್ರತಿನಿಧಿಗಳು ಆ ಅಧಿವೇಶನದಲ್ಲಿ ಭಾಗವಹಿಸಿದ್ದರು. ಆ ಅಧಿವೇಶನದಲ್ಲಿ ಕರ್ನಾಟಕದ ನಾಲ್ವರು ಪ್ರತಿನಿಧಿಗಳು ಭಾಗವಹಿಸಿದ್ದರು. ಆ ನಾಲ್ವರಲ್ಲಿ ಮೂವರು ಬಳ್ಳಾರಿಯವರು ಎಂಬುದು ಹೆಮ್ಮೆಯ ಸಂಗತಿಯಾಗಿದೆ. ಕಾಂಗ್ರೆಸ್‌ನ ಸಂಸ್ಥಾಪನಾ ಅಧಿವೇಶನದಲ್ಲಿ ಭಾಗವಹಿಸಿದ ಬಳ್ಳಾರಿಯ ಪ್ರತಿನಿಧಿಗಳೆಂದರೆ ಶ್ರೀಯುತರುಗಳಾದ ಕೋಲಾಚಲಂ ವೆಂಕಟರಾವ್, ಸಭಾಪತಿ ಮೊದಲಿಯಾರ್ ಮತ್ತು ಗುತ್ತಿ ಕೇಶವ ಪಿಳ್ಳೆ (ಇ.ಆರ್.ಸೇತುರಾಮ್, ೧೯೯೭:೩) ಕೋಲಾಚಲಂ ವೆಂಕಟರಾವ್‌ರವರು ಆ ಕಾಲಕ್ಕೆ ಇಂಗ್ಲೆಂಡಿಗೆ ಹೋಗಿ ಶಿಕ್ಷಣ ಪಡೆದಿದ್ದರು. ಬಾಲಗಂಗಾಧರ ತಿಲಕರ ಜೊತೆ ಸಂಪರ್ಕವಿತ್ತು. ಬ್ರಿಟಿಷ್ ಸರ್ಕಾರವು ಆವರಿಗೆ 'ರೈಟ್ ಆನರಬಲ್' ಬಿರುದನ್ನು ನೀಡಿತ್ತು. ಅವರೊಬ್ಬ ಸಮಾಜ ಸುಧಾರಕರಾಗಿದ್ದರು. ೧೯ನೇ ಶತಮಾನದ ಕೊನೆಯ ದಶಕದಲ್ಲೇ ಅವರು ತಮ್ಮ ಸ್ವಂತ ಬಂಗಲೆಯಲ್ಲಿ ಸ್ವಂತ ಖರ್ಚಿನಲ್ಲಿ ಮೂರು ವಿಧವಾ ವಿವಾಹ ಮಾಡಿಸಿದ್ದರು. ಇಂತಹ ಸಮಾಜ ಸುಧಾರಣಾ ಕ್ರಮಗಳಿಂದಾಗಿ ವೆಂಟಕರಾವ್‌ರವರು ಸನಾತನಿಗಳ ಕೋಪಕ್ಕೆ ಈಡಾಗಬೇಕಾಯಿತು. ಸಮುದ್ರ ಪ್ರಯಾಣ ಮಾಡಿದ್ದು, ವಿಧವಾ ವಿವಾಹ ಮಾಡಿಸಿದ್ದು ಮುಂತಾದ ಕ್ರಾಂತಿಕಾರಿ ಚಟುವಟಿಕೆಗಳನ್ನು ಸಂಘಟಿಸುತ್ತಿದ್ದ ವೆಂಕಟರಾವ್‌ರಿಗೆ ಸನಾತನವಾದಿ ಸಮಾಜ ಬಹಿಷ್ಕಾರ ಹಾಕಲು ಪ್ರಯತ್ನಿಸಿತ್ತು.

ಸ್ವಾತಂತ್ರ್ಯ ಹೋರಾಟದ ನೇತಾರರಾಗಿದ್ದ ಬಾಲಗಂಗಾಧರ ತಿಲಕರು, ಪಂ. ಮದನ ಮೋಹನ ಮಾಳವೀಯ, ಟಂಗುಟೂರಿ ಪ್ರಕಾಶಂ, ವೀರೇಶಲಿಂಗಂ ಪಂತುಲು, ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ಮುಂತಾದವರೊಂದಿಗೆ ವೆಂಕಟರಾವ್ ಆಪ್ತ ಸಂಬಂಧ ಹೊಂದಿದ್ದರು. ೧೯೦೫ ರಲ್ಲಿ ಬಾಲಗಂಗಾಧರ ತಿಲಕರು ಬಳ್ಳಾರಿಗೆ ಆಗಮಿಸಿದ್ದಾಗ ಅವರು ವೆಂಕಟರಾವ್ ರವರ ಅತಿಥಿಗಳಾಗಿದ್ದರು (ತಿರುಮಲ ರಾಮಚಂದ್ರ, ೧೯೯೭) ತಿಲಕರ ಸಂಬಂಧವಾಗಿ ಬ್ರಿಟಿಷ್ ಸರ್ಕಾರವು ನಡೆದುಕೊಂಡ ರೀತಿಯಿಂದ ಬೇಸರಗೊಂಡ ವೆಂಕಟರಾವ್‌ರವರು ೧೯೧೭ ರಲ್ಲಿ ತಾವು ಪಡೆದಿದ್ದ 'ರೈಟ್ ಆನರಬಲ್' ಪ್ರಶಸ್ತಿಯನ್ನು ಬ್ರಿಟಿಷ್ ಸರ್ಕಾರಕ್ಕೆ ಹಿಂತಿರುಗಿಸಿದರು.

ಹೀಗೆ ಬಳ್ಳಾರಿಯಲ್ಲಿ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳು ೧೯ನೇ ಶತಮಾನದ ಕೊನೆಯ ಭಾಗದಲ್ಲೇ ಪ್ರಾರಂಭವಾದವು ಎಂಬುದು ಮೇಲಿನ ಸಂಗತಿಯಿಂದ ತಿಳಿದು ಬರುತ್ತದೆ. ಆದರೆ ಅಂದು ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳು ಬಳ್ಳಾರಿ ನಗರಕ್ಕೆ ಮಾತ್ರ ಸೀಮಿತವಾಗಿದ್ದವು. ವಿದ್ಯಾವಂತರು, ವಕೀಲರು, ಸರ್ಕಾರಿ ನೌಕರರು, ಶಾಲಾ ಉಪಾಧ್ಯಾಯರು ಮುಂತಾದವರು ಮಾತ್ರ ಇಂತಹ ಚಟುವಟಿಕೆಗಳಲ್ಲಿ ಆಸಕ್ತಿ ತಳೆದಿದ್ದರು. ರಾಷ್ಟ್ರಮಟ್ಟದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಸಂಘಟಿಸುತ್ತಿದ್ದ ಮುಂದಾಳುಗಳ ಜೊತೆ ಜಿಲ್ಲೆ ಸಂಪರ್ಕವಿಟ್ಟುಕೊಂಡಿತ್ತು. ಈ ಕಾಲಘಟ್ಟದಲ್ಲಿ ಕಾಂಗ್ರೆಸಿಗಾಗಲಿ, ಚಳುವಳಿಗಾರರಿಗಾಗಲಿ ಸ್ವಾತಂತ್ರ್ಯ ಗಳಿಸಬೇಕು ಎಂಬ ಉದ್ದೇಶವಾಗಲಿ ಅಥವಾ ಬ್ರಿಟಿಷರನ್ನು ದೇಶ ಬಿಟ್ಟು ಓಡಿಸಬೇಕು ಎಂಬ ಗುರಿಯಾಗಲಿ ಇದ್ದಂತೆ ತೋರುವುದಿಲ್ಲ. ವಸಾಹತುಶಾಹಿ ಬ್ರಿಟಿಷ್ ಸರ್ಕಾರದಿಂದ ಸಾಕಷ್ಟು ಸವಲತ್ತು-ರಿಯಾಯಿತಿ ಪಡೆದು ಕೊಳ್ಳುವುದು ಅಂದು ಕಾಂಗ್ರೆಸ್‌ನ ಗುರಿಯಾಗಿತ್ತು. ೧೮೮೫ ರಿಂದ ೧೯೦೫ ರವರೆಗೆ ಕಾಂಗ್ರೆಸ್ ತನ್ನ ಅಧಿವೇಶನಗಳಲ್ಲಿ ಸ್ವಾತಂತ್ರ್ಯವನ್ನು ಒತ್ತಾಯಿಸಿ ಒಂದೇ ಒಂದು ನಿರ್ಣಯವನ್ನೂ ಕೈಗೊಳ್ಳಲಿಲ್ಲ ಎಂಬುದರಿಂದ ಇದು ಸ್ಪಷ್ಟವಾಗುತ್ತದೆ.

ಬಾಲಗಂಗಾಧರ ತಿಲಕರು ಬಳ್ಳಾರಿಗೆ ಬಂದರು

ಮಹಾತ್ಮಾ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುವುದಕ್ಕೆ ಪೂರ್ವದಲ್ಲಿ ಬಾಲಗಂಗಾಧರ ತಿಲಕರು ಪರಮೋಚ್ಚ ನಾಯಕರಾಗಿದ್ದರು. ಭಾರತದ ಸ್ವಾತಂತ್ರ್ಯ ಹೋರಾಟದ ಉಗ್ರವಾದಿ ಗುಂಪಿನ ನಾಯಕರಾಗಿದ್ದರು. ಮುಂಬೈ ಪ್ರಾಂತದೊಳಗಿದ್ದ ಕನ್ನಡ ಭಾಷಿಕ ಪ್ರದೇಶದಲ್ಲಿ ಇವರ ಪ್ರಭಾವ ತೀವ್ರವಾಗಿತ್ತು. ಅನೇಕ ಬಾರಿ ಇವರು ಬೆಳಗಾವಿ ಮತ್ತು ಧಾರವಾಡಗಳಿಗೆ ಭೇಟಿ ನೀಡಿ ಸ್ವಾತಂತ್ರ್ಯ ಹೋರಾಟಗಾರರಿಗೆ ಬ್ರಿಟಿಷರ ವಿರುದ್ಧ ಸಿಡಿದೇಳುವಂತೆ ಪ್ರೇರಣೆ ನೀಡುತ್ತಿದ್ದರು-ಯುವಜನರನ್ನು ಪ್ರಚೋದಿಸುತ್ತಿದ್ದರು. ೧೯೦೬ರಲ್ಲಿ ಧಾರವಾಡದಲ್ಲಿ ನಡೆದ ಬೊಂಬಾಯಿ ಪ್ರಾಂತೀಕ ರಾಜಕೀಯ ಸಮಾವೇಶದಲ್ಲಿ ಫಿರೋಜ್ ಷಾ ಮೆಹತಾರವರ ಜೊತೆಗೆ ತಿಲಕರೂ ಭಾಗವಹಿಸಿದ್ದರು (ಆರ್. ಸೇತುರಾಮ್, ೧೯೯೭:೩).

ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯ ಜೊತೆಗೂ ತಿಲಕರು

ಸಂಪರ್ಕವಿಟ್ಟುಕೊಂಡಿದ್ದರು. ೧೯೦೫ರಲ್ಲಿ ಬಳ್ಳಾರಿಗೆ ಭೇಟಿ ನೀಡಿದ ತಿಲಕರು ನಾಟಕ ಸಂಸ್ಥೆಯೊಂದರ ವೇದಿಕೆಯಿಂದ ಭಾಷಣ ಮಾಡಿದರು (ಕರ್ನಾಟಕ ಸ್ಟೇಟ್ ಗೆಜೆಟೀಯರ್, ಭಾಗ-೧: ಪುಟ ೩೬೦). 'ವಿಜಯ ನಗರ ಸಾಮ್ರಾಜ್ಯದ ಸ್ಥಾಪನೆಯಿಂದ ನಮಗೆ ಬಹಳ ಲಾಭವಾಯಿತು. ನಾವು ಇದರಿಂದ ಪಾಠ ಕಲಿಯಬೇಕು' ಎಂದು ಅವರು ಜನರಿಗೆ ಕರೆ ನೀಡಿದರು ಎಂದು ಹೇಳಲಾಗಿದೆ(ಟಿ.ಬಿ.ಕೇಶವರಾವ್, ೧೯೭೫ : ೫). ಶತ್ರುಗಳನ್ನು ವಿಜಯ ನಗರದ ಅರಸರು ಸದೆ ಬಡಿದು ವಿಶಾಲ ಸಾಮ್ರಾಜ್ಯವೊಂದನ್ನು ನಿರ್ಮಿಸಿದಂತೆ ಬ್ರಿಟಿಷರನ್ನು ದೇಶದಿಂದ ಹೊಡೆದೊಡಿಸಿ ಸ್ವತಂತ್ರ ಭಾರತವನ್ನು ನಿರ್ಮಿಸಬೇಕು ಎಂಬುದು ಬಾಲಗಂಗಾಧರ ತಿಲಕರ ಸಂದೇಶವಾಗಿತ್ತು.

೧೯೨೦ರ ಅಸಹಕಾರ ಚಳುವಳಿ

೨೦ ನೇ ಶತಮಾನದ ಎರಡನೇ ದಶಕದಲ್ಲಿ ದೇಶದ ಕೆಲವು ಪ್ರದೇಶಗಳಲ್ಲಿ ಉಗ್ರಗಾಮಿ ಚಟುವಟಿಕೆಗಳು ತೀವ್ರವಾದವು. ಇಂತಹ ಕ್ರಾಂತಿಕಾರಿ ಚಟುವಟಿಕೆಗಳನ್ನು ಹತ್ತಿಕ್ಕುವ ಸಲುವಾಗಿ ಬ್ರಿಟಿಷ್ ವಸಾಹತು ಸರ್ಕಾರವು ೧೯೧೯ರ ಫೆಬ್ರವರಿಯಲ್ಲಿ ರೌಲತ್ ಕಾಯಿದೆಯನ್ನು ಜಾರಿಗೊಳಿಸಿತು. ಈ ಕಾಯಿದೆಯು ಪೋಲೀಸರಿಗೆ ಅತಿಶಯವಾದ ಅಧಿಕಾರ ನೀಡಿತು. ವಿಚಾರಣೆಯಿಲ್ಲದೆ ಎರಡು ವರ್ಷಗಳವರೆಗೆ ವ್ಯಕ್ತಿಗಳನ್ನು ಸ್ಥಾನ ಬದ್ಧತೆಯಲ್ಲಿಡುವುದು, ವಿಶೇಷ ನ್ಯಾಯಾಲಯಗಳ ಸ್ಥಾಪನೆ, ರಾಜದ್ರೋಹ ಸಾಹಿತ್ಯದ ಮೇಲೆ ನಿಷೇದ ಮುಂತಾದ ಅಂಶಗಳನ್ನು ರೌಲತ್ ಕಾಯಿದೆ ಒಳಗೊಂಡಿತ್ತು. ಮಹಾತ್ಮ ಗಾಂಧೀಜಿಯವರು ರೌಲತ್ ಕಾಯಿದೆ ವಿರುದ್ಧ ಜನಾಂದೋಳನದ ಕಾರ್ಯಕ್ರಮವನ್ನು ಮುಂದಿಟ್ಟುಕೊಂಡು ಭಾರತದ ಸ್ವಾತಂತ್ರ್ಯ ಹೋರಾಟವನ್ನು ಪ್ರವೇಶಿಸಿದರು. ಗಾಂಧೀಜಿಯವರು ಶುರು ಮಾಡಿದ ಆಂದೋಳನವು ಪ್ರಾರಂಭದಲ್ಲಿ ಕೇವಲ ಎರಡು ಅಂಶಗಳನ್ನು ಒಳಗೊಂಡಿತ್ತು. ಮೊದಲನೆಯದು - ಪ್ರತಿಬಂಧಿತ ಸಾಹಿತ್ಯವನ್ನು ಸಾರ್ವಜನಿಕವಾಗಿ ಮಾರಾಟ ಮಾಡಿ ಬಂಧಿತರಾಗುವುದು ಮತ್ತು ಎರಡನೆಯದು- ಅಖಿಲ ಭಾರತ ವ್ಯಾಪ್ತಿಯ ಹರತಾಳ.

ಇಡೀ ದೇಶ ಅಂದು ಅಶಾಂತಿಯಿಂದ ಕುದಿಯುತ್ತಿತ್ತು. ರೌಲತ್ ಕಾಯಿದೆ, ಜಲಿಯನ್-ವಾಲಾಬಾಗ್ ಹತ್ಯೆ, ಖಿಲಾಫತ್ ಚಳುವಳಿ, ಮಾಪಿಳ್ಳಾ ದಂಗೆ ಮುಂತಾದವುಗಳು ಜನರಲ್ಲಿ ಅಸಮಾಧಾನ ಉಂಟುಮಾಡಿದ್ದವು. ಬ್ರಿಟಿಷ್ ಸರ್ಕಾರದ ಆಳ್ವಿಕೆ ವಿರುದ್ಧ ಜನರನ್ನು ಎಚ್ಚರಿಸುವ ಸಲುವಾಗಿ ಗಾಂಧೀಜಿಯವರು ಬಿರುಸಾದ ಅಖಿಲ ಭಾರತ ಪ್ರವಾಸ ಕೈಗೊಂಡರು. ೧೯೨೦ ರ ಸೆಪ್ಟೆಂಬರ್ ನಲ್ಲಿ ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್‌ನ ವಿಶೇಷ ಅಧಿವೇಶನದಲ್ಲಿ ಅಸಹಕಾರ ಚಳುವಳಿಯ ರೂಪರೇಷೆಗಳ ಬಗ್ಗೆ ದೀರ್ಘವಾದ ಚರ್ಚೆ ನಡೆಯಿತು. ಅದೇ ವರ್ಷ ನಾಗಪುರದಲ್ಲಿ ಜರುಗಿದ ಕಾಂಗ್ರೆಸ್‌ನ ವಾರ್ಷಿಕಾಧಿವೇಶನದಲ್ಲಿ ಅಸಹಕಾರ ಚಳುವಳಿಯ ನಿರ್ಣಯ ಕೈಗೊಳ್ಳಲಾಯಿತು. ಗಾಂಧೀಜಿಯವರ ಪ್ರವೇಶದಿಂದಾಗಿ ಕಾಂಗ್ರೆಸ್ ಸಮೂಹ ಸ್ವರೂಪ ಪಡೆದುಕೊಳ್ಳತೊಡಗಿತು.

ಅಸಹಕಾರ ಚಳುವಳಿಯು ಮೂಲಭೂತವಾಗಿ ಕೆಳಕಂಡ ಅಂಶಗಳನ್ನು ಒಳಗೊಂಡಿತ್ತು:

೧. ವಿದ್ಯಾರ್ಥಿಗಳು ಶಾಲಾ- ಕಾಲೇಜುಗಳನ್ನು ತೊರೆಯುವುದು.

೨. ವಕೀಲರು ತಮ್ಮ ವೃತ್ತಿಯನ್ನು ತ್ಯಜಿಸುವುದು.

೩. ಕೌನ್ಸಿಲ್ ಚುನಾವಣೆ ಬಹಿಷ್ಕಾರ

೪. ಬಿರುದು- ಪ್ರಶಸ್ತಿಗಳನ್ನು ಸರ್ಕಾರಕ್ಕೆ ಹಿಂತಿರುಗಿಸುವುದು.

ಅಸಹಕಾರ ಚಳುವಳಿಯನ್ನು ವಿವಿಧ ಹಂತಗಳಲ್ಲಿ ಸಂಘಟಿಸಲಾಗಿತ್ತು. ಈ ಚಳುವಳಿಯು ಇಡೀ ದೇಶದಲ್ಲಿ ಜನಜಾಗೃತಿ ಉಂಟುಮಾಡುವುದರಲ್ಲಿ ಯಶಸ್ವಿಯಾಯಿತು. ಕಾಂಗ್ರೆಸ್ ಕಾರ್ಯಕರ್ತರು ಅಸಹಕಾರ ಚಳುವಳಿಯ ಸಂದೇಶವನ್ನು ಹಳ್ಳಿ ಹಳ್ಳಿಗೂ ಮುಟ್ಟಿಸಿದರು.

ಆಗಸ್ಟ್ ೧, ೧೯೨೦ ರಂದು ದೇಶಾದ್ಯಂತ ಅಸಹಕಾರ ಚಳುವಳಿಯು ವಿದ್ಯುಕ್ತವಾಗಿ ಪ್ರಾರಂಭವಾಯಿತು. "ಬ್ರಿಟಿಷ್-ಕರ್ನಾಟಕ" ಪ್ರದೇಶದಲ್ಲಿ ಚಳುವಳಿ ತೀವ್ರವಾಗಿತ್ತು. ಬಹಿಷ್ಕಾರ ಮತ್ತು ಪಿಕೆಟಿಂಗ್ ಚಟುವಟಿಕೆಗಳು ವ್ಯಾಪಕವಾಗಿದ್ದವು. ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಯ ಉದ್ದಕ್ಕೂ ನಿಷ್ಠೆಯಿಂದ ದುಡಿದಂತಹ ಯುವಕರ ತಂಡವೊಂದು ಈ ಅಸಹಕಾರ ಚಳುವಳಿಯ ಸಂದರ್ಭದಲ್ಲಿ ರೂಪುಗೊಂಡಿತು. ಸಾವಿರಾರು ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳನ್ನು ತೊರೆದು ಹೊಸದಾಗಿ ಸತ್ಯಾಗ್ರಹಿಗಳು ಪ್ರಾರಂಭಿಸಿದ್ದ ರಾಷ್ಟ್ರೀಯ ಶಾಲೆಗಳನ್ನು ಸೇರಿದರು. ಅಂದು ಕರ್ನಾಟಕದಲ್ಲಿ ಒಟ್ಟು ೪೮ ರಾಷ್ಟ್ರೀಯ ಶಾಲೆಗಳು ಸ್ಥಾಪನೆಗೊಂಡಿದ್ದವು. ನೂರಾರು ಮಂದಿ ವಕೀಲರು ತಮ್ಮ ವಕೀಲಿ ವೃತ್ತಿಯನ್ನು ತೊರೆದು ಅಸಹಕಾರ ಚಳುವಳಿಯಲ್ಲಿ ತೊಡಗಿಕೊಂಡರು.

ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ, ಮುಖ್ಯವಾಗಿ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಸ್ವಾತಂತ್ರ್ಯ ಹೋರಾಟದ ಸಂದೇಶವನ್ನು ಪ್ರಸಾರ ಮಾಡುವ ಕೆಲಸ ನಡೆಯಿತು. ಅಂದು ಬಳ್ಳಾರಿ ಜಿಲ್ಲೆಯಲ್ಲಿ ಕ್ರಿಯಾಶೀಲರಾಗಿದ್ದ ಸತ್ಯಾಗ್ರಹಿಗಳೆಂದರೆ ಕಲ್ಲೂರು ಸುಬ್ಬರಾವ್. ಮತ್ತು ವೆಂಕಟರಮಣಾಚಾರ್ಲು. ಕಲ್ಲೂರು ಸುಬ್ಬರಾವ್ ಅವರು ಅನಂತಪುರ ಹಾಗೂ ಬಳ್ಳಾರಿ ಜಿಲ್ಲೆಗಳೆರಡರಲ್ಲೂ ಜನ ಜಾಗೃತಿ ಉಂಟುಮಾಡುವ ಕಾರ್ಯದಲ್ಲಿ ನಿರತರಾಗಿದ್ದರು. ಕನ್ನಡ ಮತ್ತು ತೆಲುಗು ಭಾಷೆಗಳೆರಡರಲ್ಲೂ ಸುಬ್ಬರಾಯರು ಉಗ್ರಭಾಷಣ ಮಾಡುತ್ತಿದ್ದರು. ೧೯೨೦-೨೧ ರ ಕಾಲಾವಧಿಯಲ್ಲಿ ಶಾಸನೋಲ್ಲಂಘನೆ ಸಲುವಾಗಿ ಇವರಿಗೆ ೬ ತಿಂಗಳ ಕಠಿಣ ಶಿಕ್ಷೆಯಾಯಿತು. ಶ್ರೀಯುತರಾದ ವೆಂಕಟರಮಣಾಚಾರ್ಲುರವರು ಮೂಲತಃ ತಾಡಪತ್ರಿಗೆ ಸೇರಿದವರಾಗಿದ್ದರೂ ಅವರು ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯಲ್ಲಿ ಕ್ರಿಯಾಶೀಲರಾಗಿದ್ದರು. ೧೯೨೦-೨೧ ರ ಕಾಲಾವಧಿಯಲ್ಲಿ ಇವರು ನೂರಾರು ಯುವಕರಿಗೆ ತರಬೇತಿ ನೀಡಿ ಸ್ವಾತಂತ್ರ್ಯ ಚಳುವಳಿಯ ದೀಕ್ಷೆ ನೀಡಿದರು.

೧೯೨೦-೨೧ ರ ಅಸಹಕಾರ ಚಳುವಳಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ದುಡಿದ ಇತರ ಸತ್ಯಾಗ್ರಹಿಗಳೆಂದರೆ ಶ್ರೀ ನೇತ್ರಹಳ್ಳಿ ಸಂಜೀವರಾಯರು, ಶ್ರೀ ಬಾದನಹಟ್ಟಿ ವೆಂಕೋಬರಾಯರು, ಟೇಕೂರು ನಾರಾಯಣ ಶಾಸ್ತ್ರಿಗಳು, ಲ್ಯಾಂಗ್ಲಿ ಭೀಮಸೇನರಾಯರು ಮುಂತಾದವರು. ಇವರೆಲ್ಲರೂ ಬಳ್ಳಾರಿ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಸಂಚರಿಸಿ ಸ್ವಾತಂತ್ರ್ಯ ಚಳುವಳಿ ಬಗ್ಗೆ ಜನರಲ್ಲಿ ಅರಿವು ಮೂಡಿಸಿದರು. ಬಾದನಹಟ್ಟಿ ವೆಂಕೋಬರಾಯರು 'ಬಳ್ಳಾರಿ ಗಾಂಧೀತಾತ' ನೆಂದೆ ಪ್ರಸಿದ್ಧಿ ಪಡೆದಿದ್ದರು. ಏಕೆಂದರೆ ಗಾಂಧೀಜಿಯವರಂತೆ ವೆಂಕೋಬರಾಯರೂ ಕೂಡ ಒಂದು ದಟ್ಟಿಯನ್ನು ಸೊಂಟಕ್ಕೆ ಸುತ್ತಿಕೊಂಡು ಮೈಮೇಲೆ ಸಹ ದಟ್ಟಿಯೊಂದನ್ನು ಸುತ್ತಿಕೊಳ್ಳುತ್ತಿದ್ದರು. ಜೀವನ ಪರ್ಯಂತ ಅವರು ಗಾಂಧೀಜಿಯವರಂತೆ ಸರಳ ಖಾದಿ ದಟ್ಟಿ ಸುತ್ತಿಕೊಂಡೆ ಬದುಕು ಸಾಗಿಸಿದರು.

ಗಾಂಧೀಜಿ ಬಳ್ಳಾರಿಗೆ ಬಂದರು

ದೇಶದಾದ್ಯಂತ ಅಸಹಕಾರ ಚಳುವಳಿ ತೀವ್ರ ಬಿರುಸಿನಿಂದ ನಡೆಯುತ್ತಿದ್ದ ಸಂದರ್ಭದಲ್ಲಿ ಗಾಂಧೀಜಿಯವರು ಜನಜಾಗೃತಿಗಾಗಿ ದೇಶದಾದ್ಯಂತ ಸಂಚಾರ ಕೈಗೊಂಡರು. ಈ ಪ್ರವಾಸದ ಸಂದರ್ಭದಲ್ಲಿ ಅಕ್ಟೋಬರ್ ೧, ೧೯೨೧ರಲ್ಲಿ ಗಾಂಧೀಜಿಯವರು ಬಳ್ಳಾರಿ ಜಿಲ್ಲೆಗೆ ಭೇಟಿ ನೀಡಿದರು (ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮಗಾಂಧಿ: ೧೯೬೬. ಸಂ.೨೧, ಪು: ೨೨೪). ಅಂದು ಬಳ್ಳಾರಿಯಲ್ಲಿ ಎರಡು ಜಿಲ್ಲಾ ಕಾಂಗ್ರೆಸ್ ಸಮಿತಿಗಳಿದ್ದವು. ಅವೆರಡರ ನಡುವೆ ಸೌಹಾರ್ದಯುತ ಸಂಬಂಧವೇನಿರಲಿಲ್ಲ. ಇವೆರಡೂ ಸಮಿತಿಗಳ ನಡುವಿನ ಕಿತ್ತಾಟದಿಂದ ಗಾಂಧೀಜಿಯವರಿಗೆ ಬಳ್ಳಾರಿಯಲ್ಲಿ ಸೂಕ್ತವಾದ ಆತಿಥ್ಯವೇನು ದೊರೆಯಲಿಲ್ಲ (ಟೇಕೂರು ಸುಬ್ರಹ್ಮಣ್ಯಂ, ೧೯೬೯.ಪು ೪೩೫). ಗಂಡ- ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು' ಎಂಬಂತೆ ಬಳ್ಳಾರಿ ಜಿಲ್ಲೆಯಲ್ಲಿನ ಎರಡು ಜಿಲ್ಲಾ ಕಾಂಗ್ರೆಸ್ ಸಮಿತಿಗಳ ನಡುವಿನ ಕಿತ್ತಾಟದಿಂದಾಗಿ ಗಾಂಧೀಜಿಯವರು ಬಳ್ಳಾರಿಗೆ ಭೇಟಿ ನೀಡಿದ್ದಾಗ ಕಹಿ ಪ್ರಸಂಗಗಳನ್ನು ಎದುರಿಸಬೇಕಾಯಿತು.

ಅಕ್ಟೋಬರ್ ೧, ೧೯೨೧ ರಂದು ಗಾಂಧೀಜಿಯವರು ಬಳ್ಳಾರಿಯಲ್ಲಿ ಸಾರ್ವಜನಿಕರನ್ನು ದ್ದೇಶಿಸಿ ಭಾಷಣ ಮಾಡಿದರು. 'ಆಂಧ್ರ ನಾಟಕ ಪಿತಾಮಹ'ನೆಂಬ ಬಿರುದು ಪಡೆದಿದ್ದ ರಾಮ ಕೃಷ್ಣಮಾಚಾರ್ಯರವರ ನಿವಾಸದಲ್ಲಿ ಅಂದು ಗಾಂಧೀಜಿಯವರ ಸಾರ್ವಜನಿಕ ಸಭೆ ನಡೆಯಿತು. ರಾಮಕೃಷ್ಣಮಾಚಾರ್ಯರ ನಿವಾಸವು ದೊಡ್ಡ ಹವೇಲಿಯಂತಿತ್ತು. ಅದನ್ನು 'ಬಂಗಲಾ ಕಾಪೌಂಡು' ಎಂದೇ ಸಂಬೋಧಿಸುತ್ತಿದ್ದರು. ಅಂದು ಸಾರ್ವಜನಿಕ ಸಭೆಯಲ್ಲಿ ಗಾಂಧೀಜಿಯವರು ನೀಡಿದ ಭಾಷಣವನ್ನು ರಾಮಕೃಷ್ಣಮಾಚಾರ್ಯರ ಕೊನೆಯ ಮಗನಾದ ಶ್ರೀ ಬೋಗೀಂದ್ರನಾಥ ರವರು ತೆಲುಗಿಗೆ ಭಾಷಾಂತರಿಸಿದ್ದರು (ತಿರುಮಲರಾಮಚಂದ್ರ, ೧೯೬೬).


ದಿನಾಂಕ ೩-೧೦-೧೯೨೧ ರಂದು ಬಳ್ಳಾರಿಯಲ್ಲಿ ಗಾಂಧೀಜಿ ನೀಡಿದ ಭಾಷಣದ ವರದಿ (ದಿ ಹಿಂದೂ ಪತ್ರಿಕೆ):

'ಗಾಂಧೀಜಿಯವರು ಜನರನ್ನು ಉದ್ದೇಶಿಸಿ ಭಾಷಣ ಮಾಡುವುದಕ್ಕೆ ಮೊದಲು ಅನೇಕ ಮನವಿಗಳನ್ನು ಗಾಂಧೀಜಿಯವರಿಗೆ ಓದಿ ಹೇಳಲಾಯಿತು. ಗಾಂಧೀಜಿಯವರು ಹಿಂದಿಯಲ್ಲಿ ಉತ್ತರಿಸುತ್ತಾ ಖಿಲಾಪತ್ ಚಳುವಳಿಯ ಸಮಿತಿ ಮನವಿ ಅರ್ಪಿಸದಿದ್ದುದಕ್ಕೆ ಅಸಂತೋಷ ವ್ಯಕ್ತಪಡಿಸಿದರು. ಬಳ್ಳಾರಿಯಲ್ಲಿ ಖಿಲಾಪತ್ ಚಳುವಳಿ ಸಮಿತಿ ಇದೆಯೋ-ಇಲ್ಲವೋ ಎಂಬುದನ್ನು ವಿಚಾರಿಸಿದರು. ಬಳ್ಳಾರಿಯಿಂದ ನನಗೆ ವಕೀಲರಿಂದ, ಚುನಾಯಿತ ಪ್ರತಿನಿಧಿಗಳಿಂದ, ಹಿಂದೂಗಳಿಂದ ಮತ್ತು ಮುಸ್ಲಿಮರಿಂದ ಅಸಂಖ್ಯಾತ ಪತ್ರಗಳು ಬರುತ್ತವೆ ಎಂದು ಹೇಳಿದರು. ಸೌಹಾರ್ದ ಮನೋಭಾವ ಹಾಗೂ ಸಾಮಾಜಿಕ ಶಾಂತಿ ಇಲ್ಲದಿದ್ದರೆ ಕಾಂಗ್ರೆಸ್ ಕೆಲಸಕ್ಕೆ ಅರ್ಥವೇ ಇಲ್ಲ ಎಂದು ನುಡಿದರು. ಎಲ್ಲಾ ಬಗೆಯ ಬೇಧ-ಭಾವಗಳನ್ನು ತೊರೆದು ಒಗ್ಗಟ್ಟಾಗಿ ದುಡಿಯಬೇಕೆಂದು ಜನರಲ್ಲಿ ಮನವಿ ಮಾಡಿಕೊಂಡರು. ಆಂಧ್ರ ಮತ್ತು ಕರ್ನಾಟಕಗಳ ನಡುವಿನ ವಿವಾದದ ಬಗ್ಗೆ ಪ್ರಸ್ತಾಪಿಸಿ ಗಾಂಧೀಜಿಯವರು ಇಂತಹ ವಿವಾದಗಳನ್ನೆಲ್ಲಾ ಸ್ವರಾಜ್ಯ ಬಂದ ಮೇಲೆ ಬಗೆಹರಿಸಿಕೊಳ್ಳಬಹುದು ಎಂದು ತಿಳಿಸಿದರು. ಪ್ರತಿಯೊಬ್ಬರು ಚರಕದಿಂದ ನೂಲು ತೆಗೆಯಬೇಕೆಂದು ಮತ್ತು ಖಾದಿ ಬಟ್ಟೆ ತಯಾರಿಸಬೇಕೆಂದೂ ಮನವಿ ಮಾಡಿಕೊಂಡರು. ಮಧ್ಯರಾತ್ರಿಯಾಗಿದ್ದರೂ ಅಪಾರ ಸಂಖ್ಯೆಯಲ್ಲಿ ತಮ್ಮನ್ನು ಸ್ವಾಗತಿಸಿದ ಜನತೆಗೆ ಗಾಂಧೀಜಿಯವರು ಕೃತಜ್ಞತೆ ಸಲ್ಲಿಸಿದರು' (ದ ಕಲೆಕ್ಟೆಡ್ ವರ್ಕ್ಸ್ ಆಫ್ ಮಹಾತ್ಮಗಾಂಧಿ, ಸಂ.೨೧,೧೯೬೬.ಪು.೨೨೪).

ಕಹಿ ಪ್ರಸಂಗ

ಬಳ್ಳಾರಿಯಲ್ಲಿ ಎರಡು ಜಿಲ್ಲಾ ಸಮಿತಿಗಳು ಕಾರ್ಯವೆಸಗುತ್ತಿದ್ದುದರಿಂದ ಗಾಂಧೀಜಿಯವರಿಗೆ ಸರಿಯಾದ ಆತಿಥ್ಯ ದೊರೆಯಲಿಲ್ಲ. ಅವರನ್ನು ಬರಮಾಡಿಕೊಳ್ಳಲು ರೈಲು ನಿಲ್ದಾಣಕ್ಕೆ ಯಾರೂ ಹೋಗಿರಲಿಲ್ಲ. ಬಳ್ಳಾರಿ ಕಾರ್ಯಕ್ರಮ ಮುಗಿದ ಮೇಲೆ ಅವರು ರೈಲು ನಿಲ್ದಾಣದಲ್ಲಿ ಮಲಗಬೇಕಾಯಿತು. ಗಾಂಧೀಜಿಯವರಿಗೆ ರೈಲು ಟಿಕೆಟ್ ಕೊಡಿಸುವ ವ್ಯವಸ್ಥೆಯನ್ನೂ ಕೂಡ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಮಾಡಲಿಲ್ಲ. ಬಳ್ಳಾರಿ ಜಿಲ್ಲೆಯ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ ಟೇಕೂರು ಸುಬ್ರಹ್ಮಣ್ಯಂರವರು ಗಾಂಧೀಜಿಯವರ ಪ್ರಥಮ ಬಳ್ಳಾರಿ ಭೇಟಿ ಕುರಿತು ಹೀಗೆ ಬರೆಯುತ್ತಾರೆ. ಟೇಕೂರು ಸುಬ್ರಹ್ಮಣ್ಯಂ ಅವರ ಪತ್ರವನ್ನು ಇಲ್ಲಿ ಕುತೂಹಲಕ್ಕಾಗಿ ನೀಡಲಾಗಿದೆ. ಆ ಪತ್ರದ ಕನ್ನಡ ಅನುವಾದ ಹೀಗಿದೆ.

"ಅವರ (ಗಾಂಧೀಜಿ) ನೆನಪಿನ ಶಕ್ತಿ ಅದ್ಭುತವಾದುದು. ಅವರು ಇಡಿ ದೇಶವನ್ನು ಸಂಚರಿಸುವ ಸಂದರ್ಭದಲ್ಲಿ ಅನೇಕ ನಗರಗಳನ್ನು ಮತ್ತು ಅಸಂಖ್ಯ ಹಳ್ಳಿಗಳನ್ನು ಭೇಟಿ ಮಾಡಿದ್ದಾರೆ. ೧೯೨೧ರಲ್ಲಿ ಅವರು (೦೩-೧೦-೧೯೨೧) ಬಳ್ಳಾರಿಗೆ ಪ್ರಥಮ ಭೇಟಿ ನೀಡುತ್ತಾರೆ. ಅಂದು ಬಳ್ಳಾರಿ ನಗರದಲ್ಲಿ ಎರಡು ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಕೆಲಸ ಮಾಡುತ್ತಿದ್ದವು. ಇದು ಕೇಳ್ಕರ್ ಸಮಿತಿಯ ಶಿಫಾರಸ್ಸಿನ ಪೂರ್ವದಲ್ಲಿ ಇದ್ದ ಸ್ಥಿತಿ.



Reminiscences and lessons from Mahatma Gandhiji

His memory was really remarkable. During the course of his many tours of our country, he would have covered numerous towns and countless villages.

In 1921 he visited Bellary for the first time. Then there were two district Congress Committees functioning in Bellary town. That was before the Kelkar's award.

After addressing the huge gathering that evening, he went to the Railway Station, with his small party, spread the Khadi shawl and slept on the platform. Next early morning he got up to catch the train to reach the next place in the programme. There was no representative from either of the district congress committees, to purchase the ticket for him and his party and see them off. He purchased his own ticket and travelled in the train.

In 1935 when I went to Wardha, and saw him he jokingly and wittily referred to this incident, and asked me what the position was at that time (i.e, in 1935). Then I mentioned to him that there was only one district Congress Committee functioning, and I happened to be the humble secretary thereof. Then he said: "God be praised".

ಅಂದು ಸಂಜೆ ಬೃಹತ್ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿಯಾದ ಮೇಲೆ ಅವರು ತಮ್ಮ ಸಹಕಾರ್ಯಕರ್ತರೊಂದಿಗೆ ರೈಲು ನಿಲ್ದಾಣಕ್ಕೆ ತೆರಳಿದರು. ಅಲ್ಲೆ ಪ್ಲಾಟ್ ಫಾರಂ ಮೇಲೆ ತಮ್ಮ ಖಾದಿಶಾಲು ಹಾಸಿಕೊಂಡು ಮಲಗಿದರು. ಮರುದಿನ ಮುಂಜಾನೆ ತಮ್ಮ ಟಿಕೆಟ್ಟನ್ನು ತಾವೇ ಖರೀದಿ ಮಾಡಿ ತಮ್ಮ ಪ್ರಯಾಣ ಮುಂದುವರಿಸಿದರು. ಗಾಂಧೀಜಿಯವರಿಗೆ ಟಿಕೆಟ್ಟನ್ನು ಖರೀದಿಸಿ ಕೊಡಲು ಎರಡೂ ಕಾಂಗ್ರೆಸ್ ಸಮಿತಿಗಳ ಯಾವುದೇ ಪ್ರತಿನಿಧಿ ಅಲ್ಲಿರಲಿಲ್ಲ.

೧೯೩೫ ರಲ್ಲಿ ನಾನು ವಾರ್ಧಾಕ್ಕೆ ಹೋಗಿದ್ದಾಗ ತಮಾಷೆಯಾಗಿ ೧೯೨೧ರ ಪ್ರಸಂಗವನ್ನು ನೆನಪಿಸಿಕೊಂಡು ಈಗ (೧೯೩೫) ಪರಿಸ್ಥಿತಿ ಹೇಗಿದೆ? ಎಂದು ಕೇಳಿದರು. ಆಗ ನಾನು ಬಳ್ಳಾರಿಯಲ್ಲಿ ಇಂದು ಕೇವಲ ಒಂದೇ ಒಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯಮಾಡುತ್ತಿದೆ ಎಂದು ತಿಳಿಸಿದೆ. ನಾನು ಅದರ ನಮ್ರ ಕಾರ್ಯದರ್ಶಿ ಎಂದು ಹೇಳಿದೆ. ಆಗ ಗಾಂಧೀಜಿಯವರು 'ದೇವರು ದೊಡ್ಡವನು' ಎಂದರು.

೧೯೨೪ರ ಬೆಳಗಾವಿ ಕಾಂಗ್ರೆಸ್ ಅಧಿವೇಶನ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಆರಂಭದಿಂದಲೂ ಕರ್ನಾಟಕ ಅದರಲ್ಲೂ ಬ್ರಿಟಿಷ್ ಕರ್ನಾಟಕವು ತೀವ್ರವಾಗಿ ತೊಡಗಿಕೊಂಡಿತ್ತು ಎಂಬುದಕ್ಕೆ ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವೇ ಸಾಕ್ಷಿಯಾಗಿದೆ. ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಹುಮ್ಮಸ್ಸನ್ನು ಹಾಗೂ ಚೈತನ್ಯವನ್ನೂ ಬೆಳಗಾವಿ ಅಧಿವೇಶನ ಒದಗಿಸಿತು. ಅನೇಕ ದೃಷ್ಟಿಯಿಂದ ೧೯೨೪ರ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಮಹತ್ವವಿದೆ.

ಮೊದಲನೆಯದಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕದಲ್ಲಿ ನಡೆದ ಏಕೈಕ ಅಧಿವೇಶನ ಬೆಳಗಾವಿ ಅಧಿವೇಶನ.

ಎರಡನೆಯದಾಗಿ ಕಾಂಗ್ರೆಸ್‌ನ ಇತಿಹಾಸದಲ್ಲಿ ಗಾಂಧೀಜಿಯವರು ಒಮ್ಮೆ ಮಾತ್ರ ಅಧ್ಯಕ್ಷರಾಗಿದ್ದರು. ಅದೇ ಬೆಳಗಾವಿ ಅಧಿವೇಶನ.

ಮೂರನೆಯದಾಗಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಅನೇಕ ಜಾತಿ-ವರ್ಗಗಳು ಈ ಅಧಿವೇಶನದ ಕಾಲದಲ್ಲಿ ಕಾಂಗ್ರೆಸಿನ ಸನಿಹಕ್ಕೆ ಬಂದವು. ಅನೇಕ ಜಾತಿ-ವರ್ಗಗಳಿಗೆ ಕಾಂಗ್ರೆಸ್ ಬಗ್ಗೆ ಇದ್ದ ಅನುಮಾನ-ಶಂಕೆಗಳನ್ನು ಬೆಳಗಾವಿ ಅಧಿವೇಶನ ಪರಿಹರಿಸಿತು. ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಹರ್ಡೇಕರ್ ಮಂಜಪ್ಪನವರು ಏರ್ಪಡಿಸಿದ್ದ ವೀರಶೈವ ಪರಿಷತ್ ಸಭೆಯಲ್ಲಿ ಗಾಂಧೀಜಿ ಪಾಲ್ಗೊಂಡರು.

ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ದೃಷ್ಟಿಯಿಂದಲೂ ಬೆಳಗಾವಿ ಅಧಿವೇಶನ ಮಹತ್ವವಾದುದಾಗಿದೆ. ಬಳ್ಳಾರಿ ಜಿಲ್ಲೆಯ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಬೆಳಗಾವಿ ಅಧಿವೇಶನದಲ್ಲಿ ಭಾಗವಹಿಸಿದರು. ಅವರಲ್ಲಿ ಮುಖ್ಯರಾದವರೆಂದರೆ, ಟಿ.ಬಿ.ಕೇಶವರಾವ್,

ಜಯಲಕ್ಷ್ಮಿಬಾಯಿ, ಶಂಕರಶಾಸ್ತ್ರಿ, ಶೆಟ್ರು ಚೂಡಪ್ಪ, ವಸುಪಾಲಪ್ಪ ಇಜಾರಿ, ಮುದೇನೂರ ಕೊಟ್ರುಬಸಪ್ಪ, ದಂಡಿನ ರಾಮರಾಯರು, ಬಾದನಹಟ್ಟಿ ವೆಂಕೋಬರಾವ್, ಬೂದಿಹಾಳ್ ಅನಂತಚಾರ್, ಮತ್ತಿಹಳ್ಳಿ ರಾಘವೇಂದ್ರ ರಾವ್, ಸಂಡೂರು ವೆಂಕಟಭೀಮಾಚಾರ್ಯ, ತಟ್ಟಿ ಕೃಷ್ಣರಾವ್, ಟೇಕೂರು ಸುಬ್ರಹ್ಮಣ್ಯ, ಆಸುಂದಿ ತಿರುಮಲರಾವ್ ಮುಂತಾದವರು. ಒಟ್ಟಾರೆ ೧೯೨೪ ರಲ್ಲಿ ನಡೆದ ಬೆಳಗಾವಿ ಕಾಂಗ್ರೆಸ್ ಅಧಿವೇಶನವು ಕರ್ನಾಟಕದಲ್ಲಿ ಜನರು ಸಾವಿರಾರು ಸಂಖ್ಯೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕುವಂತೆ ಮಾಡಿತು.

೧೯೩೦ರ ಸವಿನಯ ಕಾಯಿದೆ ಭಂಗ ಚಳುವಳಿ

೧೯೨೦ರ ದಶಕದಲ್ಲಿ ಸ್ವಾತಂತ್ರ್ಯ ಚಳುವಳಿಯು ಬಳ್ಳಾರಿ ಜಿಲ್ಲೆಯಲ್ಲಿ ಸುಸಂಘಟಿತವಾಯಿತು. ಸ್ವಾತಂತ್ರ್ಯ ಚಳುವಳಿಯ ಸಂದೇಶ ಹಾಗೂ ಗಾಂಧೀಜಿ ವಿಚಾರಗಳು ನಗರ-ಪಟ್ಟಣಗಳನ್ನು ಮೀರಿ ತಾಲ್ಲೂಕು ಕೇಂದ್ರಗಳವರೆಗೆ ಹಬ್ಬಿತು. ೧೯೨೧ರಲ್ಲಿ ಗಾಂಧೀಜಿಯವರು ಬಳ್ಳಾರಿ ಭೇಟಿ ನೀಡಿದ್ದು, ೧೯೨೪ ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್‌ನ ಬೆಳಗಾವಿ ಅಧಿವೇಶನ, ೧೯೨೬ ರಲ್ಲಿ ಬಳ್ಳಾರಿಯಲ್ಲಿ ನಡೆದ ಕರ್ನಾಟಕ ಪ್ರಾಂತ ರಾಜಕೀಯ ಸಮಾವೇಶ ಮುಂತಾದವು ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯು ವ್ಯಾಪಕವಾಗಿ ಹರಡಲು ಕಾರಣಗಳಾಗಿದ್ದವು.

ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ '೧೯೩೦' ನೇ ಸಂವತ್ಸರಕ್ಕೆ ವಿಶೇಷ ಮಹತ್ವವಿದೆ. ಏಕೆಂದರೆ ನೆಹರೂರವರ ಅಧ್ಯಕ್ಷತೆಯಲ್ಲಿ ಲಾಹೋರಿನಲ್ಲಿ ೨೬.೧.೧೯೩೦ ರಂದು ನಡೆದ ಕಾಂಗ್ರೆಸ್‌ನ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯ ಕೈಗೊಳ್ಳಲಾಯಿತು. ದಿನಾಂಕ ೨೬.೧.೧೯೩೦ ದೇಶಾದ್ಯಂತ 'ಸ್ವಾತಂತ್ರ್ಯ ದಿನ' ವನ್ನಾಗಿ ಆಚರಿಸಲಾಯಿತು. ಅಲ್ಲಿಂದ ಮುಂದೆ ೧೯೪೭ರ ವರೆಗೆ ಪ್ರತಿವರ್ಷ ಜನವರಿ ೨೬ನ್ನು 'ಸ್ವಾತಂತ್ರ್ಯ ದಿನ' ವನ್ನಾಗಿ ಭಾರತದಲ್ಲಿ ಆಚರಿಸುತ್ತಾ ಬರಲಾಯಿತು.

ಉಪ್ಪಿನ ಸತ್ಯಾಗ್ರಹ

ಮಹಾತ್ಮ ಗಾಂಧೀಜಿಯವರು ಕಾನೂನು ಭಂಗ ಚಳುವಳಿಗೆ ಆರಿಸಿಕೊಂಡ ವಸ್ತು ಉಪ್ಪು. ಉಪ್ಪನ್ನು ತಯಾರಿಸುವ ಹಾಗೂ ಮಾರಾಟದ ಚಟುವಟಿಕೆಗಳ ಮೇಲೆ ಬ್ರಿಟಿಷ್ ಸರ್ಕಾರವು ತೆರಿಗೆ ವಿಧಿಸಿತ್ತು. ಉಪ್ಪಿನ ಮೇಲೆ ತೆರಿಗೆ ವಿಧಿಸಿದ್ದ ಕಾನೂನನ್ನು ಮುರಿಯಲು ಗಾಂಧೀಜಿ ನಿರ್ಧರಿಸಿದರು. ಅದೊಂದು ವಿಶಿಷ್ಟವಾದ ಚಳುವಳಿಯಾಗಿತ್ತು. ೧೯೩೦ರ ಮಾರ್ಚ್ ೧೨ ರಂದು ತಮ್ಮ ಸಾಬರಮತಿ ಆಶ್ರಮದಿಂದ ಎಪ್ಪತ್ತೊಂದು ಅನುಯಾಯಿಗಳೊಂದಿಗೆ ಹೊರಟು ಏಪ್ರಿಲ್ ೬ ರಂದು ಸಮುದ್ರದಂಡೆಯ 'ದಂಡಿ' ಎಂಬ ಸ್ಥಳದಲ್ಲಿ ಉಪ್ಪಿನ ಕಾಯಿದೆ ಮುರಿಯುವ ಕಾರ್ಯಕ್ರಮವನ್ನು ಗಾಂಧೀಜಿಯವರು ರೂಪಿಸಿದರು. ಅದೊಂದು ಅಹಿಂಸಾತ್ಮಕ ಚಳುವಳಿಯಾಗಿತ್ತು. ಸ್ವಾತಂತ್ರ್ಯ ಚಳುವಳಿಗೆ ತೀಕ್ಷ್ಣತೆಯನ್ನು ಮತ್ತು ವ್ಯಾಪಕತೆಯನ್ನು ಈ

ಚಳುವಳಿ ತಂದುಕೊಟ್ಟಿತು.

ಬಳ್ಳಾರಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆ

ಸವಿನಯ ಕಾಯಿದೆ ಭಂಗ ಚಳುವಳಿಯನ್ನು ಪ್ರಾಂತದಲ್ಲಿ ಹೇಗೆ ಸಂಘಟಿಸಬೇಕು ಎಂಬ ವಿಚಾರಗಳನ್ನು ಚರ್ಚಿಸುವ ಸಲುವಾಗಿ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ಸಭೆ ಫೆಬ್ರವರಿ ೨೩, ೧೯೩೦ರಂದು ಬಳ್ಳಾರಿಯಲ್ಲಿ ಜರುಗಿತು. ಕರ್ನಾಟಕದಲ್ಲಿ ಸವಿನಯ ಕಾಯಿದೆ ಭಂಗ ಚಳುವಳಿಯನ್ನು ವ್ಯವಸ್ಥಿತವಾಗಿ ರೂಪಿಸುವ ಉದ್ದೇಶಕ್ಕಾಗಿ ಬಳ್ಳಾರಿಯ ಸಭೆಯಲ್ಲಿ ಒಂದು ಮಂಡಳಿಯನ್ನು ರಚಿಸಲಾಯಿತು. ಆ ಮಂಡಳಿಯಲ್ಲಿ ಕೆಳಕಂಡ ಸದಸ್ಯರುಗಳಿದ್ದರು:

ಶ್ರೀಯುತರುಗಳಾದ,

ಕಾರ್ನಾಡು ಸದಾಶಿವರಾಯರು,
ದಿವಾಕರ ರಂಗನಾಥರಾಯರು,
ಕೌಜಲಗಿ ಹನುಮಂತರಾಯರು,
ದೇಶಪಾಂಡೆ ಗಂಗಾಧರರಾಯರು,
ಮತ್ತು ಡಾ॥ ಹರ್ಡೀಕರರವರು.

ಮುಂದೆ ೧೬.೩.೧೯೩೦ ರಲ್ಲಿ ಧಾರವಾಡದಲ್ಲಿ ನಡೆದ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಸವಿನಯ ಕಾಯಿದೆ ಚಳುವಳಿ ಸಂಘಟಿಸಲು ರೂಪಿಸಿದ್ದ ಮಂಡಳಿಗೆ ಬಳ್ಳಾರಿಯ ಟೇಕೂರು ಸುಬ್ರಹ್ಮಣ್ಯಂರವರನ್ನು ಮತ್ತೊಬ್ಬ ಸದಸ್ಯರನ್ನಾಗಿ ಸೇರಿಸಲಾಯಿತು. ಸವಿನಯ ಕಾಯಿದೆ ಭಂಗ ಚಳುವಳಿಗೆ ಅಗತ್ಯವಾದ ನಿಧಿಯನ್ನು ಸಂಗ್ರಹಿಸುವ ಸಲುವಾಗಿಯೂ ಒಂದು ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಬಳ್ಳಾರಿಯ ಕೆ.ಗುರುರಾಜರಾವ್‌ರವರು ಒಬ್ಬ ಸದಸ್ಯರಾಗಿದ್ದರು.

ಬಳ್ಳಾರಿ ಜಿಲ್ಲೆಯಲ್ಲಿ ಸವಿನಯ ಕಾಯಿದೆ ಭಂಗ ಚಳುವಳಿ ಬಾಬ್ತು ನಿಧಿ ಸಂಗ್ರಹಿಸಲು ಕೆಳಕಂಡ ಸದಸ್ಯರುಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು. ಶ್ರೀಯುತರುಗಳಾದ,

ಇಜಾರಿ ವಸುಪಾಲಪ್ಪ,
ಟೇಕೂರು ಸುಬ್ರಹ್ಮಣ್ಯಂ,
ವಿ.ಎಂ.ಗಿರಿ, ಮತ್ತು
ಮತ್ತಿಹಳ್ಳಿ ರಾಘವೇಂದ್ರ ರಾವ್.

ಮೇಲ್ಕಂಡ ಮಂಡಳಿಗೆ ಸಹಾಯ ನೀಡಿದ ಪ್ರಮುಖರೆಂದರೆ ಶ್ರೀ ಬೆಲ್ಲೊಣ ಭೀಮ ರಾಯರು, ಕನಕಾಪುರಂ ಗುರುರಾಜರಾವ್, ಡಿ.ಎಸ್. ಹನುಮಂತ ರಾವ್ ಮತ್ತು ಹೊಸಪೇಟೆಯ ತಟ್ಟಿ ಕೃಷ್ಣರಾವ್:

ಸವಿನಯಕಾಯಿದೆ ಭಂಗ ಚಳುವಳಿ ಭಾಗವಾಗಿ ಬಳ್ಳಾರಿಯಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸಲು ಸಾಧ್ಯವಿರಲಿಲ್ಲ. ಕರ್ನಾಟಕದ ಪ್ರಾಂತದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸಲು ಅಂಕೋಲವನ್ನು ಆರಿಸಲಾಗಿತ್ತು. ಬಳ್ಳಾರಿಯಲ್ಲಿ ಮದ್ಯಪಾನ ವಿರೋಧಿ ಚಳುವಳಿ ತೀವ್ರವಾಯಿತು. ಈಚಲಮರ ಕಡಿಯುವುದು, ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುವುದು, ಹೆಂಡದಂಗಡಿಗಳ ಬಹಿರಂಗ ಹರಾಜನ್ನು ತಡೆಯುವುದು, ವಿದೇಶಿ ಬಟ್ಟೆ ಸುಡುವುದು, ಪ್ರಭಾತ್ ಭೇರಿ ನಡೆಸುವುದು ಮುಂತಾದವು ಬಳ್ಳಾರಿ ಜಿಲ್ಲೆಯಲ್ಲಿ ೧೯೩೦ ರ ಸವಿನಯ ಕಾಯಿದೆ ಭಂಗ ಚಳುವಳಿ ಕಾಲದಲ್ಲಿ ನಡೆದವು.

ಹರಪನಹಳ್ಳಿ ತಾಲ್ಲೂಕಿನ ಕಂಚಿಕೆರೆಯಲ್ಲಿ ಈಚಲ ಮರಗಳನ್ನು ಕಡಿಯುವುದರ ಮೂಲಕ ಕಾಯಿದೆ ಮುರಿದ ಶ್ರೀಯುತರುಗಳಾದ ಟೇಕೂರು ಸುಬ್ರಹ್ಮಣ್ಯಂ, ಡಾ॥ ರಾಮ ರಾವ್, ಬೊಮ್ಮಪ್ಪ, ಸಿದ್ದಪ್ಪ, ಪೂರ್ಣಾಚಾರ್, ರಾಯಸಂ ಹಯವದನ ರಾವ್, ಗೋಪಾಲಕೃಷ್ಣಾಚಾರ್ ಮುಂತಾದವರು ಬಂಧನಕ್ಕೊಳಗಾದರು. ಇದರಿಂದಾಗಿ ಹರಪನಹಳ್ಳಿಯಲ್ಲಿ ಪರಿಸ್ಥಿತಿ ಹದಗೆಟ್ಟಿತು. ಇದರಿಂದ ಹೆದರಿದ ಅಧಿಕಾರಿಗಳು ಚಳುವಳಿಗಾರರನ್ನೆಲ್ಲಾ ಬಿಡುಗಡೆ ಮಾಡಿದರು.

ಮಾಗಳ (ಹಡಗಲಿ ತಾಲ್ಲೂಕು)ದಲ್ಲಿ ಈಚಲಮರಗಳನ್ನು ಕಡಿದ ಆರೋಪಕ್ಕಾಗಿ ಇಬ್ಬರಿಗೆ ಶಿಕ್ಷೆಯಾಯಿತು. ಕೊಟ್ಟೂರಿನಲ್ಲಿ ಶ್ರೀಭದ್ರಶೆಟ್ಟಿ ಸಣ್ಣರುದ್ರಪ್ಪನವರ ನೇತೃತ್ವದಲ್ಲಿ ಈಚಲ ಮರಗಳನ್ನು ಕಡಿದ ಆರೋಪಕ್ಕಾಗಿ ಒಂದೇ ದಿನ ೨೮ ಜನರ ಬಂಧನವಾಯಿತು. ದಂಡ ತೆರಲು ನಿರಾಕರಿಸಿದ ಶ್ರೀ ಅಗಡಿ ಗುರುಸಿದ್ದಯ್ಯನವರ ಮನೆಯನ್ನು ಜಪ್ತಿ ಮಾಡಲಾಯಿತು.

ಶ್ರೀ ಟಿ.ಬಿ. ಕೇಶವರಾಯರ ನೇತೃತ್ವದಲ್ಲಿ ಹರಪನಹಳ್ಳಿ ತಾಲ್ಲೂಕಿನಲ್ಲಿ ಮದ್ಯಪಾನ ವಿರೋಧಿ ಚಳುವಳಿ ಅತ್ಯಂತ ಯಶಸ್ವಿಯಾಗಿ ಜರುಗಿತು. ಇದರ ಪರಿಣಾಮವಾಗಿ ಹರಪನಹಳ್ಳಿ ತಾಲ್ಲೂಕಿನಲ್ಲಿ ಆ ವರ್ಷ ಹೆಂಡದಂಗಡಿಗಳ ಲಿಲಾವಿನಿಂದ ಬಂದ ಹಣವು ಹಿಂದಿನ ವರ್ಷಗಳಲ್ಲಿ ಬಂದ ಮೊತ್ತದ ಅರ್ಧದಷ್ಟಾಯಿತು.

ಸತ್ಯಾಗ್ರಹಾಶ್ರಮ

ಮದ್ಯಪಾನ ವಿರೋಧಿ ಚಳುವಳಿ ಮತ್ತು ಗಾಂಧೀಜಿಯವರಿಗೆ ಅತ್ಯಂತ ಪ್ರಿಯವಾಗಿದ್ದ ಹರಿಜನ ಸುಧಾರಣೆ, ಅಸ್ಪೃಶ್ಯತೆ ನಿವಾರಣೆ, ಹರಿಜನರಿಗೆ ದೇವಾಲಯ ಪ್ರವೇಶ ಮುಂತಾದ ರಚನಾತ್ಮಕ ಕಾರ್ಯಕ್ರಮಗಳನ್ನು ನಡೆಸಲು ತರಬೇತಿ ಹೊಂದಿದ ಕಾಂಗ್ರೆಸ್ ಕಾರ್ಯಕರ್ತರ ಅಗತ್ಯವಿತ್ತು. ಕಾಂಗ್ರೆಸ್ ಸ್ವಯಂ ಸೇವಕರಿಗೆ ತರಬೇತಿ ನೀಡುವ ಸಲುವಾಗಿ ೧೯೩೦ರ ಏಪ್ರಿಲ್ ೭ರಂದು ಬಳ್ಳಾರಿ ನಗರದ ಹೊರವಲಯದಲ್ಲಿದ್ದ ಶ್ರೀ ಹಾವಳಿಗಿ ಶೇಷಗಿರಿರಾವ್‌ರವರು ಒದಗಿಸಿದ ಬಂಗಲೆಯಲ್ಲಿ ಸತ್ಯಾಗ್ರಹಾಶ್ರಮ ಪ್ರಾರಂಭವಾಯಿತು. ಅಲ್ಲಿ ೧೦೮ ಸ್ವಯಂ ಸೇವಕರು ತರಬೇತಿ ಪಡೆದರು. ನಗರದ ದಾನಿಗಳು ಸ್ವಯಂ ಸೇವಕರ ಊಟ-ವಸತಿ ವ್ಯವಸ್ಥೆ

ನೋಡಿಕೊಳ್ಳುತ್ತಿದ್ದರು. ಶ್ರೀ ಗಂಗಾಧರರಾವ್ ದೇಶಪಾಂಡೆ, ದಿವಾಕರ ರಂಗರಾಯರು, ರಾಮರಾವ್ ಹುಕ್ಕೇರಿಕರ್ ಹಾಗೂ ಆಂಧ್ರದ ಕಲ್ಲೂರು ಸುಬ್ಬರಾವ್ ಮತ್ತು ಮುತ್ಯಾಲರಾವ್ ಮುಂತಾದವರು ಸತ್ಯಾಗ್ರಹಾಶ್ರಮಕ್ಕೆ ಭೇಟಿ ನೀಡಿ ಸ್ವಯಂ ಸೇವಕರಿಗೆ ಶಿಸ್ತು, ಸಂಯಮ, ಧ್ವಜವಂದನೆ ಕುರಿತು ಪಾಠ ಹೇಳಿಕೊಟ್ಟರು.

ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್

ಮದ್ಯದಂಗಡಿಗಳ ಬಹಿಷ್ಕಾರವನ್ನು ವ್ಯವಸ್ಥಿತವಾಗಿ ನಡೆಸುವ ಸಲುವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಶ್ರೀ ವಿ.ಎಂ. ಗಿರಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಏರ್ಪಡಿಸಲಾಗಿತ್ತು. ಆಂಧ್ರದ ಶ್ರೀ ಮುತ್ಯಾಲರಾವ್‌ರವರು ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಹೆಂಡದಂಗಡಿಗಳ ಬಹಿಷ್ಕಾರ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇವರ ಭಾಷಣಗಳು ತೀವ್ರ ಪ್ರಚೋದನಕಾರಿಯಾಗಿರುತ್ತಿದ್ದವು.

ಆಗಸ್ಟ್ ೯, ೧೯೩೦ರಂದು ಶ್ರೀ ಗಿರಿ ಮತ್ತು ಸಿದ್ದಪ್ಪರವರುಗಳ ನೇತೃತ್ವದಲ್ಲಿ ಪಿಕೆಟಿಂಗ್ ನಡೆಯಿತು. ಚಳುವಳಿಗಾರರ ಮೇಲೆ ಹೆಂಡದಂಗಡಿಗಳಲ್ಲಿ ಕೆಲಸ ಮಾಡುವವರು ಹೆಂಡ ಸುರುವಿ ಕಳುಹಿಸಿದರು. ಮತ್ತೊಂದು ದಿನ ಚಳುವಳಿ ನಡೆಸುತ್ತಿದ್ದ ದಯಾನಂದ ರಾಜು ಮತ್ತು ಮುತ್ಯಾಲರಾವ್‌ವರಿಗೆ ಬಾಸುಂಡೆ ಮೂಡುವಂತೆ ಹೆಂಡದಂಗಡಿಗಳ ಮಾಲೀಕರು ಬಡಿದು ಕಳುಹಿಸಿದರು. ಇದಾವುದಕ್ಕೂ ಜಗ್ಗದೆ ಚಳುವಳಿಕಾರರು ಅತ್ಯಂತ ಸಂಯಮದಿಂದ ಹಾಗೂ ಅಹಿಂಸಾತ್ಮಕವಾಗಿ ಚಳುವಳಿ ಮುಂದುವರಿಸಿದರು. ದಿನಗಳು ಉರುಳಿದಂತೆ ಮದ್ಯಪಾನ ವಿರೋಧಿ ಚಳುವಳಿ ಜಿಲ್ಲೆಯಲ್ಲಿ ಉಗ್ರ ರೂಪ ತಳೆಯಿತು.

ಹೆಂಡದಂಗಡಿಗಳ ವಾರ್ಷಿಕ ಲಿಲಾವು

ಬಳ್ಳಾರಿ ಜಿಲ್ಲೆಯಲ್ಲಿ ಹೆಂಡದಂಗಡಿಗಳನ್ನು ಗುತ್ತಿಗೆ ಆಧಾರದಲ್ಲಿ ಸರ್ಕಾರವು ಪ್ರತಿ ವರ್ಷ ಹರಾಜು ಹಾಕುತ್ತಿತ್ತು. ಅದೇ ರೀತಿ ಬಳ್ಳಾರಿ ಜಿಲ್ಲೆಯ ಹೆಂಡದಂಗಡಿಗಳ ಸಾರ್ವಜನಿಕ ಲಿಲಾವು ಆಗಸ್ಟ್ ೧೮, ೧೯೩೦ರಂದು ನಿಗದಿಯಾಯಿತು. ಇದನ್ನು ತಿಳಿದುಕೊಂಡ ಚಳುವಳಿ ಗಾರರು ಲಿಲಾವು ನಡೆಯದಂತೆ ತಡೆಯಲು ನಿರ್ಧರಿಸಿದರು. ಲಿಲಾವನ್ನು ವಿರೋಧಿಸಿ ಪ್ರತಿಭಟನೆ ಯನ್ನು ನಿರೀಕ್ಷಿಸಿದ್ದ ಸರ್ಕಾರವು ಅಂದು ಲಿಲಾವು ನಡೆಯುವ ಪ್ರದೇಶದಲ್ಲಿ ೧೪೪ನೆಯ ಕಲಂ ಜಾರಿಗೊಳಿಸಿ ನಿಷೇಧಾಜ್ಞೆ ವಿಧಿಸಿತು.

ಬಳ್ಳಾರಿ ನಗರದ ತಾಲ್ಲೂಕು ಕಚೇರಿಯ ೨ ಫರ್ಲಾಂಗು ಪ್ರದೇಶದಲ್ಲಿ ಪೋಲೀಸು ಕಾವಲು ಇಡಲಾಯಿತು. ಇಷ್ಟೆಲ್ಲಾ ಬಂದೋಬಸ್ತಿದ್ದರೂ ಸಹ ವಿ.ಎಂ. ಗಿರಿ ಮತ್ತು ಸಿದ್ದಪ್ಪ ಅವರಿಬ್ಬರೂ ಸರ್ಕಾರಿ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಬಂಧನಕ್ಕೊಳಗಾದರು. ಈ ಎಲ್ಲಾ ಪ್ರತಿಭಟನೆ-ಪಿಕೆಟಿಂಗ್‌ಗಳಿಂದಾಗಿ ಹೆದರಿದ ಸರ್ಕಾರವು ಹೆಂಡದಂಗಡಿಗಳ ಲಿಲಾವನ್ನು ಮುಂದೆ

ಹಾಕಿತು. ಇದರಿಂದ ಅಂದು ಚಳುವಳಿ ಎಷ್ಟು ತೀವ್ರವಾಗಿತ್ತು ಎಂಬುದನ್ನು ಊಹಿಸಿಕೊಳ್ಳ ಬಹುದಾಗಿದೆ.

ಬಳ್ಳಾರಿ ಜಿಲ್ಲಾ ಆಡಳಿತವು ಹೆಂಡದಂಗಡಿಗಳ ಲಿಲಾವು ದಿನಾಂಕವನ್ನು ಆಗಸ್ಟ್ ೩೦, ೧೯೩೦ ಕ್ಕೆ ನಿಗದಿ ಪಡಿಸಿತು. ಅಂದು ಬಳ್ಳಾರಿಯಲ್ಲಿ ಹೆಂಡದಂಗಡಿಗಳ ಲಿಲಾವನ್ನು ಪ್ರತಿಭಟಿಸಿ ಚಳುವಳಿಗಾರರು ಕಾನೂನು ಹೇಗೆ ಉಲ್ಲಂಘಿಸಿದರು ಎಂಬುದನ್ನು ಶ್ರೀ.ಬಿ.ಪಿ. ಶೇಷಗಿರಿರಾವ್ ರವರ ಮಾತುಗಳಲ್ಲಿ ಕೇಳಬಹುದು:

"ಆಗಸ್ಟ್ ೩೦, ೧೯೩೦ ರಂದು ನಡೆಯ ಬೇಕಾಗಿದ್ದ ಹೆಂಡದಂಗಡಿಗಳ ಲಿಲಾವನ್ನು ಹೇಗೆ ತಡೆಯಬೇಕು ಎಂಬುದನ್ನು ನಿರ್ಧರಿಸಲು ಅದೇ ದಿನ ಮುಂಜಾನೆ ಟೇಕೂರು ಸುಬ್ರಹ್ಮಣ್ಯಂರವರ ಮನೆಯಲ್ಲಿ ನಾವೆಲ್ಲಾ ಸಭೆ ಸೇರಿದೆವು. ಅನೇಕ ಕಾರ್ಯತಂತ್ರಗಳ ಬಗ್ಗೆ ಚರ್ಚೆ ನಡೆಯಿತು. ಹರಾಜಿನ ಸಂದರ್ಭದಲ್ಲಿ ಯಾವುದೇ ಅಹಿತಕಾರಿ ಘಟನೆ ನಡೆಯದಂತೆ ತಡೆಗಟ್ಟಲು ತಾಲ್ಲೂಕು ಕಚೇರಿ ಸುತ್ತಲೂ ಪೋಲೀಸರ ಸರ್ಪಗಾವಲು ಹಾಕಲಾಗಿತ್ತು. ಜನಗಳ ಜಾತ್ರೆಯೇ ಅಲ್ಲಿ ನೆರೆದಿತ್ತು. ಚಳುವಳಿ ಹೇಗೆ ನಡೆಯುತ್ತದೆ ಎಂಬುದನ್ನು ನೋಡಲು ಕುತೂಹಲಿಗಳಾದ ಸಾರ್ವಜನಿಕರು ರಸ್ತೆ ಬದಿಯ ಮರಗಳ ಮೇಲೆಲ್ಲಾ ಕುಳಿತು ವೀಕ್ಷಿಸುತ್ತಿದ್ದರು. ಪ್ರತಿಭಟನೆ ನಡೆಸಲು ನಾವು ಕಳುಹಿಸಿದ ಸ್ವಯಂಸೇವಕರ ಮೊದಲ ತಂಡ ಕಛೇರಿ ತಲುಪುವ ಮೊದಲೆ ಬಂಧನಕ್ಕೊಳಗಾಯಿತು. ಮತ್ತೊಂದು ತಂಡವೂ ಕಛೇರಿ ತಲುಪುವುದರಲ್ಲಿ ವಿಫಲವಾಯಿತು. ಸ್ತ್ರೀಯರಂತೆ ವೇಷ ಮರೆಸಿಕೊಂಡು ಜಟಕಾದಲ್ಲಿ ಸ್ವಯಂ ಸೇವಕರನ್ನು ಕಳುಹಿಸಬೇಕೆಂಬ ತಂತ್ರವೂ ಫಲಿಸಲಿಲ್ಲ. ಒಟ್ಟಿನಲ್ಲಿ ನಮಗೆ ಸೋಲುಂಟಾಗುವ ಸಂಭವವಿತ್ತು. ನಾವೆಲ್ಲಾ ಬಂಧನಕ್ಕೊಳಗಾಗಲು ಸಿದ್ಧರಿದ್ದೆವು. ನನ್ನ ಹೆಂಡತಿ ಗರ್ಭಿಣಿಯಿದ್ದಳು. ಆದರೂ ನಾನು ಎದುರಿಗಿದ್ದ ಸವಾಲನ್ನು ಸ್ವೀಕರಿಸಲು ಸಿದ್ಧನಾದೆನು. ಹರಾಜು ನಡೆಯುವ ಸ್ಥಳಕ್ಕೆ ಹೇಗೆ ನುಗ್ಗಬೇಕು, ಹೇಗೆ ಪ್ರತಿಭಟಿಸಬೇಕು ಎಂಬುದರ ಬಗ್ಗೆ ತುಂಬಾ ಯೋಚಿಸಬೇಕಾಯಿತು.

ನಾನು ಮನೆಗೆ ಹೋಗಿ ಮೂಲೆ ಸೇರಿದ್ದ ಪೋಲೀಸು ಸಮವಸ್ತ್ರ ಹಾಕಿಕೊಂಡು ಹಿಂಬಾಗಿಲಿನಿಂದ ಸೈಕಲ್ ತುಳಿಯುಕೊಂಡು ತಾಲ್ಲೂಕು ಕಚೇರಿಯ ಕಡೆ ಸಾಗಿದೆನು. ಪೋಲೀಸು ಅಧಿಕಾರಿಯ ಠೀವಿಯಲ್ಲಿ ತಾಲ್ಲೂಕು ಕಛೇರಿ ಪ್ರವೇಶಿಸಿದೆ. ಬ್ರಿಟಿಷ್‌ರಂತೆ ಬೆಳ್ಳಗಿದ್ದ ನನ್ನನ್ನು ನೋಡಿ ಪೋಲೀಸರೆಲ್ಲಾ ಸೆಲ್ಯೂಟ್ ಮಾಡುತ್ತಿದ್ದರು. ನಾನು ನೇರವಾಗಿ ಹರಾಜು ನಡೆಯುತ್ತಿದ್ದ ಸ್ಥಳಕ್ಕೆ ಧಾವಿಸಿದೆ. ಅಲ್ಲಿ ನಾನು ಜೇಬಿನಲ್ಲಿ ಬಚ್ಚಿಟ್ಟುಕೊಂಡಿದ್ದ ತ್ರಿವರ್ಣ ಧ್ವಜವನ್ನು ಹೊರತೆಗೆದು ಹಾರಿಸುತ್ತಾ 'ಮಹಾತ್ಮ ಗಾಂಧೀಜಿ ಕೀ ಜೈ' ಎಂದು ಜಯಕಾರ ಹಾಕಿದೆ. ಅಲ್ಲಿ ನೆರೆದಿದ್ದ ಪೋಲೀಸು ಅಧಿಕಾರಿಗಳು, ಕಾಂಟ್ರಾಕ್ಟ್‌ದಾರರು ಇದನ್ನು ಕಂಡು ನಿಬ್ಬೆರಗಾದರು. ನನ್ನ ಬಂಧನ

ವಾಯಿತು. ಒಂದು ತಿಂಗಳ ಶಿಕ್ಷೆಯಾಯಿತು. ಅಂದು ಹೆಂಡದಂಗಡಿಗಳ ಹರಾಜು ನಡೆಯಲಿಲ್ಲ."

ಹೀಗೆ ಬಳ್ಳಾರಿ ಜಿಲ್ಲೆಯಲ್ಲಿ ಈಚಲಮರ ಕಡಿಯುವುದು, ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುವುದು, ವಿದೇಶಿ ಬಟ್ಟೆಗಳನ್ನು ಸುಡುವುದು, ಪ್ರಭಾತ್ ಭೇರಿ ಹೊರಡಿಸುವುದು ಮುಂತಾದವುಗಳ ರೂಪದಲ್ಲಿ ಸವಿನಯ ಕಾಯಿದೆ ಭಂಗ ಚಳುವಳಿ ನಡೆಯಿತು. ೧೯೩೧ ರಲ್ಲಿ ಕರ್ನಾಟಕದ ಪ್ರಾಂತ ಕಾಂಗ್ರೆಸ್ ಸಮಿತಿಯು ಪ್ರಕಟಿಸಿರುವ 'ಕರ್ನಾಟಕದಲ್ಲಿ ಸತ್ಯಾಗ್ರಹದ ವರದಿಯೂ' ಎಂಬ ಗ್ರಂಥದಲ್ಲಿ ಉಲ್ಲೇಖಿಸಿರುವಂತೆ ೧೯೩೦ ರ ಸವಿನಯ ಕಾಯಿದೆ ಭಂಗ ಚಳುವಳಿಯಲ್ಲಿ ಭಾಗವಹಿಸಿ ಶಿಕ್ಷೆಗೊಳಗಾದ ಸತ್ಯಾಗ್ರಹಿಗಳ ಸಂಖ್ಯೆ ಬಳ್ಳಾರಿ ಜಿಲ್ಲೆಯಲ್ಲಿ ೭೭. ಅವರುಗಳ ಹೆಸರುಗಳು ಹೀಗಿವೆ:

ಹೆಸರು	ಶಿಕ್ಷೆ ಅವಧಿ
೧. ಸಿ.ವ್ಹಿ. ಬಾಲಾಜಿ	೩ ತಿಂ. ಕಠಿಣ ೨೦ರೂ. ದಂಡ ಅಥವಾ ೩ವಾರ ಶಿಕ್ಷೆ
೨. ಶೇಷಗಿರಿರಾವ್	-"-
೩. ಸಣ್ಣ ತಮ್ಮಪ್ಪ	೯ ತಿಂ. ೬ ವಾರ ೨೫ ರೂ. ದಂಡ ಅಥವಾ ೩ ವಾರ ಶಿಕ್ಷೆ
೪. ಚಂದ್ರಪ್ಪ	-"-
೫. ಅನ್ನದಾನಪ್ಪ	-"-
೬. ಶ್ರೀಪಾದರಾಜ	೬ ತಿಂ. ೪ ವಾರ ಕ. ೫೦ರೂ. ದಂಡ ಅಥವಾ ೨ ವಾರ ಶಿಕ್ಷೆ
೭. ಈಶ್ವರಪ್ಪ	-"-
೮. ಭೀಮಪ್ಪ	-"-
೯. ಭೀಮಾಚಾರ್ಯ	-"-
೧೦. ಕೊಟ್ಟೂರು ಬಸಪ್ಪ	-"-
೧೧. ಸಣ್ಣಪ್ಪ	-"-
೧೨. ಸಣ್ಣ ರುದ್ರಪ್ಪ	೩ ತಿಂ. ೨ ವಾರ ಕ. ಮತ್ತು ದಂಡ ಅಥವಾ ೧ವಾರ ಶಿಕ್ಷೆ
೧೩. ಕೊಟ್ರಪ್ಪ	-"-
೧೪. ಗುರುಬಸಪ್ಪ	೩ ತಿಂ. ೪ ವಾರ ೫೦ ರೂ. ದಂಡ
೧೫. ಗುರುಪಾದಪ್ಪ	೩ ತಿಂ. ೨ ವಾರ ಕ. ಮತ್ತು ದಂಡ ಅಥವಾ ೧ ವಾರ ಶಿಕ್ಷೆ
೧೬. ನೆಲ್ಲಿಬೀಡ	-"-
೧೭. ಕರಿಯಪ್ಪ	-"-
೧೮. ಕೆ. ಕೃಷ್ಣಮೂರ್ತಿ (ರಾಜೀನಾಮೆ ಕೊಟ್ಟ ಹೆಡ್ ಕಾನ್‌ಸ್ಟೇಬಲ್)	-"-
೧೯. ಅಜ್ಜಪ್ಪ	೩ ತಿಂ. ೨ ವಾರ ಕಠಿಣ ಶಿಕ್ಷೆ
೨೦. ಹಳ್ಳಿ ಗುರುಬಸಪ್ಪಾ	೩ ತಿಂ. ೨ ವಾರ ಸಾದ ಶಿಕ್ಷೆ

೨೧. ರಾಘವ ವಿಠೋಬಪ್ಪಾ	-"-
೨೨. ಲಿಂಗಪ್ಪ	-"-
೨೩. ಕಂಪಲಿ ಕೊಟ್ರಪ್ಪ	-"-
೨೪. ಬಿ.ವ್ಹಿ. ಶೇಷಗಿರಿರಾವ್	೧ ತಿಂ. ಸಾದಾ ಶಿಕ್ಷೆ
೨೫. ಹಿ. ಗೋಪಾಲರಾವ್	-"-
೨೬. ಕೊಟ್ರಪ್ಪ ಕೆ.	-"-
೨೭. ಕೆ. ಗುರುನಾಥ	-"-
೨೮. ಜಾಂಬಾಳೇಕರ ಡಿ.ಡಿ.	೩ ತಿಂ. ೩ ವಾರ ಕಠಿಣ ಶಿಕ್ಷೆ
೨೯. ಕುಲಕರ್ಣಿ ಕೆ.ಜಿ.	-"-
೩೦. ಎ. ತಿರುಮಲರಾವ್	-"-
೩೧. ಶಾಮರಾವ್	೩ ತಿಂ. ೧ ವಾರ ಕಠಿಣ ಶಿಕ್ಷೆ
೩೨. ಜಗನ್ನಾಥರಾವ್	-"-
೩೩. ಅನಂತರಾವ್	-"-
೩೪. ಶ್ರೀಧರ	೩ ತಿಂ. ೩ ವಾರ ಕಠಿಣ ಶಿಕ್ಷೆ
೩೫. ಎ. ಪೂರ್ಣಚಾರ್ಯ	-"-
೩೬. ರುದ್ರಪ್ಪ	೧ ತಿಂ. ಕಠಿಣ ಶಿಕ್ಷೆ
೩೭. ಬಸವನಗೌಡ	-"-
೩೮. ಬೊಮ್ಮಪ್ಪ	೩ ತಿಂ. ೩ ವಾ. ಕಠಿಣ
೩೯. ಚಂದ್ರಪ್ಪ	-"-
೪೦. ಕೆ. ಬೊಮ್ಮಪ್ಪ	-"-
೪೧. ಎಮ್. ಗಿರಿ	೬ ತಿಂ. ಸಾದಾ ಶಿಕ್ಷೆ
೪೨. ಸಿದ್ದಪ್ಪ	೧ -"-
೪೩. ದಯಾನಂದ ರಾಜು	-"-
೪೪. ಕೆ. ಸೀತಾರಾಮ	೬ ತಿಂ. ಕಠಿಣ ಶಿಕ್ಷೆ
೪೫. ಮಜಲಿ	-"-
೪೬. ಅನವಟ್ಟಿ	-"-
೪೭. ಕೆ. ವಿಷ್ಣು	-"-
೪೮. ದೇವೀ ಹೊಸೂರು	-"-
೪೯. ಲಿಂಗಪ್ಪ	-"-
೫೦. ಎಂ. ಭೀಮಸೇನಾಚಾರ್ಯ	-"-
೫೧. ಟಿ. ಸುಬ್ರಹ್ಮಣ್ಯ	೧ ವರ್ಷ ಸಾದಾ ಶಿಕ್ಷೆ
೫೨. ಡಿ.ಎಚ್. ಕೃಷ್ಣರಾವ್	-"-

೫೩.	ಮುತ್ಯಾಲರಾವ್	-"-
೫೪.	ಕೆ. ಸುಬ್ರಾಯ	-"-
೫೫.	ಬಿ. ವೆಂಕಟರಾವ್	-"-
೫೬.	ಡಿ. ಗೋಪಾಲರಾವ್	-"-
೫೭.	ಸ್ವಾಮಿ ವೆಂಕಟಾಚಾರ್ಯ	-"-
೫೮.	ಆರ್. ಹನುಮಂಥರಾವ್	-"-
೫೯.	ವೆಂಕಟನಾರಾಯಣ	-"-
೬೦.	ಕೊಟ್ರಪ್ಪ	೧ ವರ್ಷ ಸಾದಾ ಶಿಕ್ಷೆ
೬೧.	ನರಸಿಂಹಮೂರ್ತಿ	-"-
೬೨.	ಪಿ. ಕೊಂಡಯ್ಯ	೬ ತಿಂ. ಕಠಿಣ
೬೩.	ಟಿ.ವ್ಹಿ. ಶೇಷಗಿರಿರಾವ್	೬ ತಿಂ
೬೪.	ಬಿ. ನರಸಿಂಹರಾವ್	-"-
೬೫.	ಬಿ.ವ್ಹಿ. ತಾಂಬ್ರಪರ್ಣಿ	-"-
೬೬.	ಆರ್. ಲಕ್ಷ್ಮಣಾಚಾರ್ಯ	-"-
೬೭.	ಪಿ.ಆರ್. ಸದಾಶಿವ	-"-
೬೮.	ಶಂಕರ ನಾರಾಯಣ	-"-
೬೯.	ಪಾರ್ಥಸಾರಥಿ	-"-
೭೦.	ಗೋವಿಂದ ಹರಹರಿ	-"-
೭೧.	ಎಮ್. ರಾಘವೇಂದ್ರರಾವ್	೧ ವರ್ಷ ಸಾದಾ ಶಿಕ್ಷೆ
೭೨.	ಕಲ್ಲಪ್ಪ ಬೆನ್ನೂರ	೧ ತಿಂ. ೧೦ ರೂ. ದಂಡ ಅಥವಾ ಒಂದು ವಾರ ಶಿಕ್ಷೆ
೭೩.	ಡಿ.ಎಚ್. ವೆಂಕೋಬರಾವ್	೧ ತಿಂ. ೨೫ ರೂ. ದಂಡ
೭೪.	ಅಮರಪ್ಪಾ ಗದಗ	೩ ತಿಂ. ೫೦ ರೂ. ದಂಡ ಅಥವಾ ೧ ತಿಂ.
೭೫.	ವಿರುಪಾಕ್ಷರಾವ್	೩ ತಿಂ. ೫೦ ರೂ.
೭೬.	ಆರ್.ವ್ಹಿ. ಕೃಷ್ಣರಾವ್	-"-
೭೭.	ವೆಂಕಟರಾಮಪ್ಪ	-"-

ಮೂಲ: 'ಸತ್ಯಾಗ್ರಹದ ವರದಿಯು' ೧೯೩೦-೩೧ ಕರ್ನಾಟಕ ಪ್ರಾಂತಿಯ ಕಾಂಗ್ರೆಸ್ ಸಮಿತಿ, ಧಾರವಾಡ, ೧.೨-೧೯೩೧, ಪು. ೩೪-೩೬

೧೯೩೪ರಲ್ಲಿ ಗಾಂಧೀಜಿಯವರ ಬಳ್ಳಾರಿ ಪ್ರವಾಸ

೧೯೩೦ರಲ್ಲಿ ಪ್ರಾರಂಭವಾದ ಸವಿನಯ ಕಾಯಿದೆ ಭಂಗ ಚಳುವಳಿಯು ೧೯೩೩ರ ಹೊತ್ತಿಗೆ ತನ್ನ ಬಿರುಸನ್ನು ಕಳೆದುಕೊಂಡಿತು. ಒಂದು ಬಗೆಯ ನಿರುತ್ಸಾಹ ದೇಶವನ್ನು ಆವರಿಸಿಕೊಂಡಿತ್ತು.

ಹಿಂದೆ ೧೯೩೦-೩೧ರ ಚಳುವಳಿಯ ಸಂದರ್ಭದಲ್ಲಿಯೂ ಸಹ ಇಂತಹ ಸಮಸ್ಯೆ ತಲೆದೋರಿತ್ತು. ತಮ್ಮ ಅನುಯಾಯಿಗಳಲ್ಲಿ ಮತ್ತು ಕಾಂಗ್ರೆಸ್ ಸ್ವಯಂ ಸೇವಕರಲ್ಲಿ ಉತ್ಸಾಹವನ್ನು ಕಾಯ್ದುಕೊಳ್ಳುವ ಸಲುವಾಗಿ ಚಳುವಳಿಯ ತೀವ್ರತೆ ಕಡಿಮೆಯಾದಾಗಲೆಲ್ಲಾ ಗಾಂಧೀಜಿಯವರು ಸಮಾಜ ಸುಧಾರಣಾ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದರು. ೧೯೩೦ ರಲ್ಲಿ ಪ್ರಾರಂಭವಾದ ಸವಿನಯ ಕಾಯಿದೆ ಭಂಗ ಚಳುವಳಿ ೧೯೩೩ ರ ಹೊತ್ತಿಗೆ ತಣ್ಣಗಾದಾಗ ಗಾಂಧೀಜಿಯವರು ವಿಧಾಯಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡರು. ಈ ಸಂದರ್ಭದಲ್ಲಿ ನಿಮ್ನವರ್ಗದವರ ಸಮಸ್ಯೆ ಗಂಭೀರ ಸ್ವರೂಪ ತಳೆದಿತ್ತು. ಬ್ರಿಟಿಷ್ ಸರ್ಕಾರವು ನಿಮ್ನವರ್ಗಗಳಿಗೆ ಪ್ರತ್ಯೇಕ ಮತಕ್ಷೇತ್ರವನ್ನು ನೀಡುವ ತೀರ್ಮಾನ ಮಾಡಿತ್ತು. ಇದನ್ನು ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್‌ರವರು ಸ್ವಾಗತಿಸಿದ್ದರು. ಆದರೆ ಪ್ರತ್ಯೇಕ ಮತಕ್ಷೇತ್ರವನ್ನು ಒದಗಿಸುವುದು ವಿಚ್ಛಿದ್ರಕಾರಿಯಾದೀತೆಂಬ ಭಯದಿಂದ ಗಾಂಧೀಜಿಯವರು ಸರ್ಕಾರದ ನೀತಿಯನ್ನು ವಿರೋಧಿಸಿದರು. ಗಾಂಧೀಜಿ ಮತ್ತು ಅಂಬೇಡ್ಕರ್ ನಡುವೆ ಪೂನಾ ಒಪ್ಪಂದ ಏರ್ಪಟ್ಟು ಪ್ರತ್ಯೇಕ ಮತಕ್ಷೇತ್ರದ ಸಮಸ್ಯೆ ಬಗೆಹರಿಯಿತು. ಈ ಘಟನೆಯಿಂದಾಗಿ ಗಾಂಧೀಜಿಯವರು ನಿಮ್ನವರ್ಗದ ಸಮಸ್ಯೆಯನ್ನು ಕೈಗೆತ್ತಿಕೊಂಡರು.

ಸವಿನಯ ಕಾಯಿದೆ ಭಂಗ ಚಳುವಳಿಯನ್ನು ಅಧಿಕೃತವಾಗಿ ನಿಲ್ಲಿಸಿ ಗಾಂಧೀಜಿಯವರು ಹರಿಜನ ಸುಧಾರಣಾ ಕಾರ್ಯದಲ್ಲಿ ಮಗ್ನರಾದರು. ಅಸ್ಪೃಶ್ಯತಾ ನಿವಾರಣೆ, ಹರಿಜನರಿಗೆ ದೇವಾಲಯ ಪ್ರವೇಶ, ಕೆರೆ-ಬಾವಿಗಳಲ್ಲಿ ನೀರು ಬಳಸಲು ಹರಿಜನರಿಗೆ ಅವಕಾಶ, ಹರಿಜನ ಮಕ್ಕಳ ಶಿಕ್ಷಣ ಮುಂತಾದ ಕಾರ್ಯಕ್ರಮಗಳನ್ನು ಗಾಂಧೀಜಿ ಕೈಗೊಂಡರು. ಗಾಂಧೀಜಿಯವರಿಗೆ ಹರಿಜನರ ಸಮಸ್ಯೆಗಳ ನಿವಾರಣೆ ಹಾಗೂ ಸ್ವಾತಂತ್ರ್ಯ ಹೋರಾಟ ಬೇರೆ ಬೇರೆಯಾಗಿರಲಿಲ್ಲ. ಪೂನಾ ಒಪ್ಪಂದದ ತರುವಾಯ ಹರಿಜನರ ಸುಧಾರಣೆ ಕಾರ್ಯಕ್ರಮವನ್ನು ಗಾಂಧೀಜಿಯವರು ಗಂಭೀರವಾಗಿ ಕೈಗೆತ್ತಿಕೊಂಡರು.

೧೯೩೪ರಲ್ಲಿ ಗಾಂಧೀಜಿಯವರು ದೇಶಾದ್ಯಂತ 'ಹರಿಜನ ನಿಧಿ' ಸಂಗ್ರಹಕ್ಕಾಗಿ ಪ್ರವಾಸ ಮಾಡಿದರು. ಈ ಪ್ರವಾಸದ ಕಾಲದಲ್ಲಿ ಮಾರ್ಚ್ ೨ ಮತ್ತು ೩, ೧೯೩೪ ರಂದು ಗಾಂಧೀಜಿಯವರು ಬಳ್ಳಾರಿ ಜಿಲ್ಲೆಯ ಪ್ರವಾಸ ಕೈಗೊಂಡರು.

ದಾವಣಗೆರೆಯಿಂದ ಬಳ್ಳಾರಿಗೆ ಪ್ರಯಾಣ

ಗಾಂಧೀಜಿಯವರ ಪ್ರವಾಸ ಕಾರ್ಯಕ್ರಮದಂತೆ ಅವರು ದಾವಣಗೆರೆಯಿಂದ ಬಳ್ಳಾರಿಗೆ ಬರಬೇಕಾಗಿತ್ತು. ಗಾಂಧೀಜಿಯವರ ಈ ಪ್ರವಾಸಕ್ಕಾಗಿ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬನ್ನಿಕಲ್ಲು ಗ್ರಾಮದ ವೀರಾಪುರದ ಸಾಹುಕಾರ್ ಈಶ್ವರಪ್ಪನವರು ಹೊಸದಾಗಿ ಕಾರೊಂದನ್ನು ಕೊಂಡುಕೊಂಡು ತಾವೇ ವಾಹನ ಚಾಲಕರಾಗಿ ಗಾಂಧೀಜಿಯವರನ್ನು ದಾವಣಗೆರೆಯಿಂದ

ಬಳ್ಳಾರಿಗೆ ಕರೆದುಕೊಂಡು ಬಂದರು. ಈ ಸೇವೆಯನ್ನು ಗುರುತಿಸಿದ ಗಾಂಧೀಜಿಯವರು ಸಾಹುಕಾರ ಈಶ್ವರಪ್ಪನವರಿಗೆ ತಮ್ಮ ಸ್ವಹಸ್ತದಿಂದ 'ಕೃತಜ್ಞತೆ' ಸಲ್ಲಿಸಿ ಒಂದು ಪತ್ರ ನೀಡಿದರು. ಆ ಪತ್ರವು ಇಂದಿಗೂ ಈಶ್ವರಪ್ಪನವರ ಮನೆಯಲ್ಲಿ ನೋಡಲು ಲಭ್ಯವಿದೆ. ಗಾಂಧೀಜಿಯವರು ಬರೆದು ಕೊಟ್ಟ ಪತ್ರದ ಒಕ್ಕಣೆ ಹೀಗಿದೆ:

> Virapura Eshwarappa placed his car at my disposal from Davanagere to Bellary and drove the party himself enroute skillfully through difficult country. I am much obliged to him for his generous service.
>
> Bellary- 3.3.1934 M.K. Gandhi
>
> Signature

ಗಾಂಧೀಜಿ ಚಿಗಟೇರಿಗೆ ಬರಲಿಲ್ಲ

ಚಿಗಟೇರಿಯು ಹರಪನಹಳ್ಳಿ ತಾಲೂಕಿನಲ್ಲಿರುವ ಒಂದು ಸಣ್ಣ ಊರು. ಮುದೇನೂರು ಕೊಟ್ರಬಸಪ್ಪ ಹಾಗೂ ಅವರ ಪುತ್ರ ಪ್ರಖ್ಯಾತ ಜಾನಪದ ವಿದ್ವಾಂಸ ಮುದೇನೂರು ಸಂಗಣ್ಣನವರಿಂದ ಚಿಗಟೇರಿ ಇಡೀ ಕರ್ನಾಟಕದಲ್ಲಿ ಖ್ಯಾತಿ ಪಡೆದಿದೆ. ಮುದೇನೂರು ಕೊಟ್ರಬಸಪ್ಪನವರು ರಾಷ್ಟ್ರೀಯ ಮನೋಭಾವವುಳ್ಳವರಾಗಿದ್ದರು. ಇವರು ಅಪ್ಪಟ ಕಾಂಗ್ರೆಸ್ಸಿಗರಾಗಿದ್ದರು. ೧೯೩೮ರಲ್ಲಿ ಹರಿಪುರದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದರು. ನೇತಾಜಿ ಸುಭಾಸ್ ಚಂದ್ರಬೋಸ್‌ರವರ ಉಗ್ರವಾದಿ ಮನೋಭಾವದಿಂದ ಇವರು ಹೆಚ್ಚು ಪ್ರಭಾವಿತಗೊಂಡಿದ್ದರು. ಹರಪನಹಳ್ಳಿಯ ಇಜಾರಿ ವಸುಪಾಲಪ್ಪನವರ ಆಪ್ತರಾಗಿದ್ದ ಇವರು ಜನಾನುರಾಗಿಗಳಾಗಿದ್ದರು.

ಮಹಾತ್ಮ ಗಾಂಧೀಜಿಯವರ ಬಳ್ಳಾರಿ ಜಿಲ್ಲಾ ಪ್ರವಾಸ ನಿಗದಿಯಾದ ಕೂಡಲೆ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ದುರೀಣರನ್ನು ಸಂಪರ್ಕಿಸಿ ಕೊಟ್ರಬಸಪ್ಪನವರು ಗಾಂಧೀಜಿಯವರ ಪ್ರವಾಸ ಕಾರ್ಯಕ್ರಮದಲ್ಲಿ ಚಿಗಟೇರಿಯ ಭೇಟಿಯನ್ನು ಸೇರಿಸುವಂತೆ ವಿನಂತಿಸಿಕೊಂಡಿದ್ದರು. ಈ ವಿಶೇಷ ಕಾರ್ಯಕ್ರಮಕ್ಕಾಗಿ ಕೊಟ್ರಬಸಪ್ಪನವರು ತಮ್ಮ ಸ್ವಂತ ಹಣದಲ್ಲಿ ಹರಪನಹಳ್ಳಿ-ಕೊಟ್ಟೂರು ಮುಖ್ಯ ರಸ್ತೆಯ ಕ್ರಾಸ್ ನಿಂದ ಚಿಗಟೇರಿಯವರೆಗೆ ರಸ್ತೆಯನ್ನು ನಿರ್ಮಿಸಿದ್ದರು.

ದುರದೃಷ್ಟದ ಸಂಗತಿಯೆಂದರೆ ಕರ್ನಾಟಕ ಕಾಂಗ್ರೆಸ್ ಸಮಿತಿಯ ಮುಂದಾಳುಗಳು ಗಾಂಧೀಜಿಯವರ ಬಳ್ಳಾರಿ ಪ್ರವಾಸದಲ್ಲಿ ಚಿಗಟೇರಿಯನ್ನು ಸೇರಿಸಿರಲಿಲ್ಲ. ಗಾಂಧೀಜಿಯವರು ಪ್ರವಾಸ ಕೈಗೊಂಡ ದಿನ ಅವರ ಸ್ವಾಗತಕ್ಕಾಗಿ ಚಿಗಟೇರಿಯ ಗ್ರಾಮವಾಸಿಗಳು ಹರಪನಹಳ್ಳಿ-

ಕೊಟ್ಟೂರು ರಸ್ತೆಯ ಚಿಗಟೇರಿ ಕ್ರಾಸ್ ಬಳಿ ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದರು. ಹರಪನಹಳ್ಳಿ ಕಾರ್ಯಕ್ರಮ ಮುಗಿಸಿಕೊಂಡು ಗಾಂಧೀಜಿಯವರ ವಾಹನ ಚಿಗಟೇರಿ ಕ್ರಾಸ್ ಬಳಿ ಬಂದಾಗ ಜನರು ಗಾಂಧೀಜಿಯರವನ್ನು ತಮ್ಮೂರಿಗೆ ಸ್ವಾಗತಿಸಲು ಹರ್ಷೋದ್ಗಾರ ಮಾಡತೊಡಗಿದರು. ಆದರೆ ಅತ್ಯಂತ ಶಿಸ್ತುಬದ್ಧ ಸಿಪಾಯಿಯಾಗಿದ್ದ ಗಾಂಧೀಜಿಯವರು ತಮ್ಮ ಪೂರ್ವನಿರ್ಧರಿತ ಕಾರ್ಯಕ್ರಮದ ಪಟ್ಟಿಯಲ್ಲಿ ಚಿಗಟೇರಿ ಸೇರದೆ ಇರುವುದರಿಂದ ತಾವು ಅಲ್ಲಿಗೆ ಬರಲು ನಿರಾಕರಿಸಿದರು. ತಮ್ಮ ಪ್ರವಾಸ ಕಾರ್ಯಕ್ರಮದಲ್ಲಿ ಉಂಟಾದ ಈ ಪ್ರಮಾದಕ್ಕೆ ಗಾಂಧೀಜಿಯವರು ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಚಿಗಟೇರಿ ಜನತೆಯನ್ನು ಮತ್ತು ಇಂತಹ ಕಾರ್ಯಕ್ರಮಕ್ಕಾಗಿ ತೀವ್ರ ಸಿದ್ಧತೆ ನಡೆಸಿದ್ದ ಕೊಟ್ರಬಸಪ್ಪನವರನ್ನು ಸಮಾಧಾನಪಡಿಸಲು ಗಾಂಧೀಜಿಯವರು ಆರ್.ಆರ್. ದಿವಾಕರ ಮತ್ತು ಗಂಗಾಧರರಾವ್ ದೇಶಪಾಂಡೆಯವರನ್ನು ಕಳುಹಿಸಿಕೊಟ್ಟರು. ಜನಸ್ತೋಮ ಗಾಂಧೀಜಿಯವರ ವಾಹನವನ್ನು ಮುಂದೆ ಬಿಡಲು ಸಿದ್ಧವಿರಲಿಲ್ಲ. ಶಿಸ್ತಿನ ಸಿಪಾಯಿಯಾಗಿದ್ದ ಗಾಂಧೀಜಿಯವರು ಪೂರ್ವನಿರ್ಧರಿತ ಕಾರ್ಯಕ್ರಮದ ಪಟ್ಟಿಯಲ್ಲಿ ಇಲ್ಲದ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲವೆಂದು ತಿಳಿಸಿ ಕಾರಿನಿಂದ ಇಳಿದು ರಸ್ತೆ ಬದಿಯ ಮರದ ಬುಡದಲ್ಲಿ ಕುಳಿತು ಬಿಟ್ಟರು.

ಕಾಂಗ್ರೆಸ್ ನಾಯಕರಿಗೆ ಚಿಗಟೇರಿ ಜನಸ್ತೋಮವನ್ನು ಸಮಾಧಾನ ಪಡಿಸುವುದು ಸುಲಭದ ಕೆಲಸವಾಗಿರಲಿಲ್ಲ. ಈ ಎಲ್ಲಾ ಪ್ರಮಾದದಿಂದ ಬಹಳ ಅಸಮಧಾನಗೊಂಡಿದ್ದ ಮುದೇನೂರು ಕೊಟ್ರಬಸಪ್ಪನವರು 'ಹರಿಜನ ನಿಧಿ'ಗೆ ಕಾಣಿಕೆ ನೀಡಲು ನಿರಾಕರಿಸಿದರು.

ಮುಂದೆ ಅವರು ಸಮಾಧಾನಗೊಂಡರು. ಬಿಹಾರದ ಬರಗಾಲ ಪರಿಹಾರ ನಿಧಿಗೆ ಹಣ ಸಂಗ್ರಹಿಸಲು ಬಾಬು ರಾಜೇಂದ್ರ ಪ್ರಸಾದ್, ದಿವಾಕರ, ಗಂಗಾಧರರಾವ್ ದೇಶಪಾಂಡೆ ಮುಂತಾದವರು ಭೇಟಿ ನೀಡಿದಾಗ ಕೊಟ್ರಬಸಪ್ಪನವರು ತಮ್ಮ ಸ್ವಂತ ಕಾಣಿಕೆ ರೂ.೨೫೦.೦೦ ಹಾಗೂ ಜನರಿಂದ ಸಂಗ್ರಹಿಸಿದ ರೂ.೨೦೦.೦೦ ಕಾಣಿಕೆಯನ್ನು ನೀಡಿದರು.

೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿ ಸಂದರ್ಭದಲ್ಲಿ ಮುದೇನೂರು ಕೊಟ್ರಬಸಪ್ಪನವರ ಮನೆಯು ಭೂಗತ ಚಳುವಳಿಗಾರರ ಆಶ್ರಯದಾಣವಾಗಿತ್ತು. ಇವರು ಜಿಲ್ಲಾ ಬೋರ್ಡಿನ ಸದಸ್ಯರಾಗಿ ಅನೇಕ ಜನಹಿತ ಕಾರ್ಯಗಳನ್ನು ಮಾಡಿದರು. ಇವರೊಬ್ಬ ಕಟ್ಟಾ ಕಾಂಗ್ರೆಸ್ಸಿಗರಾಗಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಮದರಾಸು ಪ್ರಾಂತದ ಮೇಲ್ಮನೆ ಚುನಾವಣೆಯ ಸಂದರ್ಭದಲ್ಲಿ ಎಷ್ಟೇ ಒತ್ತಡ ಬಂದರೂ ಸಹ ತಮ್ಮ ಆತ್ಮೀಯರಾಗಿದ್ದ ವೈ. ಮಹಾಬಲೇಶ್ವರಪ್ಪನವರಿಗೆ ಮತ ನೀಡದೇ ಇವರು ಕಾಂಗ್ರೆಸ್ ಅಭ್ಯರ್ಥಿ ಬೇಲ್ಲೂಣ ಭೀಮರಾವ್ ರವರಿಗೆ ಮತ ನೀಡಿ ಗೆಲ್ಲಿಸಿದ್ದರು. ಆ ಚುನಾವಣೆಯಲ್ಲಿ ಮಹಾಬಲೇಶ್ವರಪ್ಪನವರು ಒಂದೇ ಒಂದು ಮತದ ಅಂತರದಿಂದ ಸೋತರು ಎನ್ನಲಾಗಿದೆ.

ಕರ್ನಾಟಕ ಏಕೀಕರಣಕ್ಕಾಗಿಯೂ ಸಹ ಇವರು ಮಡಿದರು. ಬಳ್ಳಾರಿಯನ್ನು ಕರ್ನಾಟಕದಲ್ಲಿ

ಉಳಿಸಿಕೊಳ್ಳುವ ಹೋರಾಟದಲ್ಲಿ ಇವರು ಜನರನ್ನು ಸಂಘಟಿಸಿದರು. ಬಳ್ಳಾರಿಯಲ್ಲಿ ನಡೆದ ಅನೇಕ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಬಳ್ಳಾರಿ ವಿಲೀನದ ಪ್ರಶ್ನೆಯನ್ನು ಕಾರಣ ಮಾಡಿಕೊಂಡು ಇವರು ತಮ್ಮ ಜಿಲ್ಲಾ ಬೋರ್ಡ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು.

ಹರಪನಹಳ್ಳಿ, ಕೊಟ್ಟೂರು, ಕೂಡ್ಲಿಗಿಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿ ಅಂದು ರಾತ್ರಿ ಗಾಂಧೀಜಿಯವರು ಸಂಡೂರಿನಲ್ಲಿ ಡಾಕ್ಟರ್ ಎಸ್.ಬಿ. ಶರಾಪ್‌ರವರ ಮನೆಯಲ್ಲಿ ತಂಗಿದ್ದರು. ಗಾಂಧೀಜಿಯವರು ತಮ್ಮ ಪ್ರವಾಸ ಕಾಲದಲ್ಲಿ ಕೊಟ್ಟೂರಿನಲ್ಲಿ ಗೊರ್ಲಿ ಶರಣಪ್ಪ ಮತ್ತು ಅವರ ಸಂಗಡಿಗರು ಸ್ಥಾಪಿಸಿದ್ದ 'ದೀನ ಸೇವಾಶ್ರಮ' ಕಟ್ಟಡದ ನಿರ್ಮಾಣಕ್ಕೆ ಅಡಿಗಲ್ಲನ್ನಿಟ್ಟರು.

ಸಂಡೂರಿನ ಸಂಸ್ಥಾನದ ಮಹಾರಾಜರಾಗಿದ್ದ ಶ್ರೀ ಯಶವಂತರಾವ್ ಘೋರ್ಪಡೆಯವರ ಹರಿಜನಸೇವೆ, ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶ ನೀಡಿರುವುದು ಮುಂತಾದ ಪ್ರಗತಿಪರ ನೀತಿಗಳನ್ನು ಶ್ಲಾಘಿಸಿದರು. ಮರುದಿನ ೩-೩-೧೯೩೪ ರಂದು ಪ್ರಾತಃಕಾಲ ಪ್ರಾರ್ಥನೆ ಮುಗಿದ ಮೇಲೆ ಗಾಂಧೀಜಿಯವರು ಬಳ್ಳಾರಿಗೆ ಪ್ರಯಾಣ ಬೆಳೆಸಿದರು. ಸಂಡೂರು ಮತ್ತು ಬಳ್ಳಾರಿ ನಡುವಣ ಮಾರ್ಗದ ಮಧ್ಯದಲ್ಲಿ ಕುರುಗೋಡು ಗ್ರಾಮದಲ್ಲಿ ಒಂದು ಕಾರ್ಯಕ್ರಮವನ್ನು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಏರ್ಪಡಿಸಿದ್ದರು. ಆದರೆ ಗಾಂಧೀಜಿಯವರ ಮೂಲ ಕಾರ್ಯಕ್ರಮ ಪಟ್ಟಿಯಲ್ಲಿ ಕುರುಗೋಡಿನ ಕಾರ್ಯಕ್ರಮದ ಪ್ರಸ್ತಾಪ ಇರಲಿಲ್ಲ. ಈ ಬಗ್ಗೆ ಗಾಂಧೀಜಿಯವರು ಮೂಲ ಕಾರ್ಯಕ್ರಮದ ಪಟ್ಟಿಯಲ್ಲಿ ಇಲ್ಲದ ಕುರುಗೋಡು ಕಾರ್ಯಕ್ರಮವನ್ನು ಏಕೆ ಸೇರಿಸಿದಿರಿ ಎಂದು ವಿಚಾರಿಸಿದರು. ಹರಿಜನರ ಸುಧಾರಣಾ ಕಾರ್ಯ ಕ್ರಮಕ್ಕೆ ಇದರಿಂದ ಪ್ರೇರಣೆ ದೊರೆಯುತ್ತದೆ ಹಾಗೂ ಹೆಚ್ಚಿನ ದೇಣಿಗೆ ಸಂಗ್ರಹವಾಗುತ್ತದೆ ಎಂಬ ಕಾರಣದಿಂದ ಕುರುಗೋಡಿನ ಕಾರ್ಯಕ್ರಮ ಏರ್ಪಡಿಸಲಾಗಿದೆಯೆಂದು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ವಿವರಣೆ ನೀಡಿದರು. ಇದಕ್ಕೆ ಉತ್ತರಿಸಿದ ಗಾಂಧೀಜಿ ಧ್ಯೇಯಗಳು, ನಿಯಮಗಳು ಮುಖ್ಯವೆಂದು, ಹಣ ಸಂಗ್ರಹವೇ ಮುಖ್ಯವಲ್ಲವೆಂದೂ ವಿವರಿಸಿದರು. ಕುರುಗೋಡಿನಲ್ಲಿ ಗಾಂಧೀಜಿ ಕಾರ್ಯಕ್ರಮ ನಡೆಯಲಿಲ್ಲ.

ಬಳ್ಳಾರಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಗಾಂಧೀಜಿಯವರು ಹೀಗೆ ನುಡಿದರು:

> ಹರಿಜನರ ದೇವಾಲಯ ಪ್ರವೇಶವನ್ನು ಸನಾತನಿಗಳು ವಿರೋಧಿಸುವ ಅಗತ್ಯವಿಲ್ಲ. ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶ ನೀಡಬೇಕೆಂದು ನಾನು ವಿನಂತಿಸಿಕೊಳ್ಳುತ್ತಿದ್ದೇನೆ. ಅದನ್ನು ಬಲವಂತದಿಂದ ಅಥವಾ ಒತ್ತಾಯದಿಂದ ಜನರ ಮೇಲೆ ಹೇರುವುದಿಲ್ಲ. ಪರಸ್ಪರ ಅರಿತುಕೊಂಡು ಹರಿಜನರ ಸೇವೆಗೆ ಬಳ್ಳಾರಿಯ ಸನಾತನಿಗಳು ಮುಂದಾಗಬೇಕು. ತಾನು ಸಂಗ್ರಹಿಸುವ ಹರಿಜನ ನಿಧಿಯಿಂದ ದೇವಾಲಯಗಳನ್ನು ಕಟ್ಟುವುದಿಲ್ಲ. ಪ್ರತಿಯಾಗಿ ಹರಿಜನ ಮಕ್ಕಳ ಶಿಕ್ಷಣಕ್ಕಾಗಿ ಬಳಸಲಾಗುವುದು".

ಬಳ್ಳಾರಿಯಿಂದ ರೈಲಿನಲ್ಲಿ ಗಾಂಧೀಜಿಯವರು ಹುಬ್ಬಳ್ಳಿಗೆ ಪ್ರಯಾಣ ಬೆಳೆಸಿದರು. ಮಾರ್ಗ ಮಧ್ಯದಲ್ಲಿ ಹೊಸಪೇಟೆ ನಗರದಲ್ಲಿ ಕೆಲವು ನಿಮಿಷಗಳ ಕಾಲ ತಂಗಿ ಸಾರ್ವಜನಿಕ ಸಭೆಯೊಂದರಲ್ಲಿ ಭಾಗವಹಿಸಿದರು. ಅಲ್ಲಿ ಕೇವಲ ೨ ನಿಮಿಷ ನಡೆದ ಕಾರ್ಯಕ್ರಮದಲ್ಲಿ 'ಅಸ್ಪೃಶ್ಯತೆಯನ್ನು ಬೇರು ಸಹಿತ ಕಿತ್ತು ಹಾಕಬೇಕು' ಎಂಬ ಒಂದೇ ಒಂದು ವಾಕ್ಯದ ಸಂದೇಶ ನೀಡಿ ಬೆಲ್ಲದ ಚೆನ್ನಪ್ಪ, ಅಸುಂಡಿ ತಿರುಮಲರಾವ್ ಮುಂತಾದ ಕಾರ್ಯಕರ್ತರು ಸಂಗ್ರಹಿಸಿದ್ದ 'ನಿಧಿ' ಯನ್ನು ಸ್ವೀಕರಿಸಿ ತಮ್ಮ ಪ್ರಯಾಣ ಮುಂದುವರಿಸಿದರು.

ವೈಯಕ್ತಿಕ ಚಳುವಳಿ

ಸವಿನಯ ಕಾಯಿದೆ ಭಂಗ ಚಳುವಳಿಯು ನೀರಸವಾದ ಮೇಲೆ ಗಾಂಧೀಜಿಯವರು ಹರಿಜನರ ಸಮಸ್ಯೆಗಳ ಪರಿಹಾರದ ಕಡೆಗೆ ಹೆಚ್ಚು ಗಮನ ಹರಿಸಿದರು. ೧೯೪೦-೪೧ ರಲ್ಲಿ ಗಾಂಧೀಜಿಯವರು 'ವ್ಯಕ್ತಿ ಸತ್ಯಾಗ್ರಹ' ಕೈಗೊಳ್ಳುವಂತೆ ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡಿದರು. ಇದು ಸಾಮೂಹಿಕ ಚಳುವಳಿಯಾಗಿರಲಿಲ್ಲ. ಆಯ್ದ ನಾಯಕರು ಮತ್ತು ಕಾಂಗ್ರೆಸ್ ಕಾರ್ಯಕರ್ತರು ಬಹಿರಂಗವಾಗಿ ಯುದ್ಧ ವಿರೋಧಿ ಘೋಷಣೆ ಕೂಗಿ ಬಂಧನಕ್ಕೊಳಗಾಗುವುದೇ ವ್ಯಕ್ತಿ ಸತ್ಯಾಗ್ರಹವಾಗಿತ್ತು. ಯುದ್ಧ ಪ್ರಯತ್ನಗಳಿಗೆ ದಕ್ಕೆಯಾಗದಂತೆ ಸರ್ಕಾರದ ನೀತಿಯನ್ನು ಪ್ರತಿಭಟಿಸುವುದು ಈ ಸತ್ಯಾಗ್ರಹದ ವಿಶಿಷ್ಟತೆಯಾಗಿತ್ತು. ದೇಶದ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏಕಪಕ್ಷೀಯವಾಗಿ ಭಾರತವನ್ನು ಯುದ್ಧಕ್ಕೆ ತಳ್ಳಿದ ವಸಾಹತುಶಾಹಿ ಬ್ರಿಟಿಷ್ ಸರ್ಕಾರದ ಕ್ರಮದಿಂದ ಜನರು ರೊಚ್ಚಿಗೆದ್ದಿದ್ದರು.

ವ್ಯಕ್ತಿ ಸತ್ಯಾಗ್ರಹ ನಡೆಸಿ ಬಂಧನಕ್ಕೊಳಗಾದ ಬಳ್ಳಾರಿ ಜಿಲ್ಲೆಯ ಸತ್ಯಾಗ್ರಹಿಗಳ ವಿವರ ಹೀಗಿದೆ.

ಶ್ರೀಯುತರುಗಳಾದ,

ಜಿ.ಎಂ. ಅಜ್ಜಯ್ಯ. ಬೆಣಕಲ್, ಹಗರಿಬೊಮ್ಮನ ಹಳ್ಳಿ. (ತಾ)
ಅಡವಿಗೌಡ ಕೊಟ್ಟೂರು. ಕೂಡ್ಲಿಗಿ (ತಾ)
ಗುರುಲಿಂಗಪ್ಪ. ಟಿ.ಎಸ್. ಕೊಟ್ಟೂರು ಕೂಡ್ಲಿಗಿ (ತಾ)
ಬಸವನ ಗೌಡ ಟಿ. — —
ರಾಮಶೆಟ್ಟಿ. ಎಸ್. — —
ಶರಣಪ್ಪ ಗೊರ್ಲಿ — —
ಸಿದ್ಧಪ್ಪ ಅಬಲೂರು — —
ಸಿದ್ಧಲಿಂಗಪ್ಪ ಬಣಕಾರ — —
ಹನುಮಪ್ಪ ಚಲವಾದಿ — —

ಕಲ್ಕಣೆ ಶಿವರುದ್ರಪ್ಪ	ಬಳ್ಳಾರಿ,	ಬಳ್ಳಾರಿ (ತಾ)
ರಾಮಾಚಾರ್ಯ.ಎಸ್. ಕೆ.	—	—
ಬಡರತ್ತಿ ವೆಂಕೋಬರಾವ್.	—	—
ಹಾಲಹರವಿ ಸೀತಾರಾಮ ರೆಡ್ಡಿ	—	—
ದೇಸಾಯಿ. ಎಸ್. ವಿ. ಶಂಕರಲಿಂಗ	ಆಶ್ರಮ. ಅರಸೀಕೆರೆ,	ಹರಪನಹಳ್ಳಿ (ತಾ)
ಸಿದ್ದಪ್ಪ. ಪಿ. ಕಂಚಿಕೆರೆ		—
ಸಿದ್ದಪ್ಪ ಮಡಿವಾಳ. ಹರಾಳು	ಕೂಡ್ಲಿಗಿ ತಾಲ್ಲೂಕು	
ರೇವಪ್ಪ ಹರಾಳು,	—	
ಬಸವನ ಗೌಡ ದೇಸಾಯಿ. ಹರಾಳು	—	
ಬಸಪ್ಪ. ಎಚ್. ಮಾಲಹಳ್ಳಿ	—	
ನೆಲ್ಲುಕುದ್ರಿ ರೇವಪ್ಪ. ಹರಾಳು	—	
ಕಜ್ಜಿ ಸಣ್ಣಲಿಂಗಪ್ಪ ಬಣಕಾರ	—	
ಕೊಟ್ಟೂರು ಮಾದೇವಪ್ಪ. ದಾಸನಪುರ	—	
ಮುದುಕಪ್ಪ ಬಿ. ದಾಸನಪುರ	—	
ಕೊಂಡರೆಡ್ಡಿ. ಎ. ಕಣೆಕಲ್ಲು	—	
ಗೆಣೆಕೆಹಾಳ್ ಭೀಮಪ್ಪ, ರಾಮಸಾಗರ,	ಹೊಸಪೇಟೆ ತಾಲ್ಲೂಕು	
ಡಾ। ಆರ್. ನಾಗನಗೌಡ. ಹೊಸಪೇಟೆ,	—	
ದಳವಾಯಿ ಅಂಬಣ್ಣ. ಅನಂತಶಯನ ಗುಡಿ,	—	
ಪಾಟೀಲ್ ಮರಿಸ್ವಾಮಯ್ಯ ಮಠದ,	—	
ಬೂದಿಹಾಳ್ ಅನಂತಾಚಾರ್,	—	
ಬೆಲ್ಲದ ಚನ್ನಪ್ಪ,	—	
ಪತ್ತಿಗೊಂಡ ಗುರುನಾಥಪ್ಪ,	—	

ಎಮ್ಮಿಗನೂರು ಸತ್ಯಾಗ್ರಹಿಗಳು

ವಸಾಹತುಶಾಹಿ ಬ್ರಿಟಿಷ್ ಸರ್ಕಾರದ ಯುದ್ಧ ನೀತಿಯನ್ನು ವಿರೋಧಿಸಿ ಬಳ್ಳಾರಿ ಜಿಲ್ಲೆಯಲ್ಲಿ ಅನೇಕರು ವ್ಯಕ್ತಿ ಸತ್ಯಾಗ್ರಹ ಕೈಗೊಂಡರು. ಈ ಕಾಲಾವಧಿಯಲ್ಲಿ ವಸಾಹತುಶಾಹಿ ಬ್ರಿಟಿಷ್ ಸರ್ಕಾರದ ಯುದ್ಧ ನೀತಿಯ ವಿರುದ್ಧ ಜನ ಜಾಗೃತಿ ಉಂಟುಮಾಡಲು ಕಾಂಗ್ರೆಸ್ ಕಾರ್ಯಕರ್ತರು ಜಿಲ್ಲೆಯ ಗ್ರಾಮೀಣ ಪ್ರವೇಶದಲ್ಲಿ ಪ್ರವಾಸ ನಡೆಸಿದರು. ಯುದ್ಧ ವಿರೋಧಿ ಘೋಷಣೆ ಕೂಗಿ ಸತ್ಯಾಗ್ರಹಿಗಳು ಬಂಧನಕ್ಕೊಳಗಾದರು. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ವ್ಯಕ್ತಿ ಸತ್ಯಾಗ್ರಹದ ಸಂದರ್ಭದಲ್ಲಿ 'ಎಮ್ಮಿಗನೂರು ತಂಡ'ವೊಂದು 'ದೆಹಲಿ ಚಲೋ' ಸಾಹಸ ನಡೆಸಿತು. ಈ ತಂಡದಲ್ಲಿ ಎಂ. ಸಿದ್ದಯ್ಯ, ಎಂ.ಭೀಮರಾವ್, ಡಾ॥ ಕೃಷ್ಣಮೂರ್ತಿ, ಎಂ. ವೈ.ಸೋಮಪ್ಪ,

ಹೆಚ್.ಕದಬೂರು ವೆಂಕಟರೆಡ್ಡಿ, ರಾಘವೇಂದ್ರರಾವ್ ಮತ್ತು ವೆಂಕಣ್ಣನವರುಗಳಿದ್ದರು. ಈ ತಂಡದ ಸದಸ್ಯರೆಲ್ಲರೂ ಆದವಾನಿ ತಾಲ್ಲೂಕಿಗೆ ಸೇರಿದವರಾಗಿದ್ದರು. ಈ ತಂಡವು ತಮ್ಮ 'ದೆಹಲಿ ಚಲೋ' ಜಾಥವನ್ನು ೨೫-೧-೧೯೪೧ ರಂದು ಪ್ರಾರಂಭಿಸಿತು. ಈ ತಂಡವು ಬಳ್ಳಾರಿ, ಕರ್ನೂಲು, ಗುಂಟೂರು, ಕೃಷ್ಣ, ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ ಜಿಲ್ಲೆಗಳ ೨೧೮ ಹಳ್ಳಿಗಳಲ್ಲಿ ಪ್ರವಾಸ ಮಾಡಿ ಜನ ಜಾಗೃತಿ ಉಂಟುಮಾಡಿತು. ಪ್ರತಿಯೊಂದು ಹಳ್ಳಿಯಲ್ಲೂ ಸತ್ಯಾಗ್ರಹಿಗಳು ಬ್ರಿಟಿಷ್ ಸರ್ಕಾರದ ಯುದ್ಧ ನೀತಿಯ ವಿರುದ್ಧ ಜನರಿಗೆ ತಂಡದ ಸದಸ್ಯರು ತಿಳುವಳಿಗೆ ನೀಡಿದರು. ಗಾಂಧೀಜಿ ವಿಚಾರಗಳನ್ನು ಪ್ರಚಾರ ಪಡಿಸಿದರು. ತಮ್ಮ ಪ್ರವಾಸದ ಕಾಲದಲ್ಲಿ ತಂಡವು ವರ್ಧಾದಲ್ಲಿನ ಸೇವಾ ಗ್ರಾಮದಲ್ಲಿ ೧೧.೫.೧೯೪೨ ರಂದು ಗಾಂಧೀಜಿ ದರ್ಶನ ಪಡೆಯಿತು. ಈ ತಂಡವು ನಾಗಪುರ ತಲುಪಿದಾಗ ಬಂಧನಕ್ಕೊಳಗಾಯಿತು. ಪೋಲೀಸರು ಸತ್ಯಾಗ್ರಹಿಗಳನ್ನೆಲ್ಲಾ ಬಳ್ಳಾರಿಗೆ ಕರೆತಂದು ಬಿಡುಗಡೆ ಮಾಡಿದರು.

ಶಾಸನ ಸಭೆಗಳಲ್ಲಿ ಬಳ್ಳಾರಿ ಜಿಲ್ಲೆಯ ಪ್ರತಿನಿಧಿಗಳು

೧೯೩೦ರ ದಶಕದಲ್ಲಿ ಶಾಸನ ಸಭೆಗಳಿಗೆ ನಡೆಯುವ ಚುನಾವಣೆಗಳಲ್ಲಿ. ಕಾಂಗ್ರೆಸ್ ಭಾಗವಹಿಸಬೇಕೋ ಅಥವಾ ಭಾಗವಹಿಸಬಾರದೋ ಎಂಬುದರ ಬಗ್ಗೆ ತೀವ್ರ ಚರ್ಚೆ ನಡೆಯಿತು. ಶಾಸನ ಸಭೆಗಳನ್ನು ಪ್ರವೇಶಿಸುವುದರ ಬಗ್ಗೆ ಕಾಂಗ್ರೆಸ್ ನಲ್ಲಿ ತೀವ್ರ ಭಿನ್ನಾಭಿಪ್ರಾಯಗಳೇನಿರಲಿಲ್ಲ. ೧೯೩೩-೩೪ ರ ಸಾಲಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಗಳಲ್ಲಿ ಶಾಸನಸಭೆ ಪ್ರವೇಶದ ಬಗ್ಗೆ ಚರ್ಚೆ ನಡೆಯಿತು. ಅಂತಿಮವಾಗಿ ಶಾಸನ ಸಭೆಯನ್ನು ಪ್ರವೇಶಿಸುವುದರ ಪರವಾಗಿ ಕಾಂಗ್ರೆಸ್ ನಿರ್ಣಯ ಕೈಗೊಂಡಿತು. ೧೯೩೪ ರಲ್ಲಿ ಕೇಂದ್ರ ಅಸೆಂಬ್ಲಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಅನೇಕ ಸದಸ್ಯರು ಆಯ್ಕೆಯಾದರು. ಇದೇ ರೀತಿ ಪ್ರಾಂತ ಸರ್ಕಾರಗಳಿಗೆ ನಡೆದ ಚುನಾವಣೆಗಳಲ್ಲೂ ಕಾಂಗ್ರೆಸ್‌ನ ಸದಸ್ಯರು ಭಾಗವಹಿಸಿದರು.

ದಿನಾಂಕ ೨೦.೨. ೧೯೩೭ ರಲ್ಲಿ ಮದರಾಸು ಪ್ರಾಂತ ಶಾಸನ ಸಭೆಯ ೨೧೫ ಸ್ಥಾನಗಳಿಗೆ ಚುನಾವಣೆ ನಡೆಯಿತು. ಈ ಚುನಾವಣೆಯಲ್ಲಿ ಕಾಂಗ್ರೆಸ್ ೧೫೯ ಸ್ಥಾನಗಳನ್ನು ಗೆದ್ದು (ಶೇ ೭೪) ಬಹುಮತ ಪಡೆಯಿತು. ಮದರಾಸು ಪ್ರಾಂತ ಶಾಸನಸಭೆಗೆ ನಡೆದ ಚುನಾವಣೆಯಲ್ಲಿ ಬಳ್ಳಾರಿಯಿಂದ ಆಯ್ಕೆಯಾದ ಕಾಂಗ್ರೆಸ್ ಸದಸ್ಯರು ಕೆಳಕಂಡಂತಿದ್ದಾರೆ.

ಶ್ರೀಯುತರುಗಳಾದ ಟೇಕೂರು ಭೀಮರಾವ್, ಹಾಲಹರವಿ ಸೀತಾರಾಮರೆಡ್ಡಿ, ವಿ. ಗೋವಿಂದದಾಸ್, ಡಾ. ಲಕ್ಷ್ಮೀ ದೇವಿ. ೧೯೩೦ರಲ್ಲಿ ಬಳ್ಳಾರಿ ಜೈಲಿನಲ್ಲಿ ಜೈಲುವಾಸ ಅನುಭವಿಸಿದ್ದ ಹಾಗೂ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿ ನೀಡಿದ್ದ ಬುಲುಸು ಸಾಂಬಮೂರ್ತಿಗಳು ೧೯೩೭-೩೯ರಲ್ಲಿ ಮದರಾಸು ಶಾಸನಸಭೆಯ ಸ್ಪೀಕರ್ ಆಗಿದ್ದರು. (ಮಾದಲ ವೀರಭದ್ರರಾವ್, ೧೯೮೬ : ೨೯೮)

ಎರಡನೆ ಮಹಾಯುದ್ಧ ಪ್ರಾರಂಭವಾದಾಗ ಭಾರತದ ಪ್ರಜೆಗಳ ಹಾಗೂ ಕಾಂಗ್ರೆಸ್‌ನ ಅಭಿಪ್ರಾಯ ಕೇಳದೆ ಭಾರತವು ಯುದ್ಧದಲ್ಲಿ ಬ್ರಿಟನ್ ಪರ ಭಾಗವಹಿಸಿದ್ದನ್ನು ಘೋಷಿಸಲಾಯಿತು. ಈ ಬಗೆಯ ಏಕಪಕ್ಷೀಯ ಘೋಷಣೆಯನ್ನು ವಿರೋಧಿಸಿ ಕಾಂಗ್ರೆಸ್‌ನ ಸದಸ್ಯರೆಲ್ಲರೂ ತಮ್ಮ ಶಾಸನ ಸಭೆ ಸ್ಥಾನಗಳಿಗೆ ರಾಜೀನಾಮೆ ನೀಡಿದರು..

ಮುಂದೆ ೧೯೪೬ ರಲ್ಲಿ ಮದರಾಸು ಪ್ರಾಂತ ಶಾಸನ ಸಭೆಗೆ ಚುನಾವಣೆ ನಡೆದಾಗ ಹೊಸಪೇಟೆಯ ಬೂದಿಹಾಳು ಅನಂತಾಚಾರ್ ಅವಿರೋಧವಾಗಿ ಆಯ್ಕೆಯಾದರು. ಬೆಲ್ಲೊಣ ಭೀಮರಾವ್ ಮೇಲ್ಮನೆ ಸದಸ್ಯರಾಗಿ ಆಯ್ಕೆಯಾದರು. ಅಲ್ಲಂ ಸುಮಂಗಳಮ್ಮವರು ಮಹಿಳಾ ಪ್ರತಿನಿಧಿಯಾಗಿ ಆಯ್ಕೆಯಾದರು.

ಬಳ್ಳಾರಿ ಜಿಲ್ಲೆಯಿಂದ ೧೯೪೬ ರಲ್ಲಿ ಮದರಾಸು ಪ್ರಾಂತ ಶಾಸನ ಸಭೆಗೆ ಆಯ್ಕೆಯಾದ ಹಾಲಹರವಿ ಸೀತಾರಾಮರೆಡ್ಡಿಯವರು ಕೈಗಾರಿಕಾ ಸಚಿವರಾಗಿ ಸೇವೆ ಸಲ್ಲಿಸಿದರು. ದಲಿತ ವರ್ಗದಿಂದ ಬಂದ ಆಲೂರಿನ ಡಿ. ಗೋವಿಂದ ದಾಸ ಮದರಾಸು ಪ್ರಾಂತ ಶಾಸನ ಸಭೆಗೆ ಆಯ್ಕೆಯಾಗಿ ಹರಿಜನ ಮಕ್ಕಳ ಶಿಕ್ಷಣಕ್ಕಾಗಿ ಅಪಾರವಾಗಿ ಶ್ರಮಿಸಿದರು.

ಹೀಗೆ ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಶಾಸನ ಸಭೆಗೆ ಆಯ್ಕೆಯಾಗಿ ಅನೇಕ ಜನಪರ ಕೆಲಸ ಮಾಡಿದರು. ಹೀಗೆ ರಾಷ್ಟ್ರ ಮಟ್ಟದಲ್ಲಿ ಹಾಗೂ ಪ್ರಾಂತ ಮಟ್ಟದಲ್ಲಿ ನಡೆಯುತ್ತಿದ್ದ ಎಲ್ಲಾ ಬದಲಾವಣೆ -ಬೆಳವಣಿಗೆಗಳಿಗೆ ಬಳ್ಳಾರಿ ಜಿಲ್ಲೆಯು ಪ್ರತಿ ಸ್ಪಂದಿಸುತ್ತಾ ಬಂದಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಭಾಗ-೨

ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ನಾವು ಮೂರು ಮುಖ್ಯ ಕಾಲಘಟ್ಟಗಳನ್ನು ಗುರುತಿಸಬಹುದು.

೧. ೧೯೨೦-೨೧ ರ ಅಸಹಕಾರ ಚಳುವಳಿ
೨. ೧೯೩೦-೩೧ ರ ಸವಿನಯ ಕಾಯಿದೆ ಭಂಗ ಚಳುವಳಿ.
೩. ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿ

೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿ

ಎರಡನೆಯ ಮಹಾಯುದ್ಧವು ಭಾರತದ ರಾಜಕೀಯ ಸ್ವರೂಪ ಹಾಗೂ ಸ್ವಾತಂತ್ರ್ಯ ಹೋರಾಟದ ದಿಕ್ಕು ದಿಶೆಗಳನ್ನು ತೀವ್ರವಾಗಿ ಬದಲಾಯಿಸಿತು. ಬ್ರಿಟಿಷ್ ಸರ್ಕಾರ ಏಕಪಕ್ಷೀಯವಾಗಿ ಭಾರತವನ್ನು ಜರ್ಮನಿ ವಿರುದ್ಧ ಯುದ್ಧಕ್ಕಿಳಿದಿದೆ ಎಂದು ಘೋಷಿಸಿ ಬಿಟ್ಟಿತು. ಭಾರತೀಯರ ಅಭಿಪ್ರಾಯವನ್ನು ಕೇಳದೆ ಹಾಗೂ ಕಾಂಗ್ರೆಸ್ಸನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ

ವಸಾಹತು ಸರ್ಕಾರವು ಜರ್ಮನಿಯ ವಿರುದ್ಧ ಭಾರತವನ್ನು ಯುದ್ಧಕ್ಕಿಳಿಸಿದ ತೀರ್ಮಾನದ ವಿರುದ್ಧ ಜನ ರೊಚ್ಚಿಗೆದ್ದರು. ಯುದ್ಧದ ಉದ್ದೇಶವನ್ನು ಬ್ರಿಟಿಷ್ ಸರ್ಕಾರವು ಜನರಿಗೆ ಸ್ಪಷ್ಟಪಡಿಸಲಿಲ್ಲ. ಯುದ್ಧದ ನಂತರದ ಬ್ರಿಟನ್ ಭಾರತ ಬಗ್ಗೆ ಯಾವ ಧೋರಣೆ ತಳೆಯುತ್ತದೆ ಎಂಬುದರ ಬಗ್ಗೆಯೂ ಸ್ಪಷ್ಟ ಚಿತ್ರ ಮೂಡಲಿಲ್ಲ.

ಯುದ್ಧ ಪ್ರಯತ್ನಗಳಿಗೆ ಭಾರತದ ಪೂರ್ಣ ಸಹಕಾರವನ್ನು ಪಡೆಯದ ಬ್ರಿಟಿಷ್ ಸರ್ಕಾರವನ್ನು ಮಿತ್ರದೇಶಗಳು ಟೀಕಿಸತೊಡಗಿದವು. ಇದರಿಂದ ಭಾರತದಲ್ಲಿ ಕಾಂಗ್ರೆಸ್‌ನ ಸಹಕಾರವನ್ನು ಪಡೆಯುವುದು ಬ್ರಿಟಿಷ್ ಸರ್ಕಾರಕ್ಕೆ ಅನಿವಾರ್ಯವಾಗಿ ಬಿಟ್ಟಿತು. ಈ ಬಗ್ಗೆ ಅಮೆರಿಕೆಯು ಬ್ರಿಟಿಷ್ ಸರ್ಕಾರದ ಮೇಲೆ ತೀವ್ರ ಒತ್ತಡ ತಂದಿತು. ಈ ಬಗೆಯಲ್ಲಿ ತೀವ್ರ ಬಿಕ್ಕಟ್ಟಿಗೆ ಸಿಲುಕಿದ ಬ್ರಿಟಿಷ್ ಸರ್ಕಾರವು ಕಾಂಗ್ರೆಸ್ ಸಹಕಾರವನ್ನು ಪಡೆಯಲು ಕಾತರವಾಗಿತ್ತು. ಈ ಬಗ್ಗೆ ಕಾಂಗ್ರೆಸ್‌ನ ಜೊತೆ ಸಂಧಾನ ನಡೆಸಲು ತನ್ನ ಪ್ರತಿನಿಧಿ ಲಾರ್ಡ್ ಕ್ರಿಪ್ಸ್‌ನನ್ನು ಕಳುಹಿಸಿತು. ಕ್ರಿಪ್ಸ್ ಕಾಂಗ್ರೆಸ್‌ನ ಮುಂದಿಟ್ಟ ಸಲಹೆ-ಶಿಫಾರಸ್ಸುಗಳು ಹೀಗಿದ್ದವು.

* ಯುದ್ಧಾನಂತರ ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ ನೀಡುವುದು.
* ಬ್ರಿಟನ್‌ನ ಕಾಮನ್ ವೆಲ್ತ್‌ನಿಂದ ಭಾರತ ಬಯಸಿದರೆ ಹೊರಗುಳಿಯಬಹುದು.
* ಸಂವಿಧಾನ ರಚಿಸಲು ಒಂದು ರಾಜ್ಯಾಂಗ ಸಭೆ ರಚಿಸುವುದು.
* ಸಂವಿಧಾನದ ರಚನೆಯಾದ ಮೇಲೆ ಯಾವುದೇ ಪ್ರಾಂತವಾದರೂ ಬಯಸಿದರೆ ಭಾರತ ಒಕ್ಕೂಟದಿಂದ ಪ್ರತ್ಯೇಕಗೊಳ್ಳಬಹುದು.
* ದೇಶೀಯರಾಜ ಸಂಸ್ಥಾನಗಳು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಬಹುದು

ಲಾರ್ಡ್ ಕ್ರಿಪ್ಸ್ ತಂದಿದ್ದ ಸಲಹೆ-ಆಶ್ವಾಸನೆಗಳನ್ನು ಕಾಂಗ್ರೆಸ್ ತಿರಸ್ಕರಿಸಿತು. ಸಹಜವಾಗಿ ಕ್ರಿಪ್ಸ್‌ನ ಸಂಧಾನವು ಮುರಿದುಬಿತ್ತು. ಈಗ ಸ್ವಾತಂತ್ರ್ಯ ಚಳುವಳಿಯನ್ನು ತೀವ್ರಗೊಳಿಸುವುದು ಕಾಂಗ್ರೆಸ್‌ಗೆ ಅನಿವಾರ್ಯವಾಗಿ ಬಿಟ್ಟಿತು. ೧೯೪೨ರ ಆಗಸ್ಟ್ ೮ರ ರಾತ್ರಿ ಮುಂಬಯಿಯಲ್ಲಿ ಜರುಗಿದ ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ 'ಭಾರತ ಬಿಟ್ಟು ತೊಲಗಿ' ಚಳುವಳಿಯನ್ನು ಪ್ರಾರಂಭಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು. ಹೀಗೆ ಭಾರತದ ಸ್ವಾತಂತ್ರ್ಯ ಹೋರಾಟದ ಅಂತಿಮ ಮಜಲಾದ 'ಕ್ವಿಟ್ ಇಂಡಿಯಾ ಚಳುವಳಿ' ಪ್ರಾರಂಭವಾಯಿತು. ಆದರೆ ಸರ್ಕಾರವು ಆಗಸ್ಟ್ ೯ರ ನಸುಕಿನಲ್ಲಿಯೆ ಗಾಂಧೀಜಿ, ಪಟೇಲ್, ನೆಹರೂ ಮುಂತಾದ ಮುಂದಾಳುಗಳನ್ನು ಬಂಧಿಸಿತು. ಅನೇಕ ಕಾಂಗ್ರೆಸ್ ಕಾರ್ಯಕರ್ತರು ಭೂಗತರಾದರು. ಸರ್ಕಾರದ ದಬ್ಬಾಳಿಕೆಯನ್ನು ನಿರೀಕ್ಷಿಸಿದ್ದ ಗಾಂಧೀಜಿಯವರು "ಚಳುವಳಿಯಲ್ಲಿ ಭಾಗವಹಿಸುವ ಪ್ರತಿಯೊಬ್ಬ ಕಾರ್ಯಕರ್ತನು ಕಾಂಗ್ರೆಸ್‌ನ ಸಾಮಾನ್ಯ ನಿಯಮಗಳ ಚೌಕಟ್ಟಿನಲ್ಲಿ ತಂತಮ್ಮ ಸ್ವಂತ ವಿವೇಚನೆಯಂತೆ ಕಾರ್ಯನಿರ್ವಹಿಸಬೇಕು" ಎಂಬ ಸೂಚನೆಯನ್ನು ಚಳುವಳಿಗಾರರಿಗೆ ನೀಡಿದರು.

ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಬೆಳವಣಿಗೆಗಳ ಬಗ್ಗೆ ಕರ್ನಾಟಕವು ಸದಾ ಜಾಗೃತವಾಗಿತ್ತು. ೧೯೪೨ರ ಆಗಸ್ಟ್ ೯ರ ನಸುಕಿನಲ್ಲಿ ಕಾಂಗ್ರೆಸ್‌ನ ಮುಂದಾಳುಗಳೆಲ್ಲಾ ದಸ್ತಗಿರಿಯಾಗುತ್ತಿದ್ದಂತೆ ಇಡೀ ರಾಜ್ಯವೇ ರಣರಂಗವಾಯಿತು. ಇಡೀ ರಾಜ್ಯ- ಜನತೆ ಬ್ರಿಟಿಷ್ ವಿರೋಧಿ ಬಣವಾಗಿ ಪರಿಣಮಿಸಿತು. ಪೊಲೀಸು ಠಾಣೆಗಳು, ರೈಲು ನಿಲ್ದಾಣಗಳು, ಅಂಚೆ ಕಛೇರಿಗಳು, ದೂರವಾಣಿ ಸಂಪರ್ಕಗಳು, ಸೇತುವೆಗಳು ಮುಂತಾದವು ಚಳುವಳಿಗಾರರ ಆಕ್ರೋಶಕ್ಕೆ ಬಲಿಯಾದವು. ಸುಮಾರು ನಾಲ್ಕು ವಾರಗಳ ಕಾಲ ರೈಲು ಸಂಚಾರ ರಾಜ್ಯದಲ್ಲಿ ಸ್ತಬ್ದಗೊಂಡಿತ್ತು. ಸರ್ಕಾರವು ಎಲ್ಲಾ ಸ್ಥಳಗಳಲ್ಲೂ ಕಾಂಗ್ರೆಸ್ ಸಮಿತಿಗಳನ್ನು ನಿಷೇಧಿಸಿತು. ಕಾಂಗ್ರೆಸ್ ಕಛೇರಿಗಳನ್ನು ಮುಟ್ಟುಗೋಲು ಹಾಕಿಕೊಂಡಿತು.

ಈ ಚಳುವಳಿಯಲ್ಲಿ ದೇಶದಾದ್ಯಂತ ವಿದ್ಯಾರ್ಥಿಗಳು ಅದ್ವಿತೀಯ ಪಾತ್ರ ನಿರ್ವಹಿಸಿದರು. ಸಹಸ್ರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಗ್ರಾಮಗಳಿಗೆ ಹೋಗಿ ಕ್ವಿಟ್ ಇಂಡಿಯಾ ಚಳುವಳಿಯ ಸಂದೇಶವನ್ನು ಮತ್ತು ಗಾಂಧೀಜಿಯವರ ' ಮಾಡು ಇಲ್ಲವೇ ಮಡಿ' ಮಂತ್ರವನ್ನು ಜನರಿಗೆ ಮನವರಿಕೆ ಮಾಡಿಕೊಟ್ಟರು. ಕಾಂಗ್ರೆಸ್‌ನ ಅನೇಕ ಕಾರ್ಯಕರ್ತರು ಭೂಗತರಾಗಿ ಚಳುವಳಿಯಲ್ಲಿ ಭಾಗವಹಿಸಿದರು.

'ಕರ್ನಾಟಕ ಮಾದರಿ'

೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಕರ್ನಾಟಕದ ಜನತೆ ಅನುಸರಿಸಿದ ವಿಧಾನವು 'ಕರ್ನಾಟಕ ಮಾದರಿ' ಎಂದೇ ಹೆಸರುವಾಸಿಯಾಗಿದೆ. ಸರ್ಕಾರಿ ಖಜಾನೆಗಳನ್ನು ಲೂಟಿಮಾಡುವುದು, ಟೆಲಿಫೋನ್ ತಂತಿಗಳನ್ನು ಕತ್ತರಿಸುವುದು, ಅಂಚೆ ಪೆಟ್ಟಿಗೆಗಳನ್ನು ಲಪಟಾಯಿಸುವುದು, ಸರ್ಕಾರ ಆಸ್ತಿ-ಪಾಸ್ತಿಗಳನ್ನು ಸುಡುವುದು, ಪೊಲೀಸು ಠಾಣೆಗಳಿಂದ ಶಸ್ತ್ರಾಸ್ತ್ರಗಳನ್ನು ಅಪಹರಿಸುವುದು ಮುಂತಾದವು'ಕರ್ನಾಟಕ ಮಾದರಿ'ಯ ವಿಶಿಷ್ಟತೆಯಾಗಿದ್ದವು. ಶಾಲಾ-ಕಾಲೇಜುಗಳ ಬಹಿಷ್ಕಾರ ಸಾಮಾನ್ಯವಾಗಿಬಿಟ್ಟಿತ್ತು. ಸರ್ಕಾರಿ ಖಜಾನೆಯನ್ನು ಲೂಟಿಮಾಡುವ ಸಂದರ್ಭದಲ್ಲಿ ಪೋಲಿಸರ ಗುಂಡಿಗೆ ಬಲಿಯಾಗಿ ಮೈಲಾರ ಮಹದೇವಪ್ಪನವರು ಹುತಾತ್ಮರಾದರು.

"೧೯೪೨ ರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ನಡೆದ ಹಿಂದೆಂದೂ ಕಾಣದಂತಹ ವಿಧ್ವಂಸಕ ಕೃತ್ಯಗಳು ಕರ್ನಾಟಕ ಪ್ರಾಂತದ ಯಾವುದೋ ಒಂದು ಭಾಗಕ್ಕೆ ಸೀಮಿತ ಗೊಂಡಿರಲಿಲ್ಲ. ಅದು ಪ್ರಾಂತದ ಎಲ್ಲಾ ಜಿಲ್ಲೆಗಳಲ್ಲೂ ಏಕಕಾಲಕ್ಕೆ ಸಿಡಿಯಿತು" ಎಂದು ಸರ್ಕಾರದ ವರದಿಗಳೇ ಹೇಳುತ್ತವೆ. ಇದರಿಂದ ಕರ್ನಾಟಕದಲ್ಲಿ 'ಭಾರತ ಬಿಟ್ಟು ತೊಲಗಿ' ಚಳುವಳಿ ಎಷ್ಟು ತೀವ್ರವಾಗಿತ್ತು, ಉಗ್ರವಾಗಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಬಳ್ಳಾರಿ ಜಿಲ್ಲೆಯು ಮುಂಚೂಣಿಯಲ್ಲಿತ್ತು. 'ಕರ್ನಾಟಕ ಮಾದರಿ'ಗೆ ಬಳ್ಳಾರಿ ಜಿಲ್ಲೆಯಲ್ಲಿ ನಡೆದ 'ಭಾರತ ಬಿಟ್ಟು ತೊಲಗಿ' ಚಳುವಳಿಯು

ಪ್ರಬಲಂತ ನಿದರ್ಶನದಂತಿತ್ತು. ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಬಳ್ಳಾರಿ ಜಿಲ್ಲೆಯ ಹಳ್ಳಿಗಳು ವಿಶಿಷ್ಟ ರೀತಿಯಲ್ಲಿ ಪಾತ್ರ ನಿರ್ವಹಿಸಿದವು.

ಅಸಹಕಾರ ಚಳುವಳಿಗಿಂತ ನವಿನಯ ಶಾಸನ ಭಂಗ ಚಳುವಳಿಯು ಹೆಚ್ಚು ಜನರನ್ನು ಒಳಗೊಂಡಿತ್ತು. ೧೯೩೦ರ ಚಳುವಳಿಯಂತೂ ಅಕ್ಷರಶಃ ಜನಾಂದೋಳನವಾಗಿತ್ತು. ಭಾರತ ಬಿಟ್ಟುತೊಲಗಿ ಚಳುವಳಿಯು ಬ್ರಿಟಿಷರ ಎದೆಯನ್ನು ನಡುಗಿಸಿಬಿಟ್ಟಿತು. ಈ ಚಳುವಳಿಯ ಸಂದರ್ಭದಲ್ಲಿ ದೇಶವಾಸಿಗಳಿಗೆ ಗಾಂಧೀಜಿ ನೀಡಿದ ಕರೆ ಸ್ಫೂರ್ತಿದಾಯಕವಾಗಿತ್ತು:-

"ನಾನೊಂದು ಸಣ್ಣಮಂತ್ರವೊಂದನ್ನು ನಿಮಗೆ ನೀಡುತ್ತೇನೆ. ಇದನ್ನು ಮನಸ್ಸಿನಲ್ಲಿ ಅಚ್ಚೊತ್ತಿದಂತೆ ಇಟ್ಟುಕೊಳ್ಳಿ. ಉಸಿರಿಗೊಮ್ಮೆ ಮಂತ್ರವನ್ನು ಜಪಿಸುತ್ತಿರಿ. ಆ ಮಂತ್ರ ಯಾವುದೆಂದರೆ 'ಮಾಡು ಇಲ್ಲವೆ ಮಡಿ'. ಒಂದೋ ದೇಶವನ್ನು ಪಾರತಂತ್ರ್ಯದಿಂದ ಬಿಡುಗಡೆ ಗೊಳಿಸಬೇಕು ಇಲ್ಲವೇ ಆ ಪ್ರಯತ್ನದಲ್ಲಿ ಪ್ರಾಣಬಲಿಯಾಗಬೇಕು, ಪ್ರತಿಯೊಬ್ಬರೂ, ಸ್ತ್ರೀಯರು- ಪುರುಷರು ಈ ಕ್ಷಣದಿಂದ ಸ್ವತಂತ್ರರೆಂದು ಭಾವಿಸಿಕೊಳ್ಳಿ. ವಸಾಹತು ಶಾಹಿಯ ಭಯವನ್ನು ತೊರೆದು ಮುಕ್ತವಾಗಿ ಬದುಕು ನಡೆಸಿ".

ಭಾರತದ ಸ್ವಾತಂತ್ರ್ಯ ಹೋರಾಟದ ಅಂತಿಮಘಟ್ಟವೇ ೧೯೪೨ರ 'ಭಾರತ ಬಿಟ್ಟುತೊಲಗಿ' ಚಳುವಳಿ. ಈ ಘಟ್ಟದಲ್ಲಿ ಸ್ವಾತಂತ್ರ್ಯ ಚಳುವಳಿಯು ಉಗ್ರ ರೂಪ ತಳೆಯಿತು. ಗಾಂಧೀಜಿಯವರು ಸತ್ಯಾಗ್ರಹಿಗಳಿಗೆ 'ಮಾಡು ಇಲ್ಲವೆ ಮಡಿ' ಎಂಬ ರಣಮಂತ್ರ ನೀಡಿದರು. ಅಕ್ಷರಶಃ ದೇಶಾದ್ಯಂತ ಲಕ್ಷಾಂತರ ಸತ್ಯಾಗ್ರಹಿಗಳು ಬಂಧನಕ್ಕೊಳಗಾದರು. ಜೈಲುಗಳೆಲ್ಲಾ ಭರ್ತಿಯಾಗಿ ಬಿಟ್ಟವು. ಭಾರತದ ಸ್ವಾತಂತ್ರ್ಯ ಚಳುವಳಿಯ ಈ ಘಟ್ಟದಲ್ಲಿ ವಿದ್ಯಾರ್ಥಿಗಳು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದರು. ಇದನ್ನು ಆ ಸಂದರ್ಭದಲ್ಲಿ ಸರ್ಕಾರ ಸಿದ್ಧಪಡಿಸಿದ್ದ ರಹಸ್ಯ ದಾಖಲೆಗಳೇ ತಿಳಿಸುತ್ತವೆ. ಸ್ವಾತಂತ್ರ್ಯ ಹೋರಾಟವು ಹಿಂದೆಂದೂ ಇಲ್ಲದಷ್ಟು ವಿಧ್ವಂಸಕ ಸ್ವರೂಪ ತಳೆಯಿತು. ಬಳ್ಳಾರಿ ಜಿಲ್ಲೆಯನ್ನೇ ತೆಗೆದುಕೊಂಡರೆ ನೂರಾರು ಸ್ಥಳಗಳಲ್ಲಿ ಟೆಲಿಫೋನು ತಂತಿಗಳನ್ನು ಕತ್ತರಿಸಿ, ಟೆಲಿಫೋನು ಕಂಬಗಳನ್ನು ಉರುಳಿಸಿ ಸಂಪರ್ಕ ವ್ಯವಸ್ಥೆನ್ನು ಬುಡಮೇಲು ಮಾಡ ಲಾಯಿತು. ಪಟೇಲರು, ಶಾನುಭೋಗರು, ಕುಲಕರ್ಣಿಗಳು ಮುಂತಾದ ಸರ್ಕಾರದ ಹುದ್ದೆಗಳಲ್ಲಿದ್ದ ಗ್ರಾಮಾಂತರವಾಸಿ ಜನರು ತಮ್ಮ ಹುದ್ದೆಗಳಿಗೆ ರಾಜಿನಾಮೆ ನೀಡತೊಡಗಿದರು. ಸರ್ಕಾರವು ಅನುಸರಿಸುತ್ತಿದ್ದ ದಮನಕಾರಿ ನೀತಿಯನ್ನು ಪ್ರತಿಭಟಿಸಿ ಅನೇಕ ಗ್ರಾಮ ಪಂಚಾಯಿತಿಗಳು ನಿರ್ಣಯ ಕೈಗೊಂಡವು. ಶಾಲಾ-ಕಾಲೇಜುಗಳನ್ನು ವಿದ್ಯಾರ್ಥಿಗಳು ಪ್ರತಿನಿತ್ಯವೂ ಬಹಿಷ್ಕರಿಸ ತೊಡಗಿದರು. ಭೂಗತ ಚಟುವಟಿಕೆಗಳು ತೀವ್ರಗೊಂಡವು.

ಬಳ್ಳಾರಿ ತಾಲ್ಲೂಕಿನ ಕುರುಗೋಡು ಪಂಚಾಯಿತಿಯು ಸರ್ಕಾರದ ದಮನಕಾರಿ ನೀತಿಯನ್ನು ಪ್ರತಿಭಟಿಸಿ ೧೧.೯.೧೯೪೨ರಂದು ನಿರ್ಣಯ ಪಾಸು ಮಾಡಿತು ಹಾಗೂ ಅಂದು ಪಂಚಾಯಿತಿಯ ಬಾಗಿಲು ಮುಚ್ಚಿ ಊರಿನಲ್ಲಿ ಹರತಾಳ ಆಚರಿಸಲಾಯಿತು. ಇದನ್ನು ಸಹಿಸದ ಸರ್ಕಾರವು

ಕುರುಗೋಡು ಪಂಚಾಯಿತಿಯನ್ನು ರದ್ದು ಗೊಳಿಸಿ ೬ ತಿಂಗಳುಗಳ ಕಾಲ ಅದರ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡಿತು.

ಬಳ್ಳಾರಿ ಜಿಲ್ಲೆಯ ಎಲ್ಲಾ ೯ ತಾಲ್ಲೂಕುಗಳಲ್ಲೂ ಚಳುವಳಿ ತೀವ್ರವಾಗಿತ್ತು. ಈ ಚಳುವಳಿಯಲ್ಲಿ ಜಿಲ್ಲೆಯ ಯಾವ ತಾಲ್ಲೂಕು ಹಿಂದೆ ಬೀಳಲಿಲ್ಲ. ಸಣ್ಣ-ಪುಟ್ಟ ಗ್ರಾಮಗಳೂ ಸಹ ಚಳುವಳಿಯಲ್ಲಿ ಪಾಲುಗೊಂಡವು. ಚಳುವಳಿಗಾರರ ಮೇಲೆ ಸರ್ಕಾರವು ನಡೆಸಿದ ದೌರ್ಜನ್ಯವನ್ನು ಪ್ರತಿಭಟಿಸಿ ನಿರ್ಣಯ ಕೈಗೊಂಡ ಗ್ರಾಮ ಪಂಚಾಯಿತಿಗಳನ್ನು ವಜಾ ಮಾಡಿ ಆಡಳಿತವನ್ನು ಸರ್ಕಾರವು ತನ್ನ ವಶಕ್ಕೆ ತೆಗೆದುಕೊಂಡಿತು. ಚಳುವಳಿಯು ಎಷ್ಟು ಉಗ್ರವಾಗಿತ್ತೋ ಸರ್ಕಾರದ ದಮನಕಾರಿ ನೀತಿಯೂ ಅಷ್ಟೇ ಉಗ್ರವಾಗಿತ್ತು.

ಬಳ್ಳಾರಿ ಜಿಲ್ಲೆಯಲ್ಲಿ ನಡೆದ ೧೯೪೨ ರ ಚಲೇಜಾವ್ ಚಳುವಳಿಯಲ್ಲಿ ಸಮಾಜದ ಎಲ್ಲಾ ವರ್ಗಗಳೂ ಭಾಗವಹಿಸಿದ್ದವು. ಜಾತಿ-ಭೇದವನ್ನು ಮರೆತು ಇಡೀ ಸಮಾಜವು ಚಳುವಳಿಯಲ್ಲಿ ತನ್ನನ್ನು ತಾನು ತೊಡಗಿಸಿ ಕೊಂಡಿತ್ತು. ೧೯೪೨ ರ ಚಳುವಳಿಯು ಜಿಲ್ಲೆಯಲ್ಲಿ ವಿಧ್ವಂಸಕಾರಿಯಾಗಿತ್ತು. ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳೂ ಚಳುವಳಿಯಲ್ಲಿ ಸಕ್ರಿಯವಾಗಿದ್ದವು.

೧೧-೮-೧೯೪೨ ರಂದು ಹೊಸಪೇಟೆಯಲ್ಲಿ ಕೋರಿಶೆಟ್ಟಿ ಜಂಬಣ್ಣ, ರಾರಾವಿ ವೀರಣ್ಣ, ಅಸುಂಡಿ ತಿರುಮಲರಾವ್, ಕಟ್ಟಿ ಶ್ರೀನಿವಾಸಾಚಾರ್, ಹಿಂಡಿ ಸಿದ್ದಪ್ಪ, ಸೀರೆ ಗಣಪತಿ ಮಂತಾದ ವಿದ್ಯಾರ್ಥಿಗಳು ಶಾಲೆ ಬಹಿಷ್ಕರಿಸಿ ಹರತಾಳ ಆಚರಿಸಿದರು. ಹೊಸಪೇಟೆ ತಾಲ್ಲೂಕಿನ ನಾನಾ ಸ್ಥಳಗಳಿಗೆ ಹೋಗಿ ಇವರೆಲ್ಲಾ ಭಾಷಣ ಮಾಡಿ ಜನರನ್ನು ಹುರಿದುಂಬಿಸುತ್ತಿದ್ದರು. ವಲ್ಲಭಾಪುರ, ನಾರಾಯಣದೇವರಕೆರೆ, ತಂಬರ ಹಳ್ಳಿ ಮುಂತಾದ ಊರುಗಳಲ್ಲಿ ಹೊಸಪೇಟೆಯ ಕೋರಿಶೆಟ್ಟಿ ಜಂಬಣ್ಣನವರ ತಂಡ ಯಶಸ್ವಿಯಾಗಿ ಜನಜಾಗೃತಿ ಉಂಟುಮಾಡಿತು. ಈ ತಂಡವು ಹಡಗಲಿ ತಾಲ್ಲೂಕಿನಲ್ಲೂ ಪ್ರವಾಸ ಮಾಡಿ ಜನರಲ್ಲಿ ಜಾಗೃತಿ ಉಂಟು ಮಾಡಿತು.

ಹೊಸಪೇಟೆ ಮುನಿಸಿಪಲ್ ಹೈಸ್ಕೂಲ್ ಕಟ್ಟಡಕ್ಕೆ ಬೆಂಕಿ

೧೯೪೨ರ ಚಲೇಜಾವ್ ಚಳುವಳಿಗೆ ಸಂಬಂಧಿಸಿದಂತೆ ಸರ್ಕಾರವು ತಯಾರಿಸಿದ್ದ ರಹಸ್ಯ ವರದಿಯಲ್ಲಿ ದಿನಾಂಕ ೧೪-೯-೧೯೪೨ ರಂದು ಹೊಸಪೇಟೆಯ ಮುನಿಸಿಪಲ್ ಹೈಸ್ಕೂಲ್ ಕಟ್ಟಡಕ್ಕೆ ಬೆಂಕಿ ಹಚ್ಚಿದ್ದ ಪ್ರಕರಣವು ದಾಖಲಾಗಿದೆ. ಈ ಪ್ರಕರಣದಲ್ಲಿ ಭಾಗಿಗಳಾಗಿದ್ದ ಹೊಸಪೇಟೆ ಸಜ್ಜೇದ ವೀರಣ್ಣನವರ ಪ್ರಕಾರ ಹೈಸ್ಕೂಲು ಕಟ್ಟಡಕ್ಕೆ ಬೆಂಕಿ ಹಚ್ಚುವ ಕೃತ್ಯದಲ್ಲಿ ಭಾಗಿಗಳಾಗಿದ್ದವರೆಂದರೆ ಕೋರಿಶೆಟ್ಟಿ ಜಂಬಣ್ಣ, ಎಸ್.ಗಣಪತಿ, ಜಿ. ನಾರಾಯಣ ಸ್ವಾಮಿ, ಬಿ. ವರ್ಧಮಾನ, ಜಿ. ವೆಂಕಣ್ಣ, ಡಿ. ಕೃಷ್ಣರಾವ್, ಎಚ್. ಕೊಟ್ರಪ್ಪ, ಆರ್. ಪಂಪಣ್ಣ, ಕೆ.ಹನುಮಂತ. ಇವರೆಲ್ಲರೂ ಸೇರಿಕೊಂಡು ಹೊಸಪೇಟೆಯಲ್ಲಿ ಅನೇಕ ವಿಧ್ವಂಸಕ ಕೃತ್ಯವೆಸಗಿದರು. ಇವರಲ್ಲಿ ಹೊಸಪೇಟೆ ಹೈಸ್ಕೂಲಿಗೆ ಬೆಂಕಿಹಚ್ಚಿದ ಪ್ರಕರಣದಲ್ಲಿ ಶಿಕ್ಷೆಗೊಳಗಾದ

ಸತ್ಯಾಗ್ರಹಿಗಳೆಂದರೆ ನಕ್ಷೇಪ ವೀರಣ್ಣ, ಬಿ.ವರ್ಧಮಾನ, ಆರ್. ಪಂಪಣ್ಣ, ಜಿ. ನಾರಾಯಣ ಸ್ವಾಮಿ, ಜಿ. ವೆಂಕಣ್ಣ, ಎಚ್.ಕೊಟ್ರಪ್ಪ ಮತ್ತು ಡಿ.ಕೃಷ್ಣರಾವ್.

ಜಿಲ್ಲೆಯ ನಾಯಕರೆಲ್ಲರ ಬಂಧನ

೧೯೪೨ ರ ಚಲೇಜಾವ್ ಚಳುವಳಿ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಯ ನಾಯಕರೆಲ್ಲರ ಬಂಧನವಾಯಿತು. ೧.೧೦.೧೯೪೨ ರಂದು ಟಿ. ಬಿ. ಕೇಶವರಾವ್ ಅವರ ಬಂಧನವಾಯಿತು. ೯-೮-೧೯೪೨ ರಂದು ಟೇಕೂರು ಸುಬ್ರಹ್ಮಣ್ಯಂರವರ ಬಂಧನವಾಯಿತು. 'ಬಳ್ಳಾರಿ ಗಾಂಧಿ' ಯೆಂದೆ ಪ್ರಸಿದ್ಧರಾಗಿದ್ದ ೮೦ ವರ್ಷದ ವಯೋವೃದ್ಧರಾಗಿದ್ದ ಜಾದನ ಹಟ್ಟಿವೆಂಕೋಬರಾಯರೂ ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದರು. ಕೆ. ಚಿದಾನಂದ ಶಾಸ್ತ್ರೀ ಮತ್ತು ಆರ್. ಹನುಮಂತರಾವ್ ರವರು ಬಳ್ಳಾರಿ ನಗರದ 'ಸಾಂಬಮೂರ್ತಿ ಮೈದಾನ'ದಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿ ೨೬-೧-೯೧೪೩ ರಂದು ಬಂಧಿತರಾದರು.

ಬಳ್ಳಾರಿಯ ಎಸ್.ಕೆ. ರಾಮಾಚಾರ್, ಬಿ.ಉದ್ದಾನಪ್ಪ, ಡಿ.ಎಚ್ ಕೃಷ್ಣರಾವ್ ಡಿ.ರಾಮ ಮೂರ್ತಿ, ಡಾ. ಎಸ್.ವೆಂಕಟರಮಣ, ಎಂ.ಬಿಂದುಮಾಧವ, ಎಸ್. ನಾರಾಯಣರಾವ್ ಮುಂತಾದವರು ಬಂಧಿತರಾದರು.

ಕುರುಗೋಡಿನ ಕೆ. ರಾಮಚಂದ್ರಗುಪ್ತ, ಕೆ. ಚಂದ್ರಶೇಖರಾಚಾರ್, ಎಸ್. ದೊಡ್ಡನ ಗೌಡ ಮತ್ತು ದಾಸರದೊಡ್ಡಬಸಪ್ಪ ಚಲೇಜಾವ್ ಚಳುವಳಿಯಲ್ಲಿ ಬಂಧಿತರಾದರು.

ಹೊಸಪೇಟೆಯಲ್ಲಿ ಕಟ್ಟಿ ಶ್ರೀನಿವಾಸಾಚಾರ್ಯ, ಅಸುಂಡಿ ತಿರುಮಲರಾವ್, ಎಸ್.ವಿ. ದೇಸಾಯಿ, ಗೆಣಕಿಹಾಳು ಭೀಮಪ್ಪ, ಅನಂತಶಯನಗುಡಿಯ ದಳವಾಯಿ ಭೀಮಣ್ಣ, ವಿ.ಹನುಮಂತಪ್ಪ, ವಡಿಗೇರಿ ಲಿಂಗಪ್ಪ, ಓಂಡಿ ಸಿದ್ದಪ್ಪ, ದಳವಾಯಿ ಅಂಬಣ್ಣ, ಕೋರಿಶೆಟ್ಟಿ ಜಂಬಣ್ಣ, ಕೆ, ಹನುಮಂತಪ್ಪ ಮುಂತಾದವರು ೧೯೪೨ ರಲ್ಲಿ ಬಂಧನಕ್ಕೆ ಒಳಗಾದರು.

೧೯೪೨ ರಲ್ಲಿ ಚಲೆಜಾವ್ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ಸೇರಿದ ಕೊಟ್ಟೂರಿನ ಸತ್ಯಾಗ್ರಹಿಗಳೆಂದರೆ ಮಾಲಹಳ್ಳಿ ಗುರುಲಿಂಗಪ್ಪ, ಭದ್ರಶೆಟ್ಟಿ ಸಣ್ಣರುದ್ರಪ್ಪ, ಕೊಟ್ಟೂರು ದೇವೇಂದ್ರಪ್ಪ, ಕೆ. ಸೀತಾರಾಮರಾವ್ ಮತ್ತು ಗೋರ್ಲಿ ಶರಣಪ್ಪ. ಕೊಟ್ಟೂರಿನ ಸುತ್ತ ಮುತ್ತಲಿನ ಗ್ರಾಮಗಳಾದ ಉಜ್ಜನಿ, ಐನಳ್ಳಿ, ಹರಾಳು, ರಾಂಪುರ ಮುಂತಾದವು ೧೯೪೨ ರ ಚಲೇಜಾವ್ ಚಳುವಳಿಯಲ್ಲಿ ಕ್ರಿಯಾಶೀಲವಾಗಿ ತೊಡಗಿದ್ದವು. ಸಮಾಜದ ಎಲ್ಲಾ ವರ್ಗದ ಜನರೂ ಚಳುವಳಿಯಲ್ಲಿ ಭಾಗಿಗಳಾಗಿದ್ದರು.

ಬಳ್ಳಾರಿ ಕೋಟೆಯ ಮೇಲೆ ಧ್ವಜಾರೋಹಣ

ಸಾಹಸಪ್ರಿಯ ಯುವಕರಿಗೆ ಸ್ವಾತಂತ್ರ್ಯ ಹೋರಾಟವು ಒಂದು ಸವಾಲಾಗಿತ್ತು. ಜೀವದ

ಹಂಗು ತೊರೆದು ಯುವಕರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾಗುತ್ತಿದ್ದರು. ಅವರು ಅನೇಕ ಬಗೆಯ ಸಾಹಸಗಳನ್ನು ಮೆರೆದರು. ಐ. ಬಸವರಾಜ, ಎಸ್. ನಾರಾಯಣರಾವ್ ಮತ್ತು ಅವರ ಗೆಳೆಯರೆಲ್ಲಾ ಸೇರಿಕೊಂಡು ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಸಂದರ್ಭದಲ್ಲಿ ಬಳ್ಳಾರಿಯಲ್ಲಿ ಒಂದು ಸಾಹಸ ಮಾಡಿದರು. 'ಭಾರತ ಬಿಟ್ಟು ತೂಲಗಿ' ಚಳುವಳಿಯು ಉಗ್ರರೂಪದಲ್ಲಿ ತಳೆದಿತ್ತು. ೧೧.೧೧.೧೯೪೨ರಂದು ಬಸವರಾಜ ಮತ್ತು ನಾರಾಯಣರಾವ್ ರವರ ಗುಂಪು ಬಳ್ಳಾರಿಯ ಕೋಟೆಯ ಮೇಲೆ ಕಾಂಗ್ರೆಸ್ ಧ್ವಜ ಹಾರಿಸಿ ಅದ್ಭುತ ಸಾಹಸ ಮೆರೆದರು. ಇವರೆಲ್ಲರಿಗೂ ಶಿಕ್ಷೆಯಾಯಿತು. ಹದಿ ಹರೆಯದ ವಿದ್ಯಾರ್ಥಿಗಳಾಗಿದ್ದ ಇವರು ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ತಮ್ಮದೇ ಆದ ಕಾಣಿಕೆ ನೀಡಿದರು.

ಆದವಾನಿ ನಗರದಲ್ಲಿ ಶಾಲಾ ಬಾಲಕರ ಸಾಹಸ

೧೯೪೨ರ ಚಲೇಜಾವ್ ಚಳುವಳಿಯು ಬಳ್ಳಾರಿ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶವನ್ನು ವ್ಯಾಪಿಸಿತು. ಈ ಚಳುವಳಿಯಲ್ಲಿ ಶಾಲಾ ವಿದ್ಯಾರ್ಥಿಗಳು ಅತ್ಯಂತ ಸಾಹಸದಿಂದ ಪಾಲುಗೊಂಡರು. ಅಕ್ಟೋಬರ್ ಮೊದಲವಾರ ಗಾಂಧೀ ಜಯಂತಿಯ ವಾರ. ಇದನ್ನು ಗಮನದಲ್ಲಿಟ್ಟುಕೊಂಡು ೧೦-೧೦-೧೯೪೨ ರಂದು ಆದೋನಿ ನಗರದಲ್ಲಿ ಶಾಲಾ ಬಾಲಕರು ಮೆರವಣಿಗೆ ತೆಗೆದರು. ಗಾಂಧೀಜಿಯವರ ಭಾವಚಿತ್ರ ಹಿಡಿದುಕೊಂಡು ಜಯಕಾರ ಹಾಕುತ್ತಾ ಮೆರವಣಿಗೆ ನಡೆಯಿತು. ಆದರೆ ಆದೋನಿ ನಗರದಲ್ಲಿ ಮೆರವಣಿಗೆ ತೆಗೆಯಲು ಅನುಮತಿ ಇರಲಿಲ್ಲ. ಸರ್ಕಾರದ ಪ್ರತಿಬಂಧಕಾಜ್ಞೆಯನ್ನು ಮುರಿದು ಮೆರವಣಿಗೆ ನಡೆಸಲಾಗುತ್ತಿತ್ತು. ಪ್ರತಿಬಂಧಕಾಜ್ಞೆ ಮುರಿದು ಮೆರವಣಿಗೆ ನಡೆಸಿದ ೨೧ ಶಾಲಾ ಬಾಲಕರನ್ನು ಪೋಲೀಸರು ಬಂಧಿಸಿದರು. ಅವರೆಲ್ಲರಿಗೂ ೩ ತಿಂಗಳ ಕಠಿಣ ಶಿಕ್ಷೆ ನೀಡಲಾಗಿತ್ತು. ಹೀಗೆ ಆದವಾನಿಯಲ್ಲಿ ಬಂಧನಕ್ಕೊಳಗಾದ ಶಾಲಾ ಬಾಲಕರುಗಳು ಯಾರೆಂದರೆ:

೧) ಹೆಚ್. ಕೇಶವ ರೆಡ್ಡಿ. ೨)ಎಚ್. ವಿಜಯಸಿಂಹ. ೩)ವೈ. ರಂಗರಾವ್ ೪)ಕೆ. ಗೋವಿಂದ ಶೆಟ್ಟಿ೫) ಹುಸೇನಪ್ಪ ೬) ನರಸಿಂಹಮೂರ್ತಿ ೭) ಚಲಪತಿ ೮) ಕೆ. ಕೃಷ್ಣ ೯) ಎ.ವೀರಣ್ಣ ೧೦) ಗೋರ್ಕಲ್ ಅಂಜನಿ ೧೧)ಶಾಂಜಿ ವಿಜಯ ರಾವ್ ೧೨) ಡಿ.ಗೋವಿಂದ ದಾಸ್ ೧೩) ಡಿ.ರಾಘು ೧೪) ನೀಲಕಂಠರಾವ್. ೧೫) ಗೋವಿಂದಪ್ಪ. ೧೬) ರಣಜಿತ್ ಸಿಂಗ್ ೧೭) ಭೀಮು ೧೮) ನಾರಾಯಣ ೧೯) ವೆಂಕೋಬಿ ೨೦) ಸುಂದರಾಚಾರಿ ೨೧) ಕುಮಾರ ಸ್ವಾಮಿ.

ಇವರೆಲ್ಲರೂ ೧೬ ವರ್ಷಕ್ಕೂ ಕಡಿಮೆ ವಯಸ್ಸಿನ ಬಾಲಕರು. ಆದರೂ ಇವರುಗಳಿಗೆ ೩ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿತ್ತು. ಬಳ್ಳಾರಿ ವಕೀಲರ ಸಂಘದ ಎಂ.ಎಸ್. ಮೃತ್ಯುಂಜಯ ಶಾಸ್ತ್ರಿ ಮತ್ತು ಟಿ.ರಾಘವ ಅವರುಗಳು ಎಳೆಯ ವಯಸ್ಸಿನ ಬಾಲಕರಿಗೆ ಶಿಕ್ಷೆ ವಿಧಿಸಿದುದು ಅನ್ಯಾಯವೆಂದು ಜಿಲ್ಲಾ ನ್ಯಾಯಾದೀಶರ ಮುಂದೆ ವಾದಿಸಿದಾಗ ನ್ಯಾಯಾಧೀಶರು ಎಚ್ಚರಿಕೆ ನೀಡಿ ಬಾಲಕರನ್ನು ಬಿಡುಗಡೆಗೊಳಿಸಿದರು. ಹೀಗೆ ೧೯೪೨ರ ಚಲೇಜಾವ್ ಚಳುವಳಿಯ

ಕಾಲದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಶಾಲಾ ವಿದ್ಯಾರ್ಥಿಗಳು ಧೈರ್ಯದಿಂದ ಚಳುವಳಿಯಲ್ಲಿ ಭಾಗವಹಿಸಿ ತಮ್ಮ ಕಾಣಿಕೆ ಸಲ್ಲಿಸಿದರು.

ಕನ್ನಡಾಭಿಮಾನ ಮತ್ತು ಸ್ವಾತಂತ್ರ್ಯ ಹೋರಾಟ

ಇವರು ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿ ಮೂರು ತಿಂಗಳ ಕಾರಾಗೃಹ ವಾಸವನ್ನು ಬಳ್ಳಾರಿಯ ಅಲ್ಲಿಪುರ ಜೈಲಿನಲ್ಲಿ ಅನುಭವಿಸಿದರು. (೨೩.೧೦.೧೯೪೨ ರಿಂದ ೧೩.೧.೧೯೪೩). ಇವರು ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲಿ ಕನ್ನಡ ಭಾಷೆ ಹಾಗೂ ಕರ್ನಾಟಕ ಏಕೀಕರಣಗಳ ಬಗ್ಗೆಯೂ ಆಸಕ್ತರಾಗಿದ್ದರು. ಅದಕ್ಕಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಅನೇಕ ಚಳುವಳಿ ನಡೆಸಿದರು. ಅಲ್ಲಿಪುರ ಜೈಲಿನಲ್ಲಿ ಇವರು ಕನ್ನಡಿಗರನ್ನೆಲ್ಲಾ ಒಂದು ಗೂಡಿಸಿ ಕನ್ನಡದಲ್ಲಿ ಅನೇಕ ಕಾರ್ಯಕ್ರಮಗಳು ನಡೆಯುವಂತೆ ಮಾಡಿದರು. ಇವರ ಪರಿಶ್ರಮದಿಂದಾಗಿ ಜೈಲಿನ ಪುಸ್ತಕಾಲಯಕ್ಕೆ ಕನ್ನಡ ಪುಸ್ತಕಗಳು ಬಂದು ಸೇರುವಂತಾಯಿತು.

ಜೈಲಿನಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ದಿನಾಚರಣೆ, ನಾಡಹಬ್ಬಗಳಿಗೆ ಇವರು ಹಾಡುಗಳನ್ನು ಬರೆದು ಕೊಡುತ್ತಿದ್ದರು. ಬಳ್ಳಾರಿಯಲ್ಲಿ ಇವರು 'ಗೆಳೆಯರ ಗುಂಪು' ಎಂಬ ತರುಣರ ಸಂಘ ಕಟ್ಟಿದ್ದರು. ೧೯೩೯ರಲ್ಲೇ ಇವರ ನಾಯಕತ್ವದಲ್ಲಿ 'ಗೆಳೆಯರ ಗುಂಪು' ಮದರಾಸಿನ ಆಲ್ ಇಂಡಿಯಾ ರೇಡಿಯೋ ಕೇಂದ್ರದಿಂದ ವಾರ್ತೆಗಳನ್ನು ಕನ್ನಡದಲ್ಲಿ ಬಿತ್ತರಿಸುವಂತೆ ಚಳುವಳಿ ನಡೆಸಿತು. 'ಶವ ಸಂಸ್ಕಾರ' ಎಂಬ ನಾಟಕವನ್ನು ಇವರು ಬರೆದಿದ್ದರು. ಬಳ್ಳಾರಿ ನಗರದಲ್ಲಿ ರಸ್ತೆಗಳ ನಾಮಫಲಕಗಳನ್ನು ಕನ್ನಡದಲ್ಲಿ ಬರೆಸುವಂತೆಯೂ ಇವರು ೧೯೩೯ರಲ್ಲಿ ಚಳುವಳಿ ನಡೆಸಿದರು.

೧೯೪೬ರ ಅಕ್ಟೋಬರ್ ೧೩, ೧೪ ಮತ್ತು ೧೫ - ಮೂರು ದಿನಗಳ ಕಾಲ ಆಂಧ್ರಪ್ರದೇಶದ ರಾಜ ಮಂಡ್ರಿಯ 'ಆಂಧ್ರ ಇತಿಹಾಸ ಸಂಶೋಧನ ಸಂಸ್ಥೆ'ಯು ಹಂಪಿಯಲ್ಲಿ 'ವಿಜಯನಗರ ಸಾಮ್ರಾಜ್ಯ ದಿನಾಚರಣೆ' ಸಮಾವೇಶವನ್ನು ಸಂಘಟಿಸಿತ್ತು. ಕರ್ನಾಟಕದ ಭೂಮಿಯ ಮೇಲೆ ಆಂಧ್ರದವರ ಆಕ್ರಮಣವನ್ನು ಪ್ರತಿಭಟಿಸಿ ಬಿ.ಯಂ. ಮರುಳಸಿದ್ದಯ್ಯನವರು ಕಪ್ಪುಬಾವುಟ ಪ್ರದರ್ಶನ ನಡೆಸಿದರು. ಸಮ್ಮೇಳನದ ಕಾರ್ಯದರ್ಶಿಗಳು ಈ ಬಗ್ಗೆ ಸಮಜಾಯಿಸಿ ನೀಡಿದ ಮೇಲೆ ಮರುಳಸಿದ್ದಯ್ಯನವರು ತಮ್ಮ ಪ್ರತಿಭಟನೆ ನಿಲ್ಲಿಸಿದರು.

ಹೀಗೆ ಬಿ.ಯಂ. ಮರುಳಸಿದ್ದಯ್ಯನವರು ಸ್ವಾತಂತ್ರ್ಯ ಪೂರ್ವದಲ್ಲೇ 'ಕನ್ನಡ-ಕರ್ನಾಟಕ'ಗಳ ಬಗ್ಗೆ ಹೋರಾಟ ನಡೆಸಿದ್ದರು ಎಂಬುದು ಬಹಳ ಮುಖ್ಯವಾಗುತ್ತದೆ. ಇಂತಹ ಹೋರಾಟಗಾರರ ಶ್ರಮದಿಂದಾಗಿ ಬಳ್ಳಾರಿಯು ೧೯೫೩ರಲ್ಲಿ ಕರ್ನಾಟಕದಲ್ಲಿ ವಿಲೀನಗೊಳ್ಳಲು ಸಾಧ್ಯವಾಯಿತು. ಇವರ ತ್ಯಾಗ-ಪರಿಶ್ರಮಗಳನ್ನು ಇಂದು ಗೌರವಿಸುವ ಅಗತ್ಯವಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿ, ಸರ್ಕಾರದ ರಹಸ್ಯ ವರದಿ:

ನಮಗೆಲ್ಲಾ ತಿಳಿದಿರುವಂತೆ ಮುಂಬಯಿಯಲ್ಲಿ ಆಗಸ್ಟ್ ೮, ೧೯೪೨ ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ 'ಬ್ರಿಟಿಷರೆ, ಭಾರತ ಬಿಟ್ಟು ತೊಲಗಿ' ನಿರ್ಣಯವನ್ನು ಒಕ್ಕೋರಲಿನಿಂದ ಪಾಸುಮಾಡಲಾಯಿತು. ಸರ್ಕಾರವು ಮರುದಿನ ಅಂದರೆ ೯-೮-೧೯೪೨ ರಂದು ನಸುಕಿನಲ್ಲಿಯೇ ಕಾಂಗ್ರೆಸ್‌ನ ಎಲ್ಲಾ ನಾಯಕರನ್ನೂ ಬಂಧಿಸಿತು. ಇದರಿಂದ ರೊಚ್ಚಿಗೆದ್ದ ಇಡೀ ದೇಶ ಚಳುವಳಿಯನ್ನು ತೀವ್ರಗೊಳಿಸಿತು. ಬಳ್ಳಾರಿ ಜಿಲ್ಲೆಯಲ್ಲೂ ಸಹ ಆಗಸ್ಟ್ ೧೦, ೧೯೪೨ ರಿಂದ ಸ್ವಾತಂತ್ರ್ಯ ಚಳುವಳಿ ತೀವ್ರಗೊಂಡಿತು. ಹೀಗೆ ತೀವ್ರಗೊಂಡ ಚಳುವಳಿಯನ್ನು ಸರ್ಕಾರ ಹತ್ತಿಕ್ಕುವುದು ಸಾಧ್ಯವಿರಲಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ನಡೆದ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಬಗ್ಗೆ ಮದರಾಸು ಪ್ರಾಂತ ಸರ್ಕಾರದ ರಹಸ್ಯ ದಾಖಲೆಗಳಲ್ಲಿ ಸಾಕಷ್ಟು ವಿವರಗಳು ದೊರೆಯುತ್ತವೆ.

೧೯೪೨ರ 'ಭಾರತ ಬಿಟ್ಟು ತೊಲಗಿ ಚಳುವಳಿ'ಯು ಬಳ್ಳಾರಿ ಜಿಲ್ಲೆಯಲ್ಲಿ ಎಷ್ಟು ತೀವ್ರವಾಗಿ ನಡೆಯಿತು, ಅದು ಎಷ್ಟು ವ್ಯಾಪಕವಾಗಿತ್ತು ಮತ್ತು ವಿದ್ಯಾರ್ಥಿಗಳು ಯಾವ ರೀತಿಯಲ್ಲಿ ಚಳುವಳಿಯಲ್ಲಿ ಭಾಗವಹಿಸುತ್ತಿದ್ದರು ಎಂಬುದು ಈ ರಹಸ್ಯವರದಿಯ ವಿವರಗಳಿಂದ ಸ್ಪಷ್ಟವಾಗುತ್ತದೆ. ಈ ಚಳುವಳಿ ಜಿಲ್ಲೆಯಲ್ಲಿ ಎಷ್ಟು ವಿಧ್ವಂಸಕಾರಿಯಾಗಿತ್ತು ಎಂಬುದೂ ಇದರಿಂದ ಸ್ಪಷ್ಟವಾಗುತ್ತದೆ. ಈ ವರದಿಯು ದಿನಾಂಕವಾರು ದಿನಚರಿ ಸ್ವರೂಪದಲ್ಲಿದೆ. ಈ ವಿವರಗಳನ್ನು ಇಲ್ಲಿ ನಾವು ಯಥಾವತ್ತಾಗಿ ಮಂಡಿಸಿದ್ದೇವೆ. ಇದನ್ನು ಕೇವಲ 'ಘಟನೆಗಳ ಪಟ್ಟಿ' ಎಂದು ತಳ್ಳಿಹಾಕಲು ಸಾಧ್ಯವಿಲ್ಲ. ಈ ವರದಿಯ ಸಹಾಯದಿಂದ ಚಳುವಳಿಯ ಸ್ವರೂಪವನ್ನು ನಾವು ತಿಳಿದುಕೊಳ್ಳಬಹುದಾಗಿದೆ. ಈ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ನಡೆದ ೩೦ ದಿನಗಳ ವಿವರ ಇಲ್ಲಿ ದಾಖಲಾಗಿದೆ. ಈ ವರದಿಯ ಪ್ರಕಾರ ೧೯೪೨ರ ಚಳುವಳಿಯು ಬಳ್ಳಾರಿ ಜಿಲ್ಲೆಯ ಒಟ್ಟು ೮ ತಾಲ್ಲೂಕುಗಳಲ್ಲೂ ವ್ಯಾಪಿಸಿತ್ತು. ಹೊಸಪೇಟೆ, ಹರಪನಹಳ್ಳಿ, ಹಡಗಲಿ, ಕೂಡ್ಲಿಗಿ, ಆಲೂರು, ಆದವಾನಿ, ರಾಯದುರ್ಗ ಮತ್ತು ಬಳ್ಳಾರಿ ತಾಲ್ಲೂಕುಗಳಲ್ಲಿ ನಡೆದ ಘಟನೆಗಳ ವಿವರ ಇಲ್ಲಿದೆ. ಹೊಸಪೇಟೆಯಲ್ಲಿ ೬ ಘಟನೆಗಳು, ಆದವಾನಿಯಲ್ಲಿ ೯ ಘಟನೆಗಳು, ಬಳ್ಳಾರಿಯಲ್ಲಿ ೧೩ ಘಟನೆಗಳು, ಕೂಡ್ಲಿಗಿಯಲ್ಲಿ ೨ ಘಟನೆಗಳು, ಹಡಗಲಿಯಲ್ಲಿ ೩ ಘಟನೆಗಳು, ಆಲೂರಿನಲ್ಲಿ ಎರಡು ಮತ್ತು ರಾಯದುರ್ಗದಲ್ಲಿ ೧ ಘಟನೆ ನಡೆದದ್ದರ ದಾಖಲೆ ಇಲ್ಲಿದೆ. ಬಳ್ಳಾರಿ, ಆದವಾನಿ ಮತ್ತು ಹರಪನಹಳ್ಳಿಗಳಲ್ಲಿ ಚಳುವಳಿ ಉಳಿದೆಲ್ಲಾ ತಾಲ್ಲೂಕುಗಳಿಗಿಂತ ತೀವ್ರವಾಗಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಲ್ಲಿ ಉಲ್ಲೇಖಗೊಂಡಿರುವ ೫೧ ನಮೂದುಗಳಲ್ಲಿ ೩೦ ಘಟನೆಗಳು ಬಳ್ಳಾರಿ, ಆದವಾನಿ ಮತ್ತು ಹರಪನಹಳ್ಳಿಗಳಲ್ಲೇ ನಡೆದಿವೆ.

ಇಲ್ಲಿರುವ ವಿವರಗಳಲ್ಲಿ ಚಳುವಳಿಗಾರರ ಹೆಸರುಗಳು ಇಲ್ಲ. ಆದರೆ ಘಟನೆಗಳ ಉಲ್ಲೇಖಗಳಿವೆ. ನವೆಂಬರ್ ೧, ೧೯೪೨ ರಂದು ಹರಪನಹಳ್ಳಿಗೆ ಸಂಬಂಧಿಸಿದ ಒಂದು

ಘಟನೆಯ ವಿವರ ಇದೆ. ಈ ಘಟನೆಯಲ್ಲಿ ಚಳುವಳಿಗಾರರು ಹೊಸಪೇಟೆಗೆ ಬಸ್ಸಿನಲ್ಲಿ ಸಾಗುತ್ತಿದ್ದ ಟಪಾಲು ಚೀಲವನ್ನು ಅಪಹರಿಸುತ್ತಾರೆ. ಇದೊಂದು ಮುಂಚಿನ ಆಕ್ರಮಣವಾಗಿತ್ತು. ಈ ಘಟನೆಯಲ್ಲಿ ೧೫-೨೦ ಚಳುವಳಿಗಾರರು ಭಾಗವಹಿಸಿದ್ದರು ಎಂಬುದು ತಿಳಿಯುತ್ತದೆ. ಇದೊಂದು ಉಗ್ರಗಾಮಿಗಳ ತಂಡವಾಗಿತ್ತು ಎಂದು ಸರ್ಕಾರ ಅನುಮಾನ ಪಟ್ಟಿತ್ತು. ಏಕೆಂದರೆ ಈ ತಂಡದ ಬಳಿ ಚಾಕು, ದಂಡ ಮುಂತಾದ ಅಸ್ತ್ರಗಳಿದ್ದವು. ಈ ತಂಡವು ಧಾರವಾಡ ಜಿಲ್ಲೆಗೆ ಸಂಬಂಧಿಸಿದ್ದಿರಬಹುದೆಂದು ಪೊಲೀಸರು ಊಹಿಸಿದ್ದರು.

ಜಾನಪದ ತಜ್ಞ ಮುದೇನೂರು ಸಂಗಣ್ಣನವರು ಹೇಳುವಂತೆ ಸದರಿ ಘಟನೆಯು 'ತೆಲಗಿ' ಎಂಬ ಸ್ಥಳದಲ್ಲಿ ನಡೆಯಿತು. ಈ ಉಗ್ರಗಾಮಿ ತಂಡದಲ್ಲಿ ಮೈಲಾರ ಮಹದೇವಪ್ಪನವರ ತಮ್ಮ ಮೈಲಾರ ಲಿಂಗಪ್ಪನವರಿದ್ದರು. 'ಭಾರತ ಬಿಟ್ಟು ತೊಲಗಿ' ಚಳುವಳಿಯ ಸಂದರ್ಭದಲ್ಲಿ ಟಪಾಲು ಪೆಟ್ಟಿಗೆ ಅಪಹರಿಸುವುದು ಒಂದು ಪ್ರಸಿದ್ಧ ವಿಧಾನವಾಗಿತ್ತು. ಹರಪನಹಳ್ಳಿ, ಹಡಗಲಿ ಸುತ್ತಮುತ್ತ ಧಾರವಾಡ ಜಿಲ್ಲೆಯ ಉಗ್ರವಾದಿ ಚಳುವಳಿಗಾರರ ಪ್ರಭಾವ ತೀವ್ರವಾಗಿತ್ತು. ಮೈಲಾರ ಮಹದೇವಪ್ಪ, ಚಿಕ್ಕ ಚನ್ನಪ್ಪ ಮುಂತಾದವರು ಹರಪನಹಳ್ಳಿ ಸಮೀಪದ ನೀಲಗುಂದದಲ್ಲಿ ಟಪಾಲು ಪೆಟ್ಟಿಗೆ ಅಪಹರಿಸಿದರು. ಮೈಲಾರ ಮಹದೇವಪ್ಪನವರು ೧೯೪೨ರ ಚಳುವಳಿಯಲ್ಲಿ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿ ಬಿಟ್ಟಿದ್ದರು. ಹೀಗೆ ಕುತೂಹಲಕಾರಿಯಾದ ವಿವರಗಳು ೧೯೪೨ರ ಚಳುವಳಿ ಬಗ್ಗೆ ತಿಳಿದು ಬರುತ್ತವೆ. ಈ ಕೆಳಗೆ ಸರ್ಕಾರದ ರಹಸ್ಯ ವರದಿಯ ಯಥಾವತ್ ವಿವರಗಳನ್ನೂ ನೋಡಬಹುದು:

ಆಗಸ್ಟ್ ೧೦, ೧೯೪೨

ಹೊಸಪೇಟೆ: ಕಾಂಗ್ರೆಸ್ ನಾಯಕರ ಬಂಧನವನ್ನು ಪ್ರತಿಭಟಿಸಿ ಹೊಸಪೇಟೆ ಮುನಿಸಿಪಲ್ ಹೈಸ್ಕೂಲಿನ ಅರ್ಧದಷ್ಟು ವಿದ್ಯಾರ್ಥಿಗಳು ಶಾಲೆಯನ್ನು ಬಹಿಷ್ಕರಿಸಿದರು.

ಆದವಾನಿ: ಅಂಗಡಿ -ಮುಂಗಟ್ಟುಗಳನ್ನು ಮುಚ್ಚಿ ಹರತಾಳವನ್ನು ಆಚರಿಸಲಾಯಿತು. ಅಂದು ಸಂಜೆ ಕಾಂಗ್ರೆಸ್ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ೬೦೦ ಜನ ಸೇರಿದ್ದರು.

ಬಳ್ಳಾರಿ: ಕಾಂಗ್ರೆಸ್‌ನ ನಗರ ಸಮಿತಿಯ ಆಶ್ರಯದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಸಭೆಯಲ್ಲಿ ೫೦೦ ಜನರು ಹಾಜರಿದ್ದರು.

ಆಗಸ್ಟ್-೧೧

ಬಳ್ಳಾರಿ: ಅಂದು ಬೆಳಗ್ಗೆ ಸುಮಾರು ಒಂದು ನೂರು ವಿದ್ಯಾರ್ಥಿಗಳು ಮುನಿಸಿಪಲ್ ಹೈಸ್ಕೂಲಿನಿಂದ ಕಾಂಗ್ರೆಸ್ ಧ್ವಜ ಹಿಡಿದು ಕೊಂಡು 'ಗಾಂಧೀಜಿಕೀ ಜೈ' ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು. ಅಂದು ಸಂಜೆ ೨೦೦ ವಿದ್ಯಾರ್ಥಿಗಳು ನಗರದಲ್ಲಿ ಗಾಂಧೀಜಿ ಭಾವಚಿತ್ರ ಹಿಡಿದುಕೊಂಡು ಮೆರವಣಿಗೆ ಮಾಡಿದರು. ಸಭೆಯಲ್ಲಿ ಉಗ್ರ ಭಾಷಣ ಮಾಡಲಾಯಿತು.

ಆಗಸ್ಟ್-೧೫

ಹರಪನಹಳ್ಳಿ; ಸುಮಾರು ೨೦೦ ಜನರು ಹಾಜರಿದ್ದ ಒಂದು ಸಭೆಯಲ್ಲಿ ಕಾಂಗ್ರೆಸ್ ನಾಯಕರು ಭಾಷಣ ಮಾಡಿದರು.

ಆದವಾನಿ: ಟೆಲಿಫೋನ್ ತಂತಿಯನ್ನು ಕತ್ತರಿಸಲಾಯಿತು.

ಕೊಟ್ಟೂರು: ಸರ್ಕಾರ ವಿರೋಧಿ ಬಿತ್ತಿ ಪತ್ರಗಳನ್ನು -ಕರಪತ್ರಗಳನ್ನು ಹಂಚಲಾಯಿತು.

ಆಗಸ್ಟ್-೧೬

ಆಸ್ಪರಿ ಮತ್ತು ಗುಂತಕಲ್ ನಡುವಿನ ಟೆಲಿಫೋನ್ ಮತ್ತು ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಲಾಯಿತು.

ಬಳ್ಳಾರಿ : ೩೦೦ ಜನರ ಮೆರವಣಿಗೆಯೊಂದು ನಡೆಯಿತು. ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ೧೦೦೦೦ ಜನರು ಸೇರಿದ್ದರು.

ಹೊಸಪೇಟೆ- ಹುಬ್ಬಳ್ಳಿ ನಡುವಿನ ತಂತಿ ಸಂಪರ್ಕವನ್ನು ಕಿತ್ತು ಹಾಕಲಾಯಿತು.

ಆಗಸ್ಟ್-೧೭

ಕೊಟ್ಟೂರು-ಕೂಡ್ಲಿಗಿ ನಡುವಿನ ರಸ್ತೆಯಲ್ಲಿ ಟೆಲಿಗ್ರಾಫ್ ತಂತಿಯನ್ನು ಕತ್ತರಿಸಲಾಯಿತು.

ಕೊಟ್ಟೂರಿನಲ್ಲಿ ೫೦ ಜನರ ಒಂದು ಸಾರ್ವಜನಿಕ ಸಭೆ ನಡೆಯಿತು.

ಪ್ರತಿಬಂಧಿತ ಸಾಹಿತ್ಯವನ್ನು ಹಂಚಲಾಯಿತು.

ಆಗಸ್ಟ್-೧೮

ಕೊಟ್ಟೂರಿನ ವಿದ್ಯಾರ್ಥಿಗಳೂ ಶಾಲೆಯನ್ನು ಬಹಿಷ್ಕರಿಸಿದರು.

ರಾಯದುರ್ಗ: ಸುಮಾರು ೪೦೦ ಜನರ ಸಾರ್ವಜನಿಕ ಸಭೆ ನಡೆಯಿತು.

ಆಗಸ್ಟ್-೧೯

ಹರಪನಹಳ್ಳಿ: ಟೆಲಿಗ್ರಾಫ್ ತಂತಿಯನ್ನು ಕತ್ತರಿಸಲಾಯಿತು.

ಆಗಸ್ಟ್-೨೨

ಆಲೂರು: ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ಮಾಡುವ ಪ್ರಯತ್ನ ನಡೆಯಿತು. ಪೋಲೀಸರು ಅದಕ್ಕೆ ಅವಕಾಶ ನೀಡಲಿಲ್ಲ. ಅಂದು ರಾತ್ರಿ ಟೆಲಿಗ್ರಾಫ್ ತಂತಿ ಕತ್ತರಿಸಲಾಯಿತು. ರಾಯದುರ್ಗ ಮತ್ತು ಬೊಪಸಮುದ್ರಮ್ ನಡುವೆ ಒಂದು ತಂತಿ ಕಂಬವನ್ನೇ ಕಿತ್ತು ಹಾಕಲಾಗಿತ್ತು.

ಆಗಸ್ಟ್-೨೯

ಆದವಾನಿ: ಸಾರ್ವಜನಿಕ ಸಭೆಯಲ್ಲಿ ೨೦೦ ಜನರು ಭಾಗವಹಿಸಿದ್ದರು.

ಆಗಸ್ಟ್-೩೦

ಬಳ್ಳಾರಿ: ಕಾಂಗ್ರೆಸ್‌ನ ನಗರ ಸಮಿತಿ ಆಶ್ರಯದಲ್ಲಿ ಸುಮಾರು ೬೦೦ ಜನರು ಸೇರಿದ್ದ ಸಭೆ ನಡೆಯಿತು. ಅದರಲ್ಲಿ ಅನೇಕರು ಶಾಲಾ ವಿದ್ಯಾರ್ಥಿಗಳಾಗಿದ್ದರು.

ಹಡಗಲಿ: ಸಣ್ಣದೊಂದು ಸಾರ್ವಜನಿಕರ ಸಭೆ ನಡೆಯಿತು.

ಆಗಸ್ಟ್-೩೧

ಸವಿನಯ ಕಾಯಿದೆ ಭಂಗ ಚಳುವಳಿಗೆ ಸಂಬಂಧಿಸಿದಂತೆ ನಡೆಯುವ ಎಲ್ಲಾ ಸಭೆಗಳನ್ನು ಪ್ರತಿಬಂಧಿಸಿ ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರು ಆಜ್ಞೆ ಹೊರಡಿಸಿದರು.

ಸೆಪ್ಟೆಂಬರ್-೨

ಬಳ್ಳಾರಿ: ನಗರದ ಪ್ರಮುಖ ಗೋಡೆಗಳ ಮೇಲೆ 'ಭಾರತ ಬಿಟ್ಟು ತೊಲಗಿ' ಘೋಷಣೆಗಳನ್ನು ವಿದ್ಯಾರ್ಥಿಗಳು ಬರೆದರು.

ಟಿ. ಸುಬ್ರಹ್ಮಣ್ಯಂ ಮತ್ತು ಡಿ. ಎಚ್. ವೆಂಕೋಬರಾವ್ ರವರುಗಳನ್ನು ನಿಯಮ ೨೬ರ ಪ್ರಕಾರ ಬಂಧಿಸಿ ವೆಲ್ಲೂರು ಜೈಲಿಗೆ ಕಳುಹಿಸಲಾಯಿತು.

ಸೆಪ್ಟೆಂಬರ್-೩

ಆದವಾನಿ: ಪ್ರತಿಬಂಧಕಾಜ್ಞೆಗಳನ್ನು ಉಲ್ಲಂಘಿಸಿ ಸಾರ್ವಜನಿಕ ಸಭೆಯೊಂದು ನಡೆಯಿತು. ೬ ಜನರು ಬಂಧನಕ್ಕೊಳಗಾದರು. ಟೆಲಿಗ್ರಾಫ್ ತಂತಿ ಕತ್ತರಿಸಲಾಗಿತ್ತು ಮತ್ತು ಒಂದು ಟೆಲಿಫೋನ್ ಕಂಬವನ್ನು ಕಿತ್ತು ಹಾಕಲಾಯಿತು.

ಹೊಸಪೇಟೆ: ಹೊಸಪೇಟೆ-ಬಳ್ಳಾರಿ ಮಾರ್ಗದಲ್ಲಿ ಮೂರು ಸೇತುವೆಗಳನ್ನು ಮುರಿದು ಹಾಕಲಾಯಿತು ಮತ್ತು ಸೇತುವೆಗಳ ಗೋಡೆಗಳನ್ನು ಉರುಳಿಸಲಾಯಿತು. ಸರ್ಕಾರದ ಆಜ್ಞೆಗಳನ್ನು ಸರ್ಕಾರಿ ಅಧಿಕಾರಿಗಳು ಪಾಲಿಸಬಾರದೆಂದು ಗಾಂಧೀಜಿ ಕರೆನೀಡಿದ್ದ 'ಹರಿಜನ' ಪತ್ರಿಕೆಯ ಪ್ರತಿಗಳನ್ನು ಸರ್ಕಾರಿ ಅಧಿಕಾರಿಗಳಿಗೆ ಹಂಚಲಾಯಿತು. ಕಾಂಗ್ರೆಸ್‌ನ ವಾರ್ತಾಪತ್ರವನ್ನೂ ಹಂಚಲಾಯಿತು.

ಸೆಪ್ಟೆಂಬರ್-೪

ಸರಾಯಿ ಹರಾಜು ನಡೆಯುವಲ್ಲಿ ಘೋಷಣೆ ಕೂಗಿದ ಯುವಕನೊಬ್ಬನನ್ನು ಬಂಧಿಸಲಾಯಿತು.

ಸೆಪ್ಟೆಂಬರ್-೫

ಅನೇಕ ಸರ್ಕಾರಿ ಅಧಿಕಾರಿಗಳಿಗೆ ಕಾಂಗ್ರೆಸ್ ವಾರ್ತಾಪತ್ರವನ್ನು ಹಂಚಲಾಯಿತು. ಜಿಲ್ಲಾ ಬೋರ್ಡ್‌ನಲ್ಲಿ ಸರ್ಕಾರದ ದಮನಕಾರಿ ನೀತಿಯನ್ನು ಪ್ರತಿಭಟಿಸಿ ನಿರ್ಣಯ ಕೈಗೊಳ್ಳಲಾಯಿತು. ಆರು ಟೆಲಿಗ್ರಾಫ್ ತಂತಿಗಳನ್ನು ಕಡಿಯಲಾಯಿತು.

ಸೆಪ್ಟೆಂಬರ್-೬

ಕೇಶವಕೃಷ್ಣ ಬಾಗಲಕೋಟೆ (ಮೀರಜ್)ರವರನ್ನು ಸಭೆಯೊಂದರಲ್ಲಿ ಬಂಧಿಸಲಾಯಿತು.

ಹರಪನಹಳ್ಳಿ: ಐದು ಟೆಲಿಗ್ರಾಫ್ ವೈರ್‌ಗಳನ್ನು ಕತ್ತರಿಸಲಾಯಿತು. ಟೆಲಿಫೋನ್ ತಂತಿಗಳನ್ನು ಕತ್ತರಿಸಿದ ಆರೋಪದ ಮೇಲೆ ನಾಲ್ವರನ್ನು ಬಂಧಿಸಲಾಯಿತು.

ಆದವಾನಿ: ಟೆಲಿಗ್ರಾಫ್ ತಂತಿಗಳನ್ನು ಕಡಿಯಲಾಯಿತು.

ಸೆಪ್ಟೆಂಬರ್-೭

ಸಾರಾಯಿ ಅಂಗಡಿ ಮುಂದೆ ಪಿಕೆಟಿಂಗ್ ಮಾಡುತ್ತಿದ್ದ ೧೩ ಜನ ಸತ್ಯಾಗ್ರಹಿಗಳನ್ನು ಬಂಧಿಸಿ ಶಿಕ್ಷೆ ನೀಡಲಾಯಿತು.

ಸೆಪ್ಟೆಂಬರ್-೧೦

ಆಲೂರು: ಇಬ್ಬರು ಗ್ರಾಮಾಧಿಕಾರಿಗಳು ತಮ್ಮ ಹುದ್ದೆಗಳಿಗೆ ರಾಜೀನಾಮೆ ಇತ್ತರು.

ಹರಪನಹಳ್ಳಿ: ಟೆಲಿಗ್ರಾಫ್ ತಂತಿ ಕತ್ತರಿಸುತ್ತಿದ್ದ ನಾಲ್ವರನ್ನು ಬಂಧಿಸಲಾಯಿತು.

ಸೆಪ್ಟೆಂಬರ್-೧೨

ಬಳ್ಳಾರಿ: ಮುನಿಸಿಪಲ್ ಹೈಸ್ಕೂಲಿಗೆ ಸೇರಿದ ಗುಡಿಸಲೊಂದನ್ನು ಸುಟ್ಟು ಹಾಕಲಾಯಿತು. ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಸಭೆಗಳು ನಡೆದವು.

ಸೆಪ್ಟೆಂಬರ್-೧೪

DIR ಕಾನೂನಿನಡಿಯಲ್ಲಿ ೧೧ ಜನರಲ್ಲಿ ಬಂಧಿಸಲಾಯಿತು. ಹೊಸಪೇಟೆಯ ಮುನಿಸಿಪಲ್ ಹೈಸ್ಕೂಲಿನ ಒಂದು ಭಾಗವನ್ನು ಸುಟ್ಟುಹಾಕಲಾಯಿತು. ಕಾಂಗ್ರೆಸ್‌ನ ಕರಪತ್ರ ಹಂಚುತ್ತಿದ್ದ ರಾಮಚಂದ್ರ ಗುಪ್ತ ಎಂಬ ಸತ್ಯಾಗ್ರಹಿಗೆ ಶಿಕ್ಷೆಯಾಯಿತು. ರೇಶಿಟ್ಲಾ ಪೋಲೀಸ್ ಠಾಣೆಯಿಂದ ಗುಂಡುಗಳಿದ್ದ ಕಬ್ಬಿಣ ಪೆಟ್ಟಿಗೆಯನ್ನು ಕದ್ದುಕೊಂಡು ಹೋಗಿ ಬಾವಿಯಲ್ಲಿ ಹಾಕಲಾಯಿತು. ಅಲ್ಲಿಪುರ ಜೈಲಿನೊಳಗೆ ಲಾಠಿಚಾರ್ಜ್ ನಡೆಯಿತು.

ಸೆಪ್ಟೆಂಬರ್-೧೫

ಹಡಗಲಿ ತಾಲ್ಲೂಕಿನಲ್ಲಿ ಪಾನನಿಷೇಧ ಚಳುವಳಿಯಲ್ಲಿ ನಿರತರಾಗಿದ್ದ ಐವರನ್ನು

ಬಂಧಿಸಲಾಯಿತು. ಆದವಾನಿ ತಾಲ್ಲೂಕಿನ ಮಾದಿಗೆರಿ ಗ್ರಾಮದಲ್ಲಿ ಟೆಲಿಫೋನ್ ತಂತಿಯನ್ನು ಕಡಿದು ಹಾಕಲಾಯಿತು. ಇದೇ ತಾಲ್ಲೂಕಿನ ಚಿಣ್ಣಮನ ಗ್ರಾಮದಲ್ಲಿ ಟೆಲಿಗ್ರಾಫ್ ತಂತಿ ಕಡಿದು ಹಾಕಲಾಯಿತು.

ಸೆಪ್ಟೆಂಬರ್-೧೬

ಕೂಡ್ಲಿಗಿ ಹತ್ತಿರ ೫೦೦ ಅಡಿ ಟೆಲಿಗ್ರಾಫ್ ತಂತಿಯನ್ನು ಕತ್ತರಿಸಿ ಹಾಕಲಾಯಿತು

ಸೆಪ್ಟೆಂಬರ್-೧೭

ಕುರುಗೋಡಿನ ಸರ್ಕಾರಿ ಪ್ರವಾಸಿ ಬಂಗಲೆಯ ಒಂದು ಭಾಗವನ್ನು ಸುಟ್ಟು ಹಾಕಲಾಯಿತು. ಈ ವಿಧ್ವಂಸಕಾರಿ ಕೃತ್ಯಕ್ಕೆ ಸಂಬಂಧಿಸಿದಂತೆ ಅನೇಕರನ್ನು ಬಂಧಿಸಲಾಯಿತು.

ಸೆಪ್ಟೆಂಬರ್-೧೮

ಆದವಾನಿ ರೈಲು ನಿಲ್ದಾಣದಲ್ಲಿ ರಾಯಚೂರಿಗೆ ಸಂಪರ್ಕ ಕಲ್ಪಿಸಿದ್ದ ಟೆಲಿಗ್ರಾಫ್ ತಂತಿಯನ್ನು ಕಡಿಯಲಾಯಿತು. ಐವರು ಸತ್ಯಾಗ್ರಹಿಗಳನ್ನು ಬಂಧಿಸಲಾಯಿತು.

ಸೆಪ್ಟೆಂಬರ್-೧೯

ಆದವಾನಿ: ಪ್ರತಿಬಂಧಕಾಜ್ಞೆಯನ್ನು ಮುರಿದ ಐವರನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು.

ಬಳ್ಳಾರಿ: ಸರ್ಕಾರವು ನಿಷೇಧಿಸಿದ್ದ ಕಲ್ಕತ್ತಾ ಮೂಲದ ಇಂಗ್ಲೀಷ್ ವಾರ್ತಾಪತ್ರಗಳನ್ನು ಬಳ್ಳಾರಿ ನಗರದಲ್ಲಿ ಶಾಲಾ ವಿದ್ಯಾರ್ಥಿಗಳು ಹಂಚಿದರು.

ಹಡಗಲಿ: ನಗರದ ಎರಡು ಸ್ಥಳಗಳಲ್ಲಿ ನಿಷೇಧಿಸಿದ ಭಿತ್ತಿ ಚಿತ್ರಗಳನ್ನು ಅಂಟಿಸಲಾಗಿತ್ತು. ರೇಕೆಟ್ಟಾ ಹೋರದ ಬಗೆ ಸಂಬಂಧಿಸಿದಂತೆ ಮೂವರಿಗೆ ೨ ವರ್ಷ ಕಠಿಣ ಶಿಕ್ಷೆ ಹಾಗೂ ತಲಾ ೧೦೦ ರೂಪಾಯಿ ದಂಡ ವಿಧಿಸಲಾಯಿತು.

ಅಕ್ಟೋಬರ್-೨

ಬಳ್ಳಾರಿ: ಗಾಂಧಿಜಯಂತಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಬರೆದಿದ್ದ ನಿಷೇಧಿತ ಕರಪತ್ರಗಳನ್ನು ನಗರದಲ್ಲಿ ಹಂಚಲಾಯಿತು.

ಆದವಾನಿ: ಲಾಠಿ ಪ್ರಹಾರದ ಮೂಲಕ ಮೆರವಣಿಗೆಯನ್ನು ತಡೆಯಲಾಯಿತು. ೨೯ ಸತ್ಯಾಗ್ರಹಿಗಳನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರು.

ರೇಕೆಟ್ಟಾ ಸತ್ಯಾಗ್ರಹಿಗಳು ಮೆರವಣಿಗೆ ನಡೆಸಿದರು. ಮೂವರು ಸತ್ಯಾಗ್ರಹಿಗಳನ್ನು ಬಂಧಿಸಲಾಯಿತು.

ಅಕ್ಟೋಬರ್-೩

ಬಳ್ಳಾರಿ: ನಗರದಲ್ಲಿ ಟೆಲಿಫ್‌ನ್ ತಂತಿಯನ್ನು ಕಡಿಯಲಾಯಿತು.

ಹರಪನಹಳ್ಳಿ: ಯುದ್ಧ ವಿರೋಧೀ ಘೋಷಣೆ ಕೂಗುತ್ತಿದ್ದ ಯುವಕನೊಬ್ಬನನ್ನು ಬಂಧಿಸಲಾಯಿತು.

ಅಕ್ಟೋಬರ್-೪

ಬಳ್ಳಾರಿ: ವಾರ್ಡ್ಲಾ ಹೈಸ್ಕೂಲಿನ ಮರಗೆಲಸ ವಿಭಾಗದ ಕೊಠಡಿಯನ್ನು ಸುಡಲಾಯಿತು.

ಅಕ್ಟೋಬರ್-೧೪

ಸೈನಿಕರಿಗೆ ಆಹಾರ ಸರಬರಾಜು ಮಾಡಬೇಡಿರೆಂದು ಜನತೆಗೆ ಕರೆ ನೀಡುತ್ತಿದ್ದ ಬಳ್ಳಾರಿಯ ಐವರು ವಿದ್ಯಾರ್ಥಿಗಳನ್ನು ಆಲೂರು ನಗರದಲ್ಲಿ ಪೋಲೀಸರು ಬಂಧಿಸಿದರು. ಸರ್ಕಾರಿ ನೌಕರಿಗೆ ರಾಜಿನಾಮೆ ನೀಡುವಂತೆ ಪೊಲೀಸರಿಗೆ ಮನವಿ ಮಾಡಿಕೊಳ್ಳುತ್ತಿದ್ದ ಕರ್ನೂಲಿನ ವೆಂಕಟರಾಮಯ್ಯರವರನ್ನು ಪೋಲೀಸರು ಬಂಧಿಸಿದರು.

ಅಕ್ಟೋಬರ್-೧೫

ಕಲ್ಲುದೇವನಕುಂಟೆಯ ಗ್ರಾಮಾಧಿಕಾರಿ ಹಾಗೂ ಆದವಾನಿ ತಾಲ್ಲೂಕಿನ ಇಬ್ಬರು ಸತ್ಯಾಗ್ರಹಿಗಳನ್ನು ಸರ್ಕಾರಿ ಅಧಿಕಾರಿಗಳನ್ನು ತಮ್ಮ ಹುದ್ದೆಗಳಿಗೆ ರಾಜಿನಾಮೆ ಕೊಡುವಂತೆ ಒತ್ತಾಯಿಸುತ್ತಿದ್ದ ಆರೋಪದ ಮೇಲೆ ಪೋಲೀಸರು ಬಂಧಿಸಿದರು.

ಅಕ್ಟೋಬರ್-೧೭

ಹರಪನಹಳ್ಳಿಯಿಂದ ೧೬ ಮೈಲಿ ದೂರದಲ್ಲಿ ಟೆಲಿಗ್ರಾಫ್ ತಂತಿಯನ್ನು ಕಡಿಯಲಾಯಿತು. ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರು ಗ್ರಾಮದಲ್ಲಿ ಟೆಲಿಫೋನ್ ತಂತಿ ಕತ್ತರಿಸಲಾಯಿತು.

ಅಕ್ಟೋಬರ್-೨೦

ಕೋಸಗಿ ಸಬ್ ರಿಜಿಸ್ಟ್ರಾರ್ ಕಚೇರಿಗೆ ಬೆಂಕಿ ಇಡುವ ಪ್ರಯತ್ನ ನಡೆಯಿತು.

ಅಕ್ಟೋಬರ್-೨೪

ಹರಪನಹಳ್ಳಿ -ಕೊಟ್ಟೂರು ಮಾರ್ಗದಲ್ಲಿ ಟೆಲಿಫೋನ್ ತಂತಿಯನ್ನು ಕಡಿಯಲಾಯಿತು.

ಅಕ್ಟೋಬರ್-೨೬

ಹರಪನಹಳ್ಳಿಯಲ್ಲಿ ಟೆಲಿಫೋನ್ ತಂತಿ ತುಂಡರಿಸಲಾಯಿತು.

ಬಳ್ಳಾರಿ: ಮೆರವಣಿಗೆ ಮಾಡಲು ಪ್ರಯತ್ನಿಸಿದ ನಾಲ್ವರು ಸತ್ಯಾಗ್ರಹಿಗಳನ್ನು

ಸೆರೆಹಿಡಿಯಲಾಯಿತು.

ಕೊಟ್ಟೂರು: ನಿಷೇಧಿತ ಕರಪತ್ರವನ್ನು ಹಂಚಲಾಯಿತು.

ನವೆಂಬರ್-೧

ಹರಿಹರ: ಹರಪನಹಳ್ಳಿಗೆ ೭ ಮೈಲಿ ದೂರದಲ್ಲಿ ಹೊಸಪೇಟೆಗೆ ಸಾಗಿಸುತ್ತಿದ್ದ ಅಂಚೆಯನ್ನು ಸತ್ಯಾಗ್ರಹಿಗಳು ಕೊಂಡೊಯ್ದರು. ಈ ಬಗೆಯ ಆಕ್ರಮಣವನ್ನು ಪೂರ್ವಯೋಜಿತ ರೀತಿಯಲ್ಲಿ ನಡೆಸಲಾಗಿತ್ತು. ಈ ಸಾಹಸ ನಡೆಸಿದ ತಂಡದಲ್ಲಿ ಮುಖವಾಡ ಧರಿಸಿದ್ದ ಚಾಕು- ದಂಡಗಳನ್ನು ಹಿಡಿದಿದ್ದ ೧೫-೨೦ ಜನರಿದ್ದರು. ಇವರೆಲ್ಲಾ ಬೊಂಬಾಯಿ ಪ್ರಾಂತಕ್ಕೆ ಸೇರಿದ ಧಾರವಾಡ ಜಿಲ್ಲೆಯವರೆಂದು ಪೋಲೀಸರು ಶಂಕಿಸಿದ್ದರು.

ನವೆಂಬರ್-೫

ಹೊಸಪೇಟೆ: ಕರನಿರಾಕರಣೆ ಘೋಷಣೆ ಇದ್ದ ಕರಪತ್ರಗಳನ್ನು ಹಂಚಲಾಯಿತು.

ನವೆಂಬರ್-೧೯

ಲಕ್ಷ್ಮಣಾಚಾರ್ ಎಂಬ ಪಂಚಾಯಿತಿ ಸದಸ್ಯರು ನಾರಾಯಣದೇವರಕೆರೆ ಪಂಚಾಯಿತಿಗೆ ಸರ್ಕಾರದ ದಬ್ಬಾಳಿಕೆಯನ್ನು ಪ್ರತಿಭಟಿಸಿ ರಾಜಿನಾಮೆ ಇತ್ತರು.

ಡಿಸೆಂಬರ್-೪

ಬಳ್ಳಾರಿ: ಕಾಲೇಜು ವಿದ್ಯಾರ್ಥಿಯೊಬ್ಬನ ಮನೆಯನ್ನು ತಪಾಸಣೆ ಮಾಡಲಾಯಿತು ಮತ್ತು ನಿಷೇಧಿತ ಬರಹಗಳನ್ನು ವಶಪಡಿಸಿಕೊಳ್ಳಲಾಯಿತು.

೧೯೪೨ರಲ್ಲಿ ಬಳ್ಳಾರಿಗೆ ಜಯಪ್ರಕಾಶ್ ನಾರಾಯಣ ರಹಸ್ಯ ಭೇಟಿ

೧೯೪೨ರ ಚಳುವಳಿ ಸಂದರ್ಭದಲ್ಲಿ ದೇಶದ ತುಂಬಾ ಅನೇಕ ಸ್ವಾತಂತ್ರ್ಯ ಯೋಧರು ಭೂಗತರಾಗಿ ಬ್ರಿಟಿಷರ ವಿರುದ್ಧ ಪ್ರತಿಭಟನೆ ಸಂಘಟಿಸುತ್ತಿದ್ದರು. ಭೂಗತವಾಗಿ, ಬ್ರಿಟಿಷರಿಗೆ ಸಿಂಹಸ್ವಪ್ನವಾಗಿ ಕಾಡುತ್ತಿದ್ದ ಜಯಪ್ರಕಾಶ್ ನಾರಾಯಣರವರು ೧೯೪೨ರ ಚಳುವಳಿ ಸಂದರ್ಭದಲ್ಲಿ ಬಳ್ಳಾರಿಯ ಸತ್ಯವಂತರಾವ್ ಮಲೆಬೆನ್ನೂರುರವರು ಮನೆಯಲ್ಲಿ ಆಶ್ರಯ ಪಡೆದಿದ್ದರು. ಅವರು ಜರೂರಾಗಿ ಬೊಂಬಾಯಿಗೆ ಹೋಗ ಬೇಕಾಗಿತ್ತು. ಪೊಲೀಸರ ಕಣ್ಣು ತಪ್ಪಿಸಿ ಹೋಗುವುದು ಹೇಗೆ' ಜೆಪಿಯವರನ್ನು ಸುರಕ್ಷಿತವಾಗಿ ಬೊಂಬಾಯಿಗೆ ಕಳುಹಿಸಲು ಒಂದು ಯೋಜನೆ ಸಿದ್ಧಪಡಿಸಲಾಯಿತು. ಅದರಂತೆ ಜೆಪಿಯವರು ಸ್ಥಳೀಯ ಕೆಲವು ಕಾರ್ಯಕರ್ತರೊಂದಿಗೆ ಬಳ್ಳಾರಿಯಿಂದ ಆದವಾನಿಗೆ ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡಿದರು. ಆದವಾನಿಯಿಂದ ಮೊದಲ ದರ್ಜೆ ಬೋಗಿಯಲ್ಲಿ ಬೊಂಬಾಯಿಗೆ ಹೋದರು. ಹೀಗೆ ಬಳ್ಳಾರಿಯ ಅನೇಕ ಕಾರ್ಯಕರ್ತರು ಭೂಗತ ಚಳುವಳಿಗಾರರಿಗೆ ಆಶ್ರಯ ನೀಡಿ ನೆರವಾಗುತ್ತಿದ್ದರು.

ಭೂಗತ ಚಳುವಳಿಗಾರರು

೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಸಂದರ್ಭದಲ್ಲಿ ಅನೇಕ ಕಾಂಗ್ರೆಸ್ ಕಾರ್ಯಕರ್ತರು ಪೊಲೀಸರ ಕಣ್ಣು ತಪ್ಪಿಸಿ ಭೂಗತರಾಗಿ ಚಳುವಳಿ ನಡೆಸಿದರು. ಬಳ್ಳಾರಿ ಜಿಲ್ಲೆಯಲ್ಲಿ ಅನೇಕರು ಭೂಗತ ಚಳುವಳಿಗಾರರಿಗೆ ಆಶ್ರಯ ನೀಡಿ ಸಹಕರಿಸಿದರು. ಹೊಸಪೇಟೆಯ ಬೆಲ್ಲದ ಚನ್ನಪ್ಪನವರ ದಲ್ಲಾಳಿ ಅಂಗಡಿಯು ಅಂತಹ ಒಂದು ಆಶ್ರಯ ದಾಣವಾಗಿತ್ತು. ಪೊಲೀಸರಿಗೆ ಅನುಮಾನ ಬಾರದಂತೆ ಇವರು ಭೂಗತ ಚಳುವಳಿಗಾರರಿಗೆ ಆಶ್ರಯ ನೀಡುತ್ತಿದ್ದರು. ಭೂಗತ ಚಳುವಳಿಗಾರರ ಪ್ರಯಾಣಕ್ಕೆ ವ್ಯವಸ್ಥೆ ಮಾಡುತ್ತಿದ್ದರು.

ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿ ಗ್ರಾಮದ ಮುದೇನೂರು ಕೊಟ್ರಬಸಪ್ಪನವರ ಮನೆಯು ಇಂತಹ ಒಂದು ಆಶ್ರಯ ದಾಣವಾಗಿತ್ತು. ಇವರ ಮನೆಯಲ್ಲಿ ಭೂಗತ ಚಳುವಳಿಗಾರರು ಆಶ್ರಯ ಪಡೆದಿರುವ ಅನುಮಾನ ಪೊಲೀಸರಿಗೆ ಇತ್ತು. ಆದರೆ ಕೊಟ್ರಬಸಪ್ಪನವರು ಪೊಲೀಸರಿಗೆ ತಕ್ಕುದಾದ ಸಮಜಾಯಿಸಿ ಹೇಳಿ ತಮ್ಮ ಮನೆಯ ತಪಾಸಣೆ ತಪ್ಪಿಸಿಕೊಳ್ಳುತ್ತಿದ್ದರು. ಮೈಲಾರ ಮಹದೇವಪ್ಪನವರ ಗುಂಪಿಗೆ ಸೇರಿದ ಅನೇಕರು ಇವರ ಮನೆಯಲ್ಲಿ ಆಶ್ರಯ ಪಡೆದಿದ್ದರು ಎನ್ನಲಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವು ಹೆಚ್ಚಾಗಿ ಪುರುಷರಿಂದ ಕೂಡಿದ ಹೋರಾಟವಾಗಿತ್ತು. ಮಹಿಳೆಯರ ಸಹಭಾಗಿತ್ವವು ಅತ್ಯಂತ ಕಡಿಮೆಯಿತ್ತು. ಅಂದು ಮಹಿಳೆಯರು ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಸುಲಭವಿರಲಿಲ್ಲ. ಪುರುಷರಿಗೆ ಮಾತ್ರ ಶಿಕ್ಷಣದ ಸೌಲಭ್ಯ ದೊರೆಯುತ್ತಿತ್ತು. ಇಷ್ಟೆಲ್ಲಾ ಪ್ರತಿಕೂಲಗಳಿದ್ದರೂ ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಪಾಲುಗೊಂಡಿದ್ದರು ಎಂಬುದು ಹೆಮ್ಮೆ ಪಡುವ ಸಂಗತಿಯಾಗಿದೆ.

ಜಯಲಕ್ಷ್ಮೀಬಾಯಿ

ಟಿ.ಬಿ. ಕೇಶವರಾಯರು ಬಳ್ಳಾರಿ ಜಿಲ್ಲೆಯಲ್ಲಿ ಕಾಂಗ್ರೆಸ್ ಸಂಘಟನೆಯನ್ನು ಬೆಳೆಸಿದವರಲ್ಲಿ ಮತ್ತು ಸ್ವಾತಂತ್ರ್ಯ ಚಳುವಳಿಯನ್ನು ಕಟ್ಟಿದವರಲ್ಲಿ ಪ್ರಮುಖರಾಗಿದ್ದಾರೆ. ಗೋಹತ್ಯೆ ನಿಷೇಧ, ಮದ್ಯಪಾನ ನಿಷೇಧ, ಹರಿಜನರ ಸೇವೆ, ಹಿಂದಿ ಪ್ರಚಾರ, ಖಾದಿ ಪ್ರಚಾರ ಮುಂತಾದ ಗಾಂಧೀಜಿಯವರಿಗೆ ಪ್ರಿಯವಾಗಿದ್ದ ಅನೇಕ ರಚನಾತ್ಮಕ ಕೆಲಸಗಳಲ್ಲಿ ಇವರು ತೊಡಗಿ ಕೊಂಡಿದ್ದರು. ಹರಿಹರ ತಾಲ್ಲೂಕಿನ ಮಲೆಬೆನ್ನೂರು ಗ್ರಾಮದ ಶ್ರೀಮತಿ ಜಯಲಕ್ಷ್ಮೀ ಬಾಯಿಯವರು ಇವರ ಕೈ ಹಿಡಿದರು. ಜಯಲಕ್ಷ್ಮೀಬಾಯಿಯವರು ತಮ್ಮ ಸೋದರನ ಜೊತೆ ೧೯೨೪ರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿ ಬಂದಿದ್ದರು. ಬಳ್ಳಾರಿ ಜಿಲ್ಲೆಯಲ್ಲಿ

ಸತ್ಯಾಗ್ರಹ ಮಾಡಿ ಶಿಕ್ಷೆ ಅನುಭವಿಸಿದ ಪ್ರಮುಖ ಮಹಿಳೆಯೆಂದರೆ ಜಯಲಕ್ಷ್ಮೀಬಾಯಿ.

೧೯೩೦ ರಲ್ಲಿ ಇವರು ಹರಪನಹಳ್ಳಿಯಲ್ಲಿ ಮಹಿಳೆಯರನ್ನು ಕೂಡಿಸಿ ಪ್ರಭಾತ್ ಫೇರಿಗಳನ್ನು ನಡೆಸುತ್ತಿದ್ದರು. ೧೯೩೨ ರಲ್ಲಿ ಇವರು ಹೊಸಪೇಟೆಯಲ್ಲಿ ಸತ್ಯಾಗ್ರಹ ನಡೆಸಿ ಬಂಧಿತರಾದರು. ಇವರು ಆರು ತಿಂಗಳ ಶಿಕ್ಷೆ ಹಾಗು ೧೦೦ ರೂಪಾಯಿ ಜುಲ್ಮಾನೆಗೆ ಒಳಗಾದರು. ಜುಲ್ಮಾನೆ ಕೊಡದುದರಿಂದ ಮತ್ತೆ ಆರು ವಾರಗಳ ಶಿಕ್ಷೆಯಾಯಿತು. ೧೯೪೧ ರಲ್ಲಿ ಇವರು ವೈಯಕ್ತಿಕ ಸತ್ಯಾಗ್ರಹ ಮಾಡಿದರೂ ಸಹ ಬಂಧನವಾಗಲಿಲ್ಲ.

ಗಾಂಧೀಜಿಯವರ ಹರಿಜನ ಸುಧಾರಣೆ ಕಾರ್ಯಕ್ರಮದ ಅಂಗವಾಗಿ ಇವರು ಹರಿಜನ ಬಾಲಕನೊಬ್ಬನನ್ನು ತಮ್ಮ ಮನೆಯಲ್ಲಿ ಸಾಕುತ್ತಿದ್ದರು. ಇದರಿಂದ ಸಮಾಜದ ಬಹಿಷ್ಕಾರಕ್ಕೆ ಇವರು ಒಳಗಾಗಬೇಕಾಯಿತು. ಹೀಗೆ ಜಯಲಕ್ಷ್ಮೀಬಾಯಿಯವರು ಸ್ವಾತಂತ್ರ್ಯ ಚಳುವಳಿ ಹಾಗೂ ವಿಧಾಯಕ ಕಾರ್ಯಕ್ರಮಗಳೆರಡರಲ್ಲೂ ಕ್ರಿಯಾಶೀಲರಾಗಿ ದುಡಿದರು.

ಕೋಗಳಿ ರುದ್ರಮ್ಮ

ಕೋಗಳಿಯ ಬಿ.ಎಂ. ಅಜ್ಜಯ್ಯನವರ ತಂಗಿ ಶ್ರೀಮತಿ ರುದ್ರಮ್ಮನವರ ವಿವಾಹ ಎಳನೇ ವಯಸ್ಸಿಗೆ ನಡೆಯಿತು. ದುರದೃಷ್ಟದಿಂದಾಗಿ ಇವರ ಗಂಡ ತೀರಿಕೊಂಡರು. ಗಾಂಧೀಜಿಯವರ ವಿಚಾರಗಳಿಂದ ಪ್ರೇರಿತರಾದ ಶ್ರೀಮತಿ ರುದ್ರಮ್ಮನವರು ಒಂದು ವರ್ಷದ ಕಾಲ ವರ್ಧಾದಲ್ಲಿ ಜಮುನಲಾಲ್ ಬಜಾಜ್‌ರವರು ನಡೆಸುತ್ತಿದ್ದ ಮಹಿಳಾಶ್ರಮದಲ್ಲಿ ಕಳೆದರು. ಇವರು [illegible]ರಲ್ಲಿ ವರ್ಧಾದಿಂದ ಕೊಟ್ಟೂರಿಗೆ ಹಿಂತಿರುಗಿದರು. ಗಾಂಧೀವಾದಿಗಳಾಗಿದ್ದ ಗೋರ್ಲಿ ಶರಣಪ್ಪನವರು ವಿಧವೆಯಾಗಿದ್ದ ರುದ್ರಮ್ಮನವರನ್ನು ಸಮಾಜದ ತೀವ್ರ ವಿರೋಧದ ನಡುವೆ ವಿವಾಹವಾದರು. ಗೋರ್ಲಿ ಶರಣಪ್ಪನವರು ತಮ್ಮ ದೃಢ ನಿಶ್ಚಯವನ್ನು ಬದಲು ಮಾಡಲಿಲ್ಲ.

ಗೋರ್ಲಿ ಶರಣಪ್ಪ ಮತ್ತು ರುದ್ರಮ್ಮನವರುಗಳ ವಿವಾಹವು ಹೊಸರಿತ್ತಿಯ ಆಶ್ರಮದಲ್ಲಿ [illegible] ರಲ್ಲಿ ಜರುಗಿತು. ಹಳ್ಳಿಕೇರಿ ಗುದ್ಲೆಪ್ಪ, ಮೈಲಾರ ಮಹದೇವಪ್ಪ, ದೊಡ್ಡ ಮೇಟಿ ಅಂದಾನಪ್ಪ ಮುಂತಾದ ಕಾಂಗ್ರೆಸ್ ಕಾರ್ಯಕರ್ತರ ಎದುರಿಗೆ ವಿವಾಹ ನಡೆಯಿತು. ಹೀಗೆ ರುದ್ರಮ್ಮನವರ ವಿವಾಹವು ಸ್ವಾತಂತ್ರ್ಯ ಚಳುವಳಿಯ ಒಂದು ಭಾಗವೇ ಆಗಿ ಹೋಯಿತು. ಗಾಂಧೀಜಿ ವಿಚಾರಗಳಿಂದ ಪ್ರೇರಿತರಾದ ಶರಣಪ್ಪ ಮತ್ತು ರುದ್ರಮ್ಮನವರುಗಳ ವಿವಾಹವು ಆ ಕಾಲಕ್ಕೆ ಕ್ರಾಂತಿಕಾರಿ ಘಟನೆಯಾಗಿತ್ತು.

ಡಾ. ಲಕ್ಷ್ಮೀದೇವಿ

ಬಳ್ಳಾರಿ ನಗರದಲ್ಲಿ ಪ್ರಸಿದ್ಧ ವಕೀಲರಾಗಿದ್ದ ಎಂ.ಎಸ್. ಮೃತ್ಯುಂಜಯಶಾಸ್ತ್ರಿ ಯವರು ವಿಧವೆಯಾಗಿದ್ದ ಡಾ. ಲಕ್ಷ್ಮೀದೇವಿಯನ್ನು ವಿವಾಹವಾದರು.

ಡಾ. ಲಕ್ಷ್ಮೀದೇವಿಯವರು ಗಾಂಧೀಜಿಯವರ ಅನುಯಾಯಿಗಳಾಗಿದ್ದರು. ಸದಾ ಖದ್ದರ್ ಧರಿಸುತ್ತಿದ್ದ ಇವರು ಜೀವನದಲ್ಲೂ ಗಾಂಧೀಜಿ ನಿಯಮಗಳನ್ನು ಪಾಲಿಸುತ್ತಿದ್ದರು. ಇವರು ಬಳ್ಳಾರಿಯಲ್ಲಿ 'ಖದ್ದರಮ್ಮ'ನೆಂದು ಹೆಸರುವಾಸಿಯಾಗಿದ್ದರು. ಬಳ್ಳಾರಿ ಜಿಲ್ಲೆಯ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಇವರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಸಾರ್ವಜನಿಕ ಸಭೆಗಳಲ್ಲಿ ಇವರು ನಿರ್ಭಯದಿಂದ ಭಾಷಣ ಮಾಡುತ್ತಿದ್ದರು. ೧೯೩೩ ಮತ್ತು ೧೯೩೮ ರಲ್ಲಿ ಚಳುವಳಿ ಮಾಡಿ ಇವರು ಬಂಧಿತರಾಗಿ ಶಿಕ್ಷೆಗೊಳಗಾದರು. ಇವರು ಮದರಾಸು ಶಾಸನ ಸಭೆಗೆ ಬಳ್ಳಾರಿ ಜಿಲ್ಲೆಯಿಂದ ಆಯ್ಕೆಯಾಗಿದ್ದರು.

ಇವರ ಪತಿ ಎಂ. ಎಸ್.ಮೃತ್ಯುಂಜಯಶಾಸ್ತ್ರಿಗಳು ಅನೇಕ ಸತ್ಯಾಗ್ರಹಿಗಳ ಪರವಾಗಿ ಕೋರ್ಟುಗಳಲ್ಲಿ ಉಚಿತವಾಗಿ ವಾದಿಸಿ ಬಿಡುಗಡೆಗೆ ಸಹಾಯ ಮಾಡುತ್ತಿದ್ದರು. ಇವರು ಜೈಲಿಗೆ ಹೋಗಲಿಲ್ಲ. ಆದರೆ ಕಾಂಗ್ರೆಸ್‌ನ ಹಿತೈಷಿಗಳಾಗಿದ್ದರು. ಕೋರ್ಟಿನಲ್ಲೂ ಸಹ ಇವರು ಖಾದಿ ಸಮವಸ್ತ್ರ ಧರಿಸುತ್ತಿದ್ದರು. ೧೯೪೨ರಲ್ಲಿ ಇವರು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದರು. ಗಂಡ ಮತ್ತು ಹೆಂಡತಿ ಕೂಡಿಕೊಂಡು ಒಬ್ಬ ಬಾಲಕಿಯನ್ನು ದತ್ತು ತೆಗೆದುಕೊಂಡಿದ್ದರು.

ರತ್ನಕಟ್ಟಿ ಚನ್ನಬಸಮ್ಮ

ರಾಣೆಬೆನ್ನೂರು ತಾಲೂಕಿಗೆ ಸೇರಿದ ರತ್ನಕಟ್ಟಿ ಚನ್ನಪ್ಪನವರ ಪತ್ನಿ ಶ್ರೀಮತಿ ಚನ್ನಬಸಮ್ಮನವರು ೧೯೪೦ರಲ್ಲಿ ಹರಪನಹಳ್ಳಿಯಲ್ಲಿ ವೈಯಕ್ತಿಕ ಚಳುವಳಿ ನಡೆಸಿ ಜೈಲು ಶಿಕ್ಷೆ ಅನುಭವಿಸಿದರು. ಹರಪನಹಳ್ಳಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಂ. ವೀರಭದ್ರಯ್ಯನವರು ಹೇಳುವಂತೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದ ಏಕೈಕ ಮಹಿಳೆ ರತ್ನಕಟ್ಟಿ ಚನ್ನಬಸಮ್ಮ.

ಆದವಾನಿ ತಾಲ್ಲೂಕಿನ ಮಹಿಳೆಯರು

೧೯೪೨ ರ ಚಲೇಜಾವ್ ಚಳುವಳಿಯಲ್ಲಿ ಪ್ರತಿಬಂಧಕಾಜ್ಞೆ ಉಲ್ಲಂಘನೆಗಾಗಿ ಶ್ರೀಮತಿ ಬಳೇಕಲ್ಲು ರಾಮಕ್ಕ ಮತ್ತು ನಂಬೆ ಯಂಕಮ್ಮ ಎಂಬ ಇಬ್ಬರು ಮಹಿಳೆಯರು ಬಂಧಿತರಾಗಿ ಶಿಕ್ಷೆಗೊಳಗಾದರು. ಇವರಿಬ್ಬರೂ ೬ ತಿಂಗಳ ಕಠಿಣ ಶಿಕ್ಷೆ ಅನುಭವಿಸಿದರು.

ಶ್ರೀಮತಿ ರಾಮಲಿಂಗಮ್ಮ

ಆದವಾನಿ ತಾಲ್ಲೂಕಿನ ಪೆದ್ದಕಡಬೂರಿನ ಐಯ್ಯಪ್ಪರೆಡ್ಡಿಗಾರಿ ವೆಂಕಟರೆಡ್ಡಿಯವರು ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು. ಇವರು ತಮ್ಮ ಮಿತ್ರರ ಸಹಯೋಗದಿಂದ ಪೆದ್ದಕಡಬೂರಿನಲ್ಲಿ ಭಾರಧ್ವಾಜ ಆಶ್ರಮ ಪ್ರಾರಂಭಿಸಿದರು. ಅಲ್ಲಿ ಖಾದಿ ನೂಲುವುದು, ಖಾದಿ ಬಟ್ಟೆ ತಯಾರಿ ಸುವುದು, ಕೈಯಿಂದ ತಯಾರಿಸುವ ಕಾಗದ ಉತ್ಪಾದಿಸುವುದು ಮುಂತಾದ ಕೆಲಸಗಳನ್ನು ನಡೆಸಲಾಗುತ್ತಿತ್ತು. ಈ ಆಶ್ರಮಕ್ಕೆ ಅಗತ್ಯವಾದ ಭೂಮಿಯನ್ನು ಉಚಿತವಾಗಿ ಶ್ರೀಮತಿ

ರಾಮಲಿಂಗಮ್ಮನವರು ನೀಡಿದರು. ಇದಲ್ಲದೆ ಇವರು ನಿಸ್ವಾರ್ಥ ಮನೋಭಾವದಿಂದ ಆಶ್ರಮಕ್ಕೆ ಅನೇಕ ಬಗೆಯಲ್ಲಿ ನೆರವು ನೀಡಿದರು.

ಪ್ರಭಾತ್ ಭೇರಿಯಲ್ಲಿ ಮಹಿಳೆಯರು

ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಹರಪನಹಳ್ಳಿ, ಕೊಟ್ಟೂರು, ಬಳ್ಳಾರಿ, ಆದವಾನಿ ನಗರಗಳಲ್ಲಿ ನಡೆಯುತ್ತಿದ್ದ ಪ್ರಭಾತ್ ಭೇರಿಗಳಲ್ಲಿ ಊರಿನ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದರು. ೧೯೩೦ ರ ದಶಕದಲ್ಲಿ ಬಳ್ಳಾರಿಯಲ್ಲಿ ನಡೆದ ಪಿಕೆಟಿಂಗ್‌ಗಳಲ್ಲಿ ತಮ್ಮ ಪತ್ನಿ ಹಾಗೂ ಇತರೆ ಮಹಿಳೆಯರು ಭಾಗವಹಿಸುತ್ತಿದ್ದುದನ್ನು ಸ್ವಾತಂತ್ರ್ಯ ಹೋರಾಟಗಾರರಾದ ಬಿ.ವಿ.ಶೇಷಗಿರಿರಾವ್ ನೆನಪಿಸಿಕೊಳ್ಳುತ್ತಾರೆ (ಸೂರ್ಯನಾರ್ಥ ಕಾಮತ್, ೧೯೭೪ ಸಂ: ೧ : ೮೮೫). ಹರಪನಹಳ್ಳಿಯಲ್ಲಿಯೂ ಸಹ ಪ್ರಭಾತ್ ಭೇರಿಯಲ್ಲಿ ಶಾಲಾ ಬಾಲಕಿಯರು ಹಾಗೂ ಮಹಿಳೆಯರು ಭಾಗವಹಿಸುತ್ತಿದ್ದುದನ್ನು ಮತ್ತೊಬ್ಬ ಚಳುವಳಿಗಾರ ಟಿ.ಬಿ. ಕೇಶವರಾಯರು ಹೇಳುತ್ತಾರೆ. ಹೊಸಪೇಟೆಯಲ್ಲಿ ನಡೆಯುತ್ತಿದ್ದ ಪ್ರಭಾತ್ ಭೇರಿಯಲ್ಲಿ ಮತ್ತಿಹಳ್ಳಿ ರಾಘವೇಂದ್ರ ರಾಯರ ಪತ್ನಿ ಸುಂದರಮ್ಮ ಹಾಗು ಮಗಳು ವನಜಾಬಾಯಿ ತಪ್ಪದೆ ದಿನವೂ ಭಾಗವಹಿಸುತ್ತಿದ್ದರು ಎಂದು ಮತ್ತಿಹಳ್ಳಿ ನಾಗರಾಜರಾಯರು ಬರೆಯುತ್ತಾರೆ. ಮತ್ತಿಹಳ್ಳಿ ಸುಂದರಮ್ಮನವರು ಖಾದಿಧಾರಿಗಳಾಗಿದ್ದರು ಮತ್ತು ೧೯೩೮ ರಲ್ಲಿ ಹೊಸಪೇಟೆ ನಗರ ಸಭೆಗೆ ಕಾಂಗ್ರೆಸ್ ಸದಸ್ಯರಾಗಿ ಆರಿಸಿ ಬಂದಿದ್ದರು.

ಹೀಗೆ ಬಳ್ಳಾರಿ ಜಿಲ್ಲೆಯಲ್ಲಿ ಮಹಿಳೆಯರು ತಮ್ಮ ಸೀಮಿತ ನೆಲೆಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಕಾಣಿಕೆ ಸಲ್ಲಿಸಿದ್ದಾರೆ. ತಮ್ಮ ಗಂಡಂದಿರು ಮತ್ತು ಮಕ್ಕಳು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದಾಗ ಕುಟುಂಬವನ್ನು ಇವರು ನಿರ್ವಹಿಸಿದ್ದಾರೆ. ಅನೇಕ ಮಹಿಳೆಯರು ತಮ್ಮ ಗಂಡಂದಿರು ಸ್ವಾತಂತ್ರ್ಯ ಚಳುವಳಿಗೆ ಸೇರುವಂತೆ ಪ್ರೋತ್ಸಾಹ ನೀಡಿದ್ದಾರೆ. ಸಂಪ್ರದಾಯ ಮತ್ತು ಮಡಿ-ಮೈಲಿಗೆಗಳ ರೂಪದಲ್ಲಿ ಸಮಾಜವು ಒಪ್ಪಾಡುತ್ತಿದ್ದಾಗ ಬಳ್ಳಾರಿ ಜಿಲ್ಲೆಯ ಕೆಲವರಾದರು ಹೆಣ್ಣು ಮಕ್ಕಳು ಧೈರ್ಯದಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದರು. ಕಂದಾಚಾರ, ಮೂಢ ಸಂಪ್ರದಾಯಗಳ ನಿವಾರಣೆಗೆ ಕಾರಣರಾದರು. ಶ್ರೀಮತಿ ರತ್ನಾಬಾಯಿ, ಶ್ರೀಮತಿ ಕೋಗಳಿ ರುದ್ರಮ್ಮ, ಡಾ. ಲಕ್ಷ್ಮೀಬಾಯಿ ಇವರೆಲ್ಲರದೂ ಆ ಕಾಲಕ್ಕೆ ವಿಧವಾ ಪುನರ್ವಿವಾಹವಾಗಿದ್ದವು.

ಭಾಗ-೩

ಹೈದರಾಬಾದ್ ಸಂಸ್ಥಾನದ ವಿಮೋಚನಾ ಚಳುವಳಿ ೧೯೪೭-೧೯೪೮

ತುಂಗಭದ್ರಾ ನದಿಯು ಹರಪನಹಳ್ಳಿ ತಾಲ್ಲೂಕು 'ಕಡತಿ' ಎಂಬ ಗ್ರಾಮದ ಬಳಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಹರಪನಹಳ್ಳಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ ಮತ್ತು ಶಿರಗುಪ್ಪ

ತಾಲ್ಲೂಕುಗಳ ಗಡಿಗುಂಟ ಸುಮಾರು ೩೨೦ ಕಿ.ಮೀ. ಉದ್ದ ನದಿ ಹರಿಯುತ್ತದೆ. ನದಿಯ ಬಲದಂಡೆ ಬಳ್ಳಾರಿ ಜಿಲ್ಲೆಯ ಗಡಿಯಾದರೆ ನದಿಯ ಎಡದಂಡೆಯು ಧಾರವಾಡ ಜಿಲ್ಲೆ ಹಾಗೂ ರಾಯಚೂರು ಜಿಲ್ಲೆಗಳ ಗಡಿಯಾಗಿದೆ. ೧೯೪೭ ಆಗಸ್ಟ್ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ಬಂತು. ಆದರೆ ಹೈದರಾಬಾದ್ ಸಂಸ್ಥಾನದ ಪ್ರಜೆಗಳಿಗೆ ಸ್ವಾತಂತ್ರ್ಯ ಬರಲಿಲ್ಲ. ಏಕೆಂದರೆ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಹೈದರಾಬಾದ್ ನಿಜಾಮನು ಸ್ವತಂತ್ರ ರಾಷ್ಟ್ರ ಕಟ್ಟುವ ಅಭಿಲಾಷೆ ವ್ಯಕ್ತಪಡಿಸಿದನು. ಈ ದಿಶೆಯಲ್ಲಿ ಅವನು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜತಾಂತ್ರಿಕ ಸಂಧಾನ ನಡೆಸಲು ತೊಡಗಿದನು. ಈ ಮಧ್ಯೆ ಧರ್ಮಾಂಧರಿಂದ ಕೂಡಿದ ಅರೆ ಸೈನಿಕ ಪಡೆಯೊಂದರ ಅನುಯಾಯಿಗಳಾಗಿದ್ದ ರಜಾಕಾರರು ಸಂಸ್ಥಾನದಲ್ಲಿ ಪ್ರಜೆಗಳನ್ನು ಪೀಡಿಸುತ್ತಿದ್ದರು.

ಈ ಎಲ್ಲಾ ಬೆಳವಣಿಗೆ ಹಿನ್ನೆಲೆಯಲ್ಲಿ ಹೈದರಾಬಾದ್ ಸಂಸ್ಥಾನದಲ್ಲಿ ವಿಮೋಚನಾ ಚಳುವಳಿ ೧೯೪೭ರ ಆಗಸ್ಟ್ ೧೫ರ ನಂತರವೂ ಮುಂದುವರಿಯಿತು. ರಜಾಕಾರರ ವಿರುದ್ಧ ಹೋರಾಡಲು ಹೈದರಾಬಾದ್ ಸಂಸ್ಥಾನದೊಳಗೆ ಕನ್ನಡ ಭಾಷಾ ಪ್ರದೇಶಗಳಾಗಿದ್ದ ಬೀದರ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಜನರು ಶಿಬಿರಗಳನ್ನು ಸ್ಥಾಪಿಸಿದ್ದರು. ಹೆಚ್ಚಾಗಿ ಶಿಬಿರಗಳನ್ನು ಹೈದರಾಬಾದ್ ಸಂಸ್ಥಾನದ ಗಡಿಯ ಹೊರಗೆ ಸ್ಥಾಪಿಸಲಾಗುತ್ತಿತ್ತು. ರಜಾಕಾರರ ಹಾವಳಿಯಿಂದ ನಿರಾಶ್ರಿತರಾದ ಜನರಿಗೆ ಶಿಬಿರಗಳಲ್ಲಿ ಪರಿಹಾರ ಒದಗಿಸಲಾಗುತ್ತಿತ್ತು. ಶಿಬಿರದಲ್ಲಿ ಯುವಕರಿಗೆ ಸೈನಿಕ ತರಬೇತಿ ನೀಡಿ ರಜಾಕಾರರನ್ನು ಎದುರಿಸುವ ವಿಧಾನಗಳನ್ನು ಹೇಳಿ ಕೊಡಲಾಗುತ್ತಿತ್ತು.

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ರಾಯಚೂರು ಜಿಲ್ಲೆ ಕೊಪ್ಪಳ ತಾಲ್ಲೂಕಿನಲ್ಲಿ ರಜಾಕಾರರ ಹಾವಳಿಯಿಂದ-ಪೀಡನೆಯಿಂದ ನೊಂದ ಜನರೆಲ್ಲಾ ನದಿ ದಾಟಿ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನ ಹಳ್ಳಿಯ ಸುತ್ತ ಮುತ್ತಲಿನ ಗ್ರಾಮಗಳಿಗೆ ಬರುತ್ತಿದ್ದರು. ಹೀಗೆ ವಲಸೆ ಬಂದ ನಿರಾಶ್ರಿತರಿಗೆ ಸೌಲಭ್ಯವೊದಗಿಸುವ ಸಲುವಾಗಿ ಹಗರಿ ಬೊಮ್ಮನ ಹಳ್ಳಿ ಹತ್ತಿರದ ಬಾಚಿಗೊಂಡನ ಹಳ್ಳಿಯಲ್ಲಿನ ಶ್ರೀ ಮಹಾಂತೇಶ್ವರ ಮಠದಲ್ಲಿ ಶಿಬಿರವೊಂದನ್ನು ಸ್ಥಾಪಿಸಲಾಗಿತ್ತು. ಕೊಪ್ಪಳ ತಾಲ್ಲೂಕಿನ ಕಾತರಿಕಿ, ಗುಡ್ಲಾನೂರು, ಹ್ಯಾಟಿ, ಸಿಂದೋಗಿ, ಡಂಬಳ ಮುಂತಾದ ಗ್ರಾಮಗಳ ಜನರು ರಜಾಕಾರರ ಹಾವಳಿಯಿಂದ ಮನೆಮಠ ಕಳೆದುಕೊಂಡು ಬಾಚಿಗೊಂಡನ ಹಳ್ಳಿಯ ಶಿಬಿರದಲ್ಲಿ ನೆಲೆಗೊಂಡಿದ್ದರು.

ಬಾಚಿಗೊಂಡನ ಹಳ್ಳಿ, ಬನ್ನಿಗೋಳ, ಶೀಗೇಹಳ್ಳಿ, ತಂಬ್ರಹಳ್ಳಿ, ಬಸರಗೋಡು, ಹಂಪಸಾಗರ ಮುಂತಾದ ಗ್ರಾಮಗಳ ಜನರು ಶಿಬಿರದಲ್ಲಿ ನಿರಾಶ್ರಿತರಿಗೆ ಊಟ, ಬಟ್ಟೆ, ಮುಂತಾದ ಅಗತ್ಯಗಳನ್ನು ಒದಗಿಸುತ್ತಿದ್ದರು. ಬಾಚಿಗೊಂಡನ ಹಳ್ಳಿಯಲ್ಲಿ ಸ್ಥಾಪಿಸಿದ್ದ ಶಿಬಿರಕ್ಕೆ ಶ್ರೀ ಅಳವಂಡಿ ಶಿವಮೂರ್ತಿ ಸ್ವಾಮಿಗಳು ಶಿಬಿರಾಧಿಕಾರಿಯಾಗಿದ್ದರು ಮತ್ತು ಮುದನೂರ ವಿರೂಪಾಕ್ಷಪ್ಪನವರು ಉಪಶಿಬಿರಾಧಿಕಾರಿಗಳಾಗಿದ್ದರು. ಶಿಬಿರದಲ್ಲಿದ್ದ ಯುವಕರಿಗೆ ರಜಾಕಾರರ ವಿರುದ್ಧ ಹೋರಾಟ ನಡೆಸಲು ಸೈನಿಕ ತರಬೇತಿ ನೀಡಲಾಗುತ್ತಿತ್ತು. ರೈಫಲ್ ಬಳಸುವ ವಿಧಾನವನ್ನು ಹೇಳಿಕೊಡ

ಆಗುತ್ತಿತ್ತು. ಮದರಾಸು ಸಂಸ್ಥಾನದ ಪೋಲೀಸು ಅಧಿಕಾರಿಗಳು ಇಂತಹ ತರಬೇತಿ ನೋಡುತ್ತಿದ್ದರು. ಕೊಪ್ಪಳ ತಾಲ್ಲೂಕಿನ ಗ್ರಾಮಗಳಲ್ಲಿ ನಡೆಯುತ್ತಿದ್ದ ರಜಾಕಾರರ ಚಟುವಟಿಕೆಗಳ ಮೇಲೆ ನಿಗಾ ಇಟ್ಟು ರಹಸ್ಯ ಮಾಹಿತಿಯನ್ನು ಶಿಬಿರಕ್ಕೆ ನೀಡುವ ಸಲುವಾಗಿ ಪತ್ತೇದಾರರ ಒಂದು ತಂಡವನ್ನು ಸಿದ್ಧಪಡಿಸಲಾಗಿತ್ತು. ಈ ದಳದ ಮುಖ್ಯಸ್ಥರಾಗಿ ಅಪ್ಪಗ್ರಹಾರದ ವೆಂಕೊಬಣ್ಣನವರು ಕೆಲಸ ಮಾಡುತ್ತಿದ್ದರು.

ಬಾಚಿಗೊಂಡನ ಹಳ್ಳಿಯಲ್ಲಿ ಸ್ಥಾಪಿಸಿದ್ದ ಶಿಬಿರಕ್ಕೆ ಬೇಕಾದ ಸೌಲಭ್ಯಗಳು ಶ್ರೀ ಚನ್ನ ಬಸವನ ಗೌಡರು ಒದಗಿಸುತ್ತಿದ್ದರು. ಈ ಶಿಬಿರಗಳಲ್ಲಿದ್ದ ಯುವಕರ ತಂಡಗಳು ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕಿನಲ್ಲಿದ್ದ ಪೋಲೀಸು ಠಾಣೆಗಳ ಮೇಲೆ ಆಕ್ರಮಣ ನಡೆಸಿ ಅಲ್ಲಿಯ ರೈಫಲ್ ಗಳನ್ನು ಶಿಬಿರಕ್ಕೆ ಸಾಗಿಸುತ್ತಿದ್ದರು. ಆದರೆ ಮದರಾಸು ಪ್ರಾಂತದಲ್ಲಿ ಪರವಾನಿಗೆಯಿಲ್ಲದೆ ರೈಫಲ್ ಗಳನ್ನು ಯಾರೂ ಇಟ್ಟುಕೊಳ್ಳುವಂತಿರಲಿಲ್ಲ. ಬಾಚಿಗೊಂಡನಹಳ್ಳಿ ಶಿಬಿರಕ್ಕೆ ಬಂದ ರೈಫಲ್ ಗಳನ್ನು ಪೋಲೀಸರ ಕಣ್ಣು ತಪ್ಪಿಸುವ ಸಲುವಾಗಿ ಗ್ರಾಮದ ಕೆಲವರ ಮನೆಯಲ್ಲಿ ಗುಪ್ತವಾಗಿ ಬಚ್ಚಿಡಲಾಗುತ್ತಿತ್ತು.

ಪೊಲೀಸು ಕಾರ್ಯಾಚರಣೆ

ಹೈದರಾಬಾದ್ ನಿಜಾಮನು ತನ್ನ ಸಂಸ್ಥಾನವನ್ನು ಭಾರತ ಗಣರಾಜ್ಯದಲ್ಲಿ ವಿಲೀನಗೊಳಿಸಲು ಸಿದ್ಧನಿರಲಿಲ್ಲ. ಕೇಂದ್ರ ಸರ್ಕಾರದ ಮನವಿಗೆ ನಿಜಾಮನು ಮಣಿಯಲಿಲ್ಲ. ಸಂಸ್ಥಾನದೊಳಗೆ ಪ್ರಜೆಗಳು ಹೈದರಾಬಾದ್ ವಿಮೋಚನೆಗಾಗಿ ಹೋರಾಟ ನಡೆಸುತ್ತಿದ್ದರು. ರಜಾಕಾರರ ಹಿಂಸೆ ತೀವ್ರವಾಗಿತ್ತು. ಇದನ್ನೆಲ್ಲಾ ಗಮನಿಸಿ, ಕೊನೆಯ ಅಸ್ತ್ರವಾಗಿ ಕೇಂದ್ರ ಸರ್ಕಾರವು ಹೈದರಾಬಾದ್ ಸಂಸ್ಥಾನವನ್ನು ವಶಪಡಿಸಿಕೊಳ್ಳುವ ಸಲುವಾಗಿ 'ಪೋಲೀಸು ಕಾರ್ಯಾಚರಣೆ' ಯನ್ನು ೧೩.೯.೧೯೪೮ರಂದು ಘೋಷಿಸಿತು. ಮುಂಬೈ ಪ್ರಾಂತದ ಕೊಲ್ಹಾಪುರ ಮೂಲಕ ಸೈನ್ಯ ಸಂಸ್ಥಾನದ ಮೇಲೆ ಆಕ್ರಮಣ ನಡೆಸಿತು. ಮದರಾಸು ಪ್ರಾಂತಕ್ಕೆ ಸೇರಿದ್ದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಭಾಗದಿಂದ ನಿಜಾಮನ ಸಂಸ್ಥಾನದ ಮುನಿರಾಬಾದಿನ ಮೇಲೆ ಆಕ್ರಮಣ ನಡೆಯಿತು. ಮುನಿರಾಬಾದಿನಲ್ಲಿ ನಿಜಾಮನ ಶಸ್ತ್ರಾಸ್ತ್ರದ ಕೋಠಿಯಿತ್ತು. ಪ್ರಾರಂಭದಲ್ಲಿ ಭಾರತದ ಪಡೆಗಳು ಹಿಮ್ಮೆಟ್ಟಬೇಕಾಯಿತು. ಹತ್ತಾರು ಭಾರತದ ಪಡೆಯ ಸೈನಿಕರು ಸಾವನ್ನಪ್ಪಿದರು. ಪೋಲೀಸು ಕಾರ್ಯಾಚರಣೆಯಲ್ಲಿ ಸೈನಿಕರನ್ನು ಚಿಕಿತ್ಸೆಗಾಗಿ ಹೊಸಪೇಟೆಗೆ ಕರೆದು ತರಲಾಗುತ್ತಿತ್ತು. ಆಕ್ರಮಣದ ಸಂದರ್ಭದಲ್ಲಿ ಸಾವನಪ್ಪಿದ ಸೈನಿಕರ ದೇಹಗಳನ್ನು ಹೊಸಪೇಟೆಗೆ ಹೊತ್ತು ತರಲಾಗುತ್ತಿತ್ತು. ನಿಜಾಮನ ಸೈನ್ಯವು ಹೆಚ್ಚು ದಿನಗಳ ಕಾಲ ಹೋರಾಟ ನಡೆಸಲಾಗಲಿಲ್ಲ. ಕೊನೆಗೆ ನಿಜಾಮನ ಸೈನ್ಯವು ಶರಣಾಯಿತು. ಅಂತಿಮವಾಗಿ ೧೭-೯-೧೯೪೮ರಲ್ಲಿ ಹೈದರಾಬಾದ್ ಸಂಸ್ಥಾನವು ಭಾರತ ಗಣರಾಜ್ಯದಲ್ಲಿ ವಿಲೀನವಾಯಿತು. ಹೀಗೆ ಹೈದರಾಬಾದ್ ಸಂಸ್ಥಾನದ ವಿಮೋಚನಾ ಹೋರಾಟದಲ್ಲಿ ಬಳ್ಳಾರಿ ಜಿಲ್ಲೆಯು ತನ್ನದೇ ಆದ ರೀತಿಯಲ್ಲಿ ಅಪಾರ ಕಾಣಿಕೆ ನೀಡಿತು.

ಹೈದರಾಬಾದ್ ಸಂಸ್ಥಾನವು ವಿಮೋಚನೆಗೊಂಡ ಮೇಲೆ ಕೊಪ್ಪಳ ತಾಲ್ಲೂಕಿನ ಗ್ರಾಮಗಳಲ್ಲಿದ್ದ ರಜಾಕಾರರನ್ನು ಬಾಚಿಗೊಂಡನಹಳ್ಳಿ ಶಿಬಿರದಲ್ಲಿ ತರಬೇತು ಹೊಂದಿದ್ದ ಯುವಕರ ತಂಡಗಳು ಸೆರೆ ಹಿಡಿದವು. ಕಾತರಕಿ ಲಾಡ್ಲಾಸಾಬ್, ಕೊಪ್ಪಳದ ಕಾಶಿಂಸಾಬ್, ಕೊಪ್ಪಳದ ಹನುಮಂತ ಮುಂತಾದ ರಜಾಕಾರರನನ್ನು ಸೆರೆಹಿಡಿದು ಪೋಲೀಸರಿಗೆ ಒಪ್ಪಿಸಲಾಯಿತು. ಬಾಚಿಗೊಂಡನ ಹಳ್ಳಿಯ ಚನ್ನ ಬಸವನಗೌಡರು, ಹಿರೇಗೌಡರ ಕೋಟ್ರಗೌಡರು, ಅಪ್ಪಣ್ಣನವರ ವೆಂಕೋಬಣ್ಣ ಮುಂತಾದವರು ಹೈದರಾಬಾದ್ ಸಂಸ್ಥಾನದಿಂದ ನಿರಾಶ್ರಿತರಾಗಿ ಬಂದ ಜನರಿಗೆ ರಕ್ಷಣೆ ಮತ್ತು ಆಹಾರ ಒದಗಿಸಿದರು.

ಸ್ವಾತಂತ್ರ್ಯ ಬಂತು

ಜಾಗತಿಕ ಮಟ್ಟದಲ್ಲಿ ೧೯೪೫ರ ಕೊನೆಯ ಹೊತ್ತಿಗೆ ಯುದ್ಧ ಕೊನೆಗೊಂಡಿತು. ಜನರು ನೆಮ್ಮದಿಯಿಂದ ಉಸಿರು ಬಿಡುವಂತಾಯಿತು. ಯುದ್ಧದಿಂದಾಗಿ ಬ್ರಿಟನ್‌ನ ವಸಾಹತುಗಳು ಮುಖ್ಯವಾಗಿ ಭಾರತವು ಬಹಳ ಹಾನಿಯನ್ನು ಅನುಭವಿಸಬೇಕಾಯಿತು. ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಬಂಧಿತರಾಗಿದ್ದ ಕಾಂಗ್ರೆಸ್‌ನ ಮುಂದಾಳುಗಳೆಲ್ಲರ ಬಿಡುಗಡೆಯಾಯಿತು. ಬ್ರಿಟನ್‌ನಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂತು. ಕ್ಲೆಮೆಂಟ್ ಆಟ್ಲಿ ಪ್ರಧಾನ ಮಂತ್ರಿಯಾದರು. ಲೇಬರ್ ಪಕ್ಷಕ್ಕೆ ಹಾಗೂ ಕ್ಲೆಮೆಂಟ್ ಆಟ್ಲಿಯವರಿಗೆ ಭಾರತದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಸಹಾನುಭೂತಿಯಿತ್ತು. ಜಾಗತಿಕ ಮಟ್ಟದಲ್ಲಿ ತನ್ನ ಘನತೆಯನ್ನು ಉಳಿಸಿಕೊಳ್ಳುವ ಸಲುವಾಗಿ ಬ್ರಿಟನ್ ಹೇಗಾದರೂ ಮಾಡಿ ಭಾರತದ ಸ್ವಾತಂತ್ರ್ಯದ ಸಮಸ್ಯೆಯನ್ನು ಬಗೆಹರಿಸಬೇಕಾಗಿತ್ತು. ಕಾಂಗ್ರೆಸ್ ಮತ್ತು ಇತರೆ ಪಕ್ಷಗಳ ಮೇಲೆ ಸರ್ಕಾರ ವಿಧಿಸಿದ್ದ ನಿಷೇಧವನ್ನು ತೆಗೆದುಹಾಕಿತು. ಅನೇಕ ಸಮಾಲೋಚನೆಗಳು, ಸಂಧಾನಗಳು, ಸೂತ್ರಗಳು ನಡೆದವು. ಒಟ್ಟಾರೆ ಆಗಸ್ಟ್ ೧೫, ೧೯೪೭ರಂದು ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾಯಿತು. ಕೆಂಪುಕೋಟೆಯ ಮೇಲೆ ಹಾರಾಡುತ್ತಿದ್ದ ಯೂನಿಯನ್ ಜಾಕ್ ಬಾವುಟ ಕೆಳಗಿಳಿಯಿತು. 'ಇಡೀ ಪ್ರಪಂಚ ನಿದ್ದೆಯಲ್ಲಿ ಮುಳುಗಿರುವಾಗ ಭಾರತ ಎಚ್ಚರಗೊಳ್ಳುತ್ತಿದೆ' ಎಂಬ ಸಂದೇಶದೊಂದಿಗೆ ಜವಹರಲಾಲ್ ನೆಹರೂರವರು ಕೆಂಪುಕೋಟೆಯ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸಿದರು.

ನಾವು ತಿಳಿದುಕೊಂಡಿರುವಂತೆ ಹಾಗೂ ಮೇಲ್ನೋಟಕ್ಕೆ ಭಾಸವಾಗುವಂತೆ ಆಗಸ್ಟ್ ೧೫, ೧೯೪೭ರಲ್ಲಿ ಸ್ವಾತಂತ್ರ್ಯ ಹೋರಾಟ ಕೊನೆಗೊಳ್ಳಲಿಲ್ಲ. ಸುಮಾರು ೫೦೦ ರಿಂದ ೬೦೦ರಷ್ಟಿದ್ದ ದೇಶೀಯ ರಾಜ ಸಂಸ್ಥಾನಗಳನ್ನು ಗಣರಾಜ್ಯದೊಳಗೆ ವಿಲೀನಗೊಳಿಸಬೇಕಾಗಿತ್ತು. ಕೆಲವು ರಾಜಸಂಸ್ಥಾನಗಳು ವಿಲೀನಕ್ಕೆ ಸಿದ್ಧವಿರಲಿಲ್ಲ. ಉದಾಹರಣೆಗೆ ಹೈದರಾಬಾದ್ ನಿಜಾಮನು ತನ್ನ ಸಂಸ್ಥಾನವನ್ನು ಭಾರತ ಗಣರಾಜ್ಯದೊಳಗೆ ವಿಲೀನಗೊಳಿಸಲು ಸಿದ್ಧನಿರಲಿಲ್ಲ. ಆ ಸಂಸ್ಥಾನದಲ್ಲಿ ಆಗಸ್ಟ್ ೧೫, ೧೯೪೭ರ ನಂತರವೂ ಸ್ವಾತಂತ್ರ್ಯ ಹೋರಾಟ ಮುಂದುವರಿಯಿತು. ಪೊಲೀಸು ಕಾರ್ಯಾಚರಣೆ ಮೂಲಕ ಹೈದರಾಬಾದ್ ನಿಜಾಮನನ್ನು ಸೋಲಿಸಿ ಹೈದರಾಬಾದ್ ಸಂಸ್ಥಾನವನ್ನು ಭಾರತ ಗಣರಾಜ್ಯದೊಳಗೆ ವಿಲೀನಗೊಳಿಸಬೇಕಾಯಿತು. ವಾಸ್ತವವಾಗಿ ಹೈದರಾಬಾದ್ ನಿಜಾಮನ

ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟವು ಸೆಪ್ಟೆಂಬರ್ ೧೮,೧೯೪೮ರಂದು ಕೊನೆಗೊಂಡಿತು. ಹೈದರಾಬಾದ್ ಸಂಸ್ಥಾನದ ವಿಮೋಚನೆಗೂ ಮತ್ತು ಬಳ್ಳಾರಿ ಜಿಲ್ಲೆಗೂ ಸಂಬಂಧವಿದೆ. ಏಕೆಂದರೆ ಬಳ್ಳಾರಿ ಜಿಲ್ಲೆಯು ಹೈದರಾಬಾದ್ ನಿಜಾಮನ ಸಂಸ್ಥಾನದ ಗಡಿಜಿಲ್ಲೆಯಾಗಿದೆ. ಹೈದರಾಬಾದ್ ವಿಮೋಚನಾ ಹೋರಾಟ ಹಾಗೂ ರಜಾಕಾರರ ವಿರುದ್ಧದ ಹೋರಾಟದಲ್ಲಿ ಬಳ್ಳಾರಿ ಜಿಲ್ಲೆಯು ಅಪ್ರತ್ಯಕ್ಷವಾಗಿ ಪಾತ್ರವಹಿಸಿದೆ.

ಹೈದರಾಬಾದ್ ನಿಜಾಮನ ಸಂಸ್ಥಾನವನ್ನು ಭಾರತ ಗಣರಾಜ್ಯದಲ್ಲಿ ವಿಲೀನಗೊಳಿಸಲು ನಡೆಸಿದ ಪೊಲೀಸ್ ಕಾರ್ಯಾಚರಣೆಯಲ್ಲಿ ಬಳ್ಳಾರಿ ಜಿಲ್ಲೆಯು ಮಹತ್ವದ ಪಾತ್ರ ನಿರ್ವಹಿಸಿತು.

ಹೈದರಾಬಾದ್ ನಿಜಾಮನ ಸಂಸ್ಥಾನದಂತೆ ಬಳ್ಳಾರಿ ಜಿಲ್ಲೆಯೊಳಗೆ ಪುಟ್ಟ ಸಂಡೂರು ರಾಜ ಸಂಸ್ಥಾನವಿತ್ತು. ಇಲ್ಲೂ ಸಹ ವಿಲೀನಕ್ಕೆ ಸಂಬಂಧಿಸಿದಂತೆ ಜನರು ಹೋರಾಟ ನಡೆಸಿದರು. ಹೀಗೆ ಭಾರತದ ಸ್ವಾತಂತ್ರ್ಯ ಹೋರಾಟ ಕೊನೆಗೊಂಡಿತು.

ಬಳ್ಳಾರಿಯಲ್ಲಿ ಸ್ವಾತಂತ್ರ್ಯೋತ್ಸವ

ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರಾದ ಬಿ.ಎಂ.ಮರುಳಸಿದ್ದಯ್ಯನವರು ಹೇಳುವಂತೆ ಅಗಸ್ಟ್ ೧೪,೧೯೪೭ರಂದು ರಾತ್ರಿ ಇಡೀ ವಿಶ್ವವೇ ನಿದ್ರಿಸುತ್ತಿರುವಾಗ ಭಾರತವು ಸ್ವಾತಂತ್ರ್ಯವನ್ನು ಪಡೆಯಿತು. ಮರುದಿನ ಇಡೀ ಬಳ್ಳಾರಿ ನಗರದಲ್ಲಿ ಜನರು ವ್ಯಾಪಾರ-ವ್ಯವಹಾರಗಳನ್ನು ನಿಲ್ಲಿಸಿ ಸಹಸ್ರಾರು ಸಂಖ್ಯೆಯಲ್ಲಿ ಸಾಂಬಮೂರ್ತಿ ಮೈದಾನದಲ್ಲಿ ನೆರೆದರು. ಸ್ವತಂತ್ರ-ಭಾರತದ ಸ್ವಾತಂತ್ರ್ಯೋತ್ಸವದ ಪ್ರಥಮ ಧ್ವಜಾರೋಹಣವನ್ನು ವೀಕ್ಷಿಸಲು ಜನಸ್ತೋಮವೇ ನೆರೆದಿತ್ತು. ನಿವೃತ್ತ ಇಂಗ್ಲೀಷ್ ಅಧ್ಯಾಪಕ ಸತ್ಯನಾರಾಯಣರಾವ್ ಹೇಳುವಂತೆ ಈ ಸಭೆಗೆ ಅಂದಿನ ಕಲೆಕ್ಟರ್ ಆಗಿದ್ದ ಅನಂತರಾಮ್ ಸಹ ಬಂದಿದ್ದರು. ಅವರು ಖದ್ದರ್ ಧರಿಸಿ ಸಭೆಗೆ ಹಾಜರಾಗಿದ್ದರು.

ಬಿ.ಎಂ. ಮರುಳಸಿದ್ದಯ್ಯನವರು ತಮ್ಮ ನೆನಪಿನಾಳದಿಂದ ಅಂದಿನ ದಿನವನ್ನು ನೆನಪಿಸಿಕೊಂಡು ಟೇಕೂರು ಸುಬ್ರಮಹ್ಮಣ್ಯಂರವರು ಅಂದು ಧ್ವಜಾರೋಹಣ ಮಾಡಿದರು ಎಂದು ಹೇಳುತ್ತಾರೆ. ಅಂದಿನ ಸಭೆಯ ಅಧ್ಯಕ್ಷತೆಯನ್ನು ಅವರು ವಹಿಸಿದ್ದರು. ಆ ಸಭೆಯಲ್ಲಿ ವಡ್ಡಿ ವೆಂಕೋಬರಾವ್ ಮತ್ತು ಬಿ.ಎಂ.ಮರುಳಸಿದ್ದಯ್ಯನವರುಗಳು ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. ಇಡೀ ಸಭೆ ಒಕ್ಕೊರಲಿನಿಂದ ಭಾರತ್ ಮಾತಾಕೀ ಜೈ, ಮಹಾತ್ಮಾಗಾಂಧೀಕೀ ಜೈ ಎಂದು ಘೋಷಣೆ ಕೂಗುತ್ತಿದ್ದರು. ಹೀಗೆ ಬಳ್ಳಾರಿಯು ಅಗಸ್ಟ್ ೧೫, ೧೯೪೭ರಂದು ಸ್ವಾತಂತ್ರ್ಯೋತ್ಸವವನ್ನು ಆಚರಿಸಿತು.

೪. ಸ್ವಾತಂತ್ರ್ಯ ಹೋರಾಟದಲ್ಲಿ ಸಂಘ-ಸಂಸ್ಥೆಗಳ ಪಾತ್ರ

ಬ್ರಿಟಿಷರನ್ನು ದೇಶದಿಂದ ಹೊರಗೋಡಿಸುವುದೊಂದೆ ಸ್ವಾತಂತ್ರ್ಯ ಹೋರಾಟದ ಗುರಿಯಾಗಿರಲಿಲ್ಲ. ಸ್ವಾತಂತ್ರ್ಯ ಹೋರಾಟವು ನಡೆದದ್ದು ವಿದೇಶಿ ಆಳ್ವಿಕೆ ವಿರುದ್ಧ ಎಂಬುದು ಸ್ಪಷ್ಟ. ವಿದೇಶಿ ಆಳ್ವಿಕೆಯ ವಿರುದ್ಧ ನಡೆದ ಚಳುವಳಿಯ ಜೊತೆಗೆ ದೇಶವನ್ನು ಕಾಡುತ್ತಿದ್ದ ಅನೇಕ ಸಾಮಾಜಿಕ-ರಾಜಕೀಯ ಸಮಸ್ಯೆಗಳ ವಿರುದ್ಧವೂ ಹೋರಾಟ ನಡೆಯಿತು. ಬ್ರಿಟಿಷರನ್ನು ದೇಶದಿಂದ ಹೊರಗೋಡಿಸುವುದು ಎಷ್ಟು ಮುಖ್ಯವಾಗಿತ್ತೋ ಸಮಾಜವನ್ನು ಸಾಮಾಜಿಕ ವಿಷಮತೆ-ಅನಿಷ್ಟಗಳಿಂದ ಮುಕ್ತಮಾಡುವುದೂ ಗಾಂಧೀಜಿಯವರಿಗೆ ಅಷ್ಟೇ ಮುಖ್ಯವಾಗಿತ್ತು. ಅಸ್ಪೃಶ್ಯತಾ ನಿವಾರಣೆ, ಹರಿಜನರ ದೇವಾಲಯ ಪ್ರವೇಶ, ಸಾರ್ವಜನಿಕ ಕೆರೆ-ಬಾವಿಗಳಲ್ಲಿ ನೀರು ಬಳಸಲು ಹರಿಜನರಿಗೆ ಅವಕಾಶ ಮುಂತಾದವು ಗಾಂಧೀಜಿಯವರಿಗೆ ಸ್ವಾತಂತ್ರ್ಯ ಹೋರಾಟದಷ್ಟೇ ಮುಖ್ಯವಾಗಿದ್ದವು ಮತ್ತು ಅತ್ಯಂತ ಪ್ರಿಯವಾಗಿದ್ದವು. ಹರಿಜನರ ಸಮಸ್ಯೆಯ ನಿವಾರಣೆ ಕಾರ್ಯಕ್ರಮವನ್ನು ೧೯೩೦ರ ನಂತರ ಗಾಂಧೀಜಿಯವರು ಬಹಳ ಗಂಭೀರವಾಗಿ ಕೈಗೊಂಡರು.

ಹರಿಜನರ ಸುಧಾರಣೆ ಜೊತೆಗೆ ಗಾಂಧೀಜಿಯವರು ಒತ್ತಾಯಿಸುತ್ತಿದ್ದ ಇತರೆ ಅಂಶಗಳೆಂದರೆ ಮದ್ಯಪಾನ ನಿಷೇಧ, ಖಾದಿ ಉತ್ಪಾದನೆ, ಖದ್ದರ್ ಧರಿಸುವುದು ಮುಂತಾದವು. ಚರಕವು ಭಾರತದಲ್ಲಿ ಸ್ವಾತಂತ್ರ್ಯ ಹೋರಾಟದ ಸಂಕೇತವಾಯಿತು. ಸಮಾಜ ಸುಧಾರಣೆಯು ಗಾಂಧೀಜಿಯವರಿಗೆ ಅತ್ಯಂತ ಪ್ರಿಯವಾದ ಕಾರ್ಯವಾಗಿತ್ತು. ಸಮಾಜ ಸುಧಾರಣೆಯ ಗುರಿಯನ್ನಿಟ್ಟುಕೊಂಡು ರೂಪುಗೊಂಡಿದ್ದ ರಚನಾತ್ಮಕ ಕಾರ್ಯಕ್ರಮಗಳು ಭಾರತ ಸ್ವಾತಂತ್ರ್ಯ ಹೋರಾಟದ ಅವಿಭಾಜ್ಯ ಅಂಗಗಳಾಗಿದ್ದವು. [ಚಂದ್ರಶೇಖರ್.ಎಸ್.೧೯೯೭:೧೭೯] ಗಾಂಧೀಜಿಯವರು ಕೈಗೊಂಡ ರಚನಾತ್ಮಕ ಕಾರ್ಯಕ್ರಮಗಳು ಮನಃಪರಿವರ್ತನೆ ಸ್ವರೂಪದಲ್ಲಿದ್ದವೆ ವಿನಾ ಹೋರಾಟಾತ್ಮಕ ಸ್ವರೂಪದಲ್ಲಿರಲಿಲ್ಲ. ಜನರ ಮನವೊಲಿಸುವ ಮೂಲಕ ಸಮಾಜದಲ್ಲಿ ಬದಲಾವಣೆ-ಸುಧಾರಣೆ ತರಬೇಕೆಂಬುದು ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳ ಉದ್ದೇಶವಾಗಿತ್ತು. ಭಾರತದ ಸ್ವಾತಂತ್ರ್ಯಹೋರಾಟದಲ್ಲಿ ರಚನಾತ್ಮಕ ಕಾರ್ಯಕ್ರಮಗಳಿಗೆ ಮಹತ್ವದ ಸ್ಥಾನವಿತ್ತು. ಗಾಂಧೀಜಿಯವರ ಪ್ರಕಾರ ರಚನಾತ್ಮಕ ಕಾರ್ಯಕ್ರಮವು ಸ್ವಾತಂತ್ರ್ಯ ಹೋರಾಟದ ಒಂದು ವಿಧಾನವಾಗಿತ್ತು. ಸ್ವಾತಂತ್ರ್ಯಹೋರಾಟವನ್ನು ಗಾಂಧೀಜಿಯವರು ಮಾನವ

ಕಲ್ಯಾಣದ ಮಾರ್ಗವೆಂದು ನಂಬಿದ್ದರು. ಗಾಂಧೀಜಿಯವರಿಗೆ ಸ್ವಾತಂತ್ರ್ಯ ಹೋರಾಟ ಮತ್ತು ರಚನಾತ್ಮಕ ಕಾರ್ಯಕ್ರಮಗಳು ಒಂದೇ ನಾಣ್ಯದ ಎರಡು ಮುಖಗಳಾಗಿದ್ದವು. ರಚನಾತ್ಮಕ ಕಾರ್ಯಕ್ರಮದ ಮಹತ್ವದ ಬಗ್ಗೆ ಗಾಂಧೀಜಿಯವರು ಹೀಗೆ ಬರೆದರು:

> "ವಿಧಾಯಕ ಕಾರ್ಯಕ್ರಮದಲ್ಲಿ ಇಡೀ ರಾಷ್ಟ್ರವು
> ಭಾಗಿಯಾದರೆ, ಅಹಿಂಸಾತ್ಮಕ ರೀತಿಯಿಂದ ಸ್ವಾತಂತ್ರ್ಯ
> ಗಳಿಸುವ ದಾರಿಯಲ್ಲಿ ಸವಿನಯ ಕಾಯಿದೆ ಭಂಗವನ್ನು
> ಮಾಡುವ ಅವಶ್ಯಕತೆ ಕೂಡ ಬರುವುದಿಲ್ಲ"

ಸಮಾಜದಲ್ಲಿ ದೀನರು-ದಲಿತರೂ ಮುಂತಾದ ಕೆಳವರ್ಗ-ಕೆಳ ಜಾತಿ ಜನರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸುವುದಕ್ಕೆ ರಚನಾತ್ಮಕ ಕಾರ್ಯಕ್ರಮಗಳನ್ನು ಗಾಂಧೀಜಿಯವರು ಒಂದು ಸಾಧನವನ್ನಾಗಿ ಮಾಡಿಕೊಂಡರು. ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟವನ್ನು ಪ್ರವೇಶಿಸುವುದಕ್ಕೆ ಮೊದಲು ಕಾಂಗ್ರೆಸ್‌ನ ಚಟುವಟಿಕೆಗಳು ನಗರ ಕೇಂದ್ರಿತವೂ, ಉನ್ನತವರ್ಗದ ಹಿತಾಸಕ್ತಿಗಳಿಗೆ ಪೂರಕವೂ ಆಗಿದ್ದವು. ದೇಶವನ್ನು ಕಿತ್ತು ತಿನ್ನುತ್ತಿದ್ದ ಸಾಮಾಜಿಕ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲು ಕಾಂಗ್ರೆಸ್ ಹಿಂಜರಿಯುತ್ತಿತ್ತು. ಗಾಂಧೀಜಿ ಪ್ರವೇಶದಿಂದ ಸ್ವಾತಂತ್ರ್ಯ ಹೋರಾಟದ ಸ್ವರೂಪವೇ ಬದಲಾಯಿತು. ಗಾಂಧೀಜಿಯವರು ತಮ್ಮನ್ನು ದೀನರು, ದಲಿತರು, ದುರ್ಬಲರು, ಮುಸ್ಲಿಮರು, ಮಹಿಳೆಯರು ಮುಂತಾದವರ ಜೊತೆ ಸಮೀಕರಿಸಿಕೊಂಡರು. ಗಾಂಧೀಜಿಯವರು ಬಡವರ, ದುರ್ಬಲರ, ಹರಿಜನರ ಸಂಕೇತವಾದರು.

ಗಾಂಧೀಜಿಯವರು ರೂಪಿಸಿದ್ದ ರಚನಾತ್ಮಕ ಕಾರ್ಯಕ್ರಮವು ಕೆಳಕಂಡ ವಿಷಯಗಳನ್ನು ಒಳಗೊಂಡಿದ್ದವು.

ರಚನಾತ್ಮಕ ಕಾರ್ಯಕ್ರಮಗಳು

೧. ಜಾತಿ ಜಾತಿಗಳ ನಡುವೆ ಸಾಮರಸ್ಯ.
೨. ಅಸ್ಪೃಶ್ಯತಾ ನಿವಾರಣೆ.
೩. ಮದ್ಯಪಾನ ನಿಷೇಧ.
೪. ಖಾದಿ ಪ್ರಸಾರ.
೫. ಗ್ರಾಮೋದ್ಯೋಗ.
೬. ಮೂಲ ಶಿಕ್ಷಣ.
೭. ಗ್ರಾಮೋದ್ಧಾರ.
೮. ಪ್ರೌಢ ಶಿಕ್ಷಣ.
೯. ಸ್ತ್ರೀಯರ ಉನ್ನತಿ.
೧೦. ಆರೋಗ್ಯ ಮತ್ತು ಸ್ವಚ್ಛತೆ.

೧೧. ರಾಷ್ಟ್ರಭಾಷಾ ಪ್ರಸಾರ (ಹಿಂದಿ ಕಲಿಕೆ)

೧೨. ಪ್ರಾಂತೀಯ ಭಾಷಾ ಪ್ರೇಮ.

೧೩. ಆರ್ಥಿಕ ಸಮಾನತೆ.

೧೪. ರೈತರು, ಕಾರ್ಮಿಕರು ಮತ್ತು ವಿದ್ಯಾರ್ಥಿಗಳಲ್ಲಿ ಜಾಗೃತಿ

೧೫. ಆದಿವಾಸಿಗಳ ಸೇವೆ.

ಅಸ್ಪೃಶ್ಯತಾ ನಿವಾರಣೆ ಹಾಗೂ ಹರಿಜನರ ಸುಧಾರಣೆ ಸಲುವಾಗಿ ಗಾಂಧೀಜಿಯವರು ೧೯೩೨-೩೪ ರಲ್ಲಿ ದೇಶಾದ್ಯಂತ ಪ್ರವಾಸ ಮಾಡಿದರು. ಜನವರಿ ೧೯೩೩ ರಲ್ಲಿ 'ಹರಿಜನ' ಎಂಬ ವಾರ ಪತ್ರಿಕೆ ಪ್ರಾರಂಭಿಸಿದರು. ಸೆಪ್ಟೆಂಬರ್ ೧೯೩೨ ರಲ್ಲಿ 'ಅಖಿಲ ಭಾರತ ಅಸ್ಪೃಶ್ಯತಾ ವಿರೋಧಿ ಲೀಗ್' ಪ್ರಾರಂಭಿಸಿದರು. 'ಹರಿಜನ ನಿಧಿ' ಸಂಗ್ರಹಕ್ಕಾಗಿ ಗಾಂಧೀಜಿಯವರು ಸುಮಾರು ೧೨,೫೦೦ ಮೈಲಿ ಪ್ರವಾಸ ಮಾಡಿದರು.

ಬಳ್ಳಾರಿ ಜಿಲ್ಲೆಯಲ್ಲಿ ರಚನಾತ್ಮಕ ಕಾರ್ಯಕ್ರಮಗಳು

ಗಾಂಧೀಜಿಯವರು ತಯಾರಿಸಿದ್ದ ರಚನಾತ್ಮಕ ಕಾರ್ಯಕ್ರಮಗಳ ಪಟ್ಟಿಯಲ್ಲಿ ೧೫ ವಿಷಯಗಳಿದ್ದವು. ಇವೆಲ್ಲವೂ ಬಳ್ಳಾರಿ ಜಿಲ್ಲೆಯಲ್ಲಿ ಆಚರಣೆಗೆ ಬರಲಿಲ್ಲ. ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ, ಖಾದಿ ಪ್ರಚಾರ, ಸ್ತ್ರೀಯರ ಉನ್ನತಿ, ಪ್ರಾಣಿ ಬಲಿ ವಿರೋಧ ಮುಂತಾದ ಕಾರ್ಯಕ್ರಮಗಳು ಬಳ್ಳಾರಿ ಜಿಲ್ಲೆಯಲ್ಲಿ ವ್ಯಾಪಕವಾಗಿ ನಡೆದವು. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ರಚನಾತ್ಮಕ ಕಾರ್ಯಕ್ರಮ ಹಮ್ಮಿಕೊಳ್ಳುವ ಸಲುವಾಗಿ ಜಿಲ್ಲೆಯಲ್ಲಿ ಸ್ಥಾಪನೆಯಾದ ಅನೇಕ ಸಂಘ-ಸಂಸ್ಥೆಗಳ ಹಿಂದೆ ಸ್ವಾತಂತ್ರ್ಯ ಹೋರಾಟಗಾರರಿದ್ದರು. ಸಮಾಜ ಸುಧಾರಣೆ ಹಾಗೂ ಸ್ವಾತಂತ್ಯ ಹೋರಾಟ- ಇವೆರಡೂ ಸ್ಥಾಪನೆಗೊಂಡ ಸಂಘ-ಸಂಸ್ಥೆಗಳ ಉದ್ದೇಶಗಳಾಗಿದ್ದವು.

ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಸಂಘ-ಸಂಸ್ಥೆಗಳು ಹಾಗೂ ಅವುಗಳ ಮೂಲಕ ಜಿಲ್ಲೆಯಲ್ಲಿ ಕೈಗೊಂಡ ರಚನಾತ್ಮಕ ಕಾರ್ಯಕ್ರಮಗಳ ವಿವರಗಳನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

ಸಮಾಜ ಸುಧಾರಕ ಕೋಲಾಚಲಂ ವೆಂಕಟರಾವ್

ಬಾಲಗಂಗಾಧರ ತಿಲಕ, ವಿರೇಶಲಿಂಗಂ ಪಂತುಲು, ಟಂಗುಟೂರಿ ಪ್ರಕಾಶಂ ಮುಂತಾದವರ ಸಂಪರ್ಕ ಹೊಂದಿದ್ದ ಹಾಗೂ ಅವರೆಲ್ಲರ ಆಪ್ತರಾಗಿದ್ದ ಕೋಲಾಚಲಂ ವೆಂಕಟರಾವ್‌ರವರು ೧೯ನೇ ಶತಮಾನದ ಕೊನೆಯ ದಶಕಗಳಲ್ಲಿ ಬಳ್ಳಾರಿ ನಗರದಲ್ಲಿ ಅನೇಕ ಕ್ರಾಂತಿಕಾರಿ ಸಮಾಜ ಸುಧಾರಣಾ ಕಾರ್ಯಗಳನ್ನು ಕೈಗೊಂಡರು. ಇವರೊಬ್ಬ ಕೊಡುಗೈ ದಾನಿಗಳಾಗಿದ್ದರು. ಆ ಕಾಲಕ್ಕೆ ಐವತ್ತು ಸಾವಿರ ರೂಪಾಯಿಗಳಿಗೂ ಮಿಕ್ಕು ಹಣ ನೀಡಿ ಇವರು ಬಳ್ಳಾರಿ ನಗರದಲ್ಲಿ

ಪುರಸಭೆ ಕಟ್ಟಡ ಕಟ್ಟಿಸಿದ್ದರು. ವಿಧವಾಶ್ರಮವೊಂದಕ್ಕೆ ಇವರು ಹಣಕಾಸು ನೆರವು ನೀಡಿದ್ದರು. ವಿರೇಶಲಿಂಗಂ ಪಂತುಲುರವರು ನಡೆಸುತ್ತಿದ್ದ ಪತ್ರಿಕೆಗೆ ಹಣಕಾಸು ನೆರವು ನೀಡಿದ್ದರು.

ಅಂದು ಸಮಾಜ ಸುಧಾರಕರ ಗಮನ ಸೆಳೆದಿದ್ದ ಪ್ರಮುಖ ವಿಷಯವೆಂದರೆ `ಬಾಲ ವಿಧವೆ'ಯರ ಸಮಸ್ಯೆಯಾಗಿತ್ತು. ಈ ಸಮಸ್ಯೆ ಕುರಿತಂತೆ ವೆಂಕಟರಾವ್‌ರವರು ಅನೇಕ ಕ್ರಮ ಗಳನ್ನು ತೆಗೆದುಕೊಂಡರು. ತಮ್ಮ ಸ್ವಂತ ಖರ್ಚಿನಲ್ಲಿ ತಮ್ಮ ಮನೆಯಲ್ಲೇ ಅವರು ಅನೇಕ ವಿಧವಾ ವಿವಾಹ ನಡೆಸಿದರು. ಈ ಸುಧಾರಣಾವಾದಿ ಕ್ರಮಗಳು ಸನಾತನಿಗಳ ಕಣ್ಣನ್ನು ಕೆಂಪಗೆ ಮಾಡಿದವು. ಸನಾತನಿಗಳ ಕೋಪವನ್ನು ವೆಂಕಟರಾವ್‌ರವರು ಅತ್ಯಂತ ವ್ಯಾವಹಾರಿಕವಾಗಿ ತಣ್ಣಗೆ ಮಾಡಿದರು. ಬಳ್ಳಾರಿ ನಗರದ ಬ್ರಾಹ್ಮಣರೆಲ್ಲರನ್ನು ತಮ್ಮ ಮನೆಗೆ ಬೂರಿ ಭೋಜನಕ್ಕೆ ಆಹ್ವಾನಿಸಿ ಪ್ರತಿಯೊಬ್ಬರಿಗೂ ಚಿನ್ನದ ನಾಣ್ಯವೊಂದನ್ನು ದಕ್ಷಿಣೆ ನೀಡಿದರು. ಇದರಿಂದ ಸನಾತನಿಗಳು ವೆಂಕಟರಾವ್‌ರವರಿಗೆ ಬಹಿಷ್ಕಾರ ಹಾಕಬೇಕೆಂದಿದ್ದ ಯೋಜನೆಯನ್ನು ಕೈಬಿಟ್ಟರು.

. ಆ ಕಾಲದಲ್ಲಿ ಪ್ರಸಿದ್ಧ ನಾಟಕಕಾರರೂ ಮತ್ತು ರಂಗಭೂಮಿ ಕಲಾವಿದರೂ ಆಗಿದ್ದ ಕೋಲಾಚಲಂ ಶ್ರೀನಿವಾಸರಾವ್‌ರವರು ಇವರ ಸಹೋದರರಾಗಿದ್ದರು. ಬ್ರಿಟಿಷ್ ಸರ್ಕಾರವು ಬಾಲಗಂಗಾಧರ ತಿಲಕರ ಬಗ್ಗೆ ನಡೆದುಕೊಂಡ ರೀತಿಯನ್ನು ಪ್ರತಿಭಟಿಸಿ ಕೋಲಾಚಲಂ ವೆಂಕಟರಾವ್‌ರವರು ೧೯೧೬ರಲ್ಲಿ 'ರೈಟ್ ಆನರಬಲ್' ಪ್ರಶಸ್ತಿಯನ್ನು ಬ್ರಿಟಿಷ್ ಸರ್ಕಾರಕ್ಕೆ ಹಿಂತಿರುಗಿಸಿದರು.

ಸರಸ ವಿನೋದಿನಿ ಸಭಾ: ೧೯೦೨

ಈ ಶತಮಾನದ ಆರಂಭದಲ್ಲಿ ಬಳ್ಳಾರಿ ನಗರದಲ್ಲಿ ಸ್ವಾತಂತ್ರ್ಯ ಚಳುವಳಿಯ ಚಟುವಟಿಕೆಗಳು ಚಿಗುರೊಡೆಯುತ್ತಿದ್ದವು. ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮ ಕೈಗೊಳ್ಳಲು ಜನರಿಗೆ ವೇದಿಕೆಯೊಂದು ಬೇಕಾಗಿತ್ತು.ರಾಷ್ಟ್ರೀಯ ಮುಖಂಡರನ್ನು ಕರೆಸಿ, ಸಾರ್ವಜನಿಕ ಸಭೆಗಳನ್ನು ಸಂಘಟಿಸಲು ಸಂಸ್ಥೆಯೊಂದು ಬೇಕಾಗಿತ್ತು. ಬಳ್ಳಾರಿ ನಗರದ ಗಣ್ಯರೆಲ್ಲಾ ಸೇರಿ ೧೯೦೨ ರಲ್ಲಿ 'ಸರಸ ವಿನೋದಿನಿ ಸಭಾ' ಎಂಬ ಸಂಸ್ಥೆಯನ್ನು ಕಟ್ಟಿದರು. 'ಸರಸ ವಿನೋದಿನಿ ಸಭಾ'ವನ್ನು ಬಾಲಗಂಗಾಧರ ತಿಲಕರು ಉದ್ಘಾಟಿಸಿದರು ಎಂದು ಹೇಳಲಾಗಿದೆ. ಈ ಸಂಸ್ಥೆ ಮುಂದೆ ಹೆಚ್ಚಿನ ಚಟುವಟಿಕೆ ನಡೆಸಿದಂತೆ ಕಾಣಲಿಲ್ಲ.

ಸ್ವದೇಶಿ ಹೈಸ್ಕೂಲು, ಹೊಸಪೇಟೆ: ೧೯೨೧-೧೯೨೫

ಹೊಸಪೇಟೆ ನಗರದಲ್ಲಿ ಸ್ವಾತಂತ್ರ್ಯ ಚಳುವಳಿಯ ಮುಂಚೂಣಿಯಲ್ಲಿದ್ದ ಅಸುಂಡಿ ಭೀಮರಾವ್, ಸರ್ವಜ್ಞಾಚಾರ್, ತಟ್ಟೆ ಕೃಷ್ಣರಾವ್, ಬೂದಿಹಾಳು ಅನಂತಾಚಾರ್ ಮುಂತಾದವರ ನಾಯಕತ್ವದಲ್ಲಿ ೧೯೨೧ ರಲ್ಲಿ ಸ್ವದೇಶಿ ಹೈಸ್ಕೂಲು ಪ್ರಾರಂಭವಾಯಿತು. ಅಂದು ಸ್ವದೇಶಿ ಶಾಲೆಗಳು ರಾಷ್ಟ್ರೀಯ ಜಾಗೃತಿ ಉಂಟು ಮಾಡುವ ಕೇಂದ್ರಗಳಾಗಿದ್ದವು. ಹೊಸಪೇಟೆಯಲ್ಲಿ

ಪ್ರಾರಂಭವಾದ ಸ್ವದೇಶಿ ಹೈಸ್ಕೂಲಿನಲ್ಲಿ ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳನ್ನು ಕಲಿಸಿಕೊಡಲಾಗುತ್ತಿತ್ತು. ಆ ಕಾಲದಲ್ಲಿ ಹೊಸಪೇಟೆ ಶಾಲೆಗಳಲ್ಲಿ ಕೇವಲ ತೆಲುಗು ಭಾಷೆಯಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಶಾಲೆಗಳಲ್ಲಿ ತೆಲುಗು, ಶಿಕ್ಷಣದ ಮಾಧ್ಯಮವಾಗಿತ್ತು. ಮೂರು ವರ್ಷಗಳ ಕಾಲ ಹೊಸಪೇಟೆಯಲ್ಲಿ ಸ್ವದೇಶಿ ಹೈಸ್ಕೂಲು ನಡೆಯಿತು. ಈ ಶಾಲೆಯಲ್ಲಿ ಕಲಿತುದಾಗಿ ಕಟ್ಟಿ ಶ್ರೀನಿವಾಸಾಚಾರ್ ಅವರು ಹೇಳುತ್ತಾರೆ [ಸೂರ್ಯನಾಥ ಕಾಮತ್]. ಮುಂದೆ ಜನರ ಉತ್ಸಾಹ ಹಾಗೂ ಬೆಂಬಲ ಕಡಿಮೆಯಾದುದರಿಂದ ಸ್ವದೇಶಿ ಶಾಲೆ ಹೊಸಪೇಟೆಯಲ್ಲಿ ೧೯೨೫ರಲ್ಲಿ ಮುಚ್ಚಿ ಹೋಯಿತು.

ಕುರುಗೋಡಿನಲ್ಲಿ ಖಾದಿ ಉತ್ಪಾದನೆ ಮತ್ತು ಪ್ರಚಾರ

ಖದ್ದರ್ ತೊಡುವುದು ಸ್ವಾತಂತ್ರ್ಯ ಚಳುವಳಿಯ ಸಂಕೇತವಾಗಿತ್ತು. ಕಾಂಗ್ರೆಸ್ ಕಾರ್ಯಕರ್ತರೆಲ್ಲಾ ಖದ್ದರ್ ತೊಡಬೇಕಾಗಿತ್ತು. ಖಾದಿಯು ಸ್ವದೇಶಿ ಚಳುವಳಿಯ ಸಾಧನವಾಗಿತ್ತು. ಕುಡುತಿನಿ ಶೇಷಗಿರಿಯಪ್ಪ, ಎಸ್.ದೊಡ್ಡನಗೌಡ ಮತ್ತು ಕೆ.ಚಂದ್ರಶೇಖರ ಚಾರ್ ರವರುಗಳು ೧೯೨೭ರಲ್ಲಿ ಮದರಾಸಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಕುರುಗೋಡಿನಿಂದ ಹೋಗಿ ಬಂದಿದ್ದರು. ಕಾಂಗ್ರೆಸ್‌ನ ಅಧಿವೇಶನದಲ್ಲಿ ರಾಷ್ಟ್ರೀಯ ದುರೀಣರು ನೀಡಿದ ಭಾಷಣಗಳಿಂದ ಇವರುಗಳೆಲ್ಲಾ ಪ್ರಭಾವಿತರಾಗಿದ್ದರು. ಕುರುಗೋಡಿನಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಸಂಘಟಿಸುವ ಸಲುವಾಗಿ ಅಲ್ಲಿ ಕಾಂಗ್ರೆಸ್ ನ ಶಾಖೆಯನ್ನು ಪ್ರಾರಂಭಿಸಿದರು. ಕುರುಗೋಡಿನ ಸಣ್ಣಮರೇಗೌಡರು ಕಾಂಗ್ರೆಸ್‌ನ ಬೆನ್ನೆಲುಬಾಗಿ ನಿಂತರು. ಕಾಂಗ್ರೆಸ್‌ನ ಮೂಲಕ ಇವರೆಲ್ಲರೂ ಸೇರಿ ಕುರುಗೋಡಿನಲ್ಲಿ ಅನೇಕ ರಚನಾತ್ಮಕ ಕಾರ್ಯಕ್ರಮ ಕೈಗೊಂಡರು. ಆ ಕಾಲದಲ್ಲಿ ಇಡೀ ಬಳ್ಳಾರಿ ಜಿಲ್ಲೆಯಲ್ಲಿ ಕುರುಗೋಡು ಖಾದಿ ಉತ್ಪಾದಿಸುವ ಒಂದು ಪ್ರಮುಖ ಕೇಂದ್ರವಾಗಿತ್ತು. ಅಲ್ಲಿ ಸುಮಾರು ೩೦ ಚರಕಗಳು ಕೆಲಸ ಮಾಡುತ್ತಿದ್ದವು. ಚರಕದಿಂದ ತಯಾರಿಸಿದ ನೂಲಿನಿಂದ ಬಟ್ಟೆ ನೇಯುವ ವ್ಯವಸ್ಥೆಯನ್ನು ಶೇಷಗಿರಿಯಪ್ಪ ಮತ್ತು ತೆಲಗಿ ಮಲ್ಲೇಶಪ್ಪ ನೋಡಿಕೊಳ್ಳುತ್ತಿದ್ದರು.

ಶ್ರೀಯುತರುಗಳಾದ ವದ್ದಟ್ಟಿ ದಾಸರ ತಿಮ್ಮಪ್ಪ, ದಾಸರ ದೊಡ್ಡ ಬಸಪ್ಪ, ಬದ್ರ ವೆಂಕಪ್ಪ ಮುಂತಾದವರು ಕುರುಗೋಡಿನಲ್ಲಿ ಸ್ವಯಂ ಸೇವಕರಾಗಿ ಕೆಲಸ ಮಾಡುತ್ತಿದ್ದರು. ಖಾದಿ ಉತ್ಪಾದನೆ ಹಾಗೂ ಪ್ರಚಾರದ ಜೊತೆಯಲ್ಲಿ ಕುರುಗೋಡಿನಲ್ಲಿ ನಡೆದ ಮತ್ತೊಂದು ರಚನಾತ್ಮಕ ಕಾರ್ಯಕ್ರಮವೆಂದರೆ ಮದ್ಯ ಪಾನ ವಿರೋಧಿಸುವ ಚಳುವಳಿ. ಕಾಂಗ್ರೆಸ್ ಕಾರ್ಯಕರ್ತರು ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದರು. ಹೆಂಡ ಕುಡಿಯದಂತೆ ಜನರಿಗೆ ತಿಳಿಯ ಹೇಳುತ್ತಿದ್ದರು. ಮದ್ಯಪಾನ ನಿಷೇಧ ಚಳುವಳಿಯಿಂದಾಗಿ ಕುರುಗೋಡಿನಲ್ಲಿ ಹೆಂಡದ ವ್ಯಾಪಾರವೇ ನಿಂತು ಹೋಯಿತು. ಕುರುಗೋಡಿನಲ್ಲಿ ಹೆಂಡದಂಗಡಿಯನ್ನು ನಡೆಸುವವರೇ ಇಲ್ಲದಂತಾದರು. ಅನೇಕ ವರ್ಷಗಳ ಕಾಲ ಕುರುಗೋಡಿನಲ್ಲಿ ಹೆಂಡದ ಅಂಗಡಿಗಳೇ ಇರಲ್ಲಿಲ್ಲ.

ಖಾದಿ ಮತ್ತು ಸ್ವದೇಶೀ ವಸ್ತು ಪ್ರದರ್ಶನ- ೧೯೩೩

ಬಳ್ಳಾರಿ ಜಿಲ್ಲೆಯಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸುವ ಸಲುವಾಗಿ ಹಾಗೂ ಖಾದಿ ಮತ್ತು ಸ್ವದೇಶಿ ಬಗ್ಗೆ ಜನರಿಗೆ ತಿಳುವಳಿಕೆ ನೀಡುವ ಸಲುವಾಗಿ ಸೆಪ್ಟೆಂಬರ್ ೧೯೩೩ ರಲ್ಲಿ ಬಳ್ಳಾರಿ ನಗರದಲ್ಲಿ ಖಾದಿ ಮತ್ತು ಸ್ವದೇಶಿ ವಸ್ತು ಪ್ರದರ್ಶನವನ್ನು ಸಂಘಟಿಸಲಾಗಿತ್ತು. ಈ ವಸ್ತು ಪ್ರದರ್ಶನವನ್ನು ಸಂಘಟಿಸುವ ಸಲುವಾಗಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಬುರ್ಲಿ ಶೇಷಣ್ಣ ಮತ್ತು ಬಾಳಾಚಾರ್ಯ ಅವಮಾನಿಗಳೆಂಬ ಇಬ್ಬರು ಕಾಂಗ್ರೆಸ್ ಕಾರ್ಯಕರ್ತರನ್ನು ಬಳ್ಳಾರಿಗೆ ಕಳುಹಿಸಿತ್ತು. ಈ ವಸ್ತು ಪ್ರದರ್ಶನವನ್ನು ಗಡಿನಾಡಗಾಂಧಿಯೆಂದು ಪ್ರಸಿದ್ಧರಾಗಿದ್ದ ಖಾನ್ ಅಬ್ದುಲ್ ಗಫಾರ್ ಖಾನ್‌ರವರ ಸೊಸೆ ಸೋಫಿಯಾ ಸೋಮ್‌ಜಿಯವರು ಉದ್ಘಾಟಿಸಿದರು. ಈ ವಸ್ತು ಪ್ರದರ್ಶನವನ್ನು ಸಂಘಟಿಸಲು ರಚಿಸಿದ್ದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಜೋಳ್ದ್ರಾಣ ಭೀಮರಾಯರು ಕೆಲಸ ಮಾಡಿದರು. ಈ ವಸ್ತು ಪ್ರದರ್ಶನವು ೧೯೩೩ ರ ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗೆ ನಡೆಯಿತು. ಅದು ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಗೆ ಹೊಸ ಚೈತನ್ಯವನ್ನು ತಂದುಕೊಟ್ಟಿತು.

ಬುಲುಸು ಸಾಂಬಮೂರ್ತಿ ಮೈದಾನ

ಶ್ರೀ ಬುಲುಸು ಸಾಂಬಮೂರ್ತಿಯವರು ಆಂಧ್ರಪ್ರಾಂತದ ಪ್ರಖ್ಯಾತ ಸ್ವಾತಂತ್ರ್ಯ ಹೋರಾಟಗಾರರು. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿ ಹಾಗೂ ಪ್ರೇರಣೆ ನೀಡಿದ ಅನೇಕರಲ್ಲಿ ಇವರು ಪ್ರಮುಖರು. ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಸಾಂಬಮೂರ್ತಿಯವರನ್ನು ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಬಂಧನದಲ್ಲಿಡಲಾಗಿತ್ತು. ೧೯೩೦ರ ನಂತರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯು ತನ್ನ ತೀವ್ರತೆಯನ್ನು ಕಳೆದುಕೊಂಡಿತ್ತು (ಸರ್ಕಾರದ ರಹಸ್ಯ ದಾಖಲೆ, ೧೯೩೦-೩೧. ಪು: ೭೭).

ಆ ಕಾಲದಲ್ಲಿ ಬಳ್ಳಾರಿ ನಗರದಲ್ಲಿ ಸಾರ್ವಜನಿಕ ಸಭೆಗಳನ್ನು ಈಗ ಬಸ್ ನಿಲ್ದಾಣವಿರುವ ಸ್ಥಳದಲ್ಲಿ ನಡೆಸಲಾಗುತ್ತಿತ್ತು. ಪ್ರಾರಂಭದಲ್ಲಿ ಪ್ರತಿ ಭಾನುವಾರಗಳಂದು ಸಾರ್ವಜನಿಕ ಸಭೆಗಳು ನಡೆಯುತ್ತಿದ್ದವು. ಮುಂದೆ ಪ್ರತಿನಿತ್ಯ ಅಲ್ಲಿ ಭಾಷಣಗಳು ನಡೆಯುತ್ತಿದ್ದವು. ೧೯೩೦ರಲ್ಲಿ ಜೈಲಿನಿಂದ ಬಿಡುಗಡೆ ಹೊಂದಿದ ಸಾಂಬಮೂರ್ತಿಗಳ ಭಾಷಣವನ್ನು ಅದೇ ಮೈದಾನದಲ್ಲಿ ಏರ್ಪಡಿಸಲಾಗಿತ್ತು. ಅವರ ಉಗ್ರಭಾಷಣವು ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಗೆ ಹೊಸ ಚೈತನ್ಯವನ್ನು ತಂದು ಕೊಟ್ಟಿತು. ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಗೆ ಚೈತನ್ಯ ತುಂಬಿದ ಬುಲುಸು ಸಾಂಬಮೂರ್ತಿಯವರ ಹೆಸರನ್ನು ಸಾರ್ವಜನಿಕ ಸಭೆಗಳು ನಡೆಯುತ್ತಿದ್ದ ಮೈದಾನಕ್ಕೆ ಇಡಲಾಯಿತು. ಹೀಗೆ ಬಳ್ಳಾರಿಯಲ್ಲಿ 'ಸಾಂಬಮೂರ್ತಿ ಮೈದಾನ' ತಲೆ ಎತ್ತಿತ್ತು. ಆದರೆ ಇಂದು ಅಲ್ಲಿ ಬಸ್ ನಿಲ್ದಾಣ ತಲೆಯೆತ್ತಿದೆ. ಇಂದು ಬಳ್ಳಾರಿ ನಗರದಲ್ಲಿರುವ ಗಾಂಧಿಭವನದ ಎದುರಿಗಿರುವ ಬಯಲು ಪ್ರದೇಶದಲ್ಲಿ 'ಸಾಂಬಮೂರ್ತಿ ಸ್ಮಾರಕ'ವೊಂದನ್ನು ನಿರ್ಮಿಸುವ ಪ್ರಯತ್ನ ನಡೆದಿದೆ.

ಹರಪನಹಳ್ಳಿ ಬಡ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿ ನಿಧಿ

ಬಳ್ಳಾರಿ ಜಿಲ್ಲೆಯಲ್ಲಿ ೧೯೨೦ ರ ದಶಕದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಹಾಗೂ ಕಾಂಗ್ರೆಸ್ ಸಂಸ್ಥೆಯನ್ನು ಸಂಘಟಿಸಿದ ಅನೇಕರಲ್ಲಿ ಬಹು ಮುಖ್ಯರಾದವರು ಹಾಗೂ ಹಿರಿಯರೂ ಎಂದರೆ ಇಜಾರಿ ವಸುಪಾಲಪ್ಪನವರು. ಇವರ ಮನೆತನವೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿತ್ತು. ಇವರ ಸೋದರ ಇಜಾರಿ ಶ್ರೀಧರಪ್ಪ, ಇವರ ಅಣ್ಣನ ಮಗ ಭೂಪಾಲ, ಇವರ ಬಂಧು ಶೆಟ್ರ ಚೂಡಪ್ಪ, ಇವರ ಮಗ ಇಜಾರಿ ಶಿರಸಪ್ಪ ಮುಂತಾದವರೆಲ್ಲಾ ಸ್ವಾತಂತ್ರ್ಯ ಚಳುವಳಿಯಲ್ಲಿ ಕ್ರಿಯಾಶೀಲವಾಗಿ ತೊಡಗಿದ್ದರು. ಇಜಾರಿ ವಸುಪಾಲಪ್ಪನವರು ಹರಪನ ಹಳ್ಳಿಯ ಸರ್ವಾಂಗೀಣ ಅಭಿವೃದ್ಧಿಗಾಗಿ ದುಡಿದರು. ಶಿಕ್ಷಣದ ಮಹತ್ವವನ್ನು ಅರಿತಿದ್ದ ವಸುಪಾಲಪ್ಪನವರು ಬಡವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡುವ ಸಲುವಾಗಿ 'ಹರಪನ ಹಳ್ಳಿ ಪೂರ್ ಬಾಯ್ಸ್ ಫಂಡ್'ಎಂಬ ಸಂಸ್ಥೆಯನ್ನು ೧೯೧೧-೧೨ ರಲ್ಲಿ ಹುಟ್ಟು ಹಾಕಿದರು. ಈ ಸಂಸ್ಥೆಗೆ ಬೇಕಾದ ನಿಧಿ ಸಂಗ್ರಹಿಸುವ ಸಲುವಾಗಿ ಪ್ರಖ್ಯಾತ ರಂಗನಟ ಬಳ್ಳಾರಿ ರಾಘವರವರ ನಾಟಕಗಳನ್ನು ಹರಪನಹಳ್ಳಿಯಲ್ಲಿ ಏರ್ಪಡಿಸಲಾಗಿತ್ತು. ಅನೇಕ ವರ್ಷಗಳ ಕಾಲ ಈ ಸಂಸ್ಥೆಯಿಂದ ಹರಪನಹಳ್ಳಿಯ ಬಡವಿದ್ಯಾರ್ಥಿಗಳಿಗೆ ಶಾಲಾ ಶುಲ್ಕ ಕಟ್ಟಲು, ಪುಸ್ತಕ ಖರೀದಿಸಲು ಧನ ಸಹಾಯ ನೀಡಲಾಗುತ್ತಿತ್ತು. ಹರಪನಹಳ್ಳಿ ಶಾಲೆಯಲ್ಲಿ ಕಲಿತು ಪದವೀಧರರಾದ ಪ್ರತಿಯೊಬ್ಬ ಯುವಕನೂ ಹರಪನಹಳ್ಳಿಯ ಶಾಲೆಯಲ್ಲಿ ಕನಿಷ್ಟ ಒಂದು ವರ್ಷ ಅಲ್ಪ ವೇತನದ ಮೇಲೆ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕೆಂಬ ನಿಯಮವನ್ನು ವಸುಪಾಲಪ್ಪ ನವರು ಜಾರಿಗೆ ತಂದರು. ಇಜಾರಿ ವಸುಪಾಲಪ್ಪನವರು ಸ್ವಾತಂತ್ರ್ಯ ಚಳುವಳಿ ಹಾಗೂ ಸಮಾಜ ಸುಧಾರಣೆಗಳನ್ನು ಜೊತೆ ಜೊತೆಗೆ ನಡೆಸಿದ ಹಿರಿಯ ವ್ಯಕ್ತಿಗಳು.

ಮಲ್ಲಸಜ್ಜನ ವ್ಯಾಯಾಮ ಶಾಲೆ, ಬಳ್ಳಾರಿ-೧೯೩೩

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಕರ್ನಾಟಕಾದ್ಯಂತ ಅನೇಕ ವ್ಯಾಯಮ ಶಾಲೆಗಳು ಹುಟ್ಟಿಕೊಂಡವು. ಡಾ. ನಾ.ಸು. ಹರ್ಡೀಕರ್ ರವರು ಸ್ಥಾಪಿಸಿದ್ದ ಹಿಂದೂಸ್ಥಾನಿ ಸೇವಾದಳವು ವ್ಯಾಯಾಮ ಶಾಲೆಗಳು ಹುಟ್ಟಿಕೊಳ್ಳುವುದಕ್ಕೆ ಕಾರಣವಾಗಿತ್ತು. ಯುವಕರಲ್ಲಿ ಶಿಸ್ತು-ಸಂಯಮ, ದೈಹಿಕ ಶಿಕ್ಷಣ ಮುಂತಾದವುಗಳ ತರಬೇತು ನೀಡಲು ವ್ಯಾಯಾಮ ಶಾಲೆಗಳನ್ನು ಪ್ರಾರಂಭಿಸಲಾತ್ತು. ಅವು ರಾಷ್ಟ್ರೀಯ ಜಾಗೃತಿಯ ಕೇಂದ್ರಗಳಾಗಿ ಕೆಲಸ ಮಾಡಿದವು. ರಾಷ್ಟ್ರೀಯ ಜಾಗೃತಿ, ದೈಹಿಕ ಶಿಕ್ಷಣ ಮುಂತಾದ ಉದ್ದೇಶಗಳನ್ನಿಟ್ಟುಕೊಂಡು ೧೯೩೩ ರಲ್ಲಿ ಬಳ್ಳಾರಿಯಲ್ಲಿ 'ಮಲ್ಲಸಜ್ಜನ ವ್ಯಾಯಾಮ ಶಾಲೆ' ಪ್ರಾರಂಭವಾಯಿತು. ವ್ಯಾಯಾಮ ಶಾಲೆಗೆ ಬರುವ ಪ್ರತಿಯೊಬ್ಬ ಯುವಕನನ್ನೂ 'ಮಲ್ಲ' ನನ್ನಾಗಿ ಹಾಗೂ 'ಸಜ್ಜನ'ನನ್ನಾಗಿ ಮಾಡುವ ಗುರಿಯನ್ನು ವ್ಯಾಯಾಮ ಶಾಲೆ ಹೊಂದಿತ್ತು. ಅದಕ್ಕೆ ಅದು ಮಲ್ಲಸಜ್ಜನ ವ್ಯಾಯಾಮ ಶಾಲೆಯಾಗಿತ್ತು.

೧೯೩೦ ರಲ್ಲಿ ಬಳ್ಳಾರಿ ಜೈಲುಗಳಲ್ಲಿ ದೇಶದ ಅನೇಕ ಭಾಗಗಳ ಸ್ವಾತಂತ್ರ್ಯ ಹೋರಾಟಗಾರರು

ಜೈಲು ಶಿಕ್ಷೆ ಅನುಭವಿಸುತ್ತಿದ್ದರು. ಹೀಗೆ ಬಳ್ಳಾರಿಯಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿದ್ದ ಪಂಜಾಬಿನ ಸ್ವಾತಂತ್ರ್ಯ ಹೋರಾಟಗಾರರೆಂದರೆ ಡಾ. ಗಯಾ ಪ್ರಸಾದ್, ಮಹಾವೀರಸಿಂಗ್ ಮತ್ತು ಬಟುಕೇಶ್ವರದತ್ತ. ಇವರೆಲ್ಲಾ ವೀರ ಭಗತ್‌ಸಿಂಗ್‌ರವರ ಅನುಯಾಯಿಗಳಾಗಿದ್ದರು. ಜೈಲಿನಲ್ಲಿ ಇವರ ಸಂಪರ್ಕಕ್ಕೆ ಬಂದ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಿಗೆ ಪಂಜಾಬಿನ ವೀರರು ವ್ಯಾಯಾಮ ಶಾಲೆಗಳನ್ನು ಪ್ರಾರಂಭಿಸುವಂತೆ ಸಲಹೆ ನೀಡಿದರು. ಸ್ವಾತಂತ್ರ್ಯ ಹೋರಾಟದಲ್ಲಿ ದೈಹಿಕ ಶಿಕ್ಷಣದ ಮಹತ್ವವನ್ನು ಪಂಜಾಬಿನ ಸ್ವಾತಂತ್ರ್ಯ ಹೋರಾಟಗಾರರು ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಿಗೆ ಮನವರಿಕೆ ಮಾಡಿಕೊಟ್ಟರು.

೧೯೩೩ ರಲ್ಲಿ ಪ್ರಾರಂಭವಾದ ಮಲ್ಲಸಜ್ಜನ ವ್ಯಾಯಾಮ ಶಾಲೆಯು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ತರಬೇತಿ ಕೇಂದ್ರವಾಗಿ ಕೆಲಸಮಾಡಿತು. ಇಂದು ಈ ವ್ಯಾಯಾಮ ಶಾಲೆಯು ಬಳ್ಳಾರಿ ನಗರದ ಪ್ರಮುಖ ಸಾರ್ವಜನಿಕ ಸಂಸ್ಥೆಯಾಗಿ ಕೆಲಸ ಮಾಡುತ್ತಿದೆ. ಈಗ ವ್ಯಾಯಾಮ ಶಾಲೆಯಲ್ಲಿ ಮೂರು ಅಂಗಗಳು ಕೆಲಸ ಮಾಡುತ್ತಿವೆ. ಯುವಕರ ದೈಹಿಕ ಬೆಳವಣಿಗೆಗೆ ವ್ಯಾಯಾಮ ಶಾಲೆಯಿದೆ. ಯುವಕರಲ್ಲಿ ವೈಚಾರಿಕತೆ ಹಾಗೂ ವೈಜ್ಞಾನಿಕ ಮನೋಭಾವ ಬೆಳೆಸಲು 'ವಿಚಾರ ವಾಹಿನಿ' ಕೆಲಸ ಮಾಡುತ್ತಿದೆ. ಯುವಕರಲ್ಲಿ ಆಧ್ಯಾತ್ಮಿಕ ಭಾವನೆ ಬೆಳೆಸಲು ಯೋಗ ಕೇಂದ್ರವೊಂದು ಇಲ್ಲಿ ಕೆಲಸ ಮಾಡುತ್ತಿದೆ. ಈ ವ್ಯಾಯಾಮ ಶಾಲೆಯು ದೈಹಿಕ, ವೈಚಾರಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣ ನೀಡುವ ಕೇಂದ್ರವಾಗಿದೆ. ಅಲ್ಲಿ ಉಚಿತ ವಾಚನಾಲಯ ಹಾಗೂ ಗ್ರಂಥಾಲಯಗಳಿವೆ. ಒಂದು ಸುಸಜ್ಜಿತ ಬಯಲು ಸಭಾಮಂದಿರವನ್ನು ಅಲ್ಲಿ ಕಟ್ಟಲಾಗಿದೆ. ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ, ಗಾಂಧೀವಾದಿಗಳೂ ಆದ ಶ್ರೀ ಬಿಂದು ಮಾಧವ ಮಾಸ್ತರ್‌ರವರು ಇಂದು ವ್ಯಾಯಾಮಶಾಲೆಯನ್ನು ಸಮರ್ಥವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ.

ಬುರ್ಲಿ ಶೇಷಣ್ಣ ಮತ್ತು ವ್ಯಾಯಾಮ ಶಾಲೆಗಳು

ಉತ್ತರ ಕರ್ನಾಟಕ ಭಾಗದಲ್ಲಿ ೧೯೩೦ರ ದಶಕದಲ್ಲಿ ವ್ಯಾಯಾಮ ಶಾಲೆಗಳನ್ನು ಸ್ವಾತಂತ್ರ್ಯ ಚಳುವಳಿಯ ಅಂಗವಾಗಿ ವ್ಯಾಪಕವಾಗಿ ಪ್ರಾರಂಭಿಸಲಾಯಿತು. ಇಂತಹ ವ್ಯಾಯಾಮ ಶಾಲೆಗಳನ್ನು ತೆರೆಯುವ ಕಾಯಕವನ್ನು ಬಹಳ ನಿಷ್ಠೆಯಿಂದ ನಡೆಸಿದ ಕಾರ್ಯಕರ್ತರೆಂದರೆ, ಬುರ್ಲಿ ಶೇಷಣ್ಣ. ಇವರು ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಗಳ ನಡುವೆ ಬರುವ ಗದಗ, ಕೊಪ್ಪಳ, ಹೊಸಪೇಟೆ, ಬಳ್ಳಾರಿ, ಆಲೂರು, ಆದವಾನಿ ಮತ್ತು ಎಮ್ಮಿಗನೂರುಗಳಲ್ಲಿ ವ್ಯಾಯಾಮ ಶಾಲೆಗಳ ಒಂದು ಸರಣಿಯನ್ನೇ ಸಂಘಟಿಸಿದರು. ೧೯೪೦ರಲ್ಲಿ ಇವರು ಸೀತಕ್ಕ ಎಂಬುವ ಬಾಲ ವಿಧವೆಯನ್ನು ಮದುವೆಯಾದರು. ಬುರ್ಲಿ ಶೇಷಣ್ಣನವರ ತ್ಯಾಗಮಯ ಬದುಕು ಮತ್ತು ಸ್ವಾತಂತ್ರ್ಯದ ಬಗೆಗಿನ ನಿಷ್ಠೆಯನ್ನು ಮೆಚ್ಚಿ ಮಚ್ಚೇರಿ ಶಿವಣ್ಣ ಎಂಬುವವರು ಎಮ್ಮಿಗನೂರಿನಲ್ಲಿ ಇವರಿಗೆ ಆಶ್ರಯ ಒದಗಿಸಿದರು. ಸ್ವಾತಂತ್ರ್ಯಾನಂತರ ಎಮ್ಮಿಗನೂರಿನಲ್ಲೇ ನೆಲೆನಿಂತು ಬದುಕು ಸಾಗಿಸಿದರು.

ನವಜೀವನ ವ್ಯಾಯಾಮ ಶಾಲೆ, ಬಳ್ಳಾರಿ-೧೯೩೩

ಶ್ರೀಯುತ ಡಿ. ರಾಮಮೂರ್ತಿಯವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಪ್ರಸಿದ್ಧ ಕ್ರೀಡಾಪಟುಗಳಾಗಿದ್ದರು ಮತ್ತು ಬಳ್ಳಾರಿ ಜಿಲ್ಲೆಯ ಚಾಂಪಿಯನ್ ಆಗಿದ್ದರು. ಇವರು ಮತ್ತು ಇವರ ಗೆಳೆಯರಾಗಿದ್ದ ಎನ್.ವಾಸುದೇವರಾವ್, ಡಿ. ಎಚ್. ವೆಂಕೋಬರಾವ್, ಡಿ.ಎಚ್. ಕೃಷ್ಣಮೂರ್ತಿ ಮುಂತಾದವರೆಲ್ಲಾ ಸೇರಿಕೊಂಡು ಬಳ್ಳಾರಿಯ ಬೆಟ್ಟದ ಮೇಲೆ ಪ್ರತಿನಿತ್ಯ ಅಂಗಸಾಧನೆ ಮಾಡುತ್ತಿದ್ದರು. ಮುಂದೆ ಇವರೆಲ್ಲರೂ ಸೇರಿಕೊಂಡು ಬಳ್ಳಾರಿ ನಗರದಲ್ಲಿ ೧೯೩೩ರಲ್ಲಿ 'ನವಜೀವನ ವ್ಯಾಯಾಮ ಶಾಲೆ' ಪ್ರಾರಂಭಿಸಿದರು. ಈ ಶಾಲೆಯು ೧೯೩೦ರ ದಶಕದಲ್ಲಿ ಬಳ್ಳಾರಿ ನಗರದ ರಾಷ್ಟ್ರೀಯ ಚಟುವಟಿಕೆಗಳ ಕೇಂದ್ರವಾಗಿತ್ತು. ಪ್ರಾರಂಭದಲ್ಲಿ ನವಜೀವನ ವ್ಯಾಯಾಮ ಶಾಲೆಯು ನಗರದ ಹೀರದ ಸೂಗಮ್ಮ ಚೌಕಿಯಲ್ಲಿ ನೆಲೆಗೊಂಡಿತ್ತು. ಮುಂದೆ ಸಕ್ರಿ ಕರಡಪ್ಪ ಚೌಕಿಯ ಬಳಿ ಬಂತನಾಳ ಶಿವಯೋಗಿಗಳು ಉಚಿತವಾಗಿ ನೀಡಿದ್ದ ನಿವೇಶನದಲ್ಲಿ ಶಾಲೆಯು ನೆಲೆಗೊಂಡಿತು. ಅಲ್ಲಿ ದಿನವೂ ೬೦-೭೦ ತರುಣರು ದೈಹಿಕ ವ್ಯಾಯಾಮ ಮಾಡುತ್ತಿದ್ದರು. ಈ ಶಾಲೆಗೆ ರಾಜಾಜಿ, ಕೆ.ವಿ. ಅಯ್ಯರ್, ಸ್ಯಾಂಡೋಗಾಮಾ, ಡಾ. ವೈ.ಸುಬ್ಬರಾಯನ್, ಕಮಲಾದೇವಿ ಚಟ್ಟೋಪಾಧ್ಯಾಯ, ಡಾ. ಮುಂಜೆ ಮುಂತಾದವರು ಭೇಟಿ ನೀಡಿ ಸ್ವಾತಂತ್ರ್ಯ ಚಳುವಳಿ ಕುರಿತು ಭಾಷಣ ಮಾಡುತ್ತಿದ್ದರು. ಬಳ್ಳಾರಿ ನಗರಕ್ಕೆ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಜಿಲ್ಲೆಯ ಅನೇಕ ಸ್ಥಳಗಳಿಂದ ಬರುತ್ತಿದ್ದರು. ಈ ವಿದ್ಯಾರ್ಥಿಗಳು ವ್ಯಾಯಾಮಶಾಲೆಗೂ ಬರುತ್ತಿದ್ದರು. ಇಲ್ಲಿಗೆ ಬರುತ್ತಿದ್ದ ವಿದ್ಯಾರ್ಥಿಗಳು ರಾಷ್ಟ್ರೀಯ ವಿಚಾರಗಳಿಂದ ಪ್ರಭಾವಿತರಾಗುತ್ತಿದ್ದರು. ತಮ್ಮ ಶಿಕ್ಷಣ ಮುಗಿಸಿಕೊಂಡು ತಮ್ಮ ಊರುಗಳಿಗೆ ವಾಪಸ್ಸು ಹೋದಾಗ ಅಲ್ಲಿ ರಾಷ್ಟ್ರೀಯ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದರು. ವ್ಯಾಯಾಮ ಶಾಲೆಯಲ್ಲಿ ವಾಚನಾಲಯ ಹಾಗೂ ಗ್ರಂಥಾಲಯಗಳಿದ್ದವು. ಅಲ್ಲಿ ರಾಷ್ಟ್ರೀಯ ದಿನಾಚರಣೆಗಳನ್ನು ಆಚರಿಸಲಾಗುತ್ತಿತ್ತು. ೧೯೩೩ರ ಸೆಪ್ಟೆಂಬರ್‌ನಲ್ಲಿ ಬಳ್ಳಾರಿಯಲ್ಲಿ ನಡೆದ 'ಖಾದಿ ಮತ್ತು ಸ್ವದೇಶಿ ವಸ್ತು ಪ್ರದರ್ಶನ' ದಲ್ಲಿ ನವಜೀವನ ವ್ಯಾಯಾಮಶಾಲೆಯ ಡಿ. ರಾಮಮೂರ್ತಿಯವರು ಸ್ವಯಂ ಸೇವಕ ತಂಡದ ನಾಯಕರಾಗಿ ಕೆಲಸ ಮಾಡಿದರು. ಇವರ ತಂಡವು ೧೯೩೬ರಲ್ಲಿ ಹಂಪೆಯಲ್ಲಿ ನಡೆದ ವಿಜಯನಗರ ಸಾಮ್ರಾಜ್ಯದ ೬೦೦ನೇ ಜಯತುತ್ಸವದಲ್ಲಿ ದುಡಿಯಿತು.

ಹರಿಜನ ವಿದ್ಯಾರ್ಥಿನಿಯರ ಹಾಸ್ಟೆಲ್-೧೯೩೯

ಶ್ರೀ ಸತ್ಯವಂತರಾವ್ ಮಲೆಬೆನ್ನೂರುರವರು ಬಾಲಗಂಗಾಧರ ತಿಲಕ್‌ರವರ ಬೋಧನೆಯಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಇವರು ಯರವಾಡ ಜೈಲಿನಲ್ಲಿ ೧೯೨೨ ರಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾಗ ಅದೇ ಜೈಲಿನಲ್ಲಿ ಗಾಂಧೀಜಿಯವರು ಜೈಲುವಾಸ ಅನುಭವಿಸುತ್ತಿದ್ದರು. ಸತ್ಯವಂತರಾವ್ ಮತ್ತು ಗಾಂಧೀಜಿಯವರ ನಡುವೆ ಅನೇಕ ವಿಷಯಗಳನ್ನು ಕುರಿತು ಚರ್ಚೆ-ವಿಚಾರ ವಿನಿಮಯ ನಡೆಯುತ್ತಿತ್ತು. ಇವರು ಬೊಂಬಾಯಿ ಪ್ರಾಂತದ ಅನೇಕ ಸ್ಥಳಗಳಲ್ಲಿ ವಿದ್ಯಾಭ್ಯಾಸ, ಚಳುವಳಿ, ವಕೀಲಿ ನಡೆಸಿ ೧೯೨೭ ರಲ್ಲಿ ಬಳ್ಳಾರಿಗೆ ಬಂದು

ನೆಲೆಸಿದರು. ಬಳ್ಳಾರಿಯಲ್ಲಿ ಇವರು ಮಹಿಳೆಯರಿಗಾಗಿಯೇ ಸರ್ಕ್ಯೂಲೇಟಿಂಗ್ ಲೈಬ್ರರಿ ಪ್ರಾರಂಭಿಸಿದರು. ನಂತರ ಬಳ್ಳಾರಿ ನಗರದ ಮಿಲ್ಲರ್ ಪೇಟೆಯಲ್ಲಿ ೧೯೩೯ರಲ್ಲಿ ಹರಿಜನ ಬಾಲಕಿಯರಿಗಾಗಿ ಹಾಸ್ಟೆಲ್ ತೆರೆದರು. ಇವರು ಪ್ರಾರಂಭಿಸಿದ್ದ ಹರಿಜನ ಬಾಲಕಿಯರ ಹಾಸ್ಟೆಲ್ ಇದ್ದ ಸ್ಥಳದಲ್ಲಿ ಇಂದು ಖಾದಿ ಸಂಸ್ಥೆ ತಲೆಯೆತ್ತಿದೆ. ಶ್ರೀಯುತ ಸತ್ಯವಂತರಾವ್‌ರವರು ಶ್ರೀಮತಿ ರತ್ನಾಬಾಯಿಯೆಂಬ ವಿಧವೆಯನ್ನು ಮದುವೆಯಾದರು. ಶ್ರೀಮತಿ ರತ್ನಾಬಾಯಿಯವರು ಹರಿಜನ ಬಾಲಕಿಯರ ಹಾಸ್ಟೆಲ್ ಮತ್ತು ಮಹಿಳೆಯರ ಸರ್ಕ್ಯೂಲೇಟಿಂಗ್ ಲೈಬ್ರರಿ ನೋಡಿಕೊಳ್ಳುತ್ತಿದ್ದರು.

ದೀನ ಸೇವಾ ಸಂಘ, ಕೊಟ್ಟೂರು

ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಕೊಟ್ಟೂರು ಗ್ರಾಮಕ್ಕೆ ಮಹತ್ವದ ಸ್ಥಾನವಿದೆ. ಕೊಟ್ಟೂರು ಅನೇಕ ನಿಷ್ಠಾವಂತ ಸತ್ಯಾಗ್ರಹಿಗಳನ್ನು ನೀಡಿದ ಊರು. ಗಾಂಧೀಜಿಯವರಿಗೆ ಪ್ರಿಯವಾಗಿದ್ದ ರಚನಾತ್ಮಕ ಕಾರ್ಯಕ್ರಮಗಳನ್ನು ಕೊಟ್ಟೂರಿನ ಕಾರ್ಯಕರ್ತರು ಅತ್ಯಂತ ನಿಷ್ಠೆಯಿಂದ ಕೈಗೊಂಡರು. ಕೊಟ್ಟೂರಿನ ಗೂರ್ಲಿ ಶರಣಪ್ಪ, ಕೆ. ಗೌಡಪ್ಪ ಮತ್ತು ಸಿದ್ದಪ್ಪ ಅವರುಗಳು ಹರಿಜನ ಮಕ್ಕಳ ಶಿಕ್ಷಣಕ್ಕಾಗಿ ದೀನ ಸೇವಾ ಸಂಘ ಪ್ರಾರಂಭಿಸಿದರು. ಹರಿಜನ ಕೇರಿಯ ಪಕ್ಕದಲ್ಲೇ ಸರ್ಕಾರವು ನೀಡಿದ್ದ ನಿವೇಶನದಲ್ಲಿ ಹರಿಜನ ಶಾಲೆಯನ್ನು ಇವರು ಸ್ಥಾಪಿಸಿದರು.

ಹರಿಜನಕೇರಿಗೆ ಹೋಗಿ ಕೆಲಸ ಮಾಡುವುದನ್ನು ಗೌಡಪ್ಪನವರ ತಂದೆ ಇಷ್ಟಪಡುತ್ತಿರಲಿಲ್ಲ. "ನೀನು ಇನ್ನು ಮಾದರಕೇರಿಗೆ ಹೋಗಿದ್ದೇ ಆದರೆ ಆ ಗುಡಿಸಲಿಗೆ ಬೆಂಕಿ ಹಾಕಿ ನಾನು ಅದರಲ್ಲಿ ಬೆಂದು ಹೋಗುತ್ತೇನೆ" ಎಂದು ಗೌಡಪ್ಪನವರ ತಂದೆ ಬೆದರಿಕೆ ಹಾಕಿದ್ದರು. ಗಾಂಧೀಜಿ ವಿಚಾರಗಳಿಂದ ತಂದೆಯ ಮನಸ್ಸನ್ನು ಪರಿವರ್ತಿಸುವುದು ಮಗನಿಗೆ ಸಾಧ್ಯವಾಗಲಿಲ್ಲ. ಇದರಿಂದಾಗಿ ಗೌಡಪ್ಪ ಮತ್ತು ಅವರ ತಂದೆ ನಡುವೆ ಮನಸ್ತಾಪ ಉಂಟಾಯಿತು. ಇದನ್ನು ಲೆಕ್ಕಿಸದೆ ಗೌಡಪ್ಪನವರು ಹರಿಜನಕೇರಿಯಲ್ಲಿ ತಮ್ಮ ಕೆಲಸ ಮುಂದುವರಿಸಿದರು. ಇದರಿಂದ ತಂದೆ-ಮಗನ ನಡುವೆ ಭಿನ್ನಾಭಿಪ್ರಾಯ ತೀವ್ರಗೊಂಡಿತು. ಕೊನೆಗೆ ಗೌಡಪ್ಪನವರು ಗಾಂಧೀಜಿ ರಚನಾತ್ಮಕ ಕಾರ್ಯಕ್ರಮಗಳಿಗಾಗಿ ತಮ್ಮ ಸ್ವಂತ ಮನೆಯನ್ನು ತ್ಯಜಿಸಬೇಕಾಯಿತು ಹಾಗೂ ಪಿತ್ರಾರ್ಜಿತ ಆಸ್ತಿಯನ್ನು ತ್ಯಾಗಮಾಡಬೇಕಾಯಿತು. ಗಾಂಧೀಜಿಯವರ ವಿಚಾರಗಳಿಂದ ಪ್ರಭಾವಿತರಾಗಿದ್ದ ಕೆ. ಗೌಡಪ್ಪನವರು ಎಂತಹ ತ್ಯಾಗಕ್ಕೂ ಸಿದ್ಧರಾಗಿದ್ದರು. ಅವರಿಗೆ ಸಮಾಜ ಸುಧಾರಣೆ ಮುಖ್ಯವಾಗಿತ್ತು.

ದೀನ ಸೇವಾ ಸಂಘದ ಆಶ್ರಯದಲ್ಲಿ ಸ್ಥಾಪಿಸಿದ್ದ ಹರಿಜನ ಶಾಲೆಯಲ್ಲಿ ಗೌಡಪ್ಪನವರು ಪ್ರಥಮ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಗರುಡ ಸದಾಶಿವರಾಯರು ತಮ್ಮ ನಾಟಕದ ಒಂದು ದಿನದ ಸಂಗ್ರಹವನ್ನು ದೀನ ಸೇವಾ ಸಂಘಕ್ಕೆ ಕಾಣಿಕೆಯಾಗಿ ನೀಡಿದರು. ೧೯೩೪ ರಲ್ಲಿ

ಗಾಂಧೀಜಿಯವರು ಬಳ್ಳಾರಿ ಜಿಲ್ಲೆಯನ್ನು ಪ್ರವಾಸ ಮಾಡಿದಾಗ ದೀನ ಸೇವಾ ಸಂಘದ ಆಶ್ರಯದಲ್ಲಿ ನಡೆಯುತ್ತಿದ್ದ ಹರಿಜನ ಶಾಲೆಗೆ ಭೇಟಿ ಕೊಟ್ಟರು.

ಹರಿಜನಕೇರಿಯಲ್ಲಿ ಮದುವೆ

ಕೊಟ್ಟೂರಿನಲ್ಲಿ ಸ್ಥಾಪಿಸಿದ್ದ ದೀನ ಸೇವಾ ಸಂಘದ ಪ್ರಮುಖ ಕಾರ್ಯಕರ್ತರಲ್ಲೊಬ್ಬರಾದ ಸಿದ್ದಪ್ಪನವರು ತಮ್ಮ ವಿವಾಹವನ್ನು ಹರಿಜನಕೇರಿಯಲ್ಲಿ ನಡೆಸಿ ಕ್ರಾಂತಿಯನ್ನೇ ಉಂಟುಮಾಡಿದರು. ಹಳೆಯ ಸಂಪ್ರದಾಯಗಳನ್ನು ಬಿಟ್ಟು ಅತ್ಯಂತ ಸರಳವಾಗಿ ಕಾಂಗ್ರೆಸ್ ಧ್ವಜ ಹಾರಿಸುವುದರ ಮೂಲಕ ವಿವಾಹವನ್ನು ನಡೆಸಲಾಯಿತು. ಹರಿಜನ ಕೇರಿಯಲ್ಲಿ ನಡೆದ ಸಿದ್ದಪ್ಪನವರ ಮದುವೆ ಸಮಾರಂಭಕ್ಕೆ ಜಿಲ್ಲೆಯ ಕಾಂಗ್ರೆಸ್ ಮುಖಂಡರುಗಳಾದ ಟೇಕೂರು ಸುಬ್ರಹ್ಮಣ್ಯಂ, ಟಿ.ಬಿ. ಕೇಶವರಾವ್ ಮುಂತಾದವರು ಆಗಮಿಸಿದ್ದರು. ಹರಿಜನಕೇರಿಯಲ್ಲಿ ನಡೆದ ವಿವಾಹ ಸಮಾರಂಭಕ್ಕೆ ಸಹಜವಾಗಿ ಗಂಡು-ಹೆಣ್ಣಿನ ಪಾಲಕರು ಬಂದಿರಲಿಲ್ಲ. ಸಿದ್ದಪ್ಪನವರು ಮುಂದೆ ತಾವು ವಿವಾಹವಾದ ಪತ್ನಿಯನ್ನು ಸತ್ಯಾಗ್ರಹ ಶಿಕ್ಷಣಕ್ಕಾಗಿ ವರ್ಧಾದಲ್ಲಿನ ಗಾಂಧೀಜಿ ಆಶ್ರಮಕ್ಕೆ ಕಳುಹಿಸಿದರು.

ವಿಧವಾ ವಿವಾಹ

ಕೊಟ್ಟೂರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಹತ್ತಾರು ಸತ್ಯಾಗ್ರಹಿಗಳನ್ನು ತರಬೇತುಗೊಳಿಸಿದ ಕೀರ್ತಿ ಗೂರ್ಲಿ ಶರಣಪ್ಪನವರಿಗೆ ಸಲ್ಲಬೇಕು. ಇವರು ದೀನ ಸೇವಾ ಸಂಘದ ಹಿಂದಿನ ಚಾಲಕ ಶಕ್ತಿಯಾಗಿದ್ದರು. ಸಮಾಜ ಸುಧಾರಣೆ ಹಾಗೂ ಸ್ವಾತಂತ್ರ್ಯ ಚಳುವಳಿಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ದೀನ ಸೇವಾಶ್ರಮ, ಭಾರತ ವ್ಯಾಯಾಮ ಶಾಲೆ, ಹರಿಜನ ಶಾಲೆ ಮುಂತಾದವುಗಳನ್ನು ಕೊಟ್ಟೂರಿನಲ್ಲಿ ಶರಣಪ್ಪನವರು ಕಟ್ಟಿ ಬೆಳೆಸಿದರು. ಸಾಮಾಜಿಕ ಅನಿಷ್ಟಗಳನ್ನು ನಿವಾರಿಸುವ ಸಲುವಾಗಿ ಶರಣಪ್ಪನವರು ವಿಧವೆಯೊಬ್ಬರನ್ನು ವಿವಾಹವಾಗಲು ಸಿದ್ಧರಾದರು. ಕಾಂಗ್ರೆಸ್ ಕಾರ್ಯಕರ್ತರಾಗಿದ್ದ ಬಿ.ಎಂ.ಅಜ್ಜಯ್ಯನವರ ತಂಗಿ ರುದ್ರಮ್ಮನೆಂಬುವ ವಿಧವೆಯನ್ನು ಗೂರ್ಲಿ ಶರಣಪ್ಪನವರು ಮೈಲಾರ ಮಹದೇವಪ್ಪ ಮತ್ತು ಅವರ ಪತ್ನಿ ಸಿದ್ದಮ್ಮನವರು ಹೊಸರಿತ್ತಿಯಲ್ಲಿ ನಡೆಸುತ್ತಿದ್ದ ಆಶ್ರಮದಲ್ಲಿ ವಿವಾಹವಾದರು. ಇದು ಒಂದು ಕ್ರಾಂತಿಕಾರಿ ಘಟನೆಯಾಗಿತ್ತು. ಹೀಗೆ ಕೊಟ್ಟೂರು ಅಂದು ಸಮಾಜ ಸುಧಾರಣೆ ಚಟುವಟಿಕೆಗಳಲ್ಲಿ ಕ್ರಾಂತಿಕಾರಕ ಕೇಂದ್ರವಾಗಿತ್ತು.

ಭಾರತ ವ್ಯಾಯಮ ಶಾಲೆ, ಕೊಟ್ಟೂರು

ಯುವಕರನ್ನು ಸ್ವಾತಂತ್ರ್ಯ ಹೋರಾಟಕ್ಕೆ ತರಬೇತುಗೊಳಿಸುವ ಸಲುವಾಗಿ ಕೊಟ್ಟೂರಿನಲ್ಲಿ ಗೂರ್ಲಿ ಶರಣಪ್ಪನವರು ಭಾರತ ವ್ಯಾಯಾಮ ಶಾಲೆ ಸ್ಥಾಪಿಸಿದರು. ಅಲ್ಲಿ ಪುಸ್ತಕ ಭಂಡಾರವನ್ನು ಇಟ್ಟು ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿಚಾರಗಳನ್ನು ಬೋಧಿಸುವ ಗ್ರಂಥಗಳ ರಾಶಿಯನ್ನು

ಒದಗಿಸಿದರು. 'ಲೋಕಮತ', 'ನವಯುಗ', 'ಸಂಯುಕ್ತ ಕರ್ನಾಟಕ' ಮುಂತಾದ ಪತ್ರಿಕೆಗಳನ್ನು ಗ್ರಂಥಾಲಯಕ್ಕೆ ತರಿಸುತ್ತಿದ್ದರು. ವ್ಯಾಯಾಮ ಶಾಲೆಯು ಅನೇಕ ವಿದ್ಯಾರ್ಥಿಗಳಿಗೆ ವಸತಿಯ ತಾಣವಾಗಿತ್ತು. ವ್ಯಾಯಾಮ ಶಾಲೆಯ ವಾರ್ಷಿಕೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ಪ್ರಭಾತ್ ಭೇರಿ, ಧ್ವಜವಂದನೆ, ದೇಶಭಕ್ತಿ ಗೀತೆಗಳ ಗಾಯನ, ಅಂಗ ಸಾಧನೆ, ವಿದ್ವಾಂಸರಿಂದ ಭಾಷಣ ಮುಂತಾದ ಕಾರ್ಯಕ್ರಮಗಳು ನೂರಾರು ಜನರನ್ನು ಆಕರ್ಷಿಸುತ್ತಿದ್ದವು. ವ್ಯಾಯಾಮ ಶಾಲೆಯ ವಾರ್ಷಿಕೋತ್ಸವಕ್ಕೆ ಒಮ್ಮೆ ಬಂದಿದ್ದ ವರಕವಿ ದ.ರಾ.ಬೇಂದ್ರೆಯವರು ತಮ್ಮ ಪ್ರಸಿದ್ಧ ಕವನ 'ಮಕ್ಕಳಿವರೇ ನಮ್ಮ ಮೂವತ್ತು ಮೂರು ಕೋಟಿ' ಯನ್ನು ಹಾಡಿ ಜನರಲ್ಲಿ ನವಚೈತನ್ಯ ಉಂಟು ಮಾಡಿದ್ದರು. ಬಾಬು ರಾಜೇಂದ್ರ ಪ್ರಸಾದ್‌ರವರು ೧೬.೨.೧೯೩೭ ರಲ್ಲಿ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯರವರು ೨೯-೯-೧೯೩೭ ರಲ್ಲಿ ವ್ಯಾಯಾಮ ಶಾಲೆಗೆ ಭೇಟಿ ನೀಡಿ ಭಾಷಣ ನೀಡಿದ್ದರು.

ಪೆದ್ದಕಡಬೂರಿನಲ್ಲಿ ಖಾದಿ ಪ್ರಚಾರ

ಆದೋನಿ ತಾಲ್ಲೂಕಿನ ಪೆದ್ದಕಡಬೂರಿನ ಐ.ವೆಂಕಟರೆಡ್ಡಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದ್ದರು. ಇವರು ಪೆದ್ದಕಡಬೂರಿನಲ್ಲಿ 'ಭಾರಧ್ವಾಜ ಆಶ್ರಮ'ವನ್ನು ಸ್ಥಾಪಿಸಿದರು. ಶ್ರೀಮತಿ ರಾಮಲಿಂಗಮ್ಮನವರ ಸಹಾಯದಿಂದ ಆಶ್ರಮದಲ್ಲಿ ಖಾದಿಬಟ್ಟೆ ತಯಾರಿಸುವ ಹಾಗೂ ಕೈಯಲ್ಲಿ ಕಾಗದ ತಯಾರಿಸುವ ಘಟಕಗಳನ್ನು ಸ್ಥಾಪಿಸಲಾಯಿತು. ಶ್ರೀ ವೆಂಕಟರೆಡ್ಡಿಯವರು ೧೯೪೦-೪೧ ವೈಯಕ್ತಿಕ ಚಳುವಳಿಯ ಸಂದರ್ಭದಲ್ಲಿ 'ಎಮ್ಮಿಗನೂರು ಸತ್ಯಾಗ್ರಾಹಿ'ಗಳ ತಂಡದಲ್ಲಿ ಸೇರಿಕೊಂಡು ಕಾಲ್ನಡಿಗೆಯಲ್ಲಿ ಯುದ್ಧ ವಿರೋಧಿ ಘೋಷಣೆ ಕೂಗುತ್ತಾ ಮತ್ತು ಯುದ್ಧ ವಿರೋಧಿ ವಿಚಾರಗಳನ್ನು ಜನರಿಗೆ ತಿಳಿಸುತ್ತಾ 'ದೆಹಲಿ ಚಲೊ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇವರ ತಂಡವು ದೆಹಲಿಗೆ ಸಾಗುವ ಮಾರ್ಗದಲ್ಲಿ ಮಧ್ಯಪ್ರದೇಶದಲ್ಲಿ ಬಂಧನಕ್ಕೊಳಗಾಯಿತು.

ಹರಿಜನಕೇರಿಯಲ್ಲಿ ಅಂಗಡಿ

ಹಡಗಲಿ ತಾಲ್ಲೂಕಿನ ಮಾಗಳ ಗ್ರಾಮದಲ್ಲಿ ಬನ್ನಿಮಟ್ಟಿ ಲಂಕೆಪ್ಪನವರು ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆ ವಿಚಾರಗಳಿಂದ ಪ್ರೇರಿತಗೊಂಡು ಹರಿಜನ ಕೇರಿಯಲ್ಲಿ ಅಂಗಡಿಯೊಂದನ್ನು ತೆರೆದರು. ಹರಿಜನಕೇರಿಗೆ ಎಲ್ಲರೂ ಪ್ರವೇಶಿಸುವಂತೆ ಜನರಲ್ಲಿ ಜಾಗೃತಿ ಉಂಟು ಮಾಡುವಲ್ಲಿ ಲಂಕೆಪ್ಪನವರು ಬಹುವಾಗಿ ಕೆಲಸ ಮಾಡಿದರು. ತಮ್ಮ ಅಂಗಡಿಯಲ್ಲಿ ಲಂಕೆಪ್ಪನವರು ಭಾರತ ಮಾತೆಯ ಫೋಟೊ ಹಾಕಿ ಪೂಜಿಸುತ್ತಿದ್ದರು. ಅಂಗಡಿಯ ಮೇಲೆ ರಾಷ್ಟ್ರಧ್ವಜ ಹಾರಿಸುತ್ತಿದ್ದರು. ಗಳಗನಾಥ, ಹಾವನೂರು, ಕೊಂಬಳಿ, ಹೆಬ್ಬಾಳ, ಬನ್ನಿಮಟ್ಟಿ, ಹೊಳಲು ಮುಂತಾದ ಗ್ರಾಮಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಅಂಗಡಿ-ಹೋಟೆಲುಗಳಲ್ಲಿ ಹರಿಜನರಿಗೆ ಪ್ರವೇಶ ನೀಡುವಂತೆ ಜನರಿಗೆ ತಿಳಿಹೇಳುವ ಕೆಲಸ ಮಾಡಿದರು.

ಪ್ರಾಣಿಬಲಿ ನಿಷೇಧ

ಹಡಗಲಿ ತಾಲ್ಲೂಕಿನ ಹಾವನೂರು ಮತ್ತು ಕೊಂಬಳಿಗಳಲ್ಲಿ ನಡೆಯುತ್ತಿದ್ದ ಜಾತ್ರೆಗಳಲ್ಲಿ 'ಕೋಣನ ಬಲಿ' ನಡೆಯುತ್ತಿತ್ತು. ಬನ್ನಿಮಟ್ಟಿ ಲಂಕೆಪ್ಪ, ನೆಗಳೂರು ಧರ್ಮಣ್ಣ, ನೆಗಳೂರು ಇಮಾಮ್ ಸಾಹೆಬ್, ಶಿವಪುರದ ಏಕಾಂಬರಪ್ಪ ಮುಂತಾದವರು ಸೇರಿಕೊಂಡು ಜಾತ್ರೆಗಳಲ್ಲಿ ನಡೆಯುತ್ತಿದ್ದ ಕೋಣನ ಬಲಿಯನ್ನು ತಡೆಯುವ ಚಳುವಳಿ ನಡೆಸಿದರು. ಇವರುಗಳು ನಡೆಸಿದ ಚಳುವಳಿಯ ಪರಿಣಾಮವಾಗಿ ಕೊಂಬಳಿಯಲ್ಲಿ 'ಪ್ರಾಣಿಬಲಿ'ಯು ನಿಂತು ಹೋಯಿತು. ಇಂತಹ ಚಳುವಳಿ ಮೂಲಕ ಈ ತಂಡವು ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಯಿತು.

ವೈ. ಮಹಾಬಲೇಶ್ವರಪ್ಪನವರ ಕಾಣಿಕೆ

ಸತ್ಯವಂತರಾವ್ ಮಲೆಬೆನ್ನೂರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗಿಗಳಾಗಿದ್ದರು. ಅವರು ರತ್ನಾಬಾಯಿಯೆಂಬ (ಶಾಂತಾಬಾಯಿ ಎಂದೂ ಅವರನ್ನು ಕರೆಯಲಾಗುತ್ತಿತ್ತು.) ವಿಧವೆಯೊಬ್ಬರನ್ನು ವಿವಾಹವಾಗಿ ಕ್ರಾಂತಿಕಾರಿ ಸಮಾಜ ಸುಧಾರಕರೆನಿಸಿದ್ದರು. ೧೯೪೨ರ ಚಳುವಳಿ ಸಂದರ್ಭದಲ್ಲಿ ಸತ್ಯವಂತರಾವ್ ಜೈಲಿಗೆ ಹೋಗಲು ಅನುಕೂಲವಾಗುವಂತೆ ವೈ. ಮಹಾಬಲೇಶ್ವರಪ್ಪನವರು ಸತ್ಯವಂತರಾವ್‌ರವರ ಪತ್ನಿ ಶಾಂತಾಬಾಯಿಯವರಿಗೆ ಜಿಲ್ಲಾ ಬೋರ್ಡ್‌ನ ಸ್ಕೂಲಿನಲ್ಲಿ ಅಧ್ಯಾಪಕಿಯ ಕೆಲಸ ನೀಡಿದರು ಎನ್ನಲಾಗಿದೆ. ವಾಸ್ತವವಾಗಿ ಮಹಾಬಲೇಶ್ವರಪ್ಪನವರು ಜಸ್ಟೀಸ್ ಪಕ್ಷದ ಕಾರ್ಯಕರ್ತರಾಗಿದ್ದರು. ಆದರೆ ಇವರು ಅನೇಕ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಕಾಣಿಕೆ ನೀಡಿದ್ದಾರೆ. ಇವರು ಕಾಂಗ್ರೆಸ್‌ನ ವಿರೋಧಿಗಳಾಗಿದ್ದರೇ ವಿನಹ ಸ್ವಾತಂತ್ರ್ಯ ಹೋರಾಟದ ವಿರೋಧಿಗಳಾಗಿರಲಿಲ್ಲ. ವೈ. ಮಹಾಬಲೇಶ್ವರಪ್ಪನವರು ಒಬ್ಬ ವ್ಯಕ್ತಿಯಾಗಿರದೆ ಒಂದು ಸಂಸ್ಥೆಯಾಗಿದ್ದರು.

ಹರಿಜನ ಬಾಲಕನನ್ನು ದತ್ತು ತೆಗೆದುಕೊಂಡ ಬ್ರಾಹ್ಮಣ ದಂಪತಿಗಳು

೧೯೨೦ರ ದಶಕದ ಪ್ರಾರಂಭದಿಂದಲೂ ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಸಂಘಟಿಸಿದವರಲ್ಲಿ ತುಂಬಾ ಮಹತ್ವದ ವ್ಯಕ್ತಿಯೆಂದರೆ ಟಿ.ಬಿ. ಕೇಶವ ರಾವ್. ಜಿಲ್ಲೆಯಾದ್ಯಂತ ಸಂಚಾರ ಮಾಡಿ ಜನ ಜಾಗೃತಿ ಮೂಡಿಸಿದರು. ೧೯೨೩ ರಿಂದ ೧೯೩೯ರ ವರೆಗೆ ಇವರು ಜಿಲ್ಲೆಯಲ್ಲಿ ಖಾದಿ ಪ್ರಚಾರ, ಗೋರಕ್ಷಣೆ ಬಗ್ಗೆ ತಿಳುವಳಿಕೆ, ಗೋಶಾಲೆ ಸಂಸ್ಥಾಪನೆ ಮುಂತಾದ ಚಟುವಟಿಕೆಗಳಲ್ಲಿ ನಿರತರಾಗಿದ್ದರು.

ಜಿಲ್ಲೆಯಲ್ಲಿ ಇವರು ಮತ್ತು ಇವರ ಹೆಂಡತಿ ಜಯಲಕ್ಷ್ಮೀದೇವಿ ಇಬ್ಬರೂ ಹರಿಜನೋದ್ಧಾರಕ್ಕಾಗಿ ಅಪಾರ ದುಡಿದರು. ೧೯೩೪ರಲ್ಲಿ ಇವರ ಪ್ರಯತ್ನದಿಂದಾಗಿ ಜಿಲ್ಲೆಯಲ್ಲಿ ಗಾಂಧೀಜಿಯವರ 'ಹರಿಜನಯಾತ್ರೆ' ನಡೆಯಿತು. ೧೯೩೯ರಲ್ಲಿ ಇವರಿಬ್ಬರೂ ಹರಿಜನ

ಬಾಲಕನೊಬ್ಬನನ್ನು ದತ್ತು ತೆಗೆದುಕೊಂಡು ಸಾಕುತ್ತಿದ್ದರು. ಆ ಕಾಲಕ್ಕೆ ಇದೊಂದು ಕ್ರಾಂತಿಕಾರಕ ಹೆಜ್ಜೆಯಾಗಿತ್ತು. ಈ ಕ್ರಮದಿಂದಾಗಿ ಕೇಶವರಾವ್ ದಂಪತಿಗಳು ಸಾಮಾಜಿಕ ಬಹಿಷ್ಕಾರಕ್ಕೊಳಗಾಗಬೇಕಾಯಿತು. ಆದರೆ ಇಂತಹ ಕ್ರಮಗಳಿಂದ ಎದೆಗುಂದದೆ ದಂಪತಿಗಳು ತಮ್ಮ ಸಾಮಾಜಿಕ ಸುಧಾರಣಾ ಕಾರ್ಯವನ್ನು ಮುಂದುವರಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಇವರಿಬ್ಬರೂ ಜೈಲು ಶಿಕ್ಷೆ ಅನುಭವಿಸಿದರು.

ಬೆಲ್ಲದ ಚನ್ನಪ್ಪನವರ ಖಾದಿ ಉತ್ಪಾದನೆ ಸಾಹಸ

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರೆಲ್ಲಾ ಖಾದಿ ಧರಿಸಬೇಕಾಗಿತ್ತು. ಆ ಕಾಲದಲ್ಲಿ ಹೊಸಪೇಟೆಯಲ್ಲಿ ಖಾದಿ ಬಟ್ಟೆಯೆ ದೊರೆಯುತ್ತಿರಲಿಲ್ಲ. ಬೇರೆ ಸ್ಥಳಗಳಿಂದ ಖಾದಿ ಬಟ್ಟೆ ತರಿಸಿಕೊಳ್ಳಬೇಕಾಗಿತ್ತು. ಈ ಸಮಸ್ಯೆಯನ್ನು ಬಗೆಹರಿಸಲು ಬೆಲ್ಲದ ಚನ್ನಪ್ಪ ಮತ್ತು ಪತ್ತಿಕೊಂಡ ಗುರುನಾಥಪ್ಪನವರುಗಳು ಕೂಡಿ ರೂ. ೩೦೦ ಬಂಡವಾಳ ಹಾಕಿ ಹೊಸಪೇಟೆಯಲ್ಲಿ ಖಾದಿ ಮಾರಾಟದ ಒಂದು ವ್ಯವಸ್ಥೆ ಮಾಡಿದರು.

ಬೆಲ್ಲದ ಚನ್ನಪ್ಪ ಹಾಗೂ ಡಾ. ನಾಗನ ಗೌಡರಿಬ್ಬರೂ ಹೊಸಪೇಟೆಯಲ್ಲೇ ಖಾದಿ ಬಟ್ಟೆ ತಯಾರಿಸುವುದರ ಬಗ್ಗೆ ಬಹಳ ಯೋಚನೆ ಮಾಡಿದರು. ಖಾದಿ ತಯಾರಿಸುವ ಯೋಜನೆಗಾಗಿ ಬೆಲ್ಲದ ಚನ್ನಪ್ಪನವರು ರೂ. ೧೦೦೦ ಮುಡುಪಾಗಿಟ್ಟರು. ಹೊಸಪೇಟೆಯಲ್ಲಿ ನೂಲು ತಯಾರಿಸುವ ನೇಕಾರರಿರಲಿಲ್ಲ. ಕೊಪ್ಪಳದ ಅಗಡಿ ಸಂಗಣ್ಣನವರ ನೆರವಿನಿಂದ ಮುದ್ದಾಬಳ್ಳಿ ಎಂಬ ಗ್ರಾಮದಲ್ಲಿ ನೂಲು ತೆಗೆದು ಕೊಡುವ ಜನರನ್ನು ಸಂಪರ್ಕಿಸಲಾಯಿತು. ಒಳ್ಳೆಯ ಗುಣಮಟ್ಟದ ನೂಲು ತೆಗೆದು ಕೊಡುವಂತೆ ಅವರಿಗೆ ಒತ್ತಾಯಿಸಲಾಯಿತು. ಇದಕ್ಕಾಗಿ ಹೆಚ್ಚಿನ ಕೂಲಿ ಕೊಡುವ ಭರವಸೆ ನೀಡಲಾಯಿತು.

ಮುದ್ದಾಬಳ್ಳಿಯಿಂದ ನೂಲನ್ನು ಹೊಸಪೇಟೆಗೆ ತರಿಸಿಕೊಳ್ಳಲಾಗುತ್ತಿತ್ತು. ಹೊಸಪೇಟೆಯಲ್ಲಿ ನಲವಗಿ ರಾಮಚಂದ್ರಪ್ಪನವರು ತಾವು ತರಿಸಿದ ನೂಲಿನಿಂದ ಬಟ್ಟೆ ನೇಯ್ದು ಕೊಡುತ್ತಿದ್ದರು. ಆದರೆ ಇವರು ನೇಯ್ದು ಕೊಡುತ್ತಿದ್ದ ಖಾದಿ ಬಟ್ಟೆ ತುಂಬಾ ಒರಟಾಗಿರುತ್ತಿತ್ತು. ಕೆಲವರು ಗಿರಣಿಯಿಂದ ನೂಲನ್ನು ತಂದು ಬಟ್ಟೆ ನೇಯ್ದು ಖಾದಿ ಎಂದು ಮಾರಾಟ ಮಾಡುತ್ತಿದ್ದರು. ಇಂತಹ ಮೋಸವನ್ನು ತಡೆಯುವ ಜವಾಬ್ದಾರಿ ಕಾಂಗ್ರೆಸ್‌ಗಿತ್ತು. ಏಕೆಂದರೆ ಖಾದಿ ಬಟ್ಟೆಗೆ ಕಾಂಗ್ರೆಸ್ ಸಮಿತಿಯು ಪ್ರಮಾಣ ಪತ್ರ ನೀಡಬೇಕಾಗುತ್ತಿತ್ತು. ೧೯೩೦-೩೧ರ ಸಾಲಿನಲ್ಲಿ ಹೊಸಪೇಟೆ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ತಟ್ಟಿ ಕೃಷ್ಣರಾವ್ ಕೆಲಸ ಮಾಡುತ್ತಿದ್ದರು. ಇವರು ಬೆಲ್ಲದ ಚನ್ನಪ್ಪನವರು ತಯಾರಿಸುತ್ತಿದ್ದ ಖಾದಿಗೆ ಸರ್ಟಿಫಿಕೇಟ್ ಕೊಡಲು ತುಂಬಾ ಸತಾಯಿಸುತ್ತಿದ್ದರಂತೆ.

ಇಷ್ಟರ ಮೇಲೂ ಇವರ ಖಾದಿ ಮಾರಾಟವಾಗುತ್ತಿರಲಿಲ್ಲ. ಏಕೆಂದರೆ ಬೆಲ್ಲದ ಚನ್ನಪ್ಪನವರು ತಯಾರಿಸುತ್ತಿದ್ದ ಖಾದಿಯ ಗುಣಮಟ್ಟ ತುಂಬಾ ಕಡಿಮೆಯದಾಗಿತ್ತು. ಇವರ ಖಾದಿ ತಯಾರಿಸುವ

ಸಾಹಸ ಮೂರು-ನಾಲ್ಕು ವರುಷ ನಡೆದು ನಿಂತು ಹೋಯಿತು.

ಸ್ವಾತಂತ್ರ್ಯ ಹೋರಾಟದಲ್ಲಿ ಬಳ್ಳಾರಿ ಜಿಲ್ಲೆಯು ಹೇಗೆ ೧೮೮೫ ರಿಂದಲೂ ಕ್ರಿಯಾಶೀಲವಾಗಿತ್ತೋ ಅದೇ ರೀತಿಯಲ್ಲಿ ಸಮಾಜ ಸುಧಾರಣೆ ಮತ್ತು ರಚನಾತ್ಮಕ ಕಾರ್ಯಕ್ರಮಗಳಲ್ಲೂ ಚೈತನ್ಯಶೀಲವಾಗಿತ್ತು. ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲೂ ಸಹ ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ, ಹರಿಜನರ ಶಿಕ್ಷಣ ಮುಂತಾದವು ವ್ಯಾಪಕವಾಗಿ ನಡೆದವು. ಇವುಗಳ ಜೊತೆಗೆ ಖಾದಿ ಉತ್ಪಾದನೆ, ಸ್ವದೇಶಿ, ಚರಕದಲ್ಲಿ ನೂಲು ನೂಲುವುದು. ಸ್ತ್ರೀಯರ ಉನ್ನತಿ ಮುಂತಾದ ಕಾರ್ಯಕ್ರಮಗಳನ್ನೂ ಸ್ವಾತಂತ್ರ್ಯ ಹೋರಾಟಗಾರರು ಕೈಗೊಂಡರು. ಕೊಟ್ಟೂರು, ಹರಪನಹಳ್ಳಿ, ಮಾಗಳ, ಕುರುಗೋಡು, ಪೆದ್ದಕಡಬೂರು, ಬಳ್ಳಾರಿ ಮುಂತಾದ ಊರುಗಳಲ್ಲಿ ಖಾದಿ ಕೇಂದ್ರಗಳು ಸ್ಥಾಪನೆ ಗೊಂಡವು, ಮದ್ಯಪಾನ ನಿಷೇಧ ಚಳುವಳಿಗಳು ನಡೆದವು. ಪ್ರಾಣಿಬಲಿ ನಿಷೇಧ ಕಾರ್ಯಕ್ರಮ ನಡೆಯಿತು.

ರಚನಾತ್ಮಕ ಕಾರ್ಯಕ್ರಮಗಳನ್ನು ಸೂಕ್ತವಾಗಿ ಕೈಗೊಳ್ಳಲು ಜಿಲ್ಲೆಯಲ್ಲಿ ಅನೇಕ ಸಂಘ-ಸಂಸ್ಥೆಗಳು ಹುಟ್ಟಿಕೊಂಡವು. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸಮಾಜ ಸುಧಾರಣಾ ಕಾರ್ಯಕ್ರಮಗಳು ಸ್ವಾತಂತ್ರ್ಯ ಚಳುವಳಿಗೆ ಹೊಸ ತೇಜಸ್ಸನ್ನು ಮತ್ತು ಹೊಸ ಆಯಾಮವನ್ನು ನೀಡಿದವು.

೫. ಸ್ವಾತಂತ್ರ್ಯ ಹೋರಾಟ ಮತ್ತು ಸರ್ಕಾರಿ ನೌಕರರ ಪಾತ್ರ

ಬ್ರಿಟಿಷ್ ವಸಾಹತುಶಾಹಿ ಸರ್ಕಾರವು ಸರಿಸುಮಾರು ೨೦೦ ವರ್ಷಗಳ ಕಾಲ ತನ್ನ ಆಧಿಪತ್ಯವನ್ನು ಭಾರತದಲ್ಲಿ ನಡೆಸಿತು. ವ್ಯಾಪಾರ ಮಾಡಲು ಚಿಂತಾಲು ಹಿಡಿದುಕೊಂಡು ಬಂದ ಅವರು ಖಡ್ಗ ಹಿಡಿದು ಯುದ್ಧ ಮಾಡಿದರು. ಇಲ್ಲಿ ಬೃಹತ್ ವಸಾಹತು ಸಾಮ್ರಾಜ್ಯವನ್ನು ನಿರ್ಮಿಸಿದರು. ಭಾರತದ ಸಂಪತ್ತನ್ನು ಲೂಟಿ ಮಾಡಿದರು. ಸಾವಿರಾರು ಅಥವಾ ಲಕ್ಷಾಂತರ ಸಂಖ್ಯೆಯಲ್ಲಿ ಬ್ರಿಟಿಷರು ಭಾರತಕ್ಕೆ ಬರಲಿಲ್ಲ. ಅಂದ ಮೇಲೆ ೨೦೦ ವರ್ಷಗಳ ಕಾಲ ಅವರಿಗೆ ಈ ದೇಶವನ್ನು ಆಳಲು ಹೇಗೆ ಸಾಧ್ಯವಾಯಿತು? ಬ್ರಿಟಿಷ್ ಸರ್ಕಾರವು ಇಲ್ಲಿ ರೂಪಿಸಿದ್ದ ಆಡಳಿತ ವ್ಯವಸ್ಥೆಯಲ್ಲಿ ಅತ್ಯಂತ ಉನ್ನತ ಹುದ್ದೆಗಳನ್ನು ಬಿಟ್ಟರೆ, ಮುಕ್ಕಾಲು ಪಾಲು ಭಾರತೀಯರಿದ್ದರು. ಬ್ರಿಟಿಷರು ಕಟ್ಟಿದ ಸೈನ್ಯದಲ್ಲೂ ಸಹ ಮುಕ್ಕಾಲು ಪಾಲು ಭಾರತೀಯರಿದ್ದರು. ಸ್ಥಳೀಯರ ಒಡಂಬಡಿಕೆಯಿಲ್ಲದೆ ಬ್ರಿಟಿಷರ ವಸಾಹತು ಪ್ರಭುತ್ವ ಇಲ್ಲಿ ನೆಲೆ ನಿಲ್ಲಲು ಸಾಧ್ಯವಿರಲಿಲ್ಲ. ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಉದಯಿಸುತ್ತಿದ್ದ ಮಧ್ಯಮ ವರ್ಗಕ್ಕೆ ಇಂಗ್ಲಿಷ್ ಶಿಕ್ಷಣ ಹಾಗೂ ಆಧುನಿಕ ಆಡಳಿತ ವ್ಯವಸ್ಥೆಗಳು ಅತ್ಯಂತ ಆಕರ್ಷಣೀಯವಾಗಿ ಕಂಡವು. ಬ್ರಿಟಿಷ್ ಸರ್ಕಾರವು ಅನೇಕ ಸಮಾಜ ಸುಧಾರಣಾ ಕ್ರಮಗಳನ್ನು ಜಾರಿಗೆ ತಂದಿತು. ಇದರಿಂದಾಗಿ ಪಶ್ಚಿಮದ ಉದಾರವಾದಿ ವಿಚಾರಗಳಿಂದ ಪ್ರಭಾವಿತರಾಗಿದ್ದ ಸಮಾಜ ಸುಧಾರಕರೂ ಸಹ ಬ್ರಿಟಿಷ್ ಸರ್ಕಾರಕ್ಕೆ ಸಾತ್ವಿಕ ಬೆಂಬಲ ನೀಡಿದರು. ಪಶ್ಚಿಮದ ವಿಜ್ಞಾನ, ಅವರ ನ್ಯಾಯಾಂಗ ಪದ್ಧತಿ, ಶಿಕ್ಷಣ ವ್ಯವಸ್ಥೆ, ಕೈಗಾರಿಕೆಗಳು ಮುಂತಾದವು ಭಾರತೀಯರನ್ನು ದಿಕ್ಕು ತಪ್ಪುವಂತೆ ಮಾಡಿದವು. ಬ್ರಿಟಿಷ್ ಆಡಳಿತವು ಇಲ್ಲಿ ಜಾರಿಗೊಳಿಸಿದ ನ್ಯಾಯಾಂಗ ಪದ್ಧತಿ, ಶಿಕ್ಷಣ ವ್ಯವಸ್ಥೆ, ವಿಜ್ಞಾನ, ಕೈಗಾರಿಕೆಗಳು ಮುಂತಾದವು ಭಾರತೀಯರಿಗೆ ಬಿಡುಗಡೆಯ ಸಾಧನಗಳಾಗಿ, ಆಧುನಿಕತೆಯ ಹೆಬ್ಬಾಗಿಲುಗಳಾಗಿ ಕಂಡವು. ಸಹಜವಾಗಿ ಮಧ್ಯಮ ವರ್ಗದ ಭಾರತೀಯರು ಅವುಗಳಿಗೆ ದೊಡ್ಡ ಪ್ರಮಾಣದಲ್ಲಿ ಪ್ರವೇಶಿಸಿದರು. ಹೀಗೆ ಪ್ರವೇಶಿಸಿದ ಭಾರತೀಯರು ಬ್ರಿಟಿಷ್ ಸಾಮ್ರಾಜ್ಯದ ಆಧಾರ ಸ್ತಂಭಗಳಾದರು.

ಬ್ರಿಟಿಷ್ ಸರ್ಕಾರವು ಇಲ್ಲಿ ಅಖಿಲ ಭಾರತ ಸ್ವರೂಪ ಆಡಳಿತ ವ್ಯವಸ್ಥೆಯನ್ನು ರೂಪಿಸಿತು. ವಸಾಹತು ಶಾಹಿಯ ಯಶಸ್ಸಿನ ಗುಟ್ಟು ಇದರಲ್ಲಿತ್ತು. ಸ್ಥಳೀಯವಾಗಿ ಅದೊಂದು ಅಮೂರ್ತ ವ್ಯವಸ್ಥೆಯಾಗಿತ್ತು. ಅದನ್ನು ಪ್ರವೇಶಿಸಿದ ಭಾರತೀಯರು ದೇಶಸೇವೆ-ಸಮಾಜಸೇವೆ-ಕರ್ತವ್ಯ

ಪಾಲನೆ ಮಾಡುತ್ತಿದ್ದೇವೆ ಎಂದೇ ತಿಳಿದಿದ್ದರು. ಸ್ಥಳೀಯ ಮಟ್ಟದಲ್ಲಿ ಆಡಳಿತ ವ್ಯವಸ್ಥೆಯು ಸ್ಥಳೀಯತೆಯ ಗುಣಗಳನ್ನು ಹೊರಸೂಸುತ್ತಿತ್ತೇ ವಿನಾ ವಸಾಹತುಶಾಹಿ ಗುಣಗಳನ್ನಲ್ಲ. ವಸಾಹತುಶಾಹಿ, ವಿದೇಶಿ ಆಳ್ವಿಕೆ, ದಬ್ಬಾಳಿಕೆ ಮುಂತಾದವು ಸ್ಥಳೀಯ ಮಟ್ಟದಲ್ಲಿ ಅಗೋಚರವಾಗಿದ್ದವು.

ಭಾರತೀಯರ ಸಹಕಾರ, ಸಹಯೋಗ ಹಾಗೂ ಸಹಬಾಗಿತ್ವವಿಲ್ಲದೆ ವಸಾಹತುಶಾಹಿ ಬ್ರಿಟಿಷ್ ಆಳ್ವಿಕೆ ಭಾರತದಲ್ಲಿ ಯಶಸ್ವಿಯಾಗಲು ಸಾಧ್ಯವಿರಲಿಲ್ಲ. ಭಾರತೀಯರನ್ನು ಅಧಿಕ ಸಂಖ್ಯೆಯಲ್ಲಿ ಒಳಗೊಂಡಿದ್ದ ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಸ್ವಾತಂತ್ರ್ಯ ಹೋರಾಟಗಾರರು ಎದುರಿಸಬೇಕಾಗಿತ್ತು. ಬ್ರಿಟಿಷ್ ವಸಾಹತು ಸರ್ಕಾರವು ಭಾರತೀಯರ ವಿರುದ್ಧ ಭಾರತೀಯರನ್ನು ಎತ್ತಿ ಕಟ್ಟುವುದರಲ್ಲಿ ಯಶಸ್ವಿಯಾಗಿತ್ತು. ಬ್ರಿಟಿಷ್ ಆಡಳಿತ ವ್ಯವಸ್ಥೆಯಲ್ಲಿ ದುಡಿಯುತ್ತಿದ್ದ ಭಾರತೀಯ ಅಧಿಕಾರಿಗಳೆಲ್ಲಾ ಸ್ವಾತಂತ್ರ್ಯ ಹೋರಾಟಕ್ಕೆ ವಿರೋಧಿಗಳಾಗಿರಲಿಲ್ಲ. ಅನೇಕ ಅಧಿಕಾರಿಗಳಿಗೆ ಸ್ವಾತಂತ್ರ್ಯ ಚಳುವಳಿ ಬಗ್ಗೆ ಸಹಾನುಭೂತಿ ಇತ್ತು. ಬ್ರಿಟಿಷ್ ಸರ್ಕಾರದಲ್ಲಿ ಅಧಿಕಾರಿಗಳಾಗಿ ದುಡಿಯುತ್ತಿದ್ದವರಿಗೆ ಒಂದು ಬಗೆಯ ಇಬ್ಬದಿತನದ ಬಿಕ್ಕಟ್ಟಿತ್ತು. ತಾವು ನೌಕರಿ ಮಾಡುತ್ತಿದ್ದ ಬ್ರಿಟಿಷ್ ಸರ್ಕಾರಕ್ಕೆ ವಿಧೇಯರಾಗಿರಬೇಕಾಗಿತ್ತು, ನಿಷ್ಠರಾಗಿರಬೇಕಾಗಿತ್ತು. ಅದೇ ಸಮಯದಲ್ಲಿ ತಮ್ಮವರೇ ನಡೆಸುತ್ತಿದ್ದ ಸ್ವಾತಂತ್ರ್ಯ ಚಳುವಳಿ ಬಗ್ಗೆ ಸಹಾನುಭೂತಿ ಇತ್ತು. ಇಂತಹ ಇಬ್ಬದಿತನವನ್ನು ಸಹಿಸಲಾಗದ ಅನೇಕರು ತಮ್ಮ ಅಧಿಕಾರ ಸ್ಥಾನಗಳಿಗೆ ರಾಜೀನಾಮೆ ಕೊಟ್ಟು ಚಳುವಳಿಯಲ್ಲಿ ಧುಮುಕಿದರು. ಇಂತಹ ಕಠಿಣ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗದವರು, ಅಧಿಕಾರ ತ್ಯಾಗ ಮಾಡಲು ಸಿದ್ಧವಿಲ್ಲದವರು ಇಬ್ಬದಿತನವನ್ನು ಕಟ್ಟಿಕೊಂಡೆ ಅಧಿಕಾರದಲ್ಲಿ ಮುಂದುವರಿದರು.

ವಸಾಹತುಶಾಹಿ ಸರ್ಕಾರದ ಜೀವತಂತು ಎಲ್ಲಿದೆಯೆಂಬುದು ಗಾಂಧೀಜಿಯವರಿಗೆ ಚೆನ್ನಾಗಿ ತಿಳಿದಿತ್ತು. ಅದಕ್ಕಾಗಿ ಅವರು ಆಡಳಿತ ವ್ಯವಸ್ಥೆಯನ್ನು ಶಿಥಿಲಗೊಳಿಸುವ ಕಾರ್ಯಕ್ಕೆ ಆದ್ಯತೆ ನೀಡಿದರು. ಸರ್ಕಾರಿ ಹುದ್ದೆಗಳಿಗೆ ರಾಜೀನಾಮೆ ನೀಡಲು ಗಾಂಧೀಜಿ ಜನರಿಗೆ ಕರೆನೀಡಿದರು. ಏಕೆಂದರೆ ಆಡಳಿತ ವ್ಯವಸ್ಥೆಯು ವಸಾಹತುಶಾಹಿಯ ಆಧಾರವಾಗಿದೆ ಎಂಬುದು ಗಾಂಧೀಜಿಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದಲೇ ಗಾಂಧೀಜಿಯವರು ಅಸಹಕಾರ ಚಳುವಳಿ, ಕಾನೂನು ಭಂಗ ಮುಂತಾದವುಗಳನ್ನು ಬ್ರಿಟಿಷ್ ಸರ್ಕಾರದ ವಿರುದ್ಧ ಅಸ್ತ್ರಗಳನ್ನಾಗಿ ಮಾಡಿಕೊಂಡರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಉಪಾಧ್ಯಾಯರುಗಳ ಪಾತ್ರ

ಸ್ವಾತಂತ್ರ್ಯ ಚಳುವಳಿಗೆ ಮೂಲ ಸ್ಫೂರ್ತಿ, ಪ್ರೇರಣೆ, ಮಾರ್ಗದರ್ಶನ ಮುಖ್ಯವಾಗಿ ಶಾಲಾ ಉಪಾಧ್ಯಾಯರುಗಳಿಂದ ದೊರೆಯಿತು. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಸಾಮಾನ್ಯವಾಗಿ

ಉಪಾಧ್ಯಾಯರುಗಳು ಅಪ್ರತ್ಯಕ್ಷವಾಗಿ ಅಥವಾ ಕೆಲವೊಮ್ಮೆ ಪ್ರತ್ಯಕ್ಷವಾಗಿ ಸ್ವಾತಂತ್ರ್ಯ ಹೋರಾಟಕ್ಕೆ ನೆರವು ನೀಡಿದ್ದಾರೆ. ಅವರು ವಿದ್ಯಾರ್ಥಿಲೋಕದಲ್ಲಿ ಜಾಗೃತಿ ಮೂಡಿಸಿದರು. ಬ್ರಿಟಿಷರ ವಿರುದ್ಧ ಜನರನ್ನು ಪ್ರಚೋದಿಸಿದ್ದಾರೆ. ಈ ಬಗೆಯ ಪ್ರಚೋದನೆ- ಪ್ರೇರಣೆ ಮತ್ತು ಮಾರ್ಗದರ್ಶನಗಳು ಉಪಾಧ್ಯಾಯರುಗಳಿಂದ ಬಂದುದರಿಂದಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳ ಪಾತ್ರವು ಪ್ರಧಾನವಾಗಿತ್ತು. ೧೯೪೨ರ ಚಲೇಜಾವ್ ಚಳುವಳಿಯಲ್ಲಂತೂ ದೇಶಾದ್ಯಂತ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಅಸಂಖ್ಯ ಪ್ರಮಾಣದಲ್ಲಿ ಚಳುವಳಿಯಲ್ಲಿ ಧುಮುಕಿದರು. ಅಪ್ರಾಪ್ತ ವಯಸ್ಸಿನ ಮಕ್ಕಳೂ ಚಳುವಳಿಯಲ್ಲಿ ಪಾಲುಗೊಂಡರು.

ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿ-ಪ್ರೇರಣೆ ನೀಡುವಲ್ಲಿ ಬಳ್ಳಾರಿ ಜಿಲ್ಲೆಯ ಶಾಲಾ ಉಪಾಧ್ಯಾಯರುಗಳು ಯಾವುದೇ ದೃಷ್ಟಿಯಿಂದಲೂ ಹಿಂದೆ ಬೀಳಲಿಲ್ಲ. ತಮ್ಮದೆ ಆದ ರೀತಿಯಲ್ಲಿ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಶಾಲಾ ಉಪಾಧ್ಯಾಯರುಗಳು ಮಹತ್ವದ ಪಾತ್ರ ನಿರ್ವಹಿಸಿದ್ದಾರೆ. ವಿದ್ಯಾರ್ಥಿಗಳು ದೊಡ್ಡ ಪ್ರಮಾಣದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲುಗೊಳ್ಳುವಂತೆ ಪ್ರಚೋದನೆ ನೀಡಿದ್ದಾರೆ.

ಕೂಡ್ಲಿಗಿ ತಾಲ್ಲೂಕಿನ ತೂಲಹಳ್ಳಿಯು ಅನೇಕ ಸ್ವಾತಂತ್ರ್ಯ ಹೋರಾಟಗಾರರನ್ನು ನೀಡಿದ ಗ್ರಾಮವಾಗಿದೆ. ತೂಲಹಳ್ಳಿಯಲ್ಲಿ ಶಾಲಾ ಉಪಾಧ್ಯಾಯರಾಗಿದ್ದ ಎಂ. ಬೊಮ್ಮಲಿಂಗಯ್ಯನವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದರು. ಇವರು ಚಳುವಳಿಯಲ್ಲಿ ಭಾಗವಹಿಸುವುದನ್ನು ಅವರು ಕೆಲಸ ಮಾಡುತ್ತಿದ್ದ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಬಿ.ಹನುಮಂತಜ್ಜನವರು ವಿರೋಧಿಸಲಿಲ್ಲ. ಅವರೂ ಸ್ವಾತಂತ್ರ್ಯ ಚಳುವಳಿ ಬಗ್ಗೆ ಸಹಾನುಭೂತಿಯುಳ್ಳವರಾಗಿದ್ದರು. ೧೯೪೨ ರ ಚಳುವಳಿಯಲ್ಲಿ ಬೊಮ್ಮಲಿಂಗಯ್ಯನವರು ಅನೇಕ ವಿಧ್ವಂಸಕ ಕಾರ್ಯಗಳಲ್ಲಿ ಪಾಲುಗೊಂಡರು. ದಿನಾಂಕ೧೮-೧೧-೧೯೪೨ ರಂದು ಇವರ ಬಂಧನವಾಯಿತು. ವೆಲ್ಲೂರು ಮತ್ತು ತಂಜಾವೂರುಗಳಲ್ಲಿ ಇವರು ಜೈಲುಶಿಕ್ಷೆ ಅನುಭವಿಸಿದರು. ದಿನಾಂಕ ೪-೨-೪೪ ರಂದು ಇವರ ಬಿಡುಗಡೆಯಾಯಿತು. ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದ್ದು ಗೊತ್ತಿದ್ದರೂ ಸಹ ಅಂದು ಕೂಡ್ಲಿಗಿ ತಾಲ್ಲೂಕಿನ ಶಿಕ್ಷಣಾಧಿಕಾರಿಗಳಾಗಿದ್ದ ಎ. ಶಾಂತವೀರಪ್ಪನವರು ಬೊಮ್ಮಲಿಂಗಯ್ಯನವರನ್ನು ನೌಕರಿಗೆ ವಾಪಸ್ಸು ತೆಗೆದುಕೊಂಡರು. ಹೀಗೆ ಬಿ. ಹನುಮಂತಜ್ಜನವರಂತಹ ಮುಖ್ಯೋಪಾಧ್ಯಾಯರು, ಎ. ಶಾಂತವೀರಪ್ಪನವರಂತಹ ಅಧಿಕಾರಿಗಳು ಸ್ವಾತಂತ್ರ್ಯ ಚಳುವಳಿಗೆ ಅಪ್ರತ್ಯಕ್ಷವಾಗಿ ಕಾಣಿಕೆ ನೀಡಿದ್ದಾರೆ. ಬೊಮ್ಮಲಿಂಗಯ್ಯನಂತೆ ಚಳುವಳಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದ್ದ ಟಿ.ಎಂ.ಚನ್ನಬಸವಯ್ಯನವರನ್ನೂ ಶಾಂತವೀರಪ್ಪನವರು ಶಾಲಾ ನೌಕರಿಗೆ ವಾಪಸ್ಸು ತೆಗೆದುಕೊಂಡರು.

ಹರಪನಹಳ್ಳಿ ತಹಶೀಲ್ದಾರ್ ರಂಗಬ್ರಹ್ಮಂ

೧೯೩೦ ರ ದಶಕದಲ್ಲಿ ಶ್ರೀ ರಂಗಬ್ರಹ್ಮಂರವರು ಹರಪನಹಳ್ಳಿ ತಾಲ್ಲೂಕಿನ ತಹಶೀಲ್ದಾರರಾಗಿ ಕೆಲಸ ಮಾಡುತ್ತಿದ್ದರು. ಇವರು ಕಟ್ಟಾ ಗಾಂಧಿ ಭಕ್ತರಾಗಿದ್ದರು. ಚಳುವಳಿಗಾರರ ಬಗ್ಗೆ ಸಹಾನುಭೂತಿ ಉಳ್ಳವರಾಗಿದ್ದರು. ತೆಲುಗು ಭಾಷೆಯಲ್ಲಿ ಇವರು ಕವನಗಳನ್ನು ರಚಿಸುತ್ತಿದ್ದು ರಂಗಬ್ರಹ್ಮಂರವರು ಆಶುಕವಿಗಳಾಗಿದ್ದರು. ಒಮ್ಮೆ ಹರಪನಹಳ್ಳಿಯಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಎಲ್ಲಾ ಚಳುವಳಿಗಾರರ ಹೆಸರುಗಳನ್ನು ಬಳಸಿಕೊಂಡು ತೆಲುಗು ಭಾಷೆಯಲ್ಲಿ ಕವನವೊಂದನ್ನು ಕಟ್ಟಿದ್ದರು.

ಹರಪನಹಳ್ಳಿ ತಾಲ್ಲೂಕಿನ ಕಂಚಿಕೆರೆಯಲ್ಲಿ ಟಿ.ಬಿ. ಕೇಶವರಾವ್ ಮತ್ತು ಅವರ ತಂಡದ ಸುಮಾರು ೨೫-೩೦ ಜನರು ಈಚಲುಗಿಡಗಳನ್ನು ಕಡಿಯುತ್ತಿದ್ದರು. ಅವರನ್ನೆಲ್ಲಾ ಬಂಧಿಸಿ ಹರಪನಹಳ್ಳಿಗೆ ಕರೆತರಲಾಯಿತು. ಅಷ್ಟೊಂದು ಜನರನ್ನು ಪೋಲೀಸು ಠಾಣೆಯಲ್ಲಿ ಬಂಧನದಲ್ಲಿಟ್ಟಿದ್ದಾರೆ ಎಂಬ ಸುದ್ದಿ ಹರಡಿದ ತಕ್ಷಣ ಠಾಣೆಯ ಮುಂದೆ ನೂರಾರು ಜನರ ಗುಂಪು ಸೇರಿತು. ಚಳುವಳಿಗಾರರನ್ನು ಬಿಟ್ಟು ಬಿಡುವಂತೆ ಜನರು ಒತ್ತಾಯಿಸುತ್ತಿದ್ದರು. ಆಗ ತಹಶೀಲ್ದಾರರಾಗಿದ್ದ ರಂಗಬ್ರಹ್ಮಂರವರು ಗುಂಪನ್ನು ಸಮಾಧಾನ ಪಡಿಸಿ ಕೇವಲ ಚಳುವಳಿಯ ಮುಂದಾಳುಗಳಾಗಿದ್ದ ೪-೫ ಜನರನ್ನು ಮಾತ್ರ ಬಂಧಿಸುವುದಾಗಿ ಆಶ್ವಾಸನೆ ನೀಡಿದಾಗ ಜನರ ಗುಂಪು ಚದುರಿತು. ಈ ಸಂದರ್ಭವನ್ನು ಕುರಿತು ಬರೆದ ತೆಲುಗು ಕವಿತೆಯೊಂದನ್ನು ರಂಗಬ್ರಹ್ಮಂರವರು ಕೇಶವರಾಯರಿಗೆ ನೀಡಿದರು. ಕೇಶವರಾಯರು ಅದನ್ನು ಚಳುವಳಿಯಲ್ಲಿ ಬಳಸಿಕೊಂಡರು.

ಮುಖ್ಯೋಪಾಧ್ಯಾಯ ಆರ್. ಕುಲಶೇಖರಂ

ಹರಪನಹಳ್ಳಿಯ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಆರ್. ಕುಲಶೇಖರಂರವರು ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಸಹಾನುಭೂತಿ ಉಳ್ಳವರಾಗಿದ್ದರು. ಇವರು ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವಂತೆ ಪ್ರೇರಣೆ ನೀಡುತ್ತಿದ್ದರು. ವಿದ್ಯಾರ್ಥಿಗಳ ಒತ್ತಾಯದ ಮೇರೆಗೆ ಶಾಲೆಯಲ್ಲಿ ಇವರು ಗಾಂಧೀಜಿ ಭಾವಚಿತ್ರ ಹಾಕಿದ್ದರು.

ಬಳ್ಳಾರಿ ಜಿಲ್ಲಾ ಪೋಲೀಸು ಅಧಿಕಾರಿ ಸುಬ್ಬರಾಯನ್

೧೯೪೨ ರಲ್ಲಿ ಚಳುವಳಿಯು ತೀವ್ರವಾಗಿದ್ದ ಕಾಲದಲ್ಲಿ ಸುಬ್ಬರಾಯನ್ ಅವರು ಬಳ್ಳಾರಿ ಜಿಲ್ಲಾ ಪೋಲೀಸು ಅಧಿಕಾರಿಗಳಾಗಿದ್ದರು. ಅವರೊಬ್ಬ ಉಜ್ವಲ ದೇಶ ಭಕ್ತರಾಗಿದ್ದರು. ಮನೆಯಲ್ಲಿ ದಿನವೂ ನೂಲು ನೂಲುತ್ತಿದ್ದರು. ಡ್ಯೂಟಿ ಮುಗಿದ ಮೇಲೆ ಇವರು ಖಾದಿ ಧರಿಸುತ್ತಿದ್ದರು. ಇವರಿಗೆ ಸ್ವಾತಂತ್ರ್ಯ ಚಳುವಳಿಗಾರರ ಬಗ್ಗೆ ಸಹಾನುಭೂತಿ ಇತ್ತು. ಆ

ಕಾಲದಲ್ಲಿ ಮೇಲಧಿಕಾರಿಗಳಿಂದ ಬರುತ್ತಿದ್ದ ರಹಸ್ಯ ಸೂಚನೆಗಳನ್ನೆಲ್ಲಾ ಇವರು ಚಳುವಳಿಗಾರರಿಗೆ ಮೊದಲೇ ತಿಳಿಸಿಬಿಡುತ್ತಿದ್ದರು. ಚಳುವಳಿಗಾರರಿಗೆ ಪೋಲೀಸು ಠಾಣೆಯಲ್ಲಿ ಹಿಂಸೆ ಕೊಡುತ್ತಿರಲಿಲ್ಲ. ಇವರು ಚಳುವಳಿಗಾರರಿಗೆ ತಮ್ಮ ಮನೆಯಲ್ಲಿ ಊಟದ ವ್ಯವಸ್ಥೆ ಮಾಡುತ್ತಿದ್ದರು. ಟಿ.ಬಿ. ಕೇಶವರಾವ್ ಹೇಳುವಂತೆ ೧೯೪೨ ರ ಸೆಪ್ಟೆಂಬರ್ ೩೦ ರಂದು ಮದರಾಸಿನಲ್ಲಿ ಭೂಗತರಾಗಿದ್ದ ಚಳುವಳಿಗಾರ ಬಾಲಚಂದ್ರ ಆಪ್ಟೆಯವರು ಬಳ್ಳಾರಿಗೆ ಬಂದರು. ಕೇಶವರಾಯರಿಗೂ ಮತ್ತು ಆಪ್ಟೆಯವರಿಗೂ ಸುಬ್ಬರಾಯನ್ ಮನೆಯಲ್ಲಿ ಔತಣವೇರ್ಪಟ್ಟಿತ್ತು. ಇಂತಹ ಚಟುವಟಿಕೆಗಳಲ್ಲಿ ನಿರತರಾಗಿದ್ದ ಸುಬ್ಬರಾಯನ್ ಬಗ್ಗೆ ಸರ್ಕಾರದ ಉನ್ನತ ಅಧಿಕಾರಿಗಳಿಗೆ ಅನುಮಾನ ಉಂಟಾಯಿತು. ಅವರಿಗೆ ಹಿಂಬಡ್ತಿ ನೀಡಿ ಬಳ್ಳಾರಿಯಿಂದ ವರ್ಗಾಯಿಸಲಾಯಿತು. ಹೀಗೆ ಸುಬ್ಬರಾಯನ್ ತಮ್ಮ ಹಿತಾಶಕ್ತಿಗಳನ್ನು ಬಲಿಕೊಟ್ಟು ಚಳುವಳಿಗಾರರಿಗೆ ನೆರವಿನ ಹಸ್ತ ನೀಡುತ್ತಿದ್ದರು. ಮುಂದೆ ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆ ರಾಜಾಜಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ತಮಗೆ ಹಿಂದೆ ಆಗಿದ್ದ ಹಿಂಬಡ್ತಿ ಅನ್ಯಾಯವನ್ನು ಇವರು ಸರಿಪಡಿಸಿಕೊಂಡರು.

ಸರ್ಕಾರಿ ಕೆಲಸಗಳಿಗೆ ರಾಜೀನಾಮೆ

ಬಿ.ವಿ.ಶೇಷಗಿರಿರಾವ್‌ರವರಿಗೆ ಸ್ವಾತಂತ್ರ್ಯ ಚಳುವಳಿಗೆ ಪ್ರೇರಣೆ ಅವರ ತಂದೆ ಬಾದನಹಟ್ಟಿ ವೆಂಕೋಬರಾಯರಿಂದ ಬಂದಿತು. ಇವರು ಇಂಪೀರಿಯಲ್ ಬ್ಯಾಂಕಿನಲ್ಲಿ ಉನ್ನತ ಅಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದರು. ಬ್ಯಾಂಕ್ ನೌಕರಿಯು ಚಳುವಳಿಗೆ ಅಡಚಣೆ ಉಂಟು ಮಾಡುತ್ತದೆಯಂದು ಭಾವಿಸಿ ಇವರು ಬ್ಯಾಂಕ್ ನೌಕರರಿಗೆ ರಾಜೀನಾಮೆ ನೀಡಿದರು. ೧೯೪೧ ರಲ್ಲಿ ಕೆ. ಚಿದಾನಂದ ಶಾಸ್ತ್ರೀಗಳು ತಮ್ಮ ಅಧ್ಯಾಪಕ ಹುದ್ದೆಯನ್ನು ಚಳುವಳಿಗಾಗಿ ತ್ಯಾಗ ಮಾಡಿದರು. ಡಿ.ಎಚ್.ಕೃಷ್ಣರಾವ್ ರವರು ತಮಗೆ ದೊರೆತಿದ್ದ ಎಕ್ಸೈಜ್ ಇಲಾಖೆಯಲ್ಲಿನ ಇನ್ಸ್ ಪೆಕ್ಟರ್ ಹುದ್ದೆಯನ್ನು ತಿರಸ್ಕರಿಸಿದರು. ಹಿಂಡಿ ಸಿದ್ದಪ್ಪನವರು ೧೯೩೦ ರ ಅವಧಿಯಲ್ಲಿ ತಮ್ಮ ಅಧ್ಯಾಪಕ ಹುದ್ದೆಗೆ ರಾಜೀನಾಮೆ ನೀಡಿದರು. ಹೀಗೆ ಬಳ್ಳಾರಿ ಜಿಲ್ಲೆಯ ಅನೇಕ ಸ್ವಾಭಿಮಾನಿ ಯುವಕರು ಅಪಾರ ಸಂಬಳ ತರುತ್ತಿದ್ದ ಸರ್ಕಾರಿ ಹುದ್ದೆಗಳನ್ನು ತ್ಯಜಿಸಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ವಿದೇಶಿಯರ ಹಂಗಿನಲ್ಲಿ ದುಡಿಯುವುದು ಅವರಿಗೆ ಬೇಕಿರಲಿಲ್ಲ.

ಬಳ್ಳಾರಿ ನಗರಕ್ಕೆ ಸೇರಿದ ಡಬ್ಲ್ಯು. ರಾಮಚಂದ್ರರಾವ್ ಅವರು ಮದರಾಸು ಪ್ರಾಂತದ ಉನ್ನತ ಪೋಲೀಸು ಅಧಿಕಾರಿಗಳಾಗಿ ಆಂಧ್ರ ಪ್ರಾಂತದಲ್ಲಿ ಕೆಲಸ ಮಾಡುತ್ತಿದ್ದರು. ಸ್ವಾತಂತ್ರ್ಯ ಚಳುವಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡ ಇವರು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ ಸೊಲ್ಲಾಪುರದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದರು. ಸ್ವಾತಂತ್ರ್ಯಾನಂತರ ಇವರು ಬಳ್ಳಾರಿಗೆ ಬಂದು ನೆಲೆಸಿದರು.

ಜೈಲು ವಾರ್ಡರ್‌ಗಳ ಸಹಾಯ

ಬಳ್ಳಾರಿಯಲ್ಲಿ ಎರಡು ಜೈಲುಗಳಿದ್ದವು. ಈ ಜೈಲುಗಳ ಉನ್ನತ ಅಧಿಕಾರಿಗಳೆಲ್ಲಾ ಬ್ರಿಟಿಷರೇ ಇರುತ್ತಿದ್ದರು. ಬ್ರಿಟಿಷ್ ಅಧಿಕಾರಿಗಳೆಲ್ಲಾ ಚಳುವಳಿಗಾರರೊಂದಿಗೆ ಅಸಭ್ಯವಾಗಿ ವರ್ತಿಸುತ್ತಿದ್ದರು. ಆದರೆ ವಾರ್ಡರ್‌ಗಳು ಸಾಮಾನ್ಯವಾಗಿ ಭಾರತೀಯರಿರುತ್ತಿದ್ದರು. ಇವರುಗಳು ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಸತ್ಯಾಗ್ರಹಿಗಳಿಗೆ ಅನೇಕ ಬಗೆಯ ನೆರವು ನೀಡುತ್ತಿದ್ದರು. ಮನೆಗಳಿಂದ ಊಟ ತಂದು ಕೊಡುವುದು. ಪತ್ರಗಳನ್ನು ವಿನಿಮಯ ಮಾಡುವುದು ಮುಂತಾದ ನೆರವು ನೀಡುತ್ತಿದ್ದರು.

೬. ಬಳ್ಳಾರಿ ಜಿಲ್ಲೆಯ ಗಡಿಯ ಒಳಹೊರಗೆ ಸ್ವಾತಂತ್ರ್ಯ ಹೋರಾಟ

ಈಗಾಗಲೆ ಮೊದಲ ಅಧ್ಯಾಯದಲ್ಲಿ ತಿಳಿಸಿರುವಂತೆ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಗೆ ಸೇರಿದ ಅನೇಕ ಹೋರಾಟಗಾರರು ಜಿಲ್ಲೆಯ ಗಡಿಯ ಹೊರಗೆ ಹೋಗಿ ಚಳುವಳಿ ನಡೆಸಿದರು. ಅದೇ ರೀತಿ ಬಳ್ಳಾರಿ ಜಿಲ್ಲೆಯ ಗಡಿಯ ಹೊರಗಿನವರು ಬಳ್ಳಾರಿ ಜಿಲ್ಲೆಗೆ ಬಂದು ಸ್ವಾತಂತ್ರ್ಯ ಹೋರಾಟ ನಡೆಸಿದ ಪ್ರಸಂಗಗಳು ಇವೆ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಜಿಲ್ಲೆಯಲ್ಲಿ ಸಂಘಟಿಸಲು ಬೇರೆ ಜಿಲ್ಲೆ-ಪ್ರಾಂತಗಳಿಂದ ಬಂದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅನೇಕರು ಜಿಲ್ಲೆಯಲ್ಲೇ ನೆಲಸಿದ್ದುಂಟು.

ಬಳ್ಳಾರಿ ಜಿಲ್ಲೆಯು ಕ್ರಿ.ಶ. ೧೮೦೦ ರಿಂದ ೧೯೪೭ ರವರೆಗೆ ಬ್ರಿಟಿಷರ ನೇರ ಆಳ್ವಿಕೆಯಲ್ಲಿತ್ತು. ಇದು ಅಂದು ಮದರಾಸು ಪ್ರಾಂತದಲ್ಲಿತ್ತು. ರಾಜಕೀಯವಾಗಿ ಬಳ್ಳಾರಿ ಜಿಲ್ಲೆಯು ಮದರಾಸು ಪ್ರಾಂತದ ಜೊತೆಗೆ ಹಾಗೂ ಸಾಹಿತ್ಯ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಕರ್ನಾಟಕದೊಂದಿಗೆ ನಿಕಟ ಸಂಬಂಧ ಹೊಂದಿತ್ತು. ಹೀಗೆ ಬಳ್ಳಾರಿ ಜಿಲ್ಲೆಯು ಎರಡು ಪ್ರಾಂತಗಳ ಜೊತೆ ಸಂಬಂಧವಿಟ್ಟು ಕೊಂಡಿತ್ತು. ಕ್ರಿ.ಶ. ೧೮೦೦ ರಲ್ಲಿ ಬ್ರಿಟಿಷರ ನೇರ ಆಳ್ವಿಕೆಗೆ ಒಳಗಾಗುವ ಮುನ್ನ ಒಂದು ವರ್ಷದ ಕಾಲ ಬಳ್ಳಾರಿ ಜಿಲ್ಲೆಯು ಹೈದರಾಬಾದ್ ನಿಜಾಮನ ವಶದಲ್ಲಿತ್ತು. ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ್ದ ಕನ್ನಡ ಭಾಷಾ ಪ್ರದೇಶವಾಗಿದ್ದ ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕು ಬಳ್ಳಾರಿ ಜಿಲ್ಲೆಯ ಉತ್ತರ ಭಾಗದ ಗಡಿಯಾಗಿತ್ತು. ಭೌಗೋಳಿಕವಾಗಿ ಮತ್ತು ಆಡಳಿತಾತ್ಮಕವಾಗಿ ಹಡಗಲಿ ತಾಲ್ಲೂಕು ಬಳ್ಳಾರಿ ಜಿಲ್ಲೆಯಲ್ಲಿದ್ದರೂ ಸಾಂಸ್ಕೃತಿಕವಾಗಿ ಅದು ಧಾರವಾಡ ಜಿಲ್ಲೆಯ ಜೊತೆ ಹೆಚ್ಚಿನ ಸಂಬಂಧ ಪಡೆದಿತ್ತು. ಈ ಬಗೆಯ ಭೌಗೋಳಿಕ, ರಾಜಕೀಯ ಹಾಗೂ ಚಾರಿತ್ರಿಕ ಸಂಬಂಧಗಳಿಂದಾಗಿ ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಸ್ವರೂಪ ವಿಶಿಷ್ಟವಾದುದಾಗಿದೆ. ಈ ವಿಶಿಷ್ಟತೆಯನ್ನು, ವಿಭಿನ್ನತೆಯನ್ನು ಗುರುತಿಸುವುದು ಪ್ರಸ್ತುತ ಅಧ್ಯಾಯದ ಒಂದು ಉದ್ದೇಶವಾಗಿದೆ.

ಬಳ್ಳಾರಿ ನಗರದ ಹೊರವಲಯದ ಅಲ್ಲಿಪುರ ಎಂಬಲ್ಲಿ ಬ್ರಿಟಿಷ್ ಸರ್ಕಾರವು ೨೦ನೇ ಶತಮಾನದ ಆರಂಭದಲ್ಲಿ ಬೃಹತ್ ಜೈಲೊಂದನ್ನು ನಿರ್ಮಿಸಿತ್ತು. ೧೯೨೧ ರಲ್ಲಿ ಕೇರಳದಲ್ಲಿ ನಡೆದ ಮಾಪಿಳ್ಳಾ ದಂಗೆಗೆ ಸಂಬಂಧಿಸಿದ ನೂರಾರು ಮಾಪಿಳ್ಳಾ ಖೈದಿಗಳನ್ನು ತಂದು ಇಲ್ಲಿ

ಜೈಲಿನಲ್ಲಿಡಲಾಗಿತ್ತು. ಆಂಗ್ಲೋ-ಟರ್ಕಿ ಯುದ್ಧದಲ್ಲಿ ಖೈದಿಗಳಾಗಿದ್ದ ಟರ್ಕಿ ದೇಶದ ನಾಗರಿಕರನ್ನು ಬ್ರಿಟಿಷ್ ಸರ್ಕಾರವು ಇಲ್ಲಿಗೆ ತಂದು ಬಂಧನದಲ್ಲಿಟ್ಟಿತ್ತು. ಅಲ್ಲಿಪುರ ಕಾರಾಗೃಹವಲ್ಲದೆ ಬಳ್ಳಾರಿ ನಗರದ ಒಳಭಾಗದಲ್ಲಿ ಕೇಂದ್ರ ಕಾರಾಗೃಹವೊಂದನ್ನು ಕಟ್ಟಲಾಗಿತ್ತು. ದೇಶದ ನಾನಾ ಭಾಗಗಳಿಂದ ಸ್ವಾತಂತ್ರ್ಯ ಹೋರಾಟಗಾರರನ್ನು ತಂದು ಇಲ್ಲಿ ಬಂಧನದಲ್ಲಿಡಲಾಗುತ್ತಿತ್ತು. ಹೀಗೆ ದೇಶದ ನಾನಾ ಭಾಗಗಳಿಂದ ಬಂದು ಬಳ್ಳಾರಿಯ ಜೈಲುಗಳಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಸ್ವಾತಂತ್ರ್ಯ ಹೋರಾಟಗಾರರು ಜೈಲಿನಲ್ಲಿ ತಮ್ಮ ಸಂಪರ್ಕಕ್ಕೆ ಬಂದ ಬಳ್ಳಾರಿ ಜಿಲ್ಲೆಗೆ ಸೇರಿದ ಸ್ವಾತಂತ್ರ್ಯ ಹೋರಾಟಗಾರರಿಗೆ ಹೋರಾಟಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ, ಪ್ರೇರಣೆ, ಸ್ಫೂರ್ತಿ ನೀಡಿದರು.

ಪಂಜಾಬಿನ ಕ್ರಾಂತಿಕಾರಿ ಗುಂಪಿಗೆ ಸೇರಿದ್ದ ಡಾ| ಗಯಾ ಪ್ರಸಾದ್, ಮಹಾವೀರ ಸಿಂಗ್ ಮತ್ತು ಬಟುಕೇಶ್ವರದತ್ತ ಅವರುಗಳು ಬಳ್ಳಾರಿ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದರು. ಜೈಲಿನಲ್ಲಿದ್ದ ಬಳ್ಳಾರಿ ಜಿಲ್ಲೆಗೆ ಸೇರಿದ ಸ್ವಾತಂತ್ರ್ಯ ಹೋರಾಟಗಾರರು ಪಂಜಾಬಿನ ಕ್ರಾಂತಿಕಾರಿಗಳ ಜೊತೆ ಜೈಲಿನಲ್ಲಿ ಸಂಪರ್ಕ ಹೊಂದಿದ್ದರು. ಪಂಜಾಬಿನ ಕ್ರಾಂತಿಕಾರಿಗಳು ಜಿಲ್ಲೆಯಲ್ಲಿ ವ್ಯಾಯಾಮ ಶಾಲೆಗಳನ್ನು ತೆರೆಯುವಂತೆ ಸಲಹೆ ನೀಡಿದರು. ವ್ಯಾಯಾಮ ಶಾಲೆಗಳು ಸ್ವಾತಂತ್ರ್ಯ ಹೋರಾಟಗಾರರ ತರಬೇತಿ ಕೇಂದ್ರಗಳಾಗಬೇಕೆಂದು, ರಾಷ್ಟ್ರೀಯ ಜಾಗೃತಿಯ ಕೇಂದ್ರಗಳಾಗಬೇಕೆಂದು, ಪಂಜಾಬಿನ ಕ್ರಾಂತಿಕಾರಿಗಳು ಸಲಹೆ ನೀಡಿದರು. ಇವರ ಸಲಹೆಯಿಂದ ಪ್ರೇರಿತರಾದ ಅಮರಪ್ಪ. ವಿ.ಗವಗ ಮತ್ತು ಅವರ ಸ್ನೇಹಿತರುಗಳು ಸೇರಿ ೧೯೩೦ರ ದಶಕದ ಪ್ರಾರಂಭದಲ್ಲಿ ಬಳ್ಳಾರಿಯಲ್ಲಿ ಮಲ್ಲಸಜ್ಜನ ವ್ಯಾಯಾಮ ಶಾಲೆ ತೆರೆದರು. ನವಜೀವನ ವ್ಯಾಯಾಮ ಶಾಲೆ ಪ್ರಾರಂಭವಾಯಿತು. ಡಾ. ನಾ.ಸು. ಹರ್ಡಿಕರ್‌ರವರ 'ಹಿಂದೂಸ್ತಾನಿ ಸೇವಾದಳ'ದ ಪ್ರಭಾವವೂ ವ್ಯಾಯಾಮ ಶಾಲೆಗಳ ಮೇಲಿತ್ತು. ಬಳ್ಳಾರಿ ನಗರದಲ್ಲಿದ್ದ ಎರಡೂ ವ್ಯಾಯಾಮ ಶಾಲೆಗಳು ನಿಜಕ್ಕೂ ರಾಷ್ಟ್ರೀಯ ಜಾಗೃತಿಯ ಕೇಂದ್ರಗಳಾಗಿದ್ದವು ಹಾಗೂ ಸತ್ಯಾಗ್ರಹಿಗಳ ತರಬೇತು ಘಟಕಗಳಾಗಿದ್ದವು. ಹೀಗೆ ಬಳ್ಳಾರಿ ಜಿಲ್ಲೆಯ ಗಡಿಯ ಹೊರಗಿನಿಂದ ಬಂದ ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಸಲಹೆ-ಮಾರ್ಗದರ್ಶನಗಳಿಂದ ಬಳ್ಳಾರಿ ಜಿಲ್ಲೆಯಲ್ಲಿನ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಆಯಾಮ ನೀಡಿದರು.

ಮುಂಡರಗಿ ಭೀಮರಾಯನ ಬಂಡಾಯ ಮತ್ತು ಬಳ್ಳಾರಿ ಜಿಲ್ಲೆ

ಕ್ರಿ.ಶ. ೧೮೫೮ ರಲ್ಲಿ ಬ್ರಿಟಿಷ್‌ರ ವಿರುದ್ಧ ಬಂಡಾಯ ಹೂಡಿದ್ದ ಭೀಮರಾಯನಿಗೂ ಬಳ್ಳಾರಿ ಜಿಲ್ಲೆಗೂ ನಿಕಟ ಸಂಬಂಧವಿತ್ತು. ಭೀಮರಾಯನ ಬಂಡಾಯ ನಡೆದದ್ದು ಕೊಪ್ಪಳ-ಡಂಬಳ ಪ್ರದೇಶದಲ್ಲಿ ಎಂಬುದು ಸ್ಪಷ್ಟವಾಗಿದೆ. ಮುಂಡರಗಿ ಭೀಮರಾಯ ಬ್ರಿಟಿಷ್ ಸರ್ಕಾರದಲ್ಲಿ ಕಂದಾಯ ಅಧಿಕಾರಿಯಾಗಿ ಬಳ್ಳಾರಿ ಮತ್ತು ಹರಪನಹಳ್ಳಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದನು. ಕರ್ತವ್ಯಚ್ಯುತಿ ಆರೋಪದ ಮೇಲೆ ಅವನನ್ನು ಕೆಲಸದಿಂದ ವಜಾ ಮಾಡಲಾಗಿತ್ತು.

ಮುಂದೆ ಅವನು ಸಣ್ಣದೊಂದು ಸೈನ್ಯ ಕಟ್ಟಿಕೊಂಡು ಬ್ರಿಟಿಷ್‌ರ ವಿರುದ್ಧ ಬಂಡೆದ್ದನು. ಅವನ ಸೈನ್ಯದಲ್ಲಿ ಬಳ್ಳಾರಿ ಜಿಲ್ಲೆಯ ಕಂಪ್ಲಿ, ವೆಂಕಟಾಪುರ, ಕಮಲಾಪುರ, ಹರಪನಹಳ್ಳಿ ಮುಂತಾದ ಊರುಗಳಿಗೆ ಸೇರಿದ ಯುವಕರಿದ್ದರು. ಇವನು ಯುದ್ಧ ಮಾಡುತ್ತಾ ಕೊಪ್ಪಳದ ಕೋಟೆಯಲ್ಲಿ ಹುತಾತ್ಮನಾದನು. ಸೆರೆ ಸಿಕ್ಕಿದ ಸೈನಿಕರನ್ನು ಬ್ರಿಟಿಷರು ಗಲ್ಲಿಗೇರಿಸಿದರು. ಹೀಗೆ ಗಲ್ಲುಶಿಕ್ಷೆ ಅನುಭವಿಸಿದವರಲ್ಲಿ ಕೆಲವರು ಬಳ್ಳಾರಿ ಪ್ರಾಂತದವರಾಗಿದ್ದರು.

ಕಲ್ಲೂರು ಸುಬ್ಬರಾವ್, ಪಪ್ಪೂರು ರಾಮಾಚಾರ್ಯ, ವೆಂಕಟರಮಣಾಚಾರ್ಲು ಮುಂತಾದವರು ಅನಂತಪುರ ಜಿಲ್ಲೆಗೆ ಸೇರಿದ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು. ಇವರ ಚಳುವಳಿಯ ವ್ಯಾಪ್ತಿ ಬಳ್ಳಾರಿ ಜಿಲ್ಲೆಗೂ ಹಬ್ಬಿತ್ತು. ಇವರೆಲ್ಲರೂ ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲವರಾಗಿದ್ದರು. ೧೯೨೦ ರ ದಶಕದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ಜನ ಜಾಗೃತಿ ಉಂಟುಮಾಡಿದ ಕೀರ್ತಿ ಇವರುಗಳಿಗೆ ಸಲ್ಲಬೇಕು. ಇವರೆಲ್ಲರೂ ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಜನರು ಭಾಗವಹಿಸುವಂತೆ ಮಾಡಿದರು. ಕಲ್ಲೂರು ಸುಬ್ಬರಾಯರು ೧೯೨೦, ೧೯೩೦ ಮತ್ತು ೧೯೪೨ ರಲ್ಲಿ ಜೈಲು ಶಿಕ್ಷೆ ಅನುಭವಿಸಿದರು.

ಬುಲುಸು ಸಾಂಬಮೂರ್ತಿ ನೀಡಿದ ಪ್ರೇರಣೆ

ಆಂಧ್ರ ಪ್ರಾಂತಕ್ಕೆ ಸೇರಿದ ಬುಲುಸು ಸಾಂಬಮೂರ್ತಿಯವರು ಒಬ್ಬ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಮಾಜ ಸುಧಾರಕರು. ೧೯೩೦ರಲ್ಲಿ ಇವರು ಬಳ್ಳಾರಿ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದರು. ಆ ಕಾಲದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿ ಸ್ತಬ್ಧವಾಗಿತ್ತು. ಒಂದು ರೀತಿಯ ನಿರಾಶಾಭಾವನೆ ಜನರನ್ನು ಆವರಿಸಿತ್ತು. ಅಂತಹ ಸಂದರ್ಭದಲ್ಲಿ ಜೈಲಿನಿಂದ ಬಿಡುಗಡೆಯಾದ ಬುಲುಸು ಸಾಂಬಮೂರ್ತಿಗಳು ತಮ್ಮ ಉಗ್ರಭಾಷಣಗಳ ಮೂಲಕ ಬಳ್ಳಾರಿಯಲ್ಲಿ ಜನರನ್ನು ರೊಚ್ಚಿಗೆಬ್ಬಿಸಿದರು. ಸಾಂಬಮೂರ್ತಿಗಳ ಈ ಕಾರ್ಯವನ್ನು ಗೌರವಿಸುವ ಸಲುವಾಗಿ ಅಂದು ಬಳ್ಳಾರಿ ನಗರದಲ್ಲಿ ಸಾರ್ವಜನಿಕ ಸಭೆಗಳು ನಡೆಯುತ್ತಿದ್ದ ಸ್ಥಳವನ್ನು 'ಸಾಂಬಮೂರ್ತಿ ಮೈದಾನ'ವೆಂದು ಕರೆಯಲಾಯಿತು. ಆದರೆ ಇಂದು 'ಸಾಂಬಮೂರ್ತಿ ಮೈದಾನ'ದಲ್ಲಿ ಬಸ್ ನಿಲ್ದಾಣ ತಲೆಯೆತ್ತಿದೆ. ಈ ಬಸ್ ನಿಲ್ದಾಣಕ್ಕೆ ಅಂಟಿಕೊಂಡಂತಿರುವ, ಬಳ್ಳಾರಿ ನಗರದ ಸ್ವಾತಂತ್ರ್ಯದ ಸ್ಮಾರಕ 'ಗಾಂಧಿ ಭವನ'ದ ಎದುರಿನಲ್ಲಿರುವ ಬಯಲು ಪ್ರದೇಶದಲ್ಲಿ ಸಾಂಬಮೂರ್ತಿಗಳ ಹೆಸರಿನಲ್ಲಿ ಸೂಕ್ತವಾದ ಸ್ಮಾರಕವೊಂದನ್ನು ನಿರ್ಮಿಸುವ ಕೆಲಸಗಳು ನಡೆದಿವೆ.

ಬಳ್ಳಾರಿ ಜಿಲ್ಲೆಗೆ ಭೇಟಿ ನೀಡಿದ ರಾಷ್ಟ್ರೀಯ ನಾಯಕರುಗಳು

ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ, ಸ್ಫೂರ್ತಿ. ಮಾರ್ಗದರ್ಶನವನ್ನು ಅನೇಕ ರಾಷ್ಟ್ರೀಯ ನಾಯಕರುಗಳು ನೀಡಿದರು. ಸ್ವಾತಂತ್ರ್ಯ ಹೋರಾಟದ

ಸಂದರ್ಭದಲ್ಲಿ ಅನೇಕ ರಾಷ್ಟ್ರೀಯ ನಾಯಕರು ಬಳ್ಳಾರಿ ಜಿಲ್ಲೆಗೆ ಭೇಟಿ ನೀಡಿ ಸ್ವಾತಂತ್ರ್ಯ ಚಳುವಳಿಗೆ ಚೈತನ್ಯ ತುಂಬಿದ್ದಾರೆ. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಿಗೆ ತರಬೇತಿ ನೀಡಿದ್ದಾರೆ. ಜಿಲ್ಲೆಯಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಪ್ರಚೋದಿಸಿದ್ದಾರೆ. ಜಿಲ್ಲೆಗೆ ಬಂದು ಸ್ವಾತಂತ್ರ್ಯ ಚಳುವಳಿ ಬಗ್ಗೆ ಜಾಗೃತಿ ಮೂಡಿಸಿದ ನಾಯಕರುಗಳು ಕೆಳಕಂಡಂತಿದ್ದಾರೆ: ಬಾಲಗಂಗಾಧರ ತಿಲಕರು (೧೯೦೫). ಮಹಾತ್ಮ ಗಾಂಧೀಜಿ(೧೯೨೧,೧೯೩೪) ಎಸ್. ಶ್ರೀನಿವಾಸ ಅಯ್ಯಂಗಾರ್ (೧೯೨೬)' ಜಿ.ಕೆ.ದೇವಧರ್ (೧೯೨೮), ಬಾಬು ರಾಜೇಂದ್ರ ಪ್ರಸಾದ್ (೧೯೩೭,೧೯೩೯), ಕಮಲಾದೇವಿ ಚಟ್ಟೋಪಾಧ್ಯಾಯ (೧೯೩೮), ಡಾ. ನಾ.ಸು. ಹರ್ಡೀಕರ್ (೧೯೩೯), ಪಂ। ತಾರಾನಾಥರು (೧೯೨೨), ದಾಮೋದರ ಜಾಂಬಳೇಕರ್ (೧೯೩೦) ಬುಲುಸು ಸಾಂಬಮೂರ್ತಿ (೧೯೩೦) ಮುಂತಾದವರು ಜಿಲ್ಲೆಯಲ್ಲಿ ಪ್ರವಾಸ ಮಾಡಿ ಬ್ರಿಟಿಷ್ ಸರ್ಕಾರದ ವಿರುದ್ಧ ಜನರನ್ನು ರೊಚ್ಚಿಗೆಬ್ಬಿಸಿದರು.

ಎಚ್.ಎಮ್. ವೀರಭದ್ರಯ್ಯ

ಬಳ್ಳಾರಿ ಜಿಲ್ಲೆಯ ಚೋರನೂರು ಗ್ರಾಮಕ್ಕೆ ಸೇರಿದ ಇವರು ವಿದ್ಯಾಭ್ಯಾಸದ ಸಲುವಾಗಿ ೧೯೪೨ರಲ್ಲಿ ಬೆಳಗಾವಿಯಲ್ಲಿ ಲಾ ಕಾಲೇಜು ಸೇರಿದರು. ಬಳ್ಳಾರಿ ಜಿಲ್ಲೆಗೆ ಸೇರಿದ ಇವರು ಜಿಲ್ಲೆಯ ಗಡಿಯ ಹೊರಗೆ ಚಳುವಳಿ ನಡೆಸಿ ಸ್ವಾತಂತ್ರ್ಯ ಹೋರಾಟಕ್ಕೆ ಅದ್ಭುತ ಕಾಣಿಕೆ ನೀಡಿದ್ದಾರೆ. ಇವರಿಗೆ ಉಗ್ರಗಾಮಿ ಚಟುವಟಿಕೆಗಳ ಬಗ್ಗೆ ತೀವ್ರ ಆಸಕ್ತಿ ಇತ್ತು. ಅದಕ್ಕಾಗಿ ಇವರು ಬಂದೂಕಿನ ಉಪಯೋಗದ ತರಬೇತಿಯನ್ನು ಪಡೆಯಲು ಪ್ರಯತ್ನಿಸಿದರು. ಬೆಳಗಾವಿಯಲ್ಲಿ ಇವರು ವಾಸವಾಗಿದ್ದ ವಿದ್ಯಾರ್ಥಿ ನಿಲಯದಲ್ಲಿನ ಕೊಠಡಿಯು ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳ ಕೇಂದ್ರವಾಗಿತ್ತು. ಇವರು ಜನಜಾಗೃತಿ ಉಂಟುಮಾಡಲು ಕರಪತ್ರಗಳನ್ನು ತಯಾರಿಸಿ ಹಂಚುತ್ತಿದ್ದರು. ಈ ಕರಪತ್ರಗಳು ಉದ್ರೇಕಕಾರಿಯಾಗಿರುತ್ತಿದ್ದವು. ಇವರುಗಳು ಎಷ್ಟು ಉಗ್ರವಾದಿಗಳಾಗಿರುತ್ತಿದ್ದರೆಂದರೆ ಸದರಿ ಕರಪತ್ರಗಳ ಎಡಗಡೆ ಮೂಲೆಗೆ ತಮ್ಮ ರಕ್ತದ ಗುರುತನ್ನು ಹಾಕುತ್ತಿದ್ದರು.

ಇವರ ಕೋಣೆಯಲ್ಲಿ ಬಾಂಬುಗಳನ್ನು ತಯಾರಿಸಲಾಗುತ್ತಿತ್ತು ಎಂದು ಹೇಳಲಾಗಿದೆ. ಬೆಳಗಾವಿ ನಗರ ಶಹಪುರದ ಶಾಲೆಯೊಂದರಲ್ಲಿ ಬೀಡು ಬಿಟ್ಟಿದ್ದ ಪೊಲೀಸು ತಂಡದ ಮೇಲೆ ಇವರು ಬಾಂಬು ಹಾಕಿದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವೀರಭದ್ರಯ್ಯನವರ ಮಿತ್ರರಾದ ಡಾ. ಸಿ.ಸಿ. ಚುರ್ಚಾಳುಮಠ ಅವರ ಬಂಧನವಾಯಿತು. ವೀರಭದ್ರಯ್ಯನವರು ತಮ್ಮ ಉಗ್ರಗಾಮಿ ಚಟುವಟಿಕೆಗಳನ್ನು ಮುಂದುವರಿಸಿದರು. ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಿಚ್ಚು ಇವರಲ್ಲಿ ಎಷ್ಟು ತೀವ್ರವಾಗಿತ್ತೆಂದರೆ ಹಣವಿಲ್ಲದೆ ಹೋರಾಟ ಸಾಧ್ಯವಿಲ್ಲವೆಂದು ಭಾವಿಸಿ ಹಣ ಸಂಗ್ರಹಿಸಲು ಇವರು ವಿನೂತನ ಯೋಜನೆ ತಯಾರು ಮಾಡಿದರು. ರಾತ್ರಿ ವ್ಯಾಪಾರಿಗಳು ತಮ್ಮ ಅಂಗಡಿ ಮುಚ್ಚಿ ಮನೆಗೆ ಹೊರಟಾಗ ಅವರ ಕಣ್ಣಿಗೆ ಮೆಣಸಿನ ಪುಡಿ ಹಾಕಿ ಹಣ ದೋಚಬೇಕು ಎಂದು ಇವರು ಯೋಜನೆ ಹಾಕಿದರು. ಆದರೆ ಇವರು ಇದನ್ನು ಪ್ರಾರಂಭಿಸಲು

ನಿಗದಿಪಡಿಸಿದ್ದ ವ್ಯಕ್ತಿಯು ಅಂದು ನಡೆದುಕೊಂಡು ಮನೆಗೆ ಹೋಗದೆ ತನ್ನ ಸ್ನೇಹಿತನ ಕಾರಿನಲ್ಲಿ ಹೋಗಿಬಿಟ್ಟರು. ಇದರಿಂದ ಇವರು ಹಣ ಸಂಗ್ರಹಿಸಲಿಕ್ಕಾಗಿ ತಯಾರು ಮಾಡಿದ್ದ ಯೋಜನೆ ಫಲ-ನೀಡಲಿಲ್ಲ.

ಇವರು ಬೆಳಗಾವಿ ಪೋಸ್ಟ್ ಆಫೀಸ್‌ನ್ನು ಸಹ ಸುಟ್ಟು ಹಾಕಿದರು. ಒಂದು ದಿನ ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ್ದ ಪೊಲೀಸರು ಇವರ ಕೋಣೆಯನ್ನು ಶೋಧಿಸಲು ಬಂದರು. ಆದರೆ ವೀರಭದ್ರಯ್ಯನವರು ತಮ್ಮ ವಕೀಲಿ ಜ್ಞಾನವನ್ನು ಉಪಯೋಗಿಸಿ ಪೊಲೀಸರು ತಮ್ಮ ಕೋಣೆಗೆ ಬಂದಿರುವುದು ಅಕ್ರಮ ಪ್ರವೇಶವೆಂದು ಆಗ್ರಹ ಮಾಡಿದರು. ಇವರ ವಕೀಲಿ ಪಟ್ಟುಗಳಿಗೆ ಹೆದರಿದ ಪೊಲೀಸರು ಹೊರಟು ಹೋದರು.

ಹೀಗೆ ವೀರಭದ್ರಯ್ಯನವರು ತಮ್ಮ ಜಿಲ್ಲೆಯನ್ನು ಬಿಟ್ಟು ಬೆಳಗಾವಿಯಲ್ಲಿ ಉಗ್ರವಾದ ಚಳುವಳಿ ನಡೆಸಿದರು. ಇವರು ಬಳ್ಳಾರಿ ಜಿಲ್ಲೆಯ ರಾಯದುರ್ಗದಲ್ಲೂ ಸಹ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಿ ಟೆಲಿಫೋನ್ ತಂತಿ ಕತ್ತರಿಸಿದ ಒಂದು ಪ್ರಕರಣದಲ್ಲಿ ಭಾಗಿಗಳಾಗಿದ್ದರು.

ಎಸ್. ವಿ. ದೇಸಾಯಿ (ಪೂರ್ವಾಶ್ರಮದ ಹೆಸರು)

ಇವರು ಮೂಲತಃ ಗದಗ ಪ್ರದೇಶದ 'ತಿಮ್ಮಾಪುರ- ಅಡವಿ ಸೋಮಲಾಪುರ' ದೇಸಾಯಿ ಮನೆತನಕ್ಕೆ ಸೇರಿದವರು. ಇವರ ತಾತ ಶೇಷಪ್ಪಯ್ಯ ಮತ್ತು ತಂದೆ ವೆಂಕಪ್ಪಯ್ಯನವರುಗಳು ೧೮೫೮ರ ನರಗುಂದದ ಬಾಬಾ ಸಾಹೇಬನ ಬಂಡಾಯದಲ್ಲಿ ಸೇರಿದ್ದರು. ಇದರಿಂದಾಗಿ ಇವರ ದೇಶಗತಿಯನ್ನು ಬ್ರಿಟಿಷರು ಕಸಿದುಕೊಂಡರು. ದೇಸಗತಿ ಕಳೆದುಕೊಂಡ ಮೇಲೆ ಇವರ ಮನೆತನವು ಹೂವಿನ ಹಡಗಲಿಯ ಚಿಮ್ಮನಹಳ್ಳಿಗೆ ಬಂದು ನೆಲೆಸಿತು. ಶ್ರೀ ಎಸ್.ವಿ. ದೇಸಾಯಿಯವರು ೧೯೨೦ ರಿಂದಲೇ ಖಾದಿ ಚಳುವಳಿಯಲ್ಲಿ ತೊಡಗಿಕೊಂಡರು. ಇವರು ೧೯೩೮ರವರೆಗೆ 'ಹಡಗಲಿ-ಹರಪನಹಳ್ಳಿ-ಕೂಡ್ಲಿಗಿ' ತಾಲ್ಲೂಕುಗಳಲ್ಲಿ ಕಾಂಗ್ರೆಸ್ ಸದಸ್ಯರ ನೊಂದಾವಣೆ ಹಾಗೂ ಖಾದಿ ಪ್ರಚಾರ ಮಾಡಿದರು. ೧೯೪೧ರಲ್ಲಿ ಇವರು ಹಡಗಲಿ ತಾಲ್ಲೂಕಿನ ತಂಬರಹಳ್ಳಿಯಲ್ಲಿ ವೈಯಕ್ತಿಕ ಚಳುವಳಿ ಮಾಡಿದರು. ಇವರು ಹುಬ್ಬಳ್ಳಿಯ ಬಳಿ ಕುಸಗಲ್‌ನಲ್ಲಿ ಬಂಧಿಸಲ್ಪಟ್ಟರು. ಇವರಿಗೆ ಎರಡು ತಿಂಗಳ ಶಿಕ್ಷೆಯಾಯಿತು. ಇವರು ೧೮-೯-೪೨ ರಿಂದ ೩೦-೯-೧೯೪೩ರ ವರೆಗೆ ವೆಲ್ಲೂರು ಜೈಲಿನಲ್ಲೂ ಆಮೇಲೆ ೨೫-೧೨-೪೩ರ ವರೆಗೆ ತಂಜಾವೂರು ಜೈಲಿನಲ್ಲೂ ಸ್ಥಾನ ಬದ್ಧತೆಗೆ ಒಳಗಾಗಿದ್ದರು.

ಡಾ. ಸಂಜೀವನಾಥ ಐಕಳ

ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರಾದ ಸಂಜೀವನಾಥರವರು ಪಂ. ತಾರಾನಾಥರವರ ತುಂಗಭದ್ರಾ ಆಶ್ರಯದಲ್ಲಿ ನಾಲ್ಕು ವರ್ಷ ವೈದ್ಯಕೀಯ ಶಿಕ್ಷಣ ಮುಗಿಸಿ ಬಳ್ಳಾರಿ ಜಿಲ್ಲೆಯ

ಕಂಪ್ಲಿಯಲ್ಲಿ ನೆಲೆಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲುಗೊಂಡರು. ಕಂಪ್ಲಿಯಲ್ಲಿ ಸ್ವಾತಂತ್ರ್ಯ ಚಳುವಳಿಯು ಸ್ತಬ್ಧವಾಗಿತ್ತು. ಸಂಜೀವನಾಥರವರು ಕಂಪ್ಲಿಯ ವಿದ್ಯಾರ್ಥಿಗಳನ್ನು ಪ್ರೇರೇಪಿಸಿ ನಗರದ ಗೋಡೆಗಳ ಮೇಲೆ 'ಕ್ವಿಟ್ ಇಂಡಿಯಾ' ಘೋಷಣೆ ಬರೆಸಿದರು. ಕಂಪ್ಲಿ ಪೊಲೀಸ್ ಠಾಣೆಯಲ್ಲಿ ಇವರ ಮೇಲೆ ಮೊಕದ್ದಮೆ ದಾಖಲು ಮಾಡಿಕೊಳ್ಳಲಾಯಿತು. ದಿನಾಂಕ ೨೮-೯-೪೨ ರಂದು ಹೊಸಪೇಟೆಯ ಮ್ಯಾಜಿಸ್ಟ್ರೇಟ್‌ರವರು ಇವರಿಗೆ ಒಂದು ವರ್ಷದ ಶಿಕ್ಷೆ ವಿಧಿಸಿದರು ಹಾಗೂ ೫೦೦ ರೂಪಾಯಿ ದಂಡ ತಪ್ಪಿದರೆ ಮತ್ತೂ ೬ ತಿಂಗಳ ಶಿಕ್ಷೆ ವಿಧಿಸಿದರು. (ಕಂಪ್ಲಿ ಪೊಲೀಸ್ ಠಾಣೆಯಲ್ಲಿನ ೧೯೪೨ರ ದಾಖಲೆಗಳು)

ವೆ.ಶ್ರೀ. ಕುಸನೂರ

ಧಾರವಾಡದಲ್ಲಿ ಇವರಿಗೆ ಸ್ವಾತಂತ್ರ್ಯ ಚಳುವಳಿಯ ದೀಕ್ಷೆ ದೊರೆಯಿತು. ೧೯೩೬ರಲ್ಲಿ ವಿಜಯನಗರ ಸಾಮ್ರಾಜ್ಯದ ೬೦೦ನೇ ವರ್ಷದ ಉತ್ಸವಕ್ಕಾಗಿ ಸ್ವಯಂಸೇವಕರನ್ನು ತರಬೇತುಗೊಳಿಸಲು ಇವರು ಹರಪನಹಳ್ಳಿಗೆ ಬಂದರು. ಉತ್ಸವ ಮುಗಿದ ಮೇಲೂ ಸಹ ಇವರು ಹರಪನಹಳ್ಳಿಯಲ್ಲಿ ಉಳಿದರು. ಮುಂದೆ ೧೯೩೭ ರಿಂದ ೧೯೪೪ ರವರೆಗೆ ಇವರು ಹೊಸಪೇಟೆಯಲ್ಲಿ ವ್ಯಾಯಾಮ ಶಾಲೆಯಲ್ಲಿ ಶಿಕ್ಷಕರಾಗಿ ದುಡಿದರು. ೧೯೪೨ ರ ಚಲೇಜಾವ್ ಚಳುವಳಿ ಕಾಲದಲ್ಲಿ ಇವರು ಹೊಸಪೇಟೆ ತಾಲ್ಲೂಕಿನಲ್ಲಿ ವಿಧ್ವಂಸಕ ಚಟುವಟಿಕೆಗಳನ್ನು ಸಂಘಟಿಸಿದರು. ದಿನಾಂಕ ೪-೧-೧೯೪೩ ರಂದು ಇವರನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರು.

ರತ್ನಕಟ್ಟಿ ಮನೆತನದ ಕಾಣಿಕೆ

ರಾಣೆಬೆನ್ನೂರು ತಾಲ್ಲೂಕಿನ ರತ್ನಕಟ್ಟಿ ಚನ್ನವೀರಪ್ಪ, ಅವರ ಸಹೋದರ ಚನ್ನಪ್ಪ ಮತ್ತು ಚನ್ನಪ್ಪನವರ ಹೆಂಡತಿ ಚನ್ನಬಸಮ್ಮ ಅವರುಗಳು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ತಮ್ಮ ಕಾಣಿಕೆ ನೀಡಿದ್ದಾರೆ. ಚನ್ನವೀರಪ್ಪ ಮತ್ತು ಚನ್ನಪ್ಪ ಅವರುಗಳು ೧೯೩೦ರ ಸವಿನಯ ಕಾಯ್ದೆ ಭಂಗ ಚಳುವಳಿಯಲ್ಲಿ ಭಾಗವಹಿಸಿ ಒಂದೂವರೆ ವರ್ಷ ಜೈಲುಶಿಕ್ಷೆ ಅನುಭವಿಸಿದರು.

ಬಳ್ಳಾರಿ ಜಿಲ್ಲೆ ಹೆಮ್ಮೆಯ ಪುತ್ರ ಎಸ್. ನಿಜಲಿಂಗಪ್ಪ

ಕರ್ನಾಟಕ ಮಾಜಿ ಮುಖ್ಯಮಂತ್ರಿಗಳೂ, ರಾಜಕೀಯ ಮುತ್ಸದ್ದಿಗಳೂ, ವಯೋವೃದ್ಧರೂ ಆದ ಎಸ್. ನಿಜಲಿಂಗಪ್ಪನವರು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಹಲವಾಗಲು ಗ್ರಾಮಕ್ಕೆ ಸೇರಿದವರಾಗಿದ್ದಾರೆ. ನಿಜಲಿಂಗಪ್ಪನವರು ಚಿತ್ರದುರ್ಗ ಜಿಲ್ಲೆಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡರು. ಭಾರತದ ಸ್ವಾತಂತ್ರ್ಯ ಚಳುವಳಿ ಮತ್ತು ಕರ್ನಾಟಕ ಏಕೀಕರಣ ಚಳುವಳಿಗಳಿಗೆ ನಿಜಲಿಂಗಪ್ಪನವರು ನೀಡಿದ ಕಾಣಿಕೆಯನ್ನು ಯಾರು ತಾನೆ ಮರೆಯಲು ಸಾಧ್ಯ'

ನಿಜಲಿಂಗಪ್ಪನವರ ತೊಂಬತ್ತ ಮೂರನೆಯ ಹುಟ್ಟುಹಬ್ಬವನ್ನು ಇತ್ತೀಚೆಗೆ ಹಲವಾಗಲು ಗ್ರಾಮದಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು. ಅಂದು ಗ್ರಾಮದ ನಾಗರೀಕರು ಅವರಿಗೆ ನೀಡಿದ ತೊಂಬತ್ತ ಮೂರು ಲಕ್ಷ ರೂಪಾಯಿಗಳ ಕಾಣಿಕೆಯನ್ನು ಆ ಗ್ರಾಮದ ಸಮುದಾಯ ಭವನ ನಿರ್ಮಿಸಲು ಕಾಣಿಕೆ ನೀಡಿದರು.

ಹಡಗಲಿ ತಾಲ್ಲೂಕು ಮಾಗಳದಲ್ಲಿ ಧಾರವಾಡ ಜಿಲ್ಲಾ ಪ್ರಭಾವ

ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನ ಗಡಿಭಾಗದ ಕೊಂಬಳಿ, ಮಾಗಳ, ಹೊಳಲು, ಮೈಲಾರ ಮುಂತಾದ ಊರುಗಳಲ್ಲಿನ ಸ್ವಾತಂತ್ರ್ಯ ಚಳುವಳಿ ಚಟುವಟಿಕೆಗಳು ಧಾರವಾಡ ಜಿಲ್ಲೆಯಲ್ಲಿ ನಡೆಯುತ್ತಿದ್ದ ಚಳುವಳಿಯ ಜೊತೆ ಹೆಚ್ಚಿನ ಸಂಬಂಧ ಹೊಂದಿದ್ದವು. ಧಾರವಾಡ ಜಿಲ್ಲೆಯ ಮುಂಡರಿಗಿ, ಕೋಗನೂರು, ನೆಗಳೂರು, ಹೊಸರಿತ್ತಿ ಮುಂತಾದ ಊರುಗಳಲ್ಲಿ ನಡೆಯುತ್ತಿದ್ದ ಮೈಲಾರ ಮಹದೇವಪ್ಪನವರ ತಂಡದ ಚಟುವಟಿಕೆಗಳು ಹಡಗಲಿ ತಾಲ್ಲೂಕಿನ ಗಡಿಭಾಗದ ಗ್ರಾಮಗಳಲ್ಲಿ ಜನಪ್ರಿಯವಾಗಿದ್ದವು. ಹಡಗಲಿ ತಾಲ್ಲೂಕಿನಲ್ಲಿ ಉಳಿದೆಲ್ಲಾ ಗ್ರಾಮಗಳಿಗಿಂತ ಮಾಗಳ ಗ್ರಾಮವು ಸ್ವಾತಂತ್ರ್ಯ ಚಳುವಳಿಯಲ್ಲಿ ಮುಂಚೂಣಿಯಲ್ಲಿತ್ತು. ಆದರೆ ಧಾರವಾಡ ಜಿಲ್ಲೆಯಲ್ಲಿ ನಡೆಯುತ್ತಿದ್ದ ಉಗ್ರ ರೂಪದ ಚಳುವಳಿ ವಿಧಾನವನ್ನು ಹಡಗಲಿ ತಾಲ್ಲೂಕಿನ ಗಡಿಭಾಗದ ಗ್ರಾಮಗಳು ಅನುಸರಿಸಲಿಲ್ಲ. ಮದ್ಯಪಾನ ನಿಷೇಧ, ಪ್ರಾಣಿಬಲಿ ನಿಷೇಧ ಮುಂತಾದ ಚಟುವಟಿಕೆಗಳು ಮಾಗಳ, ಹೊಳಲು, ಕೊಂಬಳಿ ಮುಂತಾದ ಊರುಗಳಲ್ಲಿ ವ್ಯಾಪಕವಾಗಿ ನಡೆದವು.

ಧಾರವಾಡ ಜಿಲ್ಲೆಯ ಚಳುವಳಿಗಾರರು ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿಯ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ಗಡಿಭಾಗದ ಗ್ರಾಮಗಳಲ್ಲಿ ಟಪಾಲು ಪೆಟ್ಟಿಗೆ ಹಾರಿಸುವುದು, ಟೆಲಿಫೋನ್ ತಂತಿ ಕತ್ತರಿಸುವುದು ಮುಂತಾದ ಚಟುವಟಿಕೆಗಳನ್ನು ಮಾಡುತ್ತಿದ್ದರು.

ನವೆಂಬರ್ ೧, ೧೯೪೨ರಂದು ಹರಿಹರದಿಂದ ಹೊಸಪೇಟೆಗೆ ಬರುತ್ತಿದ್ದ ಟಪಾಲು ಬಸ್ಸನ್ನು ಹರಪನಹಳ್ಳಿಯಿಂದ ೭ ಮೈಲಿ ದೂರದಲ್ಲಿ ೧೫-೨೦ ಜನರ ತಂಡವು ತಡೆದು ನಿಲ್ಲಿಸಿ ಬಸ್ಸಿನಲ್ಲಿದ್ದ ಟಪಾಲು ಪೆಟ್ಟಿಗೆಯನ್ನು ತೆಗೆದುಕೊಂಡು ಹೋಯಿತು. ತಂಡದ ಸದಸ್ಯರು ಕೈಯಲ್ಲಿ ಚಾಕು ಚೂರಿ, ದಂಡ ಹಿಡಿದಿದ್ದರು. ಇಂತಹ ಉಗ್ರರೂಪದ ಚಟುವಟಿಕೆಗಳನ್ನು ಮಾಡಬೇಕಾದರೆ ಅವರು ಬಳ್ಳಾರಿ ಜಿಲ್ಲೆಗೆ ಸೇರಿದ ಚಳುವಳಿಗಾರರಾಗಿರಲು ಸಾಧ್ಯವಿಲ್ಲ. ಅವರೆಲ್ಲರೂ ಬೊಂಬಾಯಿ ಪ್ರಾಂತದ ಧಾರವಾಡ ಜಿಲ್ಲೆಗೆ ಸೇರಿದ ಚಳುವಳಿಗಾರರೇ ಇರಬೇಕು ಎಂದು ೧೯೪೨ರ ಪೊಲೀಸ್ ರಹಸ್ಯ ದಾಖಲೆಗಳು ತಿಳಿಸುತ್ತವೆ. ಅಂದ ಮೇಲೆ ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿದ್ದ ಚಳುವಳಿ ಧಾರವಾಡ ಜಿಲ್ಲೆಯಲ್ಲಿ ನಡೆಯುತ್ತಿದ್ದ ಚಳುವಳಿಯಿಂದ ಪ್ರಭಾವಿತ ಗೊಂಡಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮುದೇನೂರು ಸಂಗಣ್ಣನವರು ತಿಳಿಸುವಂತೆ ಈ ಪ್ರಸಂಗವು 'ತೆಲಗಿ' ಎಂಬ ಗ್ರಾಮದ ಬಳಿ ನಡೆಯಿತು. ಈ ಪ್ರಕರಣದಲ್ಲಿ

ಆಕ್ರಮಣ ನಡೆಸಿದ ತಂಡದ ನಾಯಕತ್ವವನ್ನು ಮೈಲಾರ ಮಹದೇವಪ್ಪನವರ ತಮ್ಮ ಮೈಲಾರ ಲಿಂಗಪ್ಪ ವಹಿಸಿದ್ದರು.

ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಶಿಕ್ಷೆ ಅನುಭವಿಸಿದ ಜೈಲುಗಳ ವಿವರಗಳು

ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಬಂಧನಕ್ಕೆ ಹಾಗೂ ಶಿಕ್ಷೆಗೊಳಗಾದ ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಜೈಲುಶಿಕ್ಷೆಯನ್ನು ಕೇವಲ ಬಳ್ಳಾರಿ ಜಿಲ್ಲೆಯ ಅಥವಾ ಮದರಾಸು ಪ್ರಾಂತದ ಜೈಲುಗಳಲ್ಲಿ ಮಾತ್ರ ಅನುಭವಿಸಲಿಲ್ಲ. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಹೋರಾಟದ ಚಟುವಟಿಕೆಗಳ ವ್ಯಾಪ್ತಿ ಮತ್ತು ಹರವು ಕೇವಲ ಬಳ್ಳಾರಿ ಜಿಲ್ಲೆಯ ಸೀಮೆಗಷ್ಟೇ ಸೀಮಿತಗೊಂಡಿರಲಿಲ್ಲ. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಗಾರರು ಶಿಕ್ಷೆ ಅನುಭವಿಸಿದ ಜೈಲುಗಳ ವಿವರಗಳಿಂದ ಇದು ಸ್ಪಷ್ಟವಾಗುತ್ತದೆ. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಶಿಕ್ಷೆ ಅನುಭವಿಸಿದ ಒಟ್ಟು ಜೈಲುಗಳ ಸಂಖ್ಯೆ ೨೮, ಇವುಗಳಲ್ಲಿ ೧೩ ಮದರಾಸು ಪ್ರಾಂತಕ್ಕೆ ಸೇರಿದ್ದವು. ಅವುಗಳಾವುವೆಂದರೆ:

೧) ಅನಂತಪುರ ಸಬ್ ಜೈಲು. ಅನಂತಪುರ	-	೧
೨) ಅಲ್ಲಿಪುರ ಜೈಲು, ಬಳ್ಳಾರಿ	-	೩೦
೩) ಕೂಡ್ಲಿಗಿ ಸಬ್ ಜೈಲು, ಕೂಡ್ಲಿಗಿ	-	೮
೪) ಕಡಲೂರು ಸಬ್ ಜೈಲು.	-	೬
೫) ತಿರುಚನಾಪಳ್ಳಿ ಜೈಲು.	-	೭
೬) ತಂಜಾವೂರು ಜೈಲು.	-	೪೭
೭) ಕೇಂದ್ರ ಕಾರಾಗೃಹ. ಬಳ್ಳಾರಿ	-	೧೨೪
೮) ಮದರಾಸು ಕೇಂದ್ರ ಕಾರಾಗೃಹ	-	೨೧
೯) ಮಧುರೈ ಜೈಲು	-	೮
೧೦) ವೆಲ್ಲೂರು ಕೇಂದ್ರ ಕಾರಾಗೃಹ	-	೫೫
೧೧)ಹರಪನಹಳ್ಳಿ ಸಬ್ ಜೈಲು	-	೯
೧೨) ಹೊಸಪೇಟೆ ಸಬ್ ಜೈಲು	-	೧೫
೧೩) ಬರ್ಹಾಪುರ ಜೈಲು	-	೬

ಮದರಾಸು ಪ್ರಾಂತಕ್ಕೆ ಸೇರಿದ ಜೈಲುಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಜೈಲು ಶಿಕ್ಷೆ ಅನುಭವಿಸಿದ ೩೩೭ ಪ್ರಕರಣಗಳಿವೆ.

ಬೊಂಬಾಯಿ ಪ್ರಾಂತಕ್ಕೆ ಸೇರಿದ ೭ ಜೈಲುಗಳಲ್ಲಿ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ ಗಾರರು ಜೈಲುಶಿಕ್ಷೆ ಅನುಭವಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು

ಜೈಲು ಶಿಕ್ಷೆ ಅನುಭವಿಸಿದ ಬೊಂಬಾಯಿ ಪ್ರಾಂತದ ಜೈಲುಗಳ ವಿವರ ಹೀಗಿದೆ.

೧) ಧಾರವಾಡ ಜೈಲು - ೧
೨) ಗದಗ ಸಬ್ ಜೈಲು - ೧
೩) ಪೂನಾ ಜೈಲು - ೧
೪) ಬಿಜಾಪುರ ಜೈಲು - ೩
೫) ಬೆಳಗಾಂ ಕೇಂದ್ರ ಕಾರಾಗೃಹ - ೧೫
೬) ಯರವಾಡ ಜೈಲು - ೯
೭) ಹಿಂಡಲಗಿ ಜೈಲು - ೧೧

ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಬೊಂಬಾಯಿ ಪ್ರಾಂತದ ಜೈಲುಗಳಲ್ಲಿ ಜೈಲುಶಿಕ್ಷೆ ಅನುಭವಿಸಿದ ೪೧ ಪ್ರಕರಣಗಳಿವೆ.

ಮೈಸೂರು ಪ್ರಾಂತಕ್ಕೆ ಸೇರಿದ ಜೈಲುಗಳು ಮೂರು. ಅವುಗಳು ಯಾವುವೆಂದರೆ

ಚಿತ್ರದುರ್ಗ ಜೈಲು - ೨
ದಾವಣಗೆರೆ ಜೈಲು - ೫
ಬೆಂಗಳೂರು ಕೇಂದ್ರ ಕಾರಾಗೃಹ - ೧

ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಹೈದರಾಬಾದ್ ಸಂಸ್ಥಾನದ ನಾಲ್ಕು ಜೈಲುಗಳಲ್ಲಿ ಶಿಕ್ಷೆ ಅನುಭವಿಸಿದ ವಿವರ ಹೀಗಿದೆ:

೧) ಅಹಮದ್ ನಗರ ಜೈಲು - ೧
೨) ಔರಂಗಾಬಾದ್ ಜೈಲು - ೧
೩) ಕೊಪ್ಪಳ ಜೈಲು - ೧
೪) ಹೈದರಾಬಾದ್ ಜೈಲು - ೧

(ಜೈಲು ಹೆಸರುಗಳು ಮುಂದೆ ಕೊಟ್ಟಿರುವ ಅಂಕಿಗಳು ಜೈಲುವಾಸ ಅನುಭವಿಸಿದವರ ಸಂಖ್ಯೆಯನ್ನು ಸೂಚಿಸುತ್ತದೆ.)

ಹಿಂದೆ ವಿವರಿಸಿರುವಂತೆ ಬಳ್ಳಾರಿ ಜಿಲ್ಲೆಯೊಳಗೆ ಸಂಡೂರು ಸಂಸ್ಥಾನವು ಅಲ್ಲಿನ ಮಹಾರಾಜರ ಆಳ್ವಿಕೆಯಲ್ಲಿತ್ತು. ಆ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿ ನಡೆಸಲು ಸಾಧ್ಯವಿರಲಿಲ್ಲ. ಸಂಡೂರು ಸಂಸ್ಥಾನದ ನಾಗರಿಕರು ತಮ್ಮ ಸಂಸ್ಥಾನದ ಗಡಿಯಾಚೆ ಹೋಗಿ ಸ್ವಾತಂತ್ರ್ಯ ಚಳುವಳಿ ನಡೆಸುತ್ತಿದ್ದರು. ಆದರೂ ಕೆಲವು ಪ್ರಕರಣಗಳು ಸಂಡೂರು ಸಂಸ್ಥಾನದೊಳಗೆ ನಡೆದದ್ದು ತಿಳಿಯುತ್ತದೆ. ಸಂಸ್ಥಾನದೊಳಗೆ ಮಹಾರಾಜರ ಸರ್ವಾಧಿಕಾರಿ ಧೋರಣೆ ವಿರುದ್ಧ ಅಲ್ಲಿನ

ಪ್ರಜೆಗಳು ಹೋರಾಟ ನಡೆಸಿದರು. ಅಂತಹ ಎರಡು ಪ್ರಕರಣಗಳು ಬೆಳಕಿಗೆ ಬಂದಿವೆ. ಬೆಳಕಿಗೆ ಬರದೆ ಇರುವ ಅನೇಕ ಪ್ರಕರಣಗಳು ಇರಬಹುದು.

ಅನಂತಪುರ ಕಾಲೇಜಿನಲ್ಲಿ ಬಳ್ಳಾರಿ ಜಿಲ್ಲೆಯ ಯುವಕರ ಸಾಹಸ

ಬಳ್ಳಾರಿ ಜಿಲ್ಲೆಗೆ ಸೇರಿದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅನೇಕರು ಜಿಲ್ಲೆಯ ಹೊರಗೆ, ಪಕ್ಕದ ಜಿಲ್ಲೆಗಳಲ್ಲಿ ಚಳುವಳಿ ನಡೆಸಿದ ಪ್ರಸಂಗಗಳಿವೆ. ಅಂತಹ ಒಂದು ರೋಚಕ ಪ್ರಸಂಗವೆಂದರೆ 'ಅನಂತಪುರ ಕಾಲೇಜು ಆರ್ಸನ್ ಕೇಸು'. ಸ್ವಾತಂತ್ರ್ಯ ಪೂರ್ವದಲ್ಲಿ ಬಳ್ಳಾರಿ ಜಿಲ್ಲೆಯ ವಿದ್ಯಾರ್ಥಿಗಳು ಉನ್ನತ ಪದವಿ ಶಿಕ್ಷಣಕ್ಕಾಗಿ ಮದರಾಸು ಪ್ರಾಂತಕ್ಕೆ ಸೇರಿದ ಅನಂತಪುರ ಇಲ್ಲವೆ ಮದನಪಲ್ಲಿ ಅಥವಾ ಮದರಾಸುಗಳಿಗೆ ಹೋಗಬೇಕಾಗುತ್ತಿತ್ತು. ಕೊಟ್ಟೂರಿನ ಗೋರ್ಲಿಶರಣಪ್ಪನವರ ಭಾರತ ವ್ಯಾಯಾಮ ಶಾಲೆಯಲ್ಲಿ ತರಬೇತಿ ಹೊಂದಿದ ಅಲಬೂರು ನಂಜಪ್ಪನವರು ಕಾಲೇಜು ವಿದ್ಯಾಭ್ಯಾಸಕ್ಕಾಗಿ ಅನಂತಪುರ ಕಾಲೇಜು ಸೇರಿದರು. ಇವರಂತೆ ಕೊ. ಚನ್ನಬಸಪ್ಪ ಮತ್ತು ಎ.ಬಿ.ಆರ್. ಕೊಟ್ರಗೌಡರು ಅದೇ ಕಾಲೇಜು ಸೇರಿದರು. ಈ ಹದಿಹರೆಯದ ಬಾಲಕರು ೧೯೪೨ ರ ಚಲೇಜಾವ್ ಚಳುವಳಿಯ ಸಂದರ್ಭದಲ್ಲಿ ನಡೆಸಿದ ಸ್ವಾತಂತ್ರ್ಯ ಚಳುವಳಿ ಚಟುವಟಿಕೆಗಳು ಮೈನವಿರೇಳಿಸುವಂತಿವೆ. ಅಲ್ಲಿ ನಡೆದ ಒಂದು ಪ್ರಸಂಗದ ವಿವರ ಹೀಗಿದೆ:

ವರ್ಷ	:	೧೯೪೨
ಮೊಕದ್ದಮೆ ಹೆಸರು	:	ಅನಂತಪುರ ಕಾಲೇಜು ಆರ್ಸನ್ ಕೇಸು.
ಆಪಾದಿತರ ಹೆಸರುಗಳು	:	ಎ.ಬಿ.ಆರ್. ಕೊಟ್ರಗೌಡ, ಕೋ. ಚನ್ನಬಸಪ್ಪ, ಅಲಬೂರು ನಂಜಪ್ಪ.
ಅಪಾದಿತರ ಪರ ವಕೀಲ	:	ಪ್ರಸಿದ್ಧ ನಟ ಬಳ್ಳಾರಿಯ ಟಿ. ರಾಘವ.

೧೯೪೨ ಕ್ಕೆ ಮೊದಲೆ ಕೊಟ್ಟೂರು ಸ್ವಾತಂತ್ರ್ಯ ಹೋರಾಟದ ವೀರಭೂಮಿಯಾಗಿತ್ತು. ಗೋರ್ಲಿಶರಣಪ್ಪ, ಕೆ. ಗೌಡಪ್ಪ, ಸಿದ್ದಪ್ಪ, ಹಳ್ಳಿಗುರುಬಸವರಾಜ, ರುದ್ರಮ್ಮ ಮುಂತಾದ ಹಿರಿಯ ಸತ್ಯಾಗ್ರಹಿಗಳ ಹೋರಾಟವನ್ನು ಕಣ್ಣಿಂದ ನೋಡಿ ಬೆಳೆದ ಅಂದಿನ ವಿದ್ಯಾರ್ಥಿ ಸಮುದಾಯದಲ್ಲಿ ಸಹಜವಾಗಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ಅಭಿಮಾನವಿತ್ತು. ಎ.ಬಿ. ಆರ್. ಕೊಟ್ರಗೌಡ, ಅಲಬೂರು ನಂಜಪ್ಪ ಮತ್ತು ಕೋ. ಚನ್ನಬಸಪ್ಪ ಎಂಬ ಬಾಲಕರು ಇಂತಹ ವಾತಾವರಣದಲ್ಲಿ ಬೆಳೆದವರು.

ಸ್ವಾತಂತ್ರ್ಯ ಹೋರಾಟದ ಬಗ್ಗೆ ಕಾಳಜಿ ಹೇಗೆ ಉಂಟಾಯಿತು ಎಂಬುದರ ಬಗ್ಗೆ ಡಾ॥ ಅಲಬೂರು ನಂಜಪ್ಪ ಹೀಗೆ ಬರೆಯುತ್ತಾರೆ:

"ಕೊಟ್ಟೂರಿನ ಭಾರತ ವ್ಯಾಯಾಮ ಶಾಲೆಯಲ್ಲಿ ದೇಶಭಕ್ತರು ನಡೆಸುತ್ತಿದ್ದ ಕಾರ್ಯಕ್ರಮಗಳಿಂದ ಪೂರ್ಣ ಪ್ರಭಾವಿತನಾಗಿದ್ದೆ. ಇದರಿಂದಾಗಿ ನಾನು ಕೇವಲ ಪಠ್ಯ ಪುಸ್ತಕಗಳಿಗೆ ಅಭ್ಯಾಸ ಮೀಸಲಿಡದೆ ಇತಿಹಾಸ, ಸಾಹಿತ್ಯ ಮುಂತಾದ ಪುಸ್ತಕಗಳನ್ನು ಅಭ್ಯಾಸ ಮಾಡುತ್ತಿದ್ದೆ. ಕೊಟ್ಟೂರಿನಲ್ಲಿ ಬಾಬು ರಾಜೇಂದ್ರ ಪ್ರಸಾದ್, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದವರ ಭಾಷಣ ಕೇಳಿದ್ದೆವು. ಮಾರ್ಚ್ ೨, ೧೯೩೪ರಲ್ಲಿ ನಮಗೆಲ್ಲಾ ಕೊಟ್ಟೂರಿನಲ್ಲಿ ಗಾಂಧೀಜಿ ದರ್ಶನ ಭಾಗ್ಯ ದೊರೆಯಿತು".

ಈ ಮೂವರು ವಿದ್ಯಾರ್ಥಿಗಳು ಅನಂತಪುರ ಕಾಲೇಜಿನಲ್ಲಿ 'ತ್ರಿ ಮಸ್ಕಟೀಯರ್ಸ್' ಎಂದೇ ಪ್ರಸಿದ್ಧರಾಗಿದ್ದರು. ಕಾಲೇಜಿನ ಚರ್ಚಾಸ್ಪರ್ಧೆ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ಬಹುಮಾನಗಳೆಲ್ಲಾ ಇವರಿಗೆ ಮೀಸಲು. ವಿದ್ಯಾರ್ಥಿಗಳಲ್ಲಿ ಸಹಜವಾಗಿ ಇರುತ್ತಿದ್ದ ಕನಸುಗಳು ಇವರುಗಳಿಗೂ ಇದ್ದವು. ಎ.ಬಿ.ಆರ್.ಕೊಟ್ರಗೌಡರಿಗೆ I.C.S. ಪರೀಕ್ಷೆ ಪಾಸು ಮಾಡಬೇಕೆಂಬ ಆಸೆ. ಇದು ಅವರ ತಂದೆ ತಾಯಿಯರ ಆಸೆಯೂ ಆಗಿತ್ತು. ಅಲಬೂರು ಅಂಜನಪ್ಪನವರಿಗೆ ಸ್ವತಂತ್ರ ವೃತ್ತಿ ಕೈಗೊಳ್ಳಲು ಅನುಕೂಲವಾಗುವಂತಹ ವೈದ್ಯಕೀಯ ಪದವಿ ಗಳಿಸುವ ಆಸೆ. ಕಾಲೇಜಿನ ಪ್ರಾಚಾರ್ಯರ ಅಚ್ಚು ಮೆಚ್ಚಿನ ಶಿಷ್ಯರಾಗಿದ್ದ ಇವರುಗಳಿಗೆ ಭಾರತದ ಸ್ವಾತಂತ್ರ್ಯದ ಕನಸು. ಕಾಲೇಜಿನಲ್ಲಿ ಬಂದ್, ಪಿಕೆಟಿಂಗ್, ಮುಷ್ಕರ ಸಂಘಟಿಸುತ್ತಿದ್ದ ಈ ಮೂವರ ಹೆಸರುಗಳು ಪೋಲೀಸರ ಫೈಲು ಸೇರಿದ್ದವು.

ಆಗಸ್ಟ್ ೧೯೪೨ ರಲ್ಲಿ ಭಾರತ ಬಿಟ್ಟು ತೊಲಗಿ ಚಳುವಳಿಯು ಪ್ರಾರಂಭವಾಯಿತು. ೮-೮-೧೯೪೨ ರಂದು ಕಾಲೇಜಿನಲ್ಲಿ ಪೂರ್ಣ ಹರತಾಳ ಆಚರಿಸಲಾಯಿತು. ಪ್ರಾಚಾರ್ಯ ಕೆ. ವಿ.ಎಸ್. ಮೆನನ್‌ರವರ ಮಗನನ್ನೇ ಕಾಲೇಜಿನಿಂದ ಮನೆಗೆ ನಮ್ಮ 'ನಾಯಕರು' ವಾಪಸ್ಸು ಕಳುಹಿಸಿದರು. ಪೋಲೀಸರಿಂದ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ನಡೆಯಿತು. ಅಲ್ಲಿ ಇಲ್ಲಿ ಅವಿತುಕೊಂಡು ಕುಳಿತಿದ್ದ ವಿದ್ಯಾರ್ಥಿಗಳನ್ನು ಹುಡುಕಿಕೊಂಡು ಹೋಗಿ ಪೋಲೀಸರು ಜಜ್ಜಿದರು. ಒಂದು ವಾರದ ಕಾಲ ಕಾಲೇಜು ಮುಚ್ಚಿತು. ನಮ್ಮ ಕೇಸ್‌ನ ನಾಯಕರುಗಳ ಹಾಸ್ಟೆಲ್ ರೂಮು ಹೋರಾಟಗಾರರ ಕಛೇರಿಯಾಗಿತ್ತು. ಆಗಸ್ಟ್, ೨೦, ೧೯೪೨ ರಂದು ಕಾಲೇಜು ಪುನರಾರಂಭವಾಯಿತು. ನಮ್ಮ ಕೊಟ್ಟೂರು ಗುಂಪು ಕಾಲೇಜಿಗೆ ಹೋಗಲಿಲ್ಲ. ಆದರೆ ಸೆಪ್ಟಂಬರ್‌ನಲ್ಲಿ ನಡೆದ ತ್ರೈಮಾಸಿಕ ಪರೀಕ್ಷೆಗಳಲ್ಲಿ ಹಾಜರಾದರು. ಪ್ರಶ್ನೆ ಪತ್ರಿಕೆಗಳಲ್ಲಿದ್ದ ಪ್ರಶ್ನೆಗಳಿಗೆ ಉತ್ತರಿಸುವುದಕ್ಕೆ ಪ್ರತಿಯಾಗಿ "ಭಾರತದಲ್ಲಿ ಬ್ರಿಟಿಷರ ದಬ್ಬಾಳಿಕೆ" ಬಗ್ಗೆ ಒಬ್ಬರು ಪ್ರಬಂಧ ಬರೆದರೆ, ಇನ್ನೊಬ್ಬರು "ಬ್ರಿಟಿಷ ಆಳ್ವಿಕೆಯ ದುರಂತ"ದ ಬಗ್ಗೆ ಪ್ರಬಂಧ ಬರೆದರು. ಎ.ಬಿ.ಆರ್. ಕೊಟ್ರಗೌಡರು "ಎ ಕೇಸ್ ಫಾರ್ ಇಂಡಿಯನ್ ಇಂಡಿಪೆಂಡೆನ್ಸ್-ಹಿಯರ್ ಆಯಂಡ್ ನೌ" ಎಂಬ ಪ್ರಬಂಧ ಬರೆದರು. ಹೀಗೆ ಬರೆದ ಸುದೀರ್ಘ ಪ್ರಬಂಧಗಳಲ್ಲಿ ಬ್ರಿಟಿಷ್ ಸರ್ಕಾರದ ಬಗ್ಗೆ ವಿದ್ಯಾರ್ಥಿಗಳು ಬಹು ಕಟುವಾದ ಮತ್ತು ಪ್ರಚೋದನಕಾರಿ ಭಾಷೆ ಬಳಸಿದ್ದರು.

ಕಾಲೇಜಿನಲ್ಲಿ ವಾತಾವರಣ ಪ್ರಕ್ಷುಬ್ಧವಾಗಿತ್ತು. ಸೆಪ್ಟೆಂಬರ್ ೯, ೧೯೪೨ ಮಧ್ಯರಾತ್ರಿಯ

ಸಮಯ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳೆಲ್ಲಾ ಮಲಗಿದ್ದಾರೆ. ಕಾಲೇಜಿನ ರಸಾಯನಶಾಸ್ತ್ರ ಪ್ರಯೋಗಾಲಯದಲ್ಲಿ ಬಾಂಬ್ ಸ್ಫೋಟವಾಯಿತು. ಪ್ರಯೋಗಾಲಯ ಸಂಪೂರ್ಣವಾಗಿ ಬೆಂಕಿಗಾಹುತಿಯಾಯಿತು. ಪೋಲೀಸರು ತಕ್ಷಣ ಕಾರ್ಯ ಪ್ರವೃತ್ತರಾದರು. ಈ ಘಟನೆಯು ಅವರಿಗೊಂದು ಸವಾಲಾಗಿತ್ತು. ಊರನ್ನೆಲ್ಲಾ ಜಾಲಾಡಿದರು. ನೀಲಂ ಸಂಜೀವರೆಡ್ಡಿ, ದಾಮೋದರಂ ಸಂಜೀವಯ್ಯ. ಟಿ. ನಾಗರೆಡ್ಡಿ, ಎ.ಬಿ.ಆರ್. ಕೊಟ್ರಗೌಡ, ಕೋ. ಚನ್ನಬಸಪ್ಪ ಮುಂತಾದವರನ್ನು ಬಂಧಿಸಿದರು. ಅಲಬೂರು ನಂಜಪ್ಪ ಪೋಲೀಸರ ಕಣ್ಣು ತಪ್ಪಿಸಿ ಕೊಟ್ಟೂರಿಗೆ ಓಡಿ ಬಂದರು. ಭೂಗತನಾಗಿ ಪೋಲೀಸರ ಕಣ್ಣು ತಪ್ಪಿಸಿ, 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ನಂಜಪ್ಪ ಕೆಲಸ ಮಾಡುತ್ತಿದ್ದ. ಪೋಲೀಸರಿಂದ ಅದೆಷ್ಟು ದಿನ ತಲೆ ಮರೆಸಿಕೊಂಡಿರಲು ಸಾಧ್ಯ? ೧೯೪೨, ಸೆಪ್ಟೆಂಬರ್ ೨೦ ರಂದು ಉಜ್ಜಿನಿಯಲ್ಲಿ ನಂಜಪ್ಪನನ್ನು ಪೋಲೀಸರು ಬಂಧಿಸಿದರು. ನಂತರ ಸಶಸ್ತ್ರ ಕಾವಲಿನಲ್ಲಿ ಹೊಸಪೇಟೆಗೆ ಕರೆ ತಂದರು. ಅಲ್ಲಿಂದ ವೆಲ್ಲೂರು ಜೈಲಿಗೆ ಸಾಗು ಹಾಕಲಾಯಿತು.

೧೯೪೨ ಡಿಸೆಂಬರ್‌ನಲ್ಲಿ ಖಟ್ಲೆ ಪ್ರಾರಂಭವಾಯಿತು

ಖಟ್ಲೆ ಪ್ರಾರಂಭವಾದಾಗ ವೆಲ್ಲೂರು ಸೆಂಟ್ರಲ್ ಜೈಲಿನಿಂದ ಅಲಬೂರು ನಂಜಪ್ಪನನ್ನು ಅನಂತಪುರಕ್ಕೆ ಸಶಸ್ತ್ರ ಕಾವಲು ಪಡೆಯಲ್ಲಿ ಕರೆತರಲಾಯಿತು. ವೆಲ್ಲೂರಿನ ಸೆಂಟ್ರಲ್ ಜೈಲಿನಿಂದ ನಂಜಪ್ಪನನ್ನು ಉಳಿದ ಹಿರಿಯ ಸ್ವಾತಂತ್ರ್ಯ ಯೋಧರು ಕಣ್ಣೀರಿಡುತ್ತಾ ಬೀಳ್ಕೊಟ್ಟರು. ನಂಜಪ್ಪನು ೧೮-೧೯ ವರ್ಷದ ತರುಣ. ವೆಲ್ಲೂರು ಸೆಂಟ್ರಲ್ ಜೈಲಿನಲ್ಲಿ ಇದ್ದವರು ಎಂಥವರು! ವರದಾಚಾರ್, ಅವಿನಾಶಲಿಂಗಂ, ಗೋಪಾರೆಡ್ಡಿ, ಅಳಗೇಶನ್, ಬೂದಿಹಾಳು ಅನಂತಾಚಾರ್, ಟೇಕೂರು ಸುಬ್ರಹ್ಮಣ್ಯಂ ಮುಂತಾದವರು ೧೮ ವರ್ಷದ ತರುಣನನ್ನು ಹಿರಿಯ ಸ್ವಾತಂತ್ರ್ಯ ಯೋಧರೆಲ್ಲಾ ಅತ್ಯಂತ ಆತ್ಮೀಯವಾಗಿ ಬೀಳ್ಕೊಟ್ಟರು. ಅದೊಂದು ಹೃದಯಸ್ಪರ್ಶಿ ದೃಶ್ಯವಾಗಿತ್ತು. ಬಾಲಕನ ತಲೆದಡಿವಿದರು ಒಬ್ಬರಾದರೆ, ಗಲ್ಲ ಮುಟ್ಟಿ ಪ್ರೀತಿ ತೋರಿಸಿದರು ಮತ್ತೊಬ್ಬರು ಬೆನ್ನು ತಟ್ಟಿದವರು ಒಬ್ಬರಾದರೆ, ಗಂಟಲು ಉಬ್ಬಿಬಂದು ಗದ್ಗದಿತರಾಗಿ ಕಣ್ಣೀರಿಟ್ಟವರು ಮತ್ತೊಬ್ಬರು.

ಖಟ್ಲೆ ಪ್ರಾರಂಭವಾಯಿತು. ಸಾರ್ವಜನಿಕರಲ್ಲಿ ಭಾರಿ ಕುತೂಹಲ ಕೆರಳಿಸಿದ ಖಟ್ಲೆ ಅದಾಗಿತ್ತು. ಆಪಾದಿತರ ಪರವಾಗಿ ನ್ಯಾಯಾಲಯದಲ್ಲಿ ವಕೀಲರಾಗಿದ್ದವರು ಸಾಮಾನ್ಯರಲ್ಲ. ಪ್ರಖ್ಯಾತ ನಟರು ವಕೀಲರೂ ಆಗಿದ್ದ ಟಿ. ರಾಘವ. ಅವರು ಉಚಿತವಾಗಿ ಆಪಾದಿತರ ಪರವಾಗಿ ವಾದಿಸಲು ಮುಂದಾಗಿದ್ದರು. ಕ್ರಿಮಿನಲ್ ಖಟ್ಲೆಗಳಲ್ಲಿ ಟಿ. ರಾಘವರದು ಎತ್ತಿದ ಕೈ. ಅವರ ವಾದ ವೈಖರಿ, ವಾಕ್ ಚಾತುರ್ಯ, ಹಾವಭಾವಗಳು, ಕೈಚಲನೆ, ಧ್ವನಿಯ ಏರಿಳಿತಗಳು, ಭಾವಾಭಿನಯಗಳೆಲ್ಲಾ ಕೇಳುಗರ ಮತ್ತು ನೋಡುವವರ ಕಿವಿ ಕಣ್ಣುಗಳಿಗೆ ರಸದೂಟದಂತಿರುತ್ತಿದ್ದವು. ಇವರ ವಾದ ಪ್ರತಿವಾದವಿತ್ತೆಂದರೆ ಹತ್ತಾರು ಮೈಲಿ ಫಾಸಲೆಯಿಂದ ಜನ ನ್ಯಾಯಾಲಯಕ್ಕೆ ಬರುತ್ತಿದ್ದರು. ಟಿ. ರಾಘವರು ಒಂದು ಐತಿಹ್ಯವಾಗಿ ಬಿಟ್ಟಿದ್ದರು.

ಮೊದಲನೆಯ ದಿನ ಆಪಾದಿತರನ್ನು ಕೋರ್ಟಿಗೆ ಹಾಜರು ಪಡಿಸಿದರು. ಟಿ. ರಾಘವ ನೋಡುತ್ತಾರೆ! ಆಪಾದಿತರ ಕೈಗಳಿಗೆ ಬೇಡಿ ತೊಡಿಸಲಾಗಿದೆ. ರಾಘವರು ನಖಶಿಖಾಂತ ಬೆವರಿದರು. ಮೈನಡುಗಿತು. ಎದ್ದು ನಿಂತರು. ಸಿಂಹವಾಣಿಯಲ್ಲಿ ಹೇಳಿದರು, "ಯುವರ್ ಆನರ್, ಸರ್ಕಾರದ ದೃಷ್ಟಿಯಲ್ಲಿ ಇವರು ಏನೇ ಇರಲಿ, ಆದರೆ ಜನತೆಯ ದೃಷ್ಟಿಯಲ್ಲಿ ಇವರೆಲ್ಲಾ ಉಜ್ವಲ ದೇಶ ಪ್ರೇಮಿಗಳು, ಮಹಾತ್ಯಾಗಿಗಳು. ಎರಡನೆಯದಾಗಿ ಇವರ ಅಪರಾಧ ಸಾಬೀತಾಗಬೇಕಾಗಿದೆ. ಕಾನೂನಿನ ದೃಷ್ಟಿಯಿಂದ ಇವರಿನ್ನು ಅಪರಾಧಿಗಳಲ್ಲ; ಆದ್ದರಿಂದ ಅಪಾದಿತರ ಕೈಗಳಿಗೆ ತೊಡಿಸಿರುವ ಬೇಡಿ ತೆಗೆಯಬೇಕು". ನ್ಯಾಯಾಲಯವು ರಾಘವರ ವಾದವನ್ನು ಎತ್ತಿ ಹಿಡಿಯಿತು. ಬೇಡಿ ತೆಗೆಯಲಾಯಿತು. ಆಗಿನ ಪ್ರಕ್ಷುಬ್ಧ ಮತ್ತು ಆತಂಕದ ಕ್ಷಣಗಳಲ್ಲಿ ಅದೊಂದು ಅದ್ಭುತವಾದ ವಿಜಯವಾಗಿತ್ತು.

ಅಪರಾಧವನ್ನು ಸಾಬೀತುಗೊಳಿಸಲು ಪೋಲೀಸರು ಶತ ಪ್ರಯತ್ನ ಪಟ್ಟರು. ಸುಳ್ಳು ಸಾಕ್ಷಿಗಳಾದವು. ಕಾಲೇಜಿಗೆ ಬೆಂಕಿ ಇಟ್ಟಿದ್ದನ್ನು ನೋಡಿದೆ ಎಂದು ಒಬ್ಬ ಸಾಕ್ಷಿ ನುಡಿದರೆ, ಮತ್ತೊಬ್ಬ ಇವರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು ಎಂದನು. ಆದರೆ ಸುಳ್ಳು ಸಾಕ್ಷಿಗಳೆಲ್ಲಾ ಟಿ. ರಾಘವರ ವಾದ- ಪ್ರತಿವಾದಗಳ ಏಟಿಗೆ ಛಿದ್ರ-ಛಿದ್ರಗೊಂಡು ತಲೆಕೆಳಗಾದವು. ಸುಳ್ಳು ಸಾಕ್ಷಿ ನುಡಿಯಲು ಬಂದಿದ್ದವರೆಲ್ಲಾ ಸತ್ಯ ನುಡಿಯಬೇಕಾಯಿತು. ಪೋಲೀಸರ ಸೂಚನೆಯಂತೆ ನಾವು ಮಾಡುತ್ತಿರುವುದಾಗಿ ಸುಳ್ಳು ಸಾಕ್ಷಿಗಳು ನಿಜ ನುಡಿಯಬೇಕಾಯಿತು. ಪೋಲೀಸರು ತಬ್ಬಿಬ್ಬಾದರು, ಅವರ ಪ್ರಯತ್ನ ವಿಫಲವಾಯಿತು.

ಆದರೆ ಪೋಲೀಸರು ಸುಮ್ಮನಿರಲಿಲ್ಲ. "ಅನಂತಪುರ ಕಾಲೇಜು ಆರ್ಸನ್ ಕೇಸು" ಪೋಲೀಸರಿಗೊಂದು ಸವಾಲಾಗಿತ್ತು. ಅವರು ಇನ್ನೊಂದು ಅಸ್ತ್ರ ಬಿಟ್ಟರು. ತ್ರೈಮಾಸಿಕ ಪರೀಕ್ಷೆಯಲ್ಲಿ ಆಪಾದಿತ ವಿದ್ಯಾರ್ಥಿಗಳು ಬರೆದಿದ್ದ 'ಸರ್ಕಾರ ವಿರುದ್ಧದ ಪ್ರಬಂಧಗಳನ್ನು ಸಾಕ್ಷಿಯಾಗಿ ಪೋಲೀಸರು ನ್ಯಾಯಾಲಯದಲ್ಲಿ ಹಾಜರು ಪಡಿಸಿದರು. ನ್ಯಾಯಾಲಯದಲ್ಲಿ ಪ್ರಬಂಧಗಳನ್ನೆಲ್ಲಾ ಸಂಪೂರ್ಣವಾಗಿ ಓದಲಾಯಿತು. ಪ್ರಬಂಧಗಳಲ್ಲಿ ಸರ್ಕಾರದ ವಿರುದ್ಧ ಎಲ್ಲಾ ರೀತಿಯ ವಿಧ್ವಂಸಕ ಕೃತ್ಯಗಳನ್ನೆಲ್ಲಾ ವಿದ್ಯಾರ್ಥಿಗಳು ಸಮರ್ಥಿಸಿದ್ದರು. ಕಟುವಾದ ಪದಗಳನ್ನು ಬಳಸಲಾಗಿತ್ತು. ಆಪಾದಿತರು ವಿಧ್ವಂಸಕ ಕೃತ್ಯವೆಸಗಿರುವುದಕ್ಕಾಗಿ ಈ ಪ್ರಬಂಧಗಳೇ ಸಾಕ್ಷಿ ಎಂದು ಸರ್ಕಾರದ ಪರ ವಕೀಲರು ವಾದಿಸಿದರು. ಟಿ. ರಾಘವರ ಪ್ರತಿಭೆ ಜಾಣ್ಮೆಗೆ ಮತ್ತೊಂದು ಅವಕಾಶ ಎದುರಾಯಿತು.

ಟಿ.ರಾಘವರು ಈ ಬಗ್ಗೆ ನ್ಯಾಯಾಲಯದಲ್ಲಿ ಹೀಗೆ ನುಡಿದರು, 'Your honour. any college could be immensely proud of such students who could write so beautifully both in English and in their mother tongue kannada. I enjoyed the chaste launguage of these essays most thoroughly. I hope the court also had enjoyed hearing them-' "ಹೀಗೆ ಮುಂದುವರಿದ ಟಿ.

ರಾಘವರವರು ಆಪಾದಿತರ ಕಟಕಟೆಯತ್ತ ತಿರುಗಿ, ನಾಟಕೀಯವಾಗಿ, ನ್ಯಾಯಾಧೀಶರನ್ನು ಸಂಬೋಧಿಸುತ್ತಾ, "These innocent boys look incapable of even sucking milk at their mother's breast" ಎಂದು ನುಡಿದಾಗ ಇಡೀ ನ್ಯಾಯಾಲಯವು ನಗೆಗಡಲಿನಲ್ಲಿ ಮುಳುಗಿತು. ನಗೆ ಅಡಗಿದ ಮೇಲೆ ನ್ಯಾಯಾಧೀಶರ ಕಡೆಗೆ ತಿರುಗಿ ಧ್ವನಿಯನ್ನು ಇಳಿಸಿ ರಾಘವ ಕೇಳುತ್ತಾರೆ.

"Can any one imagine that these youngsters could do such devil acts?"

ಆಪಾದಿತರಾದಿಯಾಗಿ ಸಾರ್ವಜನಿಕರು ಟಿ. ರಾಘವರ ವಾದ ಪ್ರತಿವಾದವನ್ನೆಲ್ಲಾ ಸಿನಿಮಾ ದೃಶ್ಯಗಳನ್ನು ನವಿದಂತೆ ನವಿದರು. ಸರ್ಕಾರಿ ವಕೀಲರ ವಾದವನ್ನು ಹಾಗೂ ಪೋಲೀಸರ ಸಾಕ್ಷಿಗಳನ್ನು ಟಿ. ರಾಘವರು ಮಣ್ಣುಗೂಡಿಸಿದರು.

ಖಿಟ್ಟೆ ಏನಾಯಿತು? ಏನಾಗಬೇಕಾಗಿತ್ತೋ ಅದೇ ಆಯಿತು. ಆಪಾದಿತರ ಬಿಡುಗಡೆಯಾಯಿತು. "ಅನಂತಪುರ ಕಾಲೇಜು ಆರ್ಸನ್ ಕೇಸು" ಹೀಗೆ ಅಂತ್ಯಗೊಂಡಿತು. ಎಳೆ ಹರೆಯದ ಕೊಟ್ಟೂರಿನ ಬಾಲಕರ ಈ ಸಾಹಸ ಇಂದಿಗೂ ಮೈನವಿರೇಳಿಸುವಂತಿದೆ. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ "ಅನಂತಪುರ ಕಾಲೇಜು ಆರ್ಸನ್ ಕೇಸು" ಅತ್ಯಂತ ವರ್ಣಮಯವಾದ ವೀರಗಾಥೆಯಾಗಿದೆ.

ಕೊಟ್ಟೂರು ಎಂತಹ ಪ್ರತಿಭಾವಂತರಿಗೆ ಜನ್ಮ ನೀಡಿತ್ತು? ಅಲಬೂರು ನಂಜಪ್ಪನವರು ಅನಂತಪುರ ಕಾಲೇಜು ಆರ್ಸನ್ ಕೇಸ್ ನಿಂದ ಬಿಡುಗಡೆಯಾದ ಮೇಲೆ ತಮ್ಮ ಕಾಲೇಜು ವಿದ್ಯಾಭ್ಯಾಸ ಮುಂದುವರಿಸಿದರು. ೧೯೩೫ ಮಾರ್ಚ್ ತಿಂಗಳಲ್ಲಿ ನಡೆದ ಬಿ.ಎ. ಪರೀಕ್ಷೆಯಲ್ಲಿ ಮದರಾಸು ವಿಶ್ವವಿದ್ಯಾನಿಲಯಕ್ಕೆ ಕನ್ನಡದಲ್ಲಿ ಪ್ರಥಮ, ಇಂಗ್ಲೀಷ್‌ನಲ್ಲಿ ದ್ವಿತೀಯ ಮತ್ತು ಉಳಿದ ವಿಷಯಗಳಲ್ಲಿ ನಾಲ್ಕನೆಯ ಸ್ಥಾನದಲ್ಲಿ ಅಲಬೂರು ನಂಜಪ್ಪನವರು ಅಪೂರ್ವ ಸಾಧನೆ ಗೈದರು. ಅವರದು ಎಂತಹ ಸಾಧನೆ! ಅನಂತಪುರ ಕಾಲೇಜಿನ ಪ್ರಿನ್ಸಿಪಾಲ್ ಕೆ.ಪಿ.ಎಸ್.ಮೆನನ್ ನಂಜಪ್ಪನವರನ್ನು ಕುರಿತು ಹೀಗೆ ಹೇಳಿದರು. "ನೀವು ಒಂದು ಮಹತ್ವದ ಸ್ಥಾನವನ್ನು ಸ್ವಲ್ಪದರಲ್ಲಿ ಕಳೆದುಕೊಂಡೆ. ಇದುವರೆಗೂ ಮದರಾಸು ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿ ಕೇವಲ ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಯೊಬ್ಬರು ಮಾತ್ರ ಬಿ.ಎ. ಯಲ್ಲಿ ಮೂರು ಭಾಗದಲ್ಲೂ ಪ್ರಥಮ ಸ್ಥಾನ ಪಡೆದು, "ಟ್ರಿಪಲ್ ಫಸ್ಟ್ ಕ್ಲಾಸ್"ನಲ್ಲಿ ಉತ್ತೀರ್ಣರಾಗಿದ್ದಾರೆ. ನಿನಗೆ ಮೂರನೇ ಭಾಗದಲ್ಲಿ ಇನ್ನು ಕೇವಲ ೫ ಅಂಕಗಳು ಹೆಚ್ಚು ದೊರೆತಿದ್ದರೆ ನೀನೂ ಟ್ರಿಪಲ್ ಫಸ್ಟ್ ಕ್ಲಾಸ್‌ನಲ್ಲಿ ಉತ್ತೀರ್ಣನಾದ ಎರಡನೆಯ ವ್ಯಕ್ತಿಯಾಗುತ್ತಿದ್ದೆ". ಇದಕ್ಕಿಂತಲೂ ದೊಡ್ಡ ಸಾಧನೆಯಾಗಲಿ ಪ್ರಾಚಾರ್ಯರಿಂದ ಪ್ರಶಂಸೆಯಾಗಲಿ ಯಾಕೆ ಬೇಕು?

ಈ ವಿದ್ಯಾರ್ಥಿ ಸ್ವಾತಂತ್ರ್ಯ ಯೋಧರ ಪ್ರಾಮಾಣಿಕತೆ ಎಂತಹದು! ಎ.ಬಿ.ಆರ್.

ಕೊಟ್ರಗೌಡರು ಜೈಲಿನಲ್ಲಿದ್ದಾಗ ಕ್ಷಮೆಕೇಳಿ ಬಿಡುಗಡೆಯಾಗುವಂತೆ ಹಲವಾರು ಆಮಿಷಗಳನ್ನು ಒಡ್ಡಲಾಯಿತು. ಇಂಗ್ಲೆಂಡಿಗೆ ಕಳುಹಿಸಿ ಶಿಕ್ಷಣ ಪಡೆಯಲು ವಿದ್ಯಾರ್ಥಿವೇತನ ನೀಡುವ ಮಹದಾಸೆಯನ್ನು ಅನಂತಪುರ ಕಾಲೇಜಿನ ಮಾಜಿ ಪ್ರಾಚಾರ್ಯ ಛಬ್ಬಿಯವರ ಎದುರಿಗೆ ರೆವಿನ್ಯೂ ಬೋರ್ಡ್‌ಮೆಂಬರ್ ಬ್ರೌನ್ ಎಂಬುವವರು ತೋರಿದರು. ಆದರೆ ನಿಸ್ವಾರ್ಥ ಸೇವೆಯ ದೀಕ್ಷೆತೊಟ್ಟ ಕೊಟ್ಟೂರಿನ ವೀರಭೂಮಿಯಲ್ಲಿ ತರಬೇತಿ ಹೊಂದಿದ ಕೊಟ್ರಗೌಡರು ಬಗ್ಗಲಿಲ್ಲ. ಆಸೆಗೆ ಬಲಿ ಬೀಳಲಿಲ್ಲ. ಇದರಿಂದ ಅಧಿಕಾರಿಗಳಿಗೆಲ್ಲಾ ನಿರಾಸೆಯಾಯಿತು.

ಇಂತಹ ನಂಜಪ್ಪ, ಕೊಟ್ರಗೌಡ, ಕೋ. ಚೆನ್ನಬಸಪ್ಪರಂತಹ ಪ್ರಾಮಾಣಿಕ ಮತ್ತು ತ್ಯಾಗ ಬುದ್ಧಿಯ ಯೋಧರ ಶ್ರಮದ ಫಲವೇ ಸ್ವಾತಂತ್ರ್ಯ.

೨. ಸ್ವಾತಂತ್ರ್ಯೋತ್ತರ ಭಾರತ

ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅದೊಂದು ಮನುಷ್ಯ ಪ್ರಯತ್ನದಿಂದ ಸಾಧಿಸಿದ ಸಾಧನೆಯೇ ವಿನಾಃ ವಿಧಿವಿಹಿತವಾದ ಕೊಡುಗೆಯಾಗಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಭಾರತದ ಸಂದರ್ಭದಲ್ಲಿ ಚರಿತ್ರೆಯೆಂಬುದು ಮನುಷ್ಯ ನಿರ್ಮಿತ ಪ್ರಕ್ರಿಯೆ ಎಂಬುದು ನಿರ್ವಿವಾದವಾಗಿದೆ. ಸ್ವಾತಂತ್ರ್ಯವೆಂಬುದು ದೇವರಿಂದ ಪ್ರಾಪ್ತವಾದ ಕೃಪೆಯಾಗಿರಲಿಲ್ಲ. ಸಾವಿರಾರು ಸತ್ಯಾಗ್ರಹಿಗಳು, ಉಗ್ರಗಾಮಿಗಳು, ಕ್ರಾಂತಿಕಾರಿಗಳು ಮಾಡಿದ ತ್ಯಾಗ-ಬಲಿದಾನಗಳ ಮೂಲಕ ಭಾರತ ಸ್ವಾತಂತ್ರ್ಯವನ್ನು ಗಳಿಸಿಕೊಂಡಿತು. 'ಸೂರ್ಯ ಮುಳುಗದ ಸಾಮ್ರಾಜ್ಯ' ವೆಂದು ಬೀಗುತ್ತಿದ್ದ ಬ್ರಿಟಿಷರ ಆಳ್ವಿಕೆಯನ್ನು ಭಾರತೀಯರು ತಮ್ಮ ದೃಢ ಸಂಕಲ್ಪದಿಂದ ಕೊನೆಗೊಳಿಸಿದರು. ಚರಿತ್ರೆಯ ಚಲನಶೀಲತೆಯು ಅದರ ಪ್ರಕ್ರಿಯೆಯಲ್ಲಿ ಸಹಭಾಗಿಗಳಾದ ಜನರ ಕ್ರಿಯಾಶಕ್ತಿಯ, ಕರ್ತೃತ್ವ ಶಕ್ತಿಯ ಫಲವಾಗಿರುತ್ತದೆ. ಚರಿತ್ರೆಯನ್ನು ಮನುಷ್ಯ ಬರೆಯುತ್ತಾನೆ-ಕಟ್ಟುತ್ತಾನೆ-ರೂಪಿಸುತ್ತಾನೆ ವಿನಾ ದೇವರು ಕಟ್ಟುವುದಿಲ್ಲ. ಭಾರತದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವು ಮನುಷ್ಯ ಶಕ್ತಿಯ ಮಹತ್ವವನ್ನು ರುಜುವಾತು ಪಡಿಸಿತು. ಚರಿತ್ರೆಯ ಚಲನ ಶೀಲತೆ- ಸಂಚಲನೆಯು ವಿಧಿ ಲಿಖಿತವಲ್ಲವೆಂಬುದನ್ನು ಭಾರತದ ಸ್ವಾತಂತ್ರ್ಯ ಚಳುವಳಿ ಸಿದ್ಧ ಮಾಡಿ ತೋರಿಸಿತು. ಯಾರ ಅವತಾರಕ್ಕೂ ಭಾರತೀಯರು ಕಾಯಲಿಲ್ಲ. ದೇಶದ ಚರಿತ್ರೆಯನ್ನು ತಾವೇ ರೂಪಿಸಿದರು. ಮಾನವ ಕುಲವು ತನ್ನ ಸಂಕಲ್ಪ ಬಲದಿಂದ- ದೃಢ ನಿಶ್ಚಯದಿಂದ ಅಚಲವಾದ ಕರ್ತೃತ್ವ ಶಕ್ತಿಯಿಂದ ತನ್ನ ಚರಿತ್ರೆಯನ್ನು ತಾನೇ ರೂಪಿಸಬಹುದು ಎಂಬ ಸಂದೇಶವನ್ನು ಭಾರತ ಸ್ವಾತಂತ್ರ್ಯ ಹೋರಾಟವು ಲೋಕಕ್ಕೆ ಸಾರಿತು. ಭಾರತದ ಸ್ವಾತಂತ್ರ್ಯ ಚಳುವಳಿಯು ಮೂಲಭೂತವಾಗಿ ಮಾನವ ಕೇಂದ್ರಿತ ಚಳುವಳಿಯಾಗಿತ್ತು. ಅದರ ಮೂಲದಲ್ಲಿ ಮನುಷ್ಯನಿದ್ದ. ಸ್ವಾತಂತ್ರ್ಯ ಚಳುವಳಿಯು ಕೇವಲ ಸಾಧನ ಮಾತ್ರವಾಗಿರಲಿಲ್ಲ. ಸಾಧನದ ಜೊತೆಗೆ ಅದು ಗುರಿಯೂ ಆಗಿತ್ತು. ಏಕೆಂದರೆ ಸ್ವಾತಂತ್ರ್ಯ ಚಳುವಳಿಯು ಸ್ವಾಭಿಮಾನದ ಸಂಕೇತವಾಗಿತ್ತು. ಅಧಿಕಾರವನ್ನು ಧಿಕ್ಕರಿಸುವ ಪ್ರತಿಭಟನೆಯಾಗಿತ್ತು. ಅದೊಂದು ಜೀವನ ದರ್ಶನವಾಗಿತ್ತು. ಸ್ವಾತಂತ್ರ್ಯ ಚಳುವಳಿಯು ತನ್ನಷ್ಟಕ್ಕೆ ತಾನೆ ಮಹತ್ವವಾಗಿತ್ತು.

ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಸ್ವಾತಂತ್ರ್ಯ ಚಳುವಳಿಯಲ್ಲಿ ಮಹತ್ವದ ಕಾರ್ಯ ನಿರ್ವಹಿಸಿದರು. ಮಹಾತ್ಮ ಗಾಂಧೀಜಿಯವರು ಹೇಳುತ್ತಿದ್ದಂತೆ ಬ್ರಿಟಿಷರನ್ನು ದೇಶದಿಂದ ಹೊರಗೋಡಿಸುವುದು ಮಾತ್ರವೇ ಚಳುವಳಿಯ ಉದ್ದೇಶವಾಗಿರಲಿಲ್ಲ. ಅಂದರೆ ಗಾಂಧೀಜಿ

ಯವರಿಗೆ ಸ್ವಾತಂತ್ರ್ಯಾನಂತರದ ಭಾರತದ ಬಗ್ಗೆಯೂ ಕಾಳಜಿಯಿತ್ತು. ಕನಸುಗಳಿದ್ದವು. ಅಸ್ಪೃಶ್ಯತೆ, ಕೋಮುವಾದ, ಪಶ್ಚಿಮದ ಕುರುಡು ಅನುಕರಣೆ, ಅಸಮಾನತೆ, ಬಡತನ, ನಿರಕ್ಷರತೆ ಮುಂತಾದವು ಬ್ರಿಟಿಷರ ನಿರ್ಗಮನದಿಂದ ಪರಿಹಾರವಾಗಿ ಬಿಡುತ್ತವೆ ಎಂಬುದರ ಬಗ್ಗೆ ಗಾಂಧೀಜಿಯವರಿಗೆ ನಂಬಿಕೆಯಿರಲಿಲ್ಲ. ಅದಕ್ಕಾಗಿಯೇ ಅವರು ಸ್ವಾತಂತ್ರ್ಯ ಚಳುವಳಿಯನ್ನು ಮತ್ತು ರಚನಾತ್ಮಕ ಕಾರ್ಯಕ್ರಮ- ಸಮಾಜ ಸುಧಾರಣೆಗಳನ್ನು ಒಂದರೊಡನೊಂದು ಬೆಸೆದಿದ್ದರು. ಸ್ವಾತಂತ್ರ್ಯ ಚಳುವಳಿಗಾರರೆಲ್ಲರಿಗೂ ಸ್ವತಂತ್ರ ಭಾರತದ ಬಗ್ಗೆ ಕನಸುಗಳಿದ್ದವು.

ಜನರ ಬದುಕು ಸ್ವಾತಂತ್ರ್ಯಾನಂತರ ಉತ್ತಮಗೊಳ್ಳುತ್ತದೆಯೆಂದೂ, ರಾಜ್ಯಶಕ್ತಿ ಸಮಾಜದ ಕಣ್ಣು-ಕಿವಿಯಾಗುತ್ತದೆಯೆಂದೂ, ಜನರ ನೋವು ಸಂಕಟಗಳಿಗೆ ಸ್ಪಂದಿಸುವ ಅಧಿಕಾರಶಾಹಿ ಇರುತ್ತದೆಯೆಂದೂ ಸ್ವಾತಂತ್ರ್ಯ ಹೋರಾಟಗಾರರು ನಂಬಿದ್ದರು. ಗಾಂಧೀಜಿಯವರ ರಾಮರಾಜ್ಯದ ಕನಸು ಅಮೂರ್ತವಾಗಿಯಾದರೂ ಜನರ ಮನಸ್ಸಿನಲ್ಲಿತ್ತು.

ಭಾರತಕ್ಕೆ ಸ್ವಾತಂತ್ರ್ಯ ಬಂದು ಇಂದಿಗೆ ೫೦ ವರ್ಷಗಳಾದವು. ಭಾರತದ ಸ್ವಾತಂತ್ರ್ಯಕ್ಕಾಗಿ ಅಪಾರ ತ್ಯಾಗ ಮಾಡಿದ, ಬಲಿದಾನ ಮಾಡಿದ ಅನೇಕರು ಇಂದು ನಮ್ಮೊಂದಿಗಿದ್ದಾರೆ. ಸ್ವಾತಂತ್ರ್ಯಾನಂತರ ಭಾರತವು ಹಿಡಿದ ದಾರಿ, ತಲುಪಿದ ಗುರಿಗಳ ಬಗ್ಗೆ ಸ್ವಾತಂತ್ರ್ಯ ಚಳುವಳಿಗಾರರ ಅಭಿಪ್ರಾಯವೇನು? ಜನರ ನೋವು- ಸಂಕಟಗಳಿಗೆ ಸ್ಪಂದಿಸುವಂಥಹ ಅಧಿಕಾರಶಾಹಿ ರೂಪುಗೊಂಡಿದೆಯೆ? ರಾಜ್ಯಶಕ್ತಿಯು ಸಮಾಜದ ಕಣ್ಣು -ಕಿವಿಯಾಗಿ ಕೆಲಸ ಮಾಡುತ್ತಿದೆಯೆ? ರಾಮರಾಜ್ಯದ ಕನಸು ಕನಸಾಗಿಯೆ ಇದೆಯೆ ಅಥವಾ ನನಸಾಗಿದೆಯೆ? ಇಂತಹ ಹತ್ತಾರು ಪ್ರಶ್ನೆಗಳ ಬಗ್ಗೆ ನಮಗೆ ಕುತೂಹಲವಿತ್ತು. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ನಾವು ಸಂದರ್ಶಿಸಿದ ಬಂಕ್ಯಾ ಮಿಕ್ಕ ಸ್ವಾತಂತ್ರ್ಯ ಚಳುವಳಿಗಾರರಿಗೂ ಅವರ ಕನಸಿನ ಭಾರತದ ಬಗ್ಗೆ ಪ್ರಶ್ನಿಸಲಾಯಿತು. ಸ್ವಾತಂತ್ರ್ಯ ಹೋರಾಟಗಾರರ ಪೀಳಿಗೆ ಕಣ್ಮರೆಯಾಗುತ್ತಿದೆ. ನಾವು ಸಂದರ್ಶಿಸಿದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅನೇಕರು ಭಾರತದ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ಆತಂಕಗೊಂಡಿದ್ದಾರೆ. ಅನೇಕರು ತುಂಬಾ ವಿಷಾದದಿಂದ ದೇಶದ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯ ಬಗ್ಗೆ ನೊಂದು ಮಾತನಾಡಿದರು. ಸಮಾಜದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರದ ಬಗ್ಗೆ ಅನೇಕರು ಆತಂಕ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಹೋರಾಟಗಾರರಲ್ಲಿ ಬಹುಪಾಲು ಇಂದಿನ ಯುವಜನತೆ, ವಿದ್ಯಾರ್ಥಿ ಸಮುದಾಯ ಹಿಡಿದ ದಾರಿಯ ಬಗ್ಗೆ ತಮ್ಮ ವ್ಯಾಕುಲತೆಯನ್ನು ವ್ಯಕ್ತಪಡಿಸಿದರು. ನಾವು ಸಂದರ್ಶಿಸಿದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅನೇಕರು ಅನೇಕ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬಸ್ಸಿಮಟ್ಟಿ ಲಂಕೆಪ್ಪನವರು ಸ್ವಾತಂತ್ರ್ಯ ಹೋರಾಟಗಾರರ ಮಕ್ಕಳಿಗೆ ಮತ್ತು ಮೊಮ್ಮಕ್ಕಳಿಗೆ ಸರ್ಕಾರಿ ಕೆಲಸಗಳಲ್ಲಿ ಮೀಸಲಾತಿ ನೀಡಬೇಕು ಎಂದು ಕೇಳುತ್ತಾರೆ. ಇಂದಿನ ರಾಜಕಾರಣಿಗಳ ವ್ಯವಹಾರದ ಬಗ್ಗೆ ಮಾತನಾಡುತ್ತಾ ಅವರನ್ನು ಕಂಡರೆ ತಿರಸ್ಕಾರದ ಭಾವನೆ ಮೂಡುತ್ತದೆ ಎನ್ನುತ್ತಾರೆ.

ಅಸುಂಡಿ ತಿರುಮಲರಾವ್‌ರವರು ಬೆಲೆ ಏರಿಕೆ ಬಗ್ಗೆ, ಜನಸಂಖ್ಯೆಯ ಮಿತಿಮೀರಿದ ಬೆಳವಣಿಗೆ ಬಗ್ಗೆ, ಭ್ರಷ್ಟಾಚಾರದ ಬಗ್ಗೆ ಕಳವಳ ವ್ಯಕ್ತ ಪಡಿಸಿದ್ದಾರೆ. ಸ್ವಾತಂತ್ರ್ಯ ಚಳುವಳಿಯು ಇಂದಿನ ಯುವಕರಿಗೆ ದಾರಿದೀಪವಾಗಬೇಕು ಎಂದು ಇವರು ಹೇಳಿದ್ದಾರೆ. ಮುಂದುವರಿದು ಇವರು 'ನನಗೆ ದೇಶ ಏನುಕೊಟ್ಟಿದೆ ಎಂದು ಕೇಳುವುದಕ್ಕೆ ಪ್ರತಿಯಾಗಿ ನಾನು ದೇಶಕ್ಕೆ ಏನು ಕೊಟ್ಟಿದ್ದೇನೆ' ಎಂದು ಕೇಳಿಕೊಳ್ಳಬೇಕು ಎಂದು ಅಮೇರಿಕೆಯ ಪ್ರಸಿದ್ಧ ಅಧ್ಯಕ್ಷ ಕೆನಡಿಯ ನುಡಿಗಳನ್ನು ನೆನಪಿಸಿದ್ದಾರೆ. ಕೊಟ್ಟೂರಿನ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಕೊಟ್ಟೂರಿನಲ್ಲಿ ಒಂದು 'ಸ್ವಾತಂತ್ರ್ಯ ಯೋಧರ ಸ್ಮಾರಕ' ನಿರ್ಮಿಸಬೇಕು ಎಂದು ಹೇಳಿದ್ದಾರೆ.

ಹರಪನಹಳ್ಳಿಯಲ್ಲಿರುವ ಎಚ್.ಎಮ್. ವೀರಭದ್ರಯ್ಯನವರು ದೇಶವು ದುರ್ಗತಿಯ ದಾರಿಹಿಡಿದಿರುವುದರ ಬಗ್ಗೆ ಬಹಳ ಖೇದ ವ್ಯಕ್ತ ಪಡಿಸಿದ್ದಾರೆ. ಸ್ವತಂತ್ರ ಭಾರತದಲ್ಲಿ ಬಂಗಾರದ ಹೊಗೆ ಹಾಯ ಬೇಕು ಎಂಬ ನಮ್ಮ ಕನಸು ನುಚ್ಚು ನೂರಾಗಿದೆ ಎಂದು ವಿಷಾದಿಸುತ್ತಾರೆ. ಹಗರಿಬೊಮ್ಮನಹಳ್ಳಿಯ ಹಾಲ್ದಾಳ್ ಕೊಟ್ರಪ್ಪನವರು ಸ್ವಾತಂತ್ರ್ಯ ಹೋರಾಟಗಾರರಿಗೆ ಮೀಸಲಾಗಿರುವ ಮಾಸಾಶನವನ್ನು ಸ್ವೀಕರಿಸುತ್ತಿಲ್ಲ. ಇವರು ಸ್ವಾತಂತ್ರ್ಯ ಹೋರಾಟಗಾರನೆಂದು ಸಮಾಜವು ನನ್ನನ್ನು ಗುರುತಿಸಿದರೆ ಅದೇ ತೃಪ್ತಿ ಎನ್ನುತ್ತಾರೆ. ಸರಿಯಾದ ಮಾರ್ಗದರ್ಶನವಿಲ್ಲದೆ ದೇಶದ ಯುವಕರು ಅತಂತ್ರರಾಗಿದ್ದಾರೆ ಎಂಬುದು ಇವರ ಅಭಿಪ್ರಾಯವಾಗಿದೆ. ಇವರು ಸ್ವಾತಂತ್ರ್ಯಾ ನಂತರ ಸಮಾಜ ಸೇವೆಯಲ್ಲಿ ನಿರತರಾಗಿದ್ದಾರೆ. ೧೯೮೭ರಿಂದ ಇವರು ಪ್ರತಿವರ್ಷ ಸ್ವಂತ ಖರ್ಚಿನಲ್ಲಿ ಉಚಿತ ಸಾಮೂಹಿಕ ವಿವಾಹ ಸಮಾರಂಭ ಏರ್ಪಡಿಸುತ್ತಾ ಬಂದಿದ್ದಾರೆ.

ಅಧ್ಯಾಪಕ ಹುದ್ದೆಗೆ ರಾಜೀನಾಮೆ ನೀಡಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆ ವಾಸ ಅನುಭವಿಸಿ ಇಂದು ಬಳ್ಳಾರಿಯಲ್ಲಿ ನಿವೃತ್ತಿ ಜೀವನ ನಡೆಸುತ್ತಿರುವ ಕೆ. ಚಿದಾನಂದ ಶಾಸ್ತ್ರಿಗಳು ಸ್ವಾತಂತ್ರ್ಯೋತ್ತರ ಭಾರತದ ಬಗ್ಗೆ ಹೀಗೆ ಬರೆಯುತ್ತಾರೆ:

'ಸ್ವಾತಂತ್ರ್ಯ ಚಳುವಳಿ ಕಾಲದಲ್ಲಿ ನೈತಿಕತೆ ಇತ್ತು. ಇಂದು ಶಿಕ್ಷಕರು ವಿದ್ಯಾರ್ಥಿಗಳಿಗೆ ನೈತಿಕ ಪಾಠ ಕಲಿಸಬೇಕು. ನೈತಿಕ ಅಧಃಪತನಕ್ಕಿಂತ ಇನ್ನೊಂದು ದುರಂತವಿಲ್ಲ'.

ಮತ್ತೊಬ್ಬ ಸ್ವಾತಂತ್ರ್ಯ ಹೋರಾಟಗಾರ ಬಿಂಧು ಮಾಧವ ಮಾಸ್ತರ ಹೇಳುತ್ತಾರೆ "ಬ್ರಿಟಿಷರು ನಿಜಕ್ಕೂ ಸಮರ್ಥ ಆಡಳಿತಗಾರರು. ನಮ್ಮವರು ಅಂತಹ ಯೋಗ್ಯತೆಯನ್ನು ಇನ್ನೂ ಸಂಪಾದಿಸಬೇಕಾಗಿದೆ. ಬಾವುಟ ಹಾರಿಸಿದರೆ ಮಾತ್ರ ಸಾಲದು. ಗಾಂಧಿ ಸಿದ್ಧಾಂತ, ಗ್ರಾಮರಾಜ್ಯ, ರಾಮರಾಜ್ಯ ಸ್ಥಾಪನೆಗೆ ಇಂದು ನಾವು ಶ್ರಮಿಸಬೇಕಾಗಿದೆ".

ಸರ್ಕಾರಿ ನೌಕರಿಗೆ ರಾಜೀನಾಮೆ ನೀಡಿ ೧೯೪೨ ರ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿ, ಜೈಲು ಶಿಕ್ಷೆ ಅನುಭವಿಸಿರುವ ಎ. ಕರಿವೀರಪ್ಪನವರು ಸ್ವಾತಂತ್ರ್ಯಾನಂತರವೂ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಟ ಮಾಡುತ್ತಲೇ ಇದ್ದಾರೆ. ಸ್ವಾತಂತ್ರ್ಯಾನಂತರವೂ ಭ್ರಷ್ಟಾಚಾರದ ವಿರುದ್ಧ ಇವರು ಸಮರ ಸಾರಿದ್ದಾರೆ. ಪ್ರವಾಹದ ವಿರುದ್ಧ ಈಜುವ ಸಾಹಸಿ,

ನಿಷ್ಠುರವಾದಿ ಕರಿವೀರಪ್ಪನವರು ಅನೇಕ ಕಷ್ಟ- ನಷ್ಟಗಳಿಗೆ ಒಳಗಾಗಿದ್ದಾರೆ. ಇವರ ಹೋರಾಟ ಮನೋಭಾವದಿಂದಾಗಿ ಇವರಿಗೆ ರಾಜ್ಯ ಸರ್ಕಾರದ ಮಾಸಾಶನವು ೧೯೭೪ರಲ್ಲಿ ಬರುವುದಕ್ಕೆ ಪ್ರತಿಯಾಗಿ ೧೯೮೨ರಲ್ಲಿ ಬಂತು. ಲಂಚ ನೀಡದಿದ್ದ ಕಾರಣಕ್ಕೆ ೩ ವರ್ಷ ಮಾಸಾಶನ ನಷ್ಟವಾಯಿತು. ಬಳ್ಳಾರಿಯಲ್ಲಿ 'ಸ್ವಾತಂತ್ರ್ಯ ಯೋಧರ ವಿಶ್ರಾಂತಿ ಭವನ' ನಿರ್ಮಿಸಲು ಇವರು ಪ್ರಯತ್ನಿಸುತ್ತಿದ್ದಾರೆ. ಆದರೆ ಮಂತ್ರಿಗಳ ಸಹಾಯವು ದೊರೆಯುತ್ತಿಲ್ಲ. ಅತ್ಯಂತ ನಿರಾಶಾಭಾವದಿಂದ ಎ.ಕರಿವೀರಪ್ಪನವರು ದೇಶದ ಸ್ಥಿತಿಗತಿ ಬಗ್ಗೆ ಹೀಗೆ ಬರೆಯುತ್ತಾರೆ:

"ಸ್ವಾತಂತ್ರ್ಯ ಚಳುವಳಿ ಕಾಲದಲ್ಲಿ ಜೈಲಿನಲ್ಲಿದ್ದಾಗ ಸ್ವಾತಂತ್ರ್ಯಾನಂತರದ ಗಾಂಧೀಜಿ ರಾಮರಾಜ್ಯದ ಕನಸು ನನಸಾಗುತ್ತದೆ ಎಂದು ಭಾವಿಸಿದ್ದೆ. ಬಡತನ, ನಿರಕ್ಷರತೆ, ದುರ್ಭಿಕ್ಷ ಕಳೆದು ಸಮಾನತೆ ಬಂದು, ದೇಶದಲ್ಲಿ ಹಾಲಿನ ಹೊಳೆ- ಜೇನಿನ ಮಳೆ -ಬಂಗಾರದ ಹೊಗೆ ಹಾಯುತ್ತದೆ ಎಂದು ಕೊಂಡಿದ್ದೆ. ಆದರೆ ಅಧಿಕಾರಿಗಳು, ರಾಜಕಾರಣಿಗಳ ಲಂಚಗುಳಿತನ, ಭ್ರಷ್ಟಾಚಾರಗಳ ಸುಳಿಗೆ ಸಿಕ್ಕಿ ದೇಶ ಕಣ್ಣೀರಿಡುತ್ತಿದೆ".

ಬಿ.ಎಂ. ಮರುಳ ಸಿದ್ದಯ್ಯನವರು ೧೯೪೨ ರಲ್ಲಿ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲೇ 'ಕನ್ನಡ', 'ಕರ್ನಾಟಕ ಏಕೀಕರಣ'ಕ್ಕಾಗಿ ಹೋರಾಟ ನಡೆಸಿದರು. ೧೯೩೯ ರಲ್ಲಿ ಇವರು ಆಕಾಶವಾಣಿ (ಮದರಾಸು) ಯಲ್ಲಿ ಸಮಾಚಾರವನ್ನು ಕನ್ನಡದಲ್ಲೂ ಬಿತ್ತರಿಸುವಂತೆ ಬೇಡಿಕೆಯಿಟ್ಟು ಹೋರಾಟ ನಡೆಸಿದರು. ೧೯೪೬ ರಲ್ಲಿ ಹಂಪಿಯಲ್ಲಿ ಆಂಧ್ರ ಪರಿಷತ್ ಸಮ್ಮೇಳನವೊಂದನ್ನು ನಡೆಸಿದಾಗ ಅದನ್ನು ಇವರು ಪ್ರತಿಭಟಿಸಿದರು. ಬಿ.ಎಂ. ಮರುಳ ಸಿದ್ದಯ್ಯನವರು ಆಂಧ್ರ ಪರಿಷತ್ತು ನಡೆಸಿದ ಹಂಪಿ ಅಧಿವೇಶನವನ್ನು ಪ್ರತಿಭಟಿಸಿದ್ದನ್ನು ೧೯೪೬-೧೯೪೭ ರ 'ಜರ್ನಲ್ ಆಫ್ ದಿ ಆಂಧ್ರ ಹಿಸ್ಟಾರಿಕಲ್ ರಿಸರ್ಚ್ ಸೊಸೈಟಿ' ಪತ್ರಿಕೆಯಲ್ಲಿ ಉಲ್ಲೇಖಗೊಂಡಿದೆ.

ಹೀಗೆ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಸ್ವಾತಂತ್ರ್ಯಾನಂತರವೂ ಹೋರಾಟ ಮುಂದುವರಿಸಿದ್ದಾರೆ. ದೇಶದ ಸ್ಥಿತಿಗತಿಗಳ ಬಗ್ಗೆ ಆತಂಕಗೊಂಡಿದ್ದಾರೆ. ಭ್ರಷ್ಟಾಚಾರದ ಬಗ್ಗೆ ರೊಚ್ಚಿಗೆದ್ದಿದ್ದಾರೆ. ಅನೇಕರು ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಬಿಂಧು ಮಾಧವ ಮಾಸ್ತರರು ಹಾಗೂ ವೆಂಕಟರಮಣಾಚಾರ್ ಅವರುಗಳು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ನಿಸ್ವಾರ್ಥ ಭಾವದಿಂದ ಬಳ್ಳಾರಿಯಲ್ಲಿರುವ 'ಗಾಂಧೀ ಭವನ'ವನ್ನು ನೋಡಿಕೊಂಡು ಹೋಗುತ್ತಿದ್ದಾರೆ. ಹೊಸಪೇಟೆಯ ಬೆಲ್ಲದ ಚೆನ್ನಪ್ಪನವರು ಸ್ವಾತಂತ್ರ್ಯ ಹೋರಾಟದ ನಂತರ ರೈತರ ಹೋರಾಟವನ್ನು ಸಂಘಟಿಸಿದರು.

ಸ್ವಾತಂತ್ರ್ಯ ಹೋರಾಟಗಾರರ ಹೋರಾಟದ ಮನೋಭಾವದಿಂದ ಇಂದಿನ ಯುವ ಜನತೆ ಪಾಠಕಲಿಯಬೇಕಾಗಿದೆ. ಅನ್ಯಾಯದ ವಿರುದ್ಧ ಹೋರಾಡುವುದು ಪ್ರತಿಯೊಬ್ಬನ ಕರ್ತವ್ಯವಾಗಬೇಕು. ಬಳ್ಳಾರಿ ನಗರದಲ್ಲಿರುವ 'ಗಾಂಧಿಭವನ' ದಲ್ಲಿ ಮಲ್ಲಸಜ್ಜನ ವ್ಯಾಯಾಮ

ಶಾಲೆ ಇದೆ. ಇದು ೧೯೩೩ ರಲ್ಲಿ ಪ್ರಾರಂಭವಾಯಿತು. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಇದು ರಾಷ್ಟ್ರೀಯ ಜಾಗೃತಿಯ ಕೇಂದ್ರವಾಗಿತ್ತು. ಸ್ವಾತಂತ್ರ್ಯ ನಂತರ ಇದು ಬಳ್ಳಾರಿ ನಗರದಲ್ಲಿ ವೈಚಾರಿಕತೆ ಮೂಡಿಸುವ ಕಾರ್ಯದಲ್ಲಿ ನಿರತವಾಗಿದೆ. ಮಲ್ಲಸಜ್ಜನ ವ್ಯಾಯಾಮ ಶಾಲೆಯ ಸ್ಥಾಪಕರಲ್ಲಿ ಒಬ್ಬರಾದ ಡಾ. ಅಮರಪ್ಪ ಗದಗರವರು ಬಳ್ಳಾರಿಯ ಮಲ್ಲಸಜ್ಜನ ವ್ಯಾಯಾಮ ಶಾಲೆಯು ದೇಶದ ಆಶಾಕಿರಣವಾಗಿದೆ ಎಂದಿದ್ದಾರೆ.

೮. ಕೊನೆಯ ಮಾತು

ಭಾರತದ ಸ್ವಾತಂತ್ರ್ಯದ ಸುವರ್ಣೋತ್ಸವದ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟದ ವರ್ಣಮಯ ಚರಿತ್ರೆಯನ್ನು ನೆನಪಿಸಿಕೊಳ್ಳುವುದು ಇಂದಿನ ತಲೆಮಾರಿನ ಕರ್ತವ್ಯವಾಗಿದೆ. ಸ್ವಾತಂತ್ರ್ಯ ಹೋರಾಟದ ಚರಿತ್ರೆಯ ಅಧ್ಯಯನದಿಂದ ಇಂದಿನ ತಲೆಮಾರು ಅನೇಕ ಪಾಠಗಳನ್ನು ಕಲಿಯಬಹುದಾಗಿದೆ. ಸೂರ್ಯಮುಳುಗದ ಸಾಮ್ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಬ್ರಿಟಿಷ್ ಆಧಿಪತ್ಯವನ್ನು ಮಣಿಸಿದ ಸ್ವಾತಂತ್ರ್ಯ ಹೋರಾಟದ ಅದ್ಭುತ ಚರಿತ್ರೆಗೆ ವಿಶ್ವದಲ್ಲಿ ಅನನ್ಯವಾದ ಸ್ಥಾನ ದೊರೆತಿದೆ.

ಬ್ರಿಟಿಷರು ಬಳ್ಳಾರಿ ಜಿಲ್ಲೆಯನ್ನು ೧೪೭ ವರ್ಷಗಳ ಕಾಲ ಆಳಿದರು(ಕ್ರಿ.ಶ.೧೮೦೦ರಿಂದ ೧೯೪೭ರವರೆಗೆ). ಈ ೧೪೭ವರ್ಷಗಳ ಆಳ್ವಿಕೆ ಕಾಲಾವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಜನರು ನಾನಾ ರೀತಿಯಲ್ಲಿ ಹೋರಾಟ ನಡೆಸಿದರು. ಬಳ್ಳಾರಿ ಜಿಲ್ಲೆಯು ಒಂದು ದ್ವಿಭಾಷಾ ಗಡಿಜಿಲ್ಲೆಯಾಗಿದೆ. ಕನ್ನಡ ಭಾಷಿಕರು ಮತ್ತು ತೆಲುಗು ಭಾಷಿಕರು ಅನೇಕ ಶತಮಾನಗಳ ಕಾಲ ಪರಸ್ಪರ ಸಹಕಾರ ಮತ್ತು ಸೌಹಾರ್ದತೆಯಿಂದ ಬದುಕು ನಡೆಸಿದ ಚರಿತ್ರೆ ಬಳ್ಳಾರಿ ಜಿಲ್ಲೆಗಿದೆ. ತೆಲುಗು ಭಾಷಿಕರು ಬಹುಸಂಖ್ಯಾತರಿದ್ದ ಆಲೂರು, ಆದವಾನಿ ಹಾಗೂ ರಾಯದುರ್ಗ ತಾಲ್ಲೂಕುಗಳು ಬಳ್ಳಾರಿ ಜಿಲ್ಲೆಯಿಂದ ನೆರೆಯ ಆಂಧ್ರರಾಜ್ಯಕ್ಕೆ ವರ್ಗಾಯಿಸಲ್ಪಟ್ಟಿವೆ. ಆದರೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಭಾಷಾಂಧತೆಯನ್ನು ಮರೆತು ಅಖಂಡ ಬಳ್ಳಾರಿ ಜಿಲ್ಲೆ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿತು. ಈ ಕಾರಣದಿಂದಾಗಿ ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯು ರಾಷ್ಟ್ರೀಯ ಭಾವೈಕ್ಯತೆಯ ಒಂದು ಹೆಗ್ಗುರುತಾಗಿದೆ.

ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವು ಅನೇಕ ವಿಶಿಷ್ಟತೆಗಳಿಂದ ಕೂಡಿದ ಒಂದು ಹೋರಾಟದ ವೀರಗಾಥೆಯಾಗಿದೆ. ಅದರ ವಿಶಿಷ್ಟತೆಗಳನ್ನು ಹೀಗೆ ಗುರುತಿಸಬಹುದಾಗಿದೆ.

ಮೊದಲನೆಯದಾಗಿ, ಸ್ವಾತಂತ್ರ್ಯ ಹೋರಾಟದ ಆರಂಭವನ್ನು ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಕ್ರಿ.ಶ.೧೮೮೫ಕ್ಕೆ ಒಯ್ಯಬಹುದಾಗಿದೆ. ಅಖಿಲ ಭಾರತ ಮಟ್ಟದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಸಂಘಟಿಸಿದ್ದು ಕಾಂಗ್ರೆಸ್ ಸಂಸ್ಥೆ ಎನ್ನುವುದಾದರೆ ಹಾಗೂ ಅದು ಸ್ಥಾಪನೆಯಾದ ವರ್ಷದಲ್ಲಿ ನಡೆದ ಅಧಿವೇಶನದಲ್ಲಿ ಬಳ್ಳಾರಿ ಪ್ರತಿನಿಧಿಗಳು ಭಾಗವಹಿಸಿದ್ದರು ಎನ್ನುವುದಾದರೆ,

ಬಳ್ಳಾರಿ ಜಿಲ್ಲೆಯಲ್ಲಿನ ಸ್ವಾತಂತ್ರ್ಯ ಹೋರಾಟದ ಆರಂಭವನ್ನು ಖಚಿತವಾಗಿ ೧೮೮೫ಕ್ಕೆ ಒಯ್ಯಬಹುದಾಗಿದೆ. ಕಾಂಗ್ರೆಸ್‌ನ ಪ್ರಥಮ ಅಧಿವೇಶನದಲ್ಲಿ ಇಡೀ ದೇಶದಿಂದ ಕೇವಲ ೭೨ ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಆ ೭೨ ಜನರಲ್ಲಿ ಬಳ್ಳಾರಿ ಪ್ರತಿನಿಧಿಗಳೂ ಇದ್ದರು ಎಂಬುದು ನಿಜಕ್ಕೂ ಹೆಮ್ಮೆಯ ಸಂಗತಿಯಾಗಿದೆ. ಈ ದೃಷ್ಟಿಯಿಂದ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವು ವಿಶಿಷ್ಟ ಮಹತ್ವ ಪಡೆದಿದೆ.

ಎರಡನೆಯದಾಗಿ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಚರಿತ್ರೆಯ ಅಧ್ಯಯನವು ರಾಷ್ಟ್ರೀಯ ಭಾವೈಕ್ಯತೆಯ ಸಂಕೇತವಾಗಿದೆ. ಇಂದು ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳು ಆಂಧ್ರಪ್ರದೇಶಕ್ಕೆ ಸೇರಿಹೋಗಿವೆ. ಆದರೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಜಿಲ್ಲೆಯು ಅಖಂಡವಾಗಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿತು. ಇಂದು ಆಂಧ್ರ ರಾಜ್ಯದಲ್ಲಿ ಸೇರಿ ಹೋಗಿರುವ ಆಲೂರು, ಆದವಾನಿ ಹಾಗೂ ರಾಯದುರ್ಗ ತಾಲ್ಲೂಕುಗಳು ನಡೆಸಿದ ಸ್ವಾತಂತ್ರ್ಯ ಹೋರಾಟ ಬಳ್ಳಾರಿ ಜಿಲ್ಲೆಯ ಉಳಿದ ತಾಲ್ಲೂಕುಗಳು ನಡೆಸಿದ ಸ್ವಾತಂತ್ರ್ಯ ಹೋರಾಟಕ್ಕಿಂತ ಯಾವುದೇ ದೃಷ್ಟಿಯಿಂದ ಕಡಿಮೆಯಾದುದಲ್ಲ. ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವ ದಿಶೆಯಲ್ಲಿ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಅಧ್ಯಯನವು ಮಹತ್ವವಾದುದಾಗಿದೆ.

ಮೂರನೆಯದಾಗಿ, ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವು ನಿಜವಾದ ಅರ್ಥದಲ್ಲಿ ಜನಾಂದೋಳನವಾಗಿತ್ತು. ಜಾತಿ, ಮತ, ಧರ್ಮ, ವರ್ಗ, ವರ್ಣ, ಭಾಷೆ, ಪ್ರದೇಶ -ಮುಂತಾದ ಎಲ್ಲ ಬಗೆಯ ಭಿನ್ನ-ಭೇದಗಳನ್ನು ಮರೆತು ಜನರು ಐಕ್ಯಮತ್ಯದಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. ಆರಂಭದಲ್ಲಿ ಉನ್ನತ ವರ್ಗದ ಪ್ರಾಬಲ್ಯವಿದ್ದಂತೆ ಕಂಡುಬಂದರೂ ಮುಂದೆ ಬಳ್ಳಾರಿ ಜಿಲ್ಲೆಯಲ್ಲಿನ ಸ್ವಾತಂತ್ರ್ಯ ಹೋರಾಟವು ಸಮಾಜದ ಎಲ್ಲ ವರ್ಗಗಳನ್ನೂ ತನ್ನ ತೆಕ್ಕೆಗೆ ಎಳೆದುಕೊಂಡಿತ್ತು. ಕೊಟ್ಟೂರಿನಂತಹ ಸಣ್ಣ ಊರು ಜಿಲ್ಲೆಯಲ್ಲಿ ನೂರಾರು ಕಾರ್ಯಕರ್ತರನ್ನು ತಯಾರು ಮಾಡುವ ಕೇಂದ್ರವಾಗಿಬಿಟ್ಟಿತು. ಇದೇನೂ ಸಣ್ಣ ಸಂಗತಿಯಲ್ಲ. ಕೊಟ್ಟೂರಿನ 'ದೀನ ಸೇವಾ ಸಂಘ'ದ ಚಟುವಟಿಕೆಗಳಿಂದ ಪ್ರೇರಣೆ ಪಡೆದು ಮತ್ತು ಗೋರ್ಲಿ ಶರಣಪ್ಪ, ಕೆ.ಗೌಡಪ್ಪನವರುಗಳ ಮಾರ್ಗದರ್ಶನದಿಂದಾಗಿ 'ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಂಡೆ' ಎಂದು ಹೇಳುವ ನೂರಾರು ಸ್ವಾತಂತ್ರ್ಯ ಹೋರಾಟಗಾರರು ನಮಗೆ ಬಳ್ಳಾರಿ ಜಿಲ್ಲೆಯಲ್ಲಿ ದೊರೆಯುತ್ತಾರೆ. ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವು 'ಸಮೂಹ ಸ್ವರೂಪಿ'ಯಾಗಿತ್ತು.

ನಾಲ್ಕನೆಯದಾಗಿ, ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವು ಮೂಲಭೂತವಾಗಿ 'ಗಾಂಧಿವಾದಿ' ಸ್ವರೂಪದ್ದಾಗಿತ್ತು. ಇದರಿಂದಾಗಿಯೇ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದಷ್ಟೆ ಮಹತ್ವವನ್ನು ಕಾಂಗ್ರೆಸ್ ಕಾರ್ಯಕರ್ತರು ಸಮಾಜ ಸುಧಾರಣೆ ಮತ್ತು ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮಗಳಿಗೂ ನೀಡಿದರು. ಈ ಜಿಲ್ಲೆಯಲ್ಲಿ ವಿಧವಾ ವಿವಾಹಗಳು ಈ ಶತಮಾನದ ಮೊದಲ ದಶಕದಲ್ಲಿಯೇ ಚಳುವಳಿಯೋಪಾದಿಯಲ್ಲಿ ಪ್ರಾರಂಭವಾದವು. ಈ

ದಿಶೆಯಲ್ಲಿ ಕೋಲಾಚಲಂ ವೆಂಕಟರಾವ್‌ರವರ ಕಾಣಿಕೆಯು ಪ್ರಶಂಸನೀಯವಾಗಿದೆ. ಕೋಲಾಚಲಂ ವೆಂಕಟರಾವ್ ರವರು ಈ ವಿಷಯದಲ್ಲಿ ವೀರೇಶಲಿಂಗಂ ಪಂತುಲು ಅವರಿಂದ ಪ್ರಭಾವಿತಗೊಂಡಿದ್ದರು. ಜಿಲ್ಲೆಯ ಪ್ರಮುಖ ಕಾರ್ಯಕರ್ತರುಗಳಾದ ಗೋರ್ಲಿ ಶರಣಪ್ಪ, ಎಂ.ಎನ್.ಮೃತ್ಯುಂಜ ಶಾಸ್ತ್ರಿಗಳು, ಮಲೆಬೆನ್ನೂರು ಸತ್ಯವಂತರಾವ್, ಬುರ್ಲಿ ಶೇಷಣ್ಣ ಮುಂತಾದವರು ವಿಧವೆಯರನ್ನು ವಿವಾಹವಾಗಿ ಸಮಾಜಕ್ಕೆ ಆದರ್ಶಪ್ರಾಯರಾಗಿದ್ದರು. ಹರಿಜನರ ಸುಧಾರಣೆಗೆ ಸಂಬಂಧಪಟ್ಟಂತೆ ಅನೇಕ ಚಟುವಟಿಕೆಗಳು ಜಿಲ್ಲೆಯಲ್ಲಿ ನಡೆದವು. ಈ ವಿಷಯದಲ್ಲೂ ಕೊಟ್ಟೂರಿನ ಕಾಣಿಕೆ ಅದ್ವಿತೀಯವಾದುದಾಗಿದೆ. ೧೯೩೦ರ ದಶಕದಲ್ಲಿಯೇ ಹಿರಿಯರ ಮತ್ತು ಪಾಲಕರ ವಿರೋಧವನ್ನು ಲೆಕ್ಕಿಸದೆ ಕೆ.ಗೌಡಪ್ಪನವರು ಹರಿಜನ ಕೇರಿಯಲ್ಲಿ ಶಾಲೆಯನ್ನು ನಡೆಸಿದರು. ಇವರಿಗೆ ಹೆಗಲುಕೊಟ್ಟು ಗೋರ್ಲಿಶರಣಪ್ಪನವರು ದುಡಿದರು. ಹರಿಜನ ಸೇವಾ ಸಂಘದ ಅಧ್ಯಕ್ಷರಾಗಿದ್ದ ಬಳ್ಳಾರಿ ರಾಘವರವರು ಹರಿಜನ ಬಾಲಕನೊಬ್ಬನನ್ನು ದತ್ತು ತೆಗೆದುಕೊಂಡು ಪೋಷಿಸಿದರು ಎನ್ನಲಾಗಿದೆ. ಟಿ.ಬಿ.ಕೇಶವರಾವ್ ಮತ್ತು ಜಯಲಕ್ಷ್ಮಿಬಾಯಿ ದಂಪತಿಗಳು ಸಹ ಒಬ್ಬ ಹರಿಜನ ಬಾಲಕನನ್ನು ದತ್ತು ತೆಗೆದುಕೊಂಡು ಬೆಳೆಸಿದರು ಎಂದು ಹೇಳಲಾಗಿದೆ.

ಖಾದಿ ಉತ್ಪಾದನೆ, ಖಾದಿ ಮಾರಾಟ, ಖಾದಿಪ್ರಚಾರಗಳನ್ನು ಜಿಲ್ಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಗಂಭೀರವಾಗಿ ತೆಗೆದುಕೊಂಡರು. ಜಿಲ್ಲೆಯಲ್ಲಿನ ಸಣ್ಣ ಗ್ರಾಮವಾದ ಕುರುಗೋಡುವಿನಲ್ಲಿ ಮರಿಬಸವನಗೌಡರು ಮತ್ತು ತಂಗಿ ಮಲ್ಲೇಶಪ್ಪನವರುಗಳು ಖಾದಿ ಕೇಂದ್ರವನ್ನಾಗಿ ಬೆಳೆಸಿದರು. ಇವರು ಪ್ರಾರಂಭಿಸಿದ ಕೆಲಸವನ್ನು ಮುಂದೆ ಚಂದ್ರಶೇಖರಾಚಾರ್ ಮತ್ತು ರಾಮಚಂದ್ರಗುಪ್ತ ಅವರುಗಳು ಮುಂದುವರಿಸಿದರು. ಆದವಾನಿ ತಾಲ್ಲೂಕಿನ ಪೆದ್ದ ಕಡಬೂರಿನಲ್ಲಿ ಐಯ್ಯಪ್ಪ ರೆಡ್ಡಿಗಾರಿ ವೆಂಕಟರೆಡ್ಡಿ ಮತ್ತು ರಾಮಲಿಂಗಮ್ಮನವರ ನೇತೃತ್ವದಲ್ಲಿ ಭಾರದ್ವಾಜ ಆಶ್ರಮ ಪ್ರಾರಂಭವಾಯಿತು. ಅಲ್ಲಿ ಖಾದಿ ಉತ್ಪಾದನೆ, ಕೈಯಲ್ಲಿ ತಯಾರಿಸುವ ಕಾಗದ ಮುಂತಾದ ಚಟುವಟಿಕೆಗಳನ್ನು ಕೈಗೊಳ್ಳಲಾಯಿತು.

ಐದನೆಯದಾಗಿ ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟವು ಸಾಮಾನ್ಯವಾಗಿ ಭಾವಿಸಿರುವಂತೆ ಅಗಸ್ಟ್ ೧೫, ೧೯೪೭ಕ್ಕೆ ಮುಗಿಯಲಿಲ್ಲ. ಸ್ವಾತಂತ್ರ್ಯಾನಂತರ ಬಳ್ಳಾರಿ ಜಿಲ್ಲೆಯಲ್ಲಿ ಸಂಡೂರು ದೇಶೀಯ ರಾಜಸಂಸ್ಥಾನದ ವಿಲೀನದ ಪ್ರಶ್ನೆ ಉದ್ಭವಿಸಿತು. ಅದಕ್ಕಾಗಿ ಸ್ವಾತಂತ್ರ್ಯಾನಂತರ ಸಂಡೂರಿನಲ್ಲಿ ಚಳುವಳಿ ತೀವ್ರವಾಯಿತು. ಸಂಡೂರು ಅರಸರ ಮೇಲೆ ತೀವ್ರ ಒತ್ತಡ ಹೇರಲಾಯಿತು. ಕೊನೆಗೆ ೧೯೪೮ರಲ್ಲಿ ಸಂಡೂರು ಭಾರತ ಗಣರಾಜ್ಯದಲ್ಲಿ ವಿಲೀನವಾಯಿತು. ಸಂಡೂರು ಬಳ್ಳಾರಿ ಜಿಲ್ಲೆಯ ಒಂದು ಪ್ರತ್ಯೇಕ ತಾಲ್ಲೂಕಾಯಿತು.

ಸಂಡೂರು ದೇಶೀಯ ರಾಜ ಸಂಸ್ಥಾನದ ವಿಲೀನದಲ್ಲಿ ಬಳ್ಳಾರಿ ಜಿಲ್ಲೆಯು ಪ್ರಮುಖ ಪಾತ್ರವಹಿಸಿದಂತೆ ಹೈದರಾಬಾದ್ ವಿಮೋಚನಾ ಚಳುವಳಿಯಲ್ಲೂ ಬಳ್ಳಾರಿ ಜಿಲ್ಲೆಯು ತನ್ನದೇ ಆದ ಪಾತ್ರ ನಿರ್ವಹಿಸಿತು. ಹೈದರಾಬಾದ್ ನಿಜಾಮನ ಸಂಸ್ಥಾನದ ಮೇಲೆ ನಡೆದ ಪೋಲೀಸು

ಕಾರ್ಯಾಚರಣೆ ಸಂದರ್ಭದಲ್ಲಿ ಭಾರತೀಯ ಸೈನ್ಯದ ಒಂದು ತುಕಡಿಯು ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮೂಲಕ ನಿಜಾಮನ ಪ್ರದೇಶವಾದ ಮುನಿರಾಬಾದಿನ ಮೇಲೆ ಆಕ್ರಮಣ ನಡೆಸಿತು. ಈ ಕಾರ್ಯದಲ್ಲಿ ಜಿಲ್ಲೆಯ ನಾಗರಿಕರು ಅನೇಕ ಬಗೆಯಲ್ಲಿ ಮಿಲಿಟರಿಗೆ ಸಹಾಯ ಒದಗಿಸಿದರು. ರಜಾಕಾರರ ಹಾವಳಿಯಿಂದ ಮನೆ-ಮಠ ಕಳೆದುಕೊಂಡು ಸಂಸ್ಥಾನದ ಭಾಗದಿಂದ ಬಂದ ಜನರಿಗೆ ಪರಿಹಾರ ಒದಗಿಸುವ ಸಲುವಾಗಿ ಬಳ್ಳಾರಿ ಜಿಲ್ಲೆಯ ಬಾಚಿಗೊಂಡನಹಳ್ಳಿಯಲ್ಲಿ ಚನ್ನಬಸವನಗೌಡರ ನೇತೃತ್ವದಲ್ಲಿ ಶಿಬಿರವನ್ನು ಸಂಘಟಿಸಲಾಗಿತ್ತು.

ಹೀಗೆ ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವು ಅನೇಕ ವಿಭಿನ್ನತೆಗಳನ್ನು-ವಿಶಿಷ್ಟತೆಗಳನ್ನು ಮೆರೆದಿದೆ. ಈ ವಿಶಿಷ್ಟತೆಯ ವಿವರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ದಾಖಲಿಸಲಾಗಿದೆ. ಸಮಾಜ-ವಿಜ್ಞಾನಗಳಲ್ಲಿ ವಾಡಿಕೆಯಲ್ಲಿರುವ ಅಧ್ಯಯನ ವಿಧಾನವನ್ನು ಇಲ್ಲಿ ಅಳವಡಿಸಿಕೊಂಡಿರುವುದರಿಂದ ಇಲ್ಲಿನ ವಿವರಗಳು ಅತ್ಯಂತ ವರ್ಣರಹಿತವಾಗಿಯೂ, ಶುಷ್ಕವಾಗಿಯೂ, ಅನಾಕರ್ಷಣೀಯವಾಗಿಯೂ ಕಂಡುಬರುತ್ತವೆ. ನಾವು ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯ ಒಂದು ತುಣುಕನ್ನು ಇಲ್ಲಿ ಮಂಡಿಸುತ್ತಿದ್ದೇವೆ. ಇದರಿಂದಾಗಿ ಭಾಷಾ ಶೈಲಿಯು ಅನಾಕರ್ಷಣೀಯವಾಗಿದೆ. ನಾವು ಭಾವಿಸಿರುವಂತೆ ಇಂತಹ ಬರಹಗಳಲ್ಲಿ ಉತ್ಪ್ರೇಕ್ಷೆಗೆ ಹಾಗೂ ವೈಭವೀಕರಣಕ್ಕೆ ಅವಕಾಶವಿರುವುದಿಲ್ಲ.

ಮನುಷ್ಯ ಪ್ರಯತ್ನದಿಂದ ಏನನ್ನೂ ಸಾಧಿಸಬಹುದೆಂದು ಭಾರತದ ಸ್ವಾತಂತ್ರ್ಯ ಹೋರಾಟವು ಇಡೀ ಜಗತ್ತಿಗೆ ತೋರಿಸಿಕೊಟ್ಟಿತು. ಭಾರತದ ಸ್ವಾತಂತ್ರ್ಯ ಹೋರಾಟದಿಂದ ಭಾರತವೇ ಕಲಿಯಬೇಕಾದ ಪಾಠಗಳು ಬಹಳಷ್ಟಿವೆ. ಬಹುಮುಖ್ಯವಾಗಿ ಭಾರತ ಕಲಿಯಬೇಕಾದ ಪಾಠವೆಂದರೆ ಮನುಷ್ಯ ಪ್ರಯತ್ನದಲ್ಲಿ ಹೆಚ್ಚಿನ ವಿಶ್ವಾಸವಿಡುವುದು. ಧರ್ಮಸಂಸ್ಥಾಪನೆಗಾಗಿ ಯಾವುದೋ ದೇವಮಾನವನ ಬರವಿಗಾಗಿ ಕಾಯುವುದು ನಿರರ್ಥಕ. ಧರ್ಮವನ್ನು ಪ್ರತಿಷ್ಠಾಪಿಸಬೇಕಾದವನು ಮತ್ತು ಅಧರ್ಮವನ್ನು ನೀಗಬೇಕಾದವನು ಮನುಷ್ಯನೇ ವಿನಾ ದೈವವಲ್ಲ. 'ಪ್ರಾರಬ್ಧಕ್ಕಿಂತ ಪ್ರಯತ್ನವೇ ಮಿಗಿಲು' ಎಂಬುದನ್ನು ಭಾರತದ ಸ್ವಾತಂತ್ರ್ಯ ಹೋರಾಟವು ತೋರಿಸಿಕೊಟ್ಟಿತು.

ಎಂಥಹ ಮನುಷ್ಯ ಪ್ರಯತ್ನ ಅದು!

ಸ್ವಾತಂತ್ರ್ಯ ಹೋರಾಟದಲ್ಲಿ ಭಾರತವು ನಡೆಸಿದ ಪ್ರಯತ್ನವು ಅಭೂತಪೂರ್ವವಾಗಿತ್ತು. ಅದು ಗಾಂಧೀಜಿ ಪ್ರಯತ್ನವಾಗಿತ್ತು. ಅದೊಂದು ಸಾತ್ವಿಕತೆಯ ತೇಜೋಪುಂಜವಾಗಿತ್ತು. ಅಸ್ತ್ರವಿಲ್ಲ, ಶಸ್ತ್ರವಿಲ್ಲ, ಗುಂಡಿಗೆ ಬಂದೂಕಿಗೆ ಎದೆಯೊಡ್ಡುವ ಹೋರಾಟ ಅದಾಗಿತ್ತು. ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯು ಅಧರ್ಮವಾಗಿತ್ತು. ನಾಗರಿಕತೆಗೆ ತಟ್ಟಿದ್ದ ಕಳಂಕ ಅದಾಗಿತ್ತು. ಈ ಬಗೆಯ ಕಳಂಕ-ಅಧರ್ಮದ ವಿರುದ್ಧ ಹೋರಾಟವೇ ಸ್ವಾತಂತ್ರ್ಯ ಹೋರಾಟವಾಗಿತ್ತು. ಎಂತಹ ಹೋರಾಟ ಅದಾಗಿತ್ತು! ಸೂರ್ಯಮುಳುಗದ ಸಾಮ್ರಾಜ್ಯವನ್ನು ಮಣಿಸಿದ ಹೋರಾಟ ಅದಾಗಿತ್ತು.

ಈ ಬಗೆಯ ಹೋರಾಟಕ್ಕೆ-ಪ್ರಯತ್ನಕ್ಕೆ ಬಳ್ಳಾರಿ ಜಿಲ್ಲೆಯು ತನ್ನದೇ ಆದ ಕಾಣಿಕೆ ಸಲ್ಲಿಸಿದೆ. ಅದರ ವೀರಗಾಥೆಯನ್ನು ಇಲ್ಲಿ ಹಾಡಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಸ್ಥೂಲ ಚರಿತ್ರೆಯನ್ನು ಇಲ್ಲಿ ದಾಖಲಿಸಲಾಗಿದೆ. ಕ್ರಿ.ಶ.೧೮೮೫ರಿಂದ ೧೯೪೭ರ ವರೆಗೆ ವಿವಿಧ ಹಂತಗಳಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ವಿವರಗಳನ್ನು ಇಲ್ಲಿ ನೋಡಬಹುದಾಗಿದೆ. ಮುಖ್ಯವಾಗಿ ಐದು ಕಾಲಘಟ್ಟಗಳಲ್ಲಿ ಸ್ವಾತಂತ್ರ್ಯ ಹೋರಾಟದ ವೀರಗೀತೆಯನ್ನು ಹಾಡಲಾಗಿದೆ.

೧) ೧೮೦೦ ರಿಂದ ೧೮೮೫ರ ವರೆಗೆ ಮೊದಲನೆಯ ಘಟ್ಟ. ಇದು ಸ್ವಾತಂತ್ರ್ಯ ಹೋರಾಟದ ಘಟ್ಟವಲ್ಲ. ಆದರೆ ಸ್ವಾತಂತ್ರ್ಯ ಹೋರಾಟದ ಪೂರ್ವಭಾವಿ ಸಿದ್ಧತೆ ಈ ಕಾಲ ಘಟ್ಟದಲ್ಲಿ ನಡೆಯಿತು.

೨) ೧೮೮೫ ರಿಂದ ೧೯೨೦ರ ವರೆಗೆ -ಇದು ಎರಡನೆಯ ಕಾಲಘಟ್ಟ. ಇಲ್ಲಿ ಕಾಂಗ್ರೆಸ್ ನ ಸಂಸ್ಥಾಪನಾ ಅಧಿವೇಶನದಲ್ಲಿ(೧೮೮೫) ಬಳ್ಳಾರಿಯ ಪ್ರತಿನಿಧಿಗಳು ಭಾಗವಹಿಸಿದ್ದು, ಕೋಲಾಚಲಂ ವೆಂಕಟರಾವ್ ರವರು ೧೯೧೬ರಲ್ಲಿ 'ರೈಟ್ ಆನರಬಲ್' ಪ್ರಶಸ್ತಿಯನ್ನು ಬ್ರಿಟಿಷ್ ಚಕ್ರವರ್ತಿಗೆ ಹಿಂತಿರುಗಿಸಿದ್ದು, ಅವರು ಕೈಗೊಂಡ ಅನೇಕ ಸಮಾಜಸುಧಾರಣಾ ಕಾರ್ಯಕ್ರಮಗಳು ಇತ್ಯಾದಿ ಈ ಭಾಗದಲ್ಲಿ ಮಂಡಿತವಾಗಿದೆ.

೩) ಅಸಹಕಾರಯುಗ-೧೯೨೦ರಿಂದ ೧೯೩೦ರ ವರೆಗಿನ ಕಾಲಘಟ್ಟ. ಈ ಕಾಲಘಟ್ಟದಲ್ಲಿ ಅನಂತಪುರ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಸೇರಿದ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಹೇಗೆ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಸಂಚಾರ ಮಾಡಿ ಜನಜಾಗೃತಿ ಉಂಟುಮಾಡಿದರು ಎಂಬುದರ ವಿವರಣೆ ಇದೆ. ೧೯೨೧ರಲ್ಲಿ ಬಳ್ಳಾರಿಗೆ ಗಾಂಧೀಜಿಯವರು ನೀಡಿದ ಭೇಟಿಯ ವಿವರಗಳು ಇಲ್ಲಿವೆ.

೪) ಸವಿನಯ ಕಾಯಿದೆ ಭಂಗ ಚಳುವಳಿ: ೧೯೩೦ರಿಂದ ೧೯೪೦ರ ವರೆಗಿನ ಕಾಲಘಟ್ಟ.

೧೯೨೦ರ ಹೊತ್ತಿಗೆ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವು ಜಿಲ್ಲಾ ಕೇಂದ್ರದಿಂದ ತಾಲ್ಲೂಕು ಕೇಂದ್ರಗಳಿಗೆ ಮತ್ತು ಗ್ರಾಮಾಂತರ ಪ್ರದೇಶಕ್ಕೆ ಹರಡುತ್ತಿತ್ತು. ಸ್ವಾತಂತ್ರ್ಯ ಹೋರಾಟವು ಜನಾಂದೋಳನ ನಿಜ ಸ್ವರೂಪವನ್ನು ಪಡೆದುಕೊಳ್ಳುತ್ತಿತ್ತು. ಕೊಟ್ಟೂರು, ಕುರುಗೋಡು, ರೇಕಟ್ಲಾ, ಪೆದ್ದಕಡಬೂರು ಮುಂತಾದ ಸಣ್ಣಪುಟ್ಟ ಹಳ್ಳಿಗಳೂ ಸಹ ಸ್ವಾತಂತ್ರ್ಯ ಹೋರಾಟದ ಕೇಂದ್ರಗಳಾಗಿ ರೂಪುಗೊಂಡವು. ಈ ಎಲ್ಲಾ ವಿವರಗಳನ್ನೂ ಇಲ್ಲಿ ಕಾಣಬಹುದಾಗಿದೆ.

೫) ೧೯೪೨ರ ಭಾರತ ಬಿಟ್ಟು ತೊಲಗಿ ಚಳುವಳಿಯ ಕಾಲಘಟ್ಟ.

ಇದು ಭಾರತದ ಸ್ವಾತಂತ್ರ್ಯ ಹೋರಾಟದ ತುರಿಯಾವಸ್ಥೆಯಾಗಿದೆ. ಈ ಚಳುವಳಿಯ ಸಂದರ್ಭದಲ್ಲಿ ಇಡೀ ದೇಶವು ವಿರಾಟ ಪುರುಷನ ರೂಪದಲ್ಲಿ ಎದ್ದು ನಿಂತು ಹೋರಾಟ ನಡೆಸಿತು.

ಬಳ್ಳಾರಿ ಜಿಲ್ಲೆಯ ಪ್ರತಿಯೊಂದೂ ಹಳ್ಳಿಯಲ್ಲೂ ಈ ಚಳುವಳಿ ಆಸ್ಫೋಟಗೊಂಡಿತು. ಬಳ್ಳಾರಿ ಜಿಲ್ಲೆಯಲ್ಲಿ ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿ ಹೇಗೆ ನಡೆಯಿತು ಎಂಬುದರ ವಿವರವನ್ನು ಇಲ್ಲಿ ನೋಡಬಹುದು.

ಭಾರತದ ಸ್ವಾತಂತ್ರ್ಯ ಹೋರಾಟದ ವಿಶೇಷತೆಯೆಂದರೆ ಅದು ಹೋರಾಟದ ಜೊತೆ ಸಮಾಜ ಸುಧಾರಣೆಯನ್ನು ಅಂತರ್ಗತ ಮಾಡಿಕೊಂಡಿತ್ತು. ಬಳ್ಳಾರಿ ಜಿಲ್ಲೆಯಲ್ಲೂ ಸಹ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅನೇಕ ಬಗೆಯ ಸಮಾಜ ಸುಧಾರಣಾ ಕಾರ್ಯಗಳೂ ನಡೆದವು. ವಿಧವಾ ವಿವಾಹಗಳು, ಹರಿಜನರ ಸುಧಾರಣೆ, ಅಸ್ಪೃಶ್ಯತಾ ನಿವಾರಣೆ, ಪಾನನಿಷೇಧ, ಮುಂತಾದವುಗಳನ್ನು ಸ್ವಾತಂತ್ರ್ಯ ಹೋರಾಟಗಾರರು ಕೈಗೊಂಡರು. ಬಳ್ಳಾರಿ ಜಿಲ್ಲೆಯಲ್ಲೂ ಸಮಾಜ ಸುಧಾರಣಾ ಕಾರ್ಯ ತೀವ್ರಗತಿಯಲ್ಲಿ ನಡೆಯಿತು.

ಅನುಬಂಧ

ಸಂಡೂರು ಸಂಸ್ಥಾನದ ವಿಲೀನ

ಭಾರತವು ೧೫-೮-೧೯೪೭ರಂದು ಸಂಭ್ರಮದಿಂದ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿತು. ಆದರೆ ಇಡೀ ದೇಶದಲ್ಲಿ ಇದ್ದ ೬೦೦ಕ್ಕೂ ಮಿಕ್ಕೂ ದೇಶೀಯ ಸಂಸ್ಥಾನಗಳ ಪ್ರಶ್ನೆ ಬಗೆಹರಿದಿರಲಿಲ್ಲ. ಕನ್ನಡ ಭಾಷಾ ಪ್ರದೇಶಗಳಲ್ಲಿ ಸುಮಾರು ೧೮ ದೇಶೀಯ ಸಂಸ್ಥಾನಗಳಿದ್ದವು. ದೇಶೀಯ ಸಂಸ್ಥಾನಗಳಲ್ಲಿ ಮೈಸೂರು, ಹೈದರಾಬಾದ್ ಮುಂತಾದವು ದೊಡ್ಡ ಸಂಸ್ಥಾನಗಳಾಗಿದ್ದರೆ ಸವಣೂರು, ಜತ್ತ, ಮುಧೋಳ ಮುಂತಾದವು ಸಣ್ಣ ಸಂಸ್ಥಾನಗಳಾಗಿದ್ದವು. ಬಳ್ಳಾರಿ ಜಿಲ್ಲೆಯಲ್ಲಿ ಸಂಡೂರು ಸಂಸ್ಥಾನವು ಅಂತಹ ಒಂದು ಸಣ್ಣ ದೇಶೀಯ ಸಂಸ್ಥಾನವಾಗಿತ್ತು.

ಸಂಡೂರು ಸಂಸ್ಥಾನದ ವ್ಯಾಪ್ತಿಯಲ್ಲಿ ೩೩ ಹಳ್ಳಿಗಳಿದ್ದವು. ಈ ಸಂಸ್ಥಾನದ ಜನಸಂಖ್ಯೆ ಕೇವಲ ೧೫ ಸಾವಿರ. ಪ್ರಾಕೃತಿಕವಾಗಿ ಮತ್ತು ಭೌಗೋಳಿಕವಾಗಿ ಸಂಡೂರು ಸಂಸ್ಥಾನವು ರುದ್ರ-ಮನೋಹರ ಪರಿಸರವನ್ನು ಹೊಂದಿತ್ತು. ಅತ್ಯಂತ ದುರ್ಗಮವಾದ ಬೆಟ್ಟಗುಡ್ಡಗಳ ನಡುವೆ ಅದು ನೆಲೆಸಿತ್ತು. ಸಂಡೂರು ಸಂಸ್ಥಾನವನ್ನು ಪ್ರವೇಶಿಸಲು ಅಂದು ಕೇವಲ ಎರಡು ಮಾರ್ಗಗಳಿದ್ದವು. ೧. ಗುಂಡಿ ನರಸಿಂಹಸ್ವಾಮಿ ಮಾರ್ಗ, ೨. ಬಳ್ಳಾರಿ ಮಾರ್ಗ.

ಸ್ವಾತಂತ್ರ್ಯ ಹೋರಾಟಗಾರರಾದ ಟಿ.ಬಿ. ಕೇಶವರಾಯರು ಹೇಳುವಂತೆ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಸಂಡೂರು ಸಂಸ್ಥಾನದಿಂದ ಹೊರಕ್ಕೆ ಅಥವಾ ಹೊರಗಡೆಯಿಂದ ಸಂಡೂರು ಸಂಸ್ಥಾನದೊಳಗೆ ಯಾರೂ ಪ್ರವೇಶಿಸದಂತೆ ನಿರ್ಬಂಧ ವಿಧಿಸಲಾಗಿತ್ತು. ಮಹಾರಾಜರ ಸರ್ಕಾರವು ದಮನಕಾರಿ ನೀತಿಗಳನ್ನು ಅನುಸರಿಸುತ್ತಿತ್ತು. ಸಂಸ್ಥಾನದಲ್ಲಿದ್ದ ಜನರು ಬ್ರಿಟಿಷ್ ಕರ್ನಾಟಕದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವಂತಿರಲಿಲ್ಲ. ಹೊರಗಿನಿಂದ ಸಂಸ್ಥಾನದೊಳಗೆ ಯಾವುದೇ ಸುದ್ದಿ-ಸಮಾಚಾರ ಪ್ರಸಾರವಾಗದಂತೆ ಬಂದೋಬಸ್ತು ಮಾಡಲಾಗಿತ್ತು. ಸಂಸ್ಥಾನದಲ್ಲಿ ನಡೆಯುತ್ತಿದ್ದ ದಮನಕಾರಿ ಆಳ್ವಿಕೆಯ ಸುದ್ದಿಯೂ ಹೊರಗೆ ಹೋಗುವಂತಿರಲಿಲ್ಲ. ಡಾ. ಎಸ್.ಬಿ. ಷರಾಫ್ ರವರ ನೇತೃತ್ವದಲ್ಲಿ ಸಂಡೂರು ರಾಜರ ವಿರುದ್ಧ ೧೯೩೦-೩೧ರಲ್ಲಿ ಚಳುವಳಿ ನಡೆಯಿತು. ಡಾ. ಷರಾಫರು ಸಂಸ್ಥಾನದಲ್ಲಿ ಜೈಲು ವಾಸ ಕೂಡ ಅನುಭವಿಸಿದರು.

ಇಡೀ ಭಾರತದಲ್ಲಿ ಸಂಸ್ಥಾನಿಕ ಅರಸರ ಆಡಳಿತದ ವಿರುದ್ಧ ನಡೆಯುತ್ತಿದ್ದ ಆಂದೋಳನವು ಸಂಡೂರು ಸಂಸ್ಥಾನಕ್ಕೂ ಹರಡಿತು. ಸಂಡೂರು ಸಂಸ್ಥಾನದ ಮಹಾರಾಜರ ಆಳ್ವಿಕೆ ವಿರುದ್ಧ ಯತ್ನಟ್ಟಿ (ತಾರಾನಗರ) ಮತ್ತು ಹೊಸಳ್ಳಿ (ಭುಜಂಗನಗರ)ಗಳಲ್ಲಿ ಜನರು ಸಿಡಿದೆದ್ದರು. ಇಡೀ ಸಂಸ್ಥಾನದಲ್ಲಿ ಮಹಾರಾಜರಿಗೆ ಇವೆರಡೂ ಹಳ್ಳಿಗಳೂ ತಲೆನೋವಾಗಿದ್ದವು. ೧೯೩೭ರಲ್ಲಿ ಕುಮಾರಸ್ವಾಮಿ ದೇವಸ್ಥಾನದ ೧೩ ಹಳ್ಳಿಗಳಿಗೆ ಸೇರಿದ್ದ ಜಮೀನನ್ನು (ಸುಮಾರು ೪೦೦೦ ಎಕರೆ) ಮಹಾರಾಜರು ತಮ್ಮದೆಂದು ಘೋಷಿಸಿಕೊಂಡಾಗ ಯತ್ನಟ್ಟಿಯ ಎಂ. ಶರಭಯ್ಯನವರು ರೈತರನ್ನು ಸಂಘಟಿಸಿ ಆಂದೋಳನ ನಡೆಸಿದರು. ಈ ಕಾರಣಕ್ಕಾಗಿ ಅವರು ಜೈಲು ಶಿಕ್ಷೆ ಕೂಡ ಅನುಭವಿಸಿದರು. ಸಂಡೂರು ಸಂಸ್ಥಾನದ ಮಹಾರಾಜರ ವಿರುದ್ಧ ಹೋರಾಟ ನಡೆಸುತ್ತಿದ್ದ ಮನೆತನಗಳೆಂದರೆ ಷರಾಫ್ ಮನೆತನ, ಜೋಜ ಮನೆತನ ಹಾಗೂ ಪೋತನೀಸ್ ಮನೆತನ. ಈ ಮನೆತನಗಳ ಹಿರಿಯರೆಲ್ಲರೂ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಕೊಟ್ಟೂರು-ಕೂಡ್ಲಿಗಿಗಳಲ್ಲಿ ನಡೆಯುತ್ತಿದ್ದ ಸಭೆ-ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು.

ಸಂಸ್ಥಾನದೊಳಗೆ ರಾಜನ ದಮನಕಾರಿ ಆಡಳಿತದಿಂದ ಬೇಸತ್ತ ಪ್ರಜೆಗಳು ಪ್ರಜಾಪ್ರಭುತ್ವಕ್ಕಾಗಿ ಹಾತೊರೆಯುತ್ತಿದ್ದರು. ಹೆಣ್ಣು ಮಕ್ಕಳು ಕೂಡ ರಾಜ್ಯದ ದೌರ್ಜನ್ಯಕ್ಕೆ ಬಲಿಯಾಗಿದ್ದರು. ಸಂಸ್ಥಾನದಿಂದ ಹೊರಗೆ ಮತ್ತು ಸಂಸ್ಥಾನದೊಳಗೆ ಪ್ರವೇಶ-ಸಂಚಾರ ನಿಷೇಧ ಹೇರಲಾಗಿತ್ತು. ಇದರಿಂದಾಗಿ ಯಜಮಾನ್ ಶಾಂತರುದ್ರಪ್ಪನವರು ಬಳ್ಳಾರಿ ಭಾಗದಿಂದಲೇ ಹೋರಾಟ ನಡೆಸಿದರು. ಕ್ರಾಂತಿಕಾರಿ ಕರಪತ್ರಗಳನ್ನು ಸಂಸ್ಥಾನದೊಳಗೆ ಹಂಚಿದರು. ಇಂತಹ ವಿದ್ರೋಹದಲ್ಲಿ ನಿರತರಾಗಿದ್ದ ಶಾಂತರುದ್ರಪ್ಪನವರಿಗೆ ಹಣ-ಅಧಿಕಾರದ ಆಮಿಷಗಳನ್ನು ತೋರಿಸಿ ಬಾಯಿ ಮುಚ್ಚಿಸಲು ಮಹಾರಾಜರು ಪ್ರಯತ್ನಿಸಿದರು.

ಭಾರತ ಗಣರಾಜ್ಯದಲ್ಲಿ ಸಂಡೂರು ಸಂಸ್ಥಾನವನ್ನು ವಿಲೀನಗೊಳಿಸಲಿಕ್ಕಾಗಿ ನಡೆದ ಹೋರಾಟದಲ್ಲಿ ಕೆಳಕಂಡ ಹೋರಾಟಗಾರರು ಭಾಗವಹಿಸಿದ್ದರು:

ಯತ್ನಟ್ಟಿ (ತಾರಾನಗರ)ಯ

ಯಜಮಾನ್ ಶಾಂತರುದ್ರಪ್ಪ	ನಾಗಲಾಪುರದ ಸಿದ್ದರಾಮಯ್ಯ
ಅಂಗಡಿ ಶರಭಯ್ಯ	ಎಸ್.ವೈ. ಸೋಮನಗೌಡರು
ಉಳ್ಳಾಗಡ್ಡಿ ಕರಿಯಪ್ಪ	
ಬಾವಿಕಟ್ಟಿ ಮರಿಬಸಪ್ಪ	
ಕೃಷ್ಣಾನಗರದ ಎಲಿಗಾರ ತಿಮ್ಮಪ್ಪ	

ಭುಜಂಗ ನಗರದ (ಹೊಸಳ್ಳಿ)

ಗುರುಶಾಂತಯ್ಯ	ನಾಗನಗೌಡ
ಅರಳಿಕಲ್ ಕುಮಾರಪ್ಪ	ಪೋತನೀಸ ರಾಮರಾವ

ಮಹಾಲಿಂಗಪ್ಪ ಬೋಜ ಅಡಿವೆಪ್ಪ
ಕಾಲೆ ಸುಬ್ಬಣ್ಣ ಗಿರಿಮಲ್ಲಪ್ಪ

ಇವರೆಲ್ಲರೂ ಸಂಡೂರು ಮಹಾರಾಜರಿಗೆ ಸೇರಿದ್ದ 'ಸಂಡೂರು ಸ್ಟೇಟ್ ಸೆಲ್'ನಲ್ಲಿ ಶಿಕ್ಷೆ ಅನುಭವಿಸಿದರು. ಜೈಲಿನಲ್ಲಿ ಪ್ರಭುತ್ವ ಸರಬರಾಜು ಮಾಡುತ್ತಿದ್ದ ಆಹಾರವನ್ನು ಇವರು ಸೇವಿಸದೆ ಪ್ರತಿಭಟಿಸಿದರು. ಜೈಲಿನಲ್ಲಿದ್ದ ಹೋರಾಟಗಾರರು ಊರಿನ ಮಂದಿ ನೀಡುತ್ತಿದ್ದ ಬುತ್ತಿಯನ್ನು ಸೇವಿಸುತ್ತಿದ್ದರು.

೧೯೪೮ರಲ್ಲಿ ಸಂಸ್ಥಾನದಲ್ಲಿ ಪ್ರಜಾಪರಿಷತ್ತು ಸ್ಥಾಪನೆಯಾಯಿತು. ಅದರ ಅಧಿವೇಶನ ಯತ್ನಟ್ಟಿಯಲ್ಲಿ ನಡೆಯಿತು. ಕರ್ನಾಟಕ ರಾಜ್ಯದ ಧುರೀಣರುಗಳಾದ ಕೊಲ್ಲಾಪುರದ ರತ್ನಪ್ಪ ಕುಂಬಾರ, ತಲ್ಲೂರು ರಾಯನಗೌಡ, ಶಾಂತಿನಾಥ ಇಂಗಳೆ, ಮಹದೇವಪ್ಪ ಪಟ್ಟಣ, ಬಳ್ಳಾರಿ ಯಜಮಾನ್ ಶಾಂತರುದ್ರಪ್ಪ ಮುಂತಾದವರು ಅಧಿವೇಶನದಲ್ಲಿ ಭಾಗವಹಿಸಿದ್ದರು. ಸಂಡೂರು ಸಂಸ್ಥಾನವು ಭಾರತದಲ್ಲಿ ವಿಲೀನವಾಗಬೇಕು ಎಂದು ಯತ್ನಟ್ಟಿಯಲ್ಲಿ ನಡೆದ ಪ್ರಜಾಪರಿಷತ್ ನಿರ್ಣಯ ಮಾಡಿತು. ಈ ಎಲ್ಲಾ ಬೆಳವಣಿಗೆಗಳ ನಡುವೆ ಸರ್ದಾರ್ ಪಟೇಲರ ನೀತಿಗನುಗುಣವಾಗಿ ಸಂಡೂರು ಸಂಸ್ಥಾನವು ಭಾರತ ಗಣರಾಜ್ಯದಲ್ಲಿ ಏಪ್ರಿಲ್ ೧, ೧೯೪೯ರಂದು ವಿಲೀನವಾಯಿತು.

ಮೈಸೂರು ರಾಜ್ಯದಲ್ಲಿ ಸಂಡೂರಿನ ವಿಲೀನ

ಸಂಡೂರು ಸಂಸ್ಥಾನವು ಭಾರತ ಗಣರಾಜ್ಯದಲ್ಲಿ ವಿಲೀನಗೊಂಡ ನಂತರ ಅದು ಯಾವ ಪ್ರಾಂತಕ್ಕೆ ಸೇರಬೇಕು ಎಂಬ ಪ್ರಶ್ನೆ ಉದ್ಭವವಾಯಿತು. ಮದರಾಸು ಪ್ರಾಂತಕ್ಕೆ ಬದಲಾಗಿ ಮೈಸೂರು ಪ್ರಾಂತಕ್ಕೆ ಸೇರುವ ಅಪೇಕ್ಷೆಯನ್ನು ಸಂಡೂರು ಮಹಾರಾಜರು ವ್ಯಕ್ತಪಡಿಸಿದರು. ಇದಕ್ಕೆ ಮಹಾರಾಜರು ನೀಡಿದ ಕಾರಣಗಳು ಹೀಗಿವೆ:

೧. ಸಂಡೂರು ಮತ್ತು ಮೈಸೂರು ಸಂಸ್ಥಾನಗಳ ಗಡಿಗಳು ಪರಸ್ಪರ ಅಂಟಿಕೊಂಡಿವೆ.

೨. ಸಂಡೂರು ಮತ್ತು ಮೈಸೂರು ಸಂಸ್ಥಾನಗಳ ಪ್ರಜೆಗಳ ನಡುವೆ ಭಾಷಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿವೆ.

೩. ಖನಿಜ ಸಂಪತ್ತಿಗೆ ಸಂಬಂಧಿಸಿದಂತೆ ಮೈಸೂರು ಮತ್ತು ಸಂಡೂರು ಪರಸ್ಪರ ಗಣಿಗಾರಿಕೆ ಅಭಿವೃದ್ಧಿ ಪಡಿಸಬಹುದು.

ಹೀಗೆ ಸಂಡೂರು ಸಂಸ್ಥಾನವು ಭಾರತ ಗಣರಾಜ್ಯಕ್ಕೂ, ನಂತರ ಮೈಸೂರು ಪ್ರಾಂತಕ್ಕೂ ಸೇರಿಕೊಂಡಿತು. ಹೀಗೆ ಸೇರಿಕೊಂಡ ಸಂಡೂರು ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕಾಗಿ ರೂಪುಗೊಂಡಿತು.

ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದ ಸ್ವಾತಂತ್ರ್ಯ ಹೋರಾಟಗಾರರ ಪಟ್ಟಿ (ತಾಲ್ಲೂಕುವಾರು ಹಾಗೂ ಪರಿಷ್ಕೃತ)

ಆದವಾನಿ ತಾಲ್ಲೂಕು

೦೧) ಡಾ. ಕೃಷ್ಣಮೂರ್ತಿ	೧೯೪೧
೦೨) ಕೆ.ಗೋಪಾಲ ಶೆಟ್ಟಿ	೧೯೪೨
೦೩) ಗೋವಿಂದರಾವ್ ದೇಸಾಯಿ	೧೯೪೨
೦೪) ತಿಮ್ಮಯ್ಯ. ಟಿ.ಜಿ.ಎಲ್.	-''-
೦೫) ಬಲರಾಮಸಿಂಗ್ ಕೆ.	೧೯೪೧
೦೬) ಭೀಮಸೇನರಾವ್ ಎಂ (ಲ್ಯಾಂಗ್ಲಿ)	೧೯೨೦-೨೧
೦೭) ರಘುವೀರ ಸಿಂಗ್	೧೯೪೨
೦೮) ರಣಜಿತ್ ಸಿಂಗ್	೧೯೪೨
೦೯) ಎಸ್. ರಾಮರೆಡ್ಡಿ	-''-
೧೦) ಜಿ. ರಂಗಪ್ಪ	-''-
೧೧) ರಾಘವೇಂದ್ರರಾವ್	-''-
೧೨) ಡಾ। ಲಕ್ಷ್ಮಣ್	-''-
೧೩) ವಿಜಯ ರಾವ್	-''-
೧೪) ವಿಜಯಸಿಂಹ	-''-
೧೫) ವೆಂಕಟೇಶ್ವರ ರಾವ್	-''-
೧೬) ಐ.ವೆಂಕಟರೆಡ್ಡಿ ಪೆದ್ದಕಡಬೂರು	-''-
೧೭) ವೆಂಗಣ್ಣ	-''-
೧೮) ಸತ್ಯನಾರಾಯಣ.ಎಚ್.	-''-
೧೯) ಸಿದ್ದಯ್ಯ. ಎಂ.	-''-
೨೦) ಸೋಮಪ್ಪ ಎಸ್.ವೈ.	೧೯೪೨
೨೧) ಸೋಮಯಾಜುಲು	-''-
೨೨) ಹಾಲ್ವಿ ರಾಮಣ್ಣ	-''-

ಆಲೂರು ತಾಲ್ಲೂಕು

೦೧) ಅಕ್ಬರ್ ಸಾಹೇಬ್	೧೯೪೨
೦೨) ಅಯ್ಯಪ್ಪ ರೆಡ್ಡಿ	೧೯೪೨
೦೩) ಡಿ.ಗೋವಿಂದ ದಾಸ್	೧೯೪೧
೦೪) ಪಾಪನ್ನ ಚೌದರಿ	೧೯೪೨
೦೫) ಬಾಲಪ್ಪ	''-''

೦೬) ಬಸವನ ಗೌಡ ರಾಯದುರ್ಗ	''-''
೦೭) ನರಸಿಂಹ ರೆಡ್ಡಿ	೧೯೪೨
೦೮) ರಾಮಕೃಷ್ಣ ರೆಡ್ಡಿ	''-''
೦೯) ವೆಂಕಟೇಶ್ವರಾವ್ ಹತ್ತಿಬೆಳಗಲ್	೧೯೪೧
೧೦) ವೀರಭದ್ರಯ್ಯ ಮೊಗಲವೇಲಿ	೧೯೪೨
೧೧) ವೆಂಕಟಲಕ್ಷ್ಮೀ ರೆಡ್ಡಿ	''-''
೧೨) ವಡ್ಡೆ ರಾಮಣ್ಣ	''-''
೧೩) ಸೀತಾರಾಮರೆಡ್ಡಿ ನೇಮಗಲ್ಲು	''-''
೧೪) ಸಂಜೀವ ರೆಡ್ಡಿ	''-''
೧೫) ಸಿದ್ದರಾಮಪ್ಪ ನಗರಡೋಣ	''-''
೧೬) ಹನುಮಂತಪ್ಪ ನಾಯಕ ಬಿನ್ ಮಲ್ಲಯ್ಯ	೧೯೩೨

ಕೂಡ್ಲಿಗಿ ತಾಲ್ಲೂಕು

೦೧) ಅಡವಿ ಗೌಡ ಕೆ.ಎಸ್.	೧೯೪೧
೦೨) ಅಡವಿ ಬಸಪ್ಪ	೧೯೪೧
೦೩) ಅಕ್ಕಸಾಲಿ ಅಜ್ಜಣ್ಣ	೧೯೪೨
೦೪) ಅಗಡಿ ಗುರುಶಿದ್ದಯ್ಯ	೧೯೩೦
೦೫) ಅಗಡಿ ಸಣ್ಣಯ್ಯ	೧೯೪೨
೦೬) ಅಲಬೂರು ನಂಜಪ್ಪ	೧೯೪೨
೦೭) ಅಲಬೂರು ಸಿದ್ದಪ್ಪ	೧೯೪೨
೦೮) ಅಜ್ಜಯ್ಯ ಟಿ.ಹೆಚ್.ಎಂ.	೧೯೩೨
೦೯) ಅಗ್ನಿಹೋತ್ರಿ ಶಾಮಭಟ್ಟ	೧೯೩೨
೧೦) ಅಯ್ಯನ ಹಳ್ಳಿ ಚನ್ನವೀರಯ್ಯ	೧೯೩೧
೧೧) ಆನಂದಪ್ಪ ಕೆ.	೧೯೩೦
೧೨) ಆಲದಘಟ್ಟದ ರೇವಣ್ಣ	೧೯೪೨
೧೩) ಕಂಪ್ಲಿ ಕೊಟ್ರಪ್ಪ ಕೊಟ್ಟೂರು	೧೯೪೦-೪೨
೧೪) ಕಸೆಟ್ಟಿ ಕೊಟ್ರಪ್ಪ	೧೯೪೧
೧೫) ಕಜ್ಜಿ ಸಣ್ಣಲಿಂಗಪ್ಪ	೧೯೪೦-೪೧
೧೬) ಕೂಡ್ಲಿಗಿ ಕೃಷ್ಣಮೂರ್ತಿ	೧೯೪೨
೧೭) ಕೊಟ್ಟೂರು ಕೃಷ್ಣಮೂರ್ತಿ	೧೯೩೦
೧೮) ಕೊಟ್ಟೂರು ದೇವೇಂದ್ರಪ್ಪ	೧೯೩೦
೧೯) ಕೊಟ್ಟೂರು ಮಹದೇವಪ್ಪ ದಾಸನಪುರ	೧೯೪೦-೪೨

೨೦)ಕೊಟ್ರ ಬಸಯ್ಯ ಕೊಟ್ಟೂರು	೧೯೩೦
೨೧) ಕೊಟ್ರಬಸಪ್ಪ ಗುರು ಸಿದ್ದಪ್ಪ ಕೊಟ್ಟೂರು	೧೯೪೧
೨೨) ಗದುಗಿನ ಚನ್ನಬಸವ ಸ್ವಾಮಿ	೧೯೩೧
೨೩) ಗುರುಬಸಪ್ಪ ಕೊಟ್ಟೂರು	೧೯೩೦-೩೨
೨೪) ಗುರುಪಾದಪ್ಪ ಬಿ. ಕೊಟ್ಟೂರು	೧೯೩೦
೨೫) ಗುರುಲಿಂಗಪ್ಪ. ಟಿ.ಎಸ್.	೧೯೪೨
೨೬) ಗೂಳಪ್ಪಾ ಕೆ. ಉಜ್ಜನಿ	೧೯೪೨-೪೫
೨೭) ಗೋವಿಂದರಾವ್ ಎಸ್.	೧೯೪೨
೨೮) ಚಂದ್ರಪ್ಪ ಕೊಟ್ಟೂರು	೧೯೩೦-೩೨
೨೯) ಚೆನ್ನಬಸಯ್ಯ ಟಿ.ಎಂ.	೧೯೪೨
೩೦) ಚನ್ನಬಸಪ್ಪ. ಕೊ	೧೯೪೨
೩೧) ಚಲವಾದಿ ಹನುಮಪ್ಪ ಕೊಟ್ಟೂರು	೧೯೪೨
೩೨) ಜೀನಗಾರ ಸಣ್ಣ ತಮ್ಮಪ್ಪ	೧೯೪೨
೩೩) ಜೀನಗಾರ ಲಿಂಗಪ್ಪ	೧೯೪೨
೩೪) ತಿಮ್ಮಪ್ಪ ಬಿ. ಕ್ಷೌರಿಕ	೧೯೪೨
೩೫) ತಿಪ್ಪೆಸ್ವಾಮಿ ಎಸ್.ಟಿ.	೧೯೩೧
೩೬) ತಿಗರಿ ಅಂದಾನಪ್ಪ	೧೯೩೧
೩೭)ತೂಲಹಳ್ಳಿ ಗುರಪ್ಪ ಕೊಟ್ಟೂರು	೧೯೪೨
೩೮) ತೂಲಹಳ್ಳಿ ಶೆಟ್ರ ಗುರುಲಿಂಗಪ್ಪ	೧೯೪೨
೩೯) ತೊಪ್ಪಲ ಸಿದ್ದನಗೌಡ ಕೂಡ್ಲಿಗಿ	೧೯೪೨
೪೦) ದೇವರ ಮನೆ ಕರಿಯಪ್ಪ	೧೯೪೨
೪೧) ದೊಡ್ಡ ಸಿದ್ದಲಿಂಗನಗೌಡರು, ಉಜ್ಜನಿ	೧೯೪೨
೪೨) ನಾಯ್ಕರ ಭೀಮಪ್ಪ	೧೯೪೦
೪೩) ನಾರಾಯಣ ರಾವ್ ಎಂ	೧೯೪೨
೪೪) ನಾರಾಯಣರಾವ್ ಎಸ್. ಕೊಟ್ಟೂರು	೧೯೪೨
೪೫) ನೀಲಪ್ಪ	೧೯೪೨
೪೬) ನೇಲಕುದ್ರಿ, ದೇವಪ್ಪ ಹರಾಳು	೧೯೪೨
೪೭) ಪರಶುರಾಮ್ ಕೆ.	೧೯೩೦
೪೮) ಪೂಜಾರಿ ಉಜ್ಜಪ್ಪ	೧೯೪೨
೪೯) ಬಣಕಾರ ಕೆ.ಗೌಡಪ್ಪ	೧೯೩೦
೫೦) ಬಣಕಾರ ಸಿದ್ದಲಿಂಗಪ್ಪ ಕೊಟ್ಟೂರು	೧೯೩೧

೫೧) ಬಣಕಾರ ಸಣ್ಣಲಿಂಗಪ್ಪ	೧೯೪೨
೫೨) ಬಣಕಾರ ಕೆ.ಬಿ. ಚೋರನೂರು	೧೯೪೨
೫೩) ಬಡಗಿ ಸಿದ್ದಾಚಾರಿ	೧೯೪೨
೫೪) ಬಡಿಗೇರ ಭೀಮಪ್ಪ	೧೯೪೨
೫೫) ಬಸಪ್ಪ ಹೆಚ್.	
೫೬) ಬಸಯ್ಯ ಹೆಚ್ ಎಂ.	೧೯೪೨
೫೭) ಬಸವನಗೌಡ ದೇಸಾಯಿ ಹರಾಳು	೧೯೩೧
೫೮) ಬಸವರಾಜು ಅಯ್ಯನ ಹಳ್ಳಿ	೧೯೪೭
೫೯) ಬಿಂಧು ಮಾಧವ	೧೯೩೦
೬೦) ಬಸಟೆಪ್ಪ ಉಜ್ಜನಿ	೧೯೪೦-೪೨
೬೧) ಬಹದ್ದೂರು ಘಟ್ಟಿಯ ಬಸಪ್ಪ	೧೯೪೨
೬೨) ಭದ್ರಶೆಟ್ಟಿ ಸಣ್ಣ ರುದ್ರಪ್ಪ	೧೯೩೦
೬೩) ಭದ್ರ ಶೆಟ್ಟಿ ಕರಿವೀರಪ್ಪ	೧೯೩೧
೬೪) ಭದ್ರ ಶೆಟ್ಟಿ ಈರಪ್ಪ ಮಾಸ್ಟರ್	೧೯೩೧
೬೫) ಭರಮನ ಗೌಡ ಎಂ	೧೯೪೨
೬೬) ಭೀಮಪ್ಪ ಹನುಮಪ್ಪ	೧೯೩೨
೬೭) ಬೇವಿನಹಾಳು ತಿಮ್ಮಪ್ಪ	೧೯೪೨
೬೮) ಬೆಣಕಲ್ ಅಜ್ಜಯ್ಯ	೧೯೩೦
೬೯) ಬೊಮ್ಮನಹಳ್ಳಿ ಬಸಪ್ಪ	೧೯೪೨
೭೦) ಬೊಮ್ಮಲಿಂಗಯ್ಯ	೧೯೪೨
೭೧) ಮರುಳಪ್ಪ ಜಿ. ತೂಲಹಳ್ಳಿ	೧೯೪೨
೭೨) ಮಂಗಾಪುರದ ಗುರುಬಸಯ್ಯ	೧೯೩೦
೭೩) ಮಡಿವಾಳರ ಸಿದ್ದಪ್ಪ	೧೯೪೧
೭೪) ಮರುಳನ ಗೌಡ ಎಂ	೧೯೪೧
೭೫) ಮುನಿಯ ನಾಯಕ ಎಂ	೧೯೪೨
೭೬) ಮಂಗಾಪುರದ ಈಶ್ವರಯ್ಯ	೧೯೩೦-೩೧
೭೭) ಮೆದ್ದನ ಕೆರೆ ಕಲ್ಲಪ್ಪ	೧೯೪೨
೭೮) ಮೊರಗೇರಿ ಕೊಟ್ರಬಸಪ್ಪ	೧೯೩೦
೭೯) ಎಚ್.ಎಂ. ಕೊಟ್ರಯ್ಯ	೧೯೩೦
೮೦) ರಂಗಾರಿ ನಾರಾಯಣ ರಾವ್	೧೯೪೨
೮೧) ರಾಮಚಂದ್ರರಾವ್	೧೯೩೦
೮೨) ರಾಮಶೆಟ್ಟಿ	೧೯೪೧

೮೩) ರುದ್ರಪ್ಪ	೧೯೪೩
೮೪) ರೇವಪ್ಪ ಹರಾಳು	೧೯೪೧
೮೫) ರಾ. ವಿಠೋಬಪ್ಪ	೧೯೩೧
೮೬) ವೀರಪ್ಪ ಟಿ.ಆರ್.	೧೯೪೨
೮೭) ಶರಣಪ್ಪ ಗೋರ್ಲಿ	೧೯೩೨
೮೮) ಶಾಬಾದಿ ಕೊಟ್ರಪ್ಪ	೧೯೪೨
೮೯) ಸಕ್ರನಾಯಕ ಎಲ್	೧೯೪೨
೯೦) ಸದ್ಯೋಜಾತ ಎಂ.ಎಂ.ಜೆ.	೧೯೪೨
೯೧) ಸಿದ್ದಪ್ಪ ಬಿ.	೧೯೪೨
೯೨) ಸಿದ್ದಲಿಂಗಪ್ಪ ಟಿ. ಎಸ್.	೧೯೪೨
೯೩) ಸಿದ್ದನಗೌಡ ಟಿ.	೧೯೪೨
೯೪) ಸಿದ್ದನಗೌಡ ಪಿ.	೧೯೪೨
೯೫) ಸಿದ್ದಯ್ಯ ಟಿ.ಎಂ.	೧೯೪೨
೯೬) ಸೀತಾರಾಮರಾವ್ ಕೆ.	೧೯೩೦
೯೭) ಸೀರಗೇರಿ ರಾಮಶೆಟ್ಟಿ ಕೊಟ್ಟೂರು	೧೯೪೨
೯೮) ಹಡಪದ ಭೀಮಪ್ಪ	೧೯೪೨
೯೯) ಹಡಪದ ಗೂಳೆಪ್ಪ	೧೯೪೨
೧೦೦) ಹನುಮಂತರಾವ್ ಡಿ	೧೯೩೦
೧೦೧) ಹಳ್ಳಿ ಗುರುಬಸವರಾಜ	೧೯೩೦
೧೦೨) ಹಣ್ಣೆಕಟ್ಟೆ ಗೌಡ್ರ ಸಣ್ಣಕೊಟ್ರಗೌಡ	೧೯೩೦
೧೦೩) ಹರಾಳು ಚೆನ್ನನ ಗೌಡ	೧೯೪೩
೧೦೪) ಹಿರೇಮಠದ ಗುರುಮೂರ್ತಯ್ಯ	೧೯೪೨

ಬಳ್ಳಾರಿ ತಾಲ್ಲೂಕು

೦೧) ಅಮರಪ್ಪ ಗದಗ	೧೯೩೨
೦೨) ಆಂಜನೇಯಲು ಟಿ.ಬಿ.	೧೯೩೦
೦೩) ಉದ್ದಾನಪ್ಪ	೧೯೪೨
೦೪) ಕಲ್ಲೂರು ಸುಬ್ಬರಾವ್	೧೯೨೦ ೧೯೩೨,೧೯೪೨
೦೫) ಕಂಭಂಪಾಟಿ ಲಕ್ಷ್ಮೀ ನರಸಿಂಹ ಸೋಮಯಾಜಿ	೧೯೪೨
೦೬) ಕಲ್ಗಣೆ ಶೀವರುದ್ರಪ್ಪ	೧೯೪೦
೦೭) ಕರಿವೀರಪ್ಪ ಎ.	೧೯೪೨
೦೮) ಕಟ್ಟೆ ಅಶ್ವಥ ನಾರಾಯಣ	೧೯೩೦

೦೯) ಕುಮಾರಯ್ಯ	೧೯೪೨
೧೦) ಕುಮಾರ ಸ್ವಾಮಿ	೧೯೪೨
೧೧) ಕುರುಬ ಬೈರಪ್ಪ	೧೯೪೩
೧೨) ಕೃಷ್ಣರಾವ್ ಆರ್. ವಿ.	೧೯೩೧
೧೩) ಕೃಷ್ಣರಾವ್ ಡಿ.ಎಮ್.	೧೯೪೨
೧೪) ಕೃಷ್ಣಾಚಾರ್ಯ ಕೆ.	೧೯೪೨
೧೫) ಕೃಷ್ಣಮೂರ್ತಿ	೧೯೪೫
೧೬) ಕೃಷ್ಣಮೂರ್ತಿ ಜಿ.ಡಿ.	೧೯೩೦
೧೮) ಕೃಷ್ಣಮೂರ್ತಿ ಬಿ.	೧೯೪೨
೧೯) ಕೇಶವ ರೆಡ್ಡಿ ಎಚ್ ಆಲೂರು	೧೯೪೨
೨೦) ಕೊಟ್ರಪ್ಪ ಬಳ್ಳಾರಿ	೧೯೩೦
೨೧) ಕೊಟ್ರಬಸಪ್ಪ	೧೯೩೧
೨೨) ಕೊಟ್ರಬಸಯ್ಯ	೧೯೪೨
೨೩) ಕೊಂಡಾರೆಡ್ಡಿ ಎ.ಕಣೆಕಲ್ಲು	೧೯೪೦-೪೨
೨೪) ಕೊಂಡಯ್ಯ ಪಿ.	೧೯೩೦-೩೧
೨೫) ಕೋಲಾಚಲಂ ವೆಂಕಟರಾವ್	೧೮೮೫-೧೯೦೫
೨೬) ಗಿರಿನಾರಾಯಾಣ ವಿ.ಎನ್.	೧೯೩೨
೨೭) ವಿ.ಎಂ. ಗಿರಿ	೧೯೩೦-೩೨
೨೮) ಗುರುನಾಥ ಬಳ್ಳಾರಿ	೧೯೩೨
೨೯) ಗುರುರಾಜ ರಾವ್ ಕೆ.	೧೯೩೦
೩೦) ಗೋಪಾಲರಾವ್	೧೯೩೨
೩೧) ಗೋವಿಂದ	೧೯೩೦-೩೧
೩೨) ಗೋಪಾಲರಾವ್ ಸಿ.	೧೯೩೦
೩೩) ಚನ್ನಪ್ಪ	೧೯೪೩
೩೪) ಚಂದ್ರಪ್ಪ	೧೯೩೦
೩೫) ಚಂದ್ರಶೇಖರಾಚಾರ್ ಕೆ.	೧೯೩೨
೩೬) ಚಿದಾನಂದ ಶಾಸ್ತ್ರಿ ಕೆ.	೧೯೪೨
೩೭) ಜಂಬುನಾಥ	೧೯೪೨
೩೮) ಜಯಲಕ್ಷ್ಮೀದೇವಿ ಟಿ.ಬಿ.	೧೯೩೨
೩೯) ಟೇಕೂರು ಸುಬ್ರಹ್ಮಣ್ಯಂ	೧೯೩೨, ೧೯೪೧
೪೦) ಟೇಕೂರು ನಾರಾಯಣ ಶಾಸ್ತ್ರಿ	೧೯೨೦, ೧೯೩೦ ೧೯೪೨

೪೧) ತ್ರಯಂಬಕ	೧೯೩೦
೪೨) ದಾಮೋದರ ಸಿಂಗ್	೧೯೩೦
೪೩) ದಾಮೋದರ ಆರ್.ಕೆ	೧೯೩೦
೪೪) ದಾಸರ ದೊಡ್ಡ ಬಸಪ್ಪ	೧೯೪೨
೪೫) ಧರ್ಮಾವರಂ ವೇಣುಗೋಪಾಲಾಚಾರ್	೧೯೪೨
೪೬) ದಯಾನಂದ ರಾಜ	೧೯೩೦
೪೭) ದೇವಿ ಹೊಸೂರು	೧೯೩೦-೩೧
೪೮) ದೊಡ್ಡನ ಗೌಡ ಎಸ್	೧೯೩೨
೪೯) ನರಸಿಂಹರಾವ್ ಬಿ.	೧೯೩೦-೩೧
೫೦) ನರಸಿಂಹಾಚಾರ್ ಜಿ.ಬಿ.	೧೯೩೨
೫೧) ನಾಗಭೂಷಣಂ ಜಿ.	೧೯೩೨
೫೨) ನಾಲ್ವಾಡ ಬಸಪ್ಪ	೧೯೩೨- ೩೩
೫೩) ನಾರಾಯಣ ಸಿ.	೧೯೪೨
೫೪) ನಾರಾಯಣರಾವ್ ಎಸ್	೧೯೪೨
೫೫) ನೇರಣಿ ಕೆ.ಸಿ.ಡಿ.	೧೯೩೦
೫೬) ಪಂಚಪ್ಪ ಯಾಳಿಗೆ	೧೯೪೨
೫೭) ಪ್ರಹ್ಲಾದಾಚಾರ್	೧೯೪೨
೫೮) ಪಂಪಾಪತಿ	೧೯೩೦
೫೯) ಪುಟ್ಟಯ್ಯ ಬಿ.	೧೯೪೨
೬೦) ಬಸವಣ್ಣ ಗೌಡ ಎಚ್	೧೯೩೨
೬೧) ಬಾಲಾಜಿ ವಿಶ್ವನಾಥ ಸಿಂಗ್ ಠಾಕೂರು,	೧೯೨೦, ೧೯೩೦
೬೨) ಬಸವರಾಜ್.ಐ.	೧೯೪೨
೬೩) ಬರ್‍ರ ವೆಂಕಪ್ಪ	೧೯೪೨
೬೪) ಬಾಬಾಯು ರಾಜನ್	೧೯೪೦
೬೫) ಬಾದನ ಹಟ್ಟಿ ವೆಂಕೋಬರಾವ್	೧೯೨೦-೨೧
೬೬) ಬಾಳಾಚಾರ್ಯ ಅವಧಾನಿ	೧೯೪೨
೬೭) ಭೀಮಾಚಾರ್	೧೯೩೦
೬೮) ಭೀಮಸೇನಾಚಾರ್ಯ	೧೯೪೨
೬೯) ಭೀಮಸೇನಾಚಾರ್ಯ ಎಂ	೧೯೩೧
೭೦) ಬೆಲ್ಲೊಣ ಭೀಮರಾವ್	೧೯೩೦
೭೧) ಬುರ್ಲಿ ಶೇಷಣ್ಣ	೧೯೪೨

೭೨) ಮರುಳ ಸಿದ್ದಯ್ಯ ಬಿ.ಎಂ.	೧೯೩೦
೭೩) ಮಲ್ಲಪ್ಪ ಟಿ.ಎಲ್.	೧೯೪೨
೭೪) ಮಲೆ ಬೆನ್ನೂರು ಸತ್ಯವಂತರಾವ್	೧೯೨೦,೧೯೨೧
೭೫) ಮಲ್ಲೇಶಪ್ಪ	೧೯೩೦
೭೬)ಮಲ್ಲಯ್ಯ ಕೆ	೧೯೪೨
೭೭) ಮೃತ್ಯುಂಜಯ ಶಾಸ್ತ್ರಿ ಎನ್.ಎಂ	೧೯೪೨
೭೮) ಮೊಯಿದ್ದೀನ್ ಸುಲ್ತಾನ್	೧೯೪೦
೭೯) ಮುತ್ಯಾಲರಾವ್ ಆರ್	೧೯೩೦-೩೧
೮೦) ಮೊಗಾಲೆ	೧೯೩೦
೮೧) ರಂಗಾರಾವ್ ಡಿ.ಎಚ್.	೧೯೪೨
೮೨) ರಾಮಮೂರ್ತಿ ಡಿ.	೧೯೪೨
೮೩) ರಾಮಾಚಾರ್ ಡಿ.	೧೯೪೨
೮೪) ರಾಮಾಚಾರ್ ಕೆ.ಪಪ್ಪೂರ್	೧೯೨೦,೧೯೩೨,೧೯೪೨
೮೫) ರಾಮಚಂದ್ರಗುಪ್ತ ಕೆ.	೧೯೪೨
೮೬) ರಾಮರಾವ್ ವೈ.	೧೯೪೨
೮೭) ರಾಘುವ (ವಕೀಲರು)	೧೯೪೨
೮೮) ರುದ್ರಪ್ಪ ವೀರ ಭದ್ರಪ್ಪ	೧೯೪೨
೮೯) ರುಕ್ಮಾಜಿ ಚಾರ್ ವಿ.	೧೯೪೨
೯೦) ಲಕ್ಷ್ಮೀಣಾರಾಯಣ	೧೯೩೦
೯೧) ಡಾ. ಲಕ್ಷ್ಮೀದೇವಿ	೧೯೩೨
೯೨) ಲಕ್ಷ್ಮಣಾಚಾರ್ ಆರ್.,	೧೯೩೦
೯೩) ಲಿಂಗಪ್ಪ ವಿ.ಬಿನ್ ಬಸಪ್ಪ	೧೯೪೨
೯೪) ವದ್ದಟ್ಟಿ ದಾಸರ ತಿಮ್ಮಪ್ಪ	೧೯೪೨
೯೫) ವಾಸುದೇವಪ್ಪ	೧೯೪೧
೯೬) ವಾಸುದೇವ ರಾವ್ ಎನ್.	೧೯೪೨
೯೭) ವಿಷ್ಣುಕೆ. (ವೇಣಿ ಬ್ರದರ್ಸ್)	೧೯೩೦
೯೮) ವಿಜಯಾರಾವ್ ಜಿ.	೧೯೩೦-೩೨
೯೯) ವೀರಭದ್ರಪ್ಪ ಬಳೆ	೧೯೩೦
೧೦೦) ವೀರಭದ್ರಪ್ಪ ಕೋರಿ	೧೯೩೦
೧೦೧) ವೀರಸ್ವಾಮಿ ನಾಯ್ಡು	೧೯೪೧
೧೦೨) ವೀರಭದ್ರಪ್ಪ ಬಿ.	೧೯೪೨

೧೦೩) ವಿರೂಪಾಕ್ಷ ರಾವ್ ಕೆ.	೧೯೩೧
೧೦೪) ವೆಂಕಟರಮಣ ಎಸ್. ವೆಂಕಟರಮಣಾಚಾರ್	೧೯೪೨
೧೦೫) ವೆಂಕಟ ರಮಣಪ್ಪ	೧೯೩೦
೧೦೬) ವೆಂಕಟ ನರಸಿಂಹಾಚಾರ್	೧೯೩೨
೧೦೭) ವೆಂಕಟ ರಾಮಪ್ಪ	೧೯೩೦-೩೧
೧೦೮) ವೆಂಕಟ ರಾಮಶೆಟ್ಟಿ	೧೯೩೨
೧೦೯) ವೆಂಕಟ ಸುಬ್ಬಯ್ಯ ಎನ್	೧೯೪೨
೧೧೦) ವೆಂಕಟ ರಾಮಯ್ಯ ಎಚ್.ಎನ್.	೧೯೩೦
೧೧೧) ವೆಂಕಟ ರಾಮಯ್ಯ ಕೆ.	೧೯೪೨
೧೧೨) ವೆಂಕಮ್ಮ ಆರ್.	೧೯೪೨
೧೧೩) ವೆಂಕೋಬರಾವ್ ಬಿ,.	೧೯೩೦
೧೧೪) ವೆಂಕೋಬರಾವ್ ಡಿ.ಎಚ್.	೧೯೪೨
೧೧೫) ವೇಣುಗೋಪಾಲಾಚಾರ್ಯ ಡಿ.	೧೯೪೨
೧೧೬) ಶಂಕರ ಶಾಸ್ತ್ರಿ ಕೆ.	೧೯೪೨
೧೧೭) ಶಾಮಾಚಾರ್ ಕೆ.	೧೯೪೨
೧೧೮) ಶ್ರೀನಿವಾಸ ಅಯ್ಯಂಗಾರ್	೧೯೫೨
೧೨೦) ಶಿವರುದ್ರಪ್ಪ ಕಲ್ಲಂ	
೧೨೧) ಶೇಷಗಿರಿರಾವ್ ಎಚ್.	೧೯೩೦
೧೨೨) ಶೇಷಗಿರಿರಾವ್ ಬಿ.ವಿ.	೧೯೩೦
೧೨೩) ಶೇಷಗಿರಿಯಪ್ಪ ಕುರುಗೋಡು	೧೯೩೨
೧೨೪) ಸಣ್ಣ ಮರ್ರೆಗೌಡ	೧೯೪೨
೧೨೫) ಸಿದ್ದಣ್ಣ	೧೯೪೨
೧೨೬) ಸತ್ಯನಾರಾಯಣ ಜಿ.ಯನ್.	೧೯೩೦
೧೨೭) ಸುಬ್ಬಾರಾವ್ ಕೆ	೧೯೩೦-೩೧
೧೨೮) ಸುಬ್ಬರಾಯುಡು	೧೯೩೦
೧೨೯) ಸುಂದರ ಕೆ.	೧೯೯೩೦
೧೩೦) ಸೂರ್ಯ ನಾರಾಯಣ ಶರ್ಮ	೧೯೪೨
೧೩೧) ಹಾಲರವಿ ಸೀತಾರಾಮ ಶೆಟ್ಟಿ	೧೯೪೨
೧೩೨) ಹನುಮಂತರಾವ್ ಆರ್.	೧೯೩೦
೧೩೩) ಹನುಮಂತರಾವ್ ಡಿ.ಎಸ್	೧೯೩೦

೧೩೪) ಹೇಮಾಚಾರ್ ೧೯೩೦

೧೩೫) ಹಯಾತ್ ಸಾಬ್ ೧೯೪೨

ರಾಯದುರ್ಗ ತಾಲ್ಲೂಕು

೦೧) ಒಬ್ಬಾಚಾರಿ ೧೯೪೨

೦೨) ಕಟ್ಟಾ ರಾಮಪ್ಪ ೧೯೪೨

೦೩) ತಿಪ್ಪಯ್ಯ ವಿ. ೧೯೩೦

೦೪) ಬಾಬಯ್ಯ ೧೯೪೨

೦೫) ನಾರಾಯಣ ೧೯೪೨

೦೬) ಎಸ್ ರಾಮರೆಡ್ಡಿ ರೇಕಟ್ಲ ೧೯೪೨

೦೭) ಕೆ.ಶಿವಾರೆಡ್ಡಿ ೧೯೪೨

೦೮) ಎಂ. ವೀರಯ್ಯ ೧೯೪೨

೦೯) ಹಿರೇಹಾಳ್ ಶೆಟ್ರದೊಡ್ಡಪ್ಪ ೧೯೪೨

೧೦) ನರಸಿಂಹರೆಡ್ಡಿ ೧೯೪೨

೧೧) ಹನುಮಪ್ಪ ನಾಯಕ ೧೯೩೨, ೧೯೪೨

ಸಂಡೂರು ತಾಲ್ಲೂಕು

೧) ಸೋಮನ ಗೌಡ ವೈ.ಎಸ್. ಬಿನ್ ನಾಗನಗೌಡ ೧೯೪೬-೪೭

೨) ಸುಬ್ಬಣ್ಣಾಚಾರ್ಯ ರಾಮಾಚಾರ್ಯ ೧೯೪೧

೩) ಶರಣಯ್ಯ ಎತ್ತಿನಹಟ್ಟಿ ೧೯೪೮

೪) ಡಾ. ಎಸ್.ಬಿ. ಶರಾಫ್ ೧೯೩೨

ಶಿರುಗುಪ್ಪ ತಾಲ್ಲೂಕು

೧) ಕಲ್ಲಪ್ಪಾಚಾರಿ ಜಿ.ಕೆ. ಬೆಳಗಲ್ ೧೯೪೩

೨) ಲಿಂಗನ ಬಂಡಿ ಗೋಪರಪ್ಪ ಪರಪ್ಪ ೧೯೪೭

೩) ರಾಮಭಟ್ಟ ಬಿ. ೧೯೩೦, ೧೯೪೨

ಹಗರಿಬೊಮ್ಮನಹಳ್ಳಿ ತಾಲ್ಲೂಕು

೦೧) ಅಪ್ಪಣ್ಣವರ ವೆಂಕೋಬಣ್ಣ ೧೯೪೨

೦೨) ಚನ್ನಬಸವನಗೌಡ ೧೯೪೨, ೧೯೪೭,-೪೮

೦೩) ಬಾರಿಕರ ಯಲ್ಲಪ್ಪ ೧೯೪೨

೦೪) ಬಸಪ್ಪ ಎಚ್. ಎ. ೧೯೪೨

೦೫) ವೀರಾಪುರದ ಈಶ್ವರಪ್ಪ ೧೯೪೨

೦೬) ಸುಬ್ರಹ್ಮಣ್ಯರಾವ್ ಪಲಾಟೇ	೧೯೪೨
೦೭)ಹಾಲ್ಬಾಳ್ ಕೊಟ್ರಪ್ಪ	೧೯೪೨
೦೮) ಹಿರೇಗೌಡರ ಕೊಟ್ರಗೌಡ್ರು	೧೯೪೨

ಹಡಗಲಿ ತಾಲ್ಲೂಕು

೦೧) ಕುರುಗುಂದ ನಿಂಗಪ್ಪ	೧೯೪೨
೦೨) ಕೊಂದಾಪುರದ ಭರಮಶೆಟ್ರು	೧೯೪೨
೦೩) ಗುಡ್ಡಪ್ಪ ಕೊಗನೂರು	೧೯೪೨
೦೪) ಗೋಣೆಪ್ಪ ಕಮತ	೧೯೪೨
೦೫) ದೇಸಾಯಿ ದೇವಪ್ಪಯ್ಯನ ಗುಂಜನೂರು	೧೯೪೦-೪೧
೦೬) ಬಾಜಿರಾಯ	೧೯೩೨
೦೭) ಭರಮ ಶೆಟ್ಟಿ	೧೯೩೨
೦೮) ಭೀಮಪ್ಪ ಬಾರಿಕರ	೧೯೪೨
೦೯) ನಾಗಪ್ಪ ಗುಂಜಳ	೧೯೪೨
೧೦) ನೆಗಳೂರು ಧರ್ಮಣ್ಣ	೧೯೪೨
೧೧)ನೆಗಳೂರು ಇಮಾಮಸಾಬ್	೧೯೪೨
೧೨) ಲಂಕೆಪ್ಪ ಬನ್ನಿಮಟ್ಟಿ	೧೯೪೨
೧೩) ಶಿವದೇಸಾಯಿ ಚಿಮ್ಮನ ಹಳ್ಳಿ	೧೯೪೨
೧೪) ಶಿವಪುರದ ಏಕಾಂಬರಪ್ಪ	೧೯೪೨
೧೫) ಸತ್ಯಪ್ಪ ಕೆ.	೧೯೩೨
೧೬) ಸಣ್ಣಯ್ಯ	೧೯೪೧
೧೭) ಸಣ್ಣವೀರಯ್ಯ ಕೋಗಳಿ	೧೯೪೧
೧೮) ಸರಸಂಗಿ ಆದಿರಾಜಪ್ಪ	೧೯೩೨

ಹರಪನಹಳ್ಳಿ ತಾಲ್ಲೂಕು

೧. ಅಕ್ಕಸಾಲಿ ಭಾಸ್ಕರಾಚಾರಿ	೧೯೪೨
೨. ಅಕ್ಕಸಾಲಿ ಚಿದಾನಂದಪ್ಪ	೧೯೪೨
೩. ಅರಸನಾಳು ವೆಂಕಾರೆಡ್ಡಿ	೧೯೪೨
೪. ಆನಂದರಾವ್ ಎಲ್.	೧೯೩೦
೫. ಇಜಾರಿ ವಸುಪಾಲಪ್ಪ	೧೯೩೦,೨೯೩೦, ೧೯೪೨
೬. ಇಜಾರಿ ಶಿರಸಪ್ಪ	೧೯೪೨
೭. ಇಜಾರಿ ಶ್ರೀಧರಪ್ಪ	೧೯೩೦

೯. ಉಳ್ಳಿ ಬಸುಮಪ್ಪ ಚಿಗಟೇರಿ	೧೯೪೨-೪೩
೧೦. ಕಂದ ಕೋಡಿನಪ್ಪ	೧೯೩೦
೧೧. ಕಂಚಿನ ಕೋಟಿ ಬ್ರಹ್ಮಪ್ಪ	೧೯೩೦
೧೨. ಕರಿವೀರಪ್ಪ ಕೆ.	೧೯೪೦-೪೨
೧೩. ಕಾಳಪ್ಪ ಅಕ್ಕಸಾಲಿ	೧೯೩೦
೧೪. ಕೆ.ಬಿ. ಕುಲಕರ್ಣಿ	೧೯೪೨
೧೫. ಕೆಂಚರೆಡ್ಡಿ ವೆಂಕಟರೆಡ್ಡಿ ತಿಮ್ಮಾರೆಡ್ಡಿ ಅರಸನಾಳು	೧೯೪೨
೧೬. ಕೊಟ್ರಪ್ಪ ಮಾಲ್ವಿ	
೧೭. ಕೊಟ್ರಪ್ಪ ಎಚ್.	೧೯೪೨
೧೮. ಕೊಟ್ರಗೌಡ ಎ.ಬಿ.ಆರ್. ಅರಸನಾಳು	೧೯೪೨
೧೯. ಗುರುಸಿದ್ದಯ್ಯ ಶೃಂಗಾರ ತೋಟ	೧೯೪೨
೨೦. ಗೂಳಪ್ಪ ಕೆ.	೧೯೪೨
೨೧. ಗೌಡರ ಗಂಗನಗೌಡ ದೇಸಾಯಿ	೧೯೨೪,೧೯೩೦, ೧೯೪೨
೨೨. ಗೋಣಪ್ಪ	೧೯೪೨
೨೩. ಗೋವಿಂದಾಚಾರಿ	೧೯೩೦
೨೪. ಚಂದ್ರಪ್ಪ ಶೆಟ್ಟಿ	೧೯೩೨
೨೫. ಚಂದ್ರಯ್ಯ ಟಿ.ಎಂ.	೧೯೪೨
೨೬. ಜಗನ್ನಾಥರಾವ್ ಬಿ.	೧೯೪೨
೨೭. ಚಂದ್ರಪ್ಪ ಎಚ್.ಎಂ.	೧೯೪೨
೨೮. ಚಿಗಟೇರಿ ಚನ್ನನಗೌಡ	೧೯೪೨
೨೯. ಚನ್ನಬಸಪ್ಪ ಮತ್ತಿಹಳ್ಳಿ	೧೯೪೩
೩೦. ಚನ್ನಬಸಪ್ಪ ಬಿ.	೧೯೪೨
೩೧. ತಾಮ್ರಪರ್ಣಿ ವೆಂಕೋಬಾಚಾರ್ಯ	೧೯೩೨
೩೨. ತಾಮ್ರಪರ್ಣಿ ಗೋಪಾಲ ಕೃಷ್ಣಾಚಾರ್ಯ	೧೯೩೨
೩೩. ತಾಮ್ರಪರ್ಣಿ ಗೋವಿಂದಾಚಾರಿ	೧೯೩೨-೩೩
೩೪. ತಿರುಮಲರಾವ್	೧೯೩೦
೩೫. ದಯಾನಂದ ರಾಜು	೧೯೪೨
೩೬. ದಂಡಿನ ರಾಮಾರಾವ್	೧೯೩೨
೩೭. ದಾಮೋದರ ಜಾಂಬಳೇಕರ್	೧೯೩೦
೩೮. ದೀರೇಂದ್ರನಾಥ್	೧೯೩೦
೩೯. ದೇಸಾಯಿ ಎಸ್.ವಿ.	೧೯೪೦-೪೨

೪೦. ನೆಲ್ಕುದ್ರಿ ಮುಕ್ಕಣ್ಣ	೧೯೪೧
೪೧. ಪದ್ಮಜ್ಜ ಸಿದ್ದಪ್ಪ	೧೯೪೨
೪೨. ಪುಟ್ಟಪ್ಪ ಎ.	೧೯೪೨
೪೩. ಪೂರ್ಣಾಚಾರಿ ಎ.	೧೯೩೦
೪೪. ಬಡಿಗೇರ ಬಸಪ್ಪ	೧೯೪೨
೪೫. ಬಣಕಾರ ಹೊನ್ನಪ್ಪ	೧೯೩೨
೪೬. ಬಾಲಾಜಿ	೧೯೪೨
೪೭. ಭಾಸ್ಕರಪ್ಪ ಎ.	೧೯೪೨
೪೮. ಬಸಯ್ಯ ಎಚ್.ಎಂ.	೧೯೪೨
೪೯. ಬಸವಲಿಂಗಪ್ಪ ಬೆಣ್ಣೆಹಳ್ಳಿ	೧೯೩೦
೫೦. ಬಸವಲಿಂಗಯ್ಯ ಆರ್.ಎಂ.	೧೯೩೦
೫೧. ಭೀಮಪ್ಪ ಜಿ.	೧೯೩೨
೫೨. ಬೂದಿ ಬ್ರಹ್ಮಪ್ಪ	೧೯೩೨
೫೩. ಬೂದಿ ಭರ್ಮಪ್ಪ ಊರ್ಫ್ ತಮ್ಮಣ್ಣ	೧೯೪೨-೪೩
೫೪. ಬ್ರಹ್ಮನಂದ ಗೌಡ ಚಿಗಟೇರಿ	೧೯೪೨
೫೫. ಭರಮಪ್ಪ ಜಿ.	೧೯೪೨
೫೬. ಭರಮನಗೌಡ ಶಿ.ಯಂ.	೧೯೪೨
೫೭. ಭೋಜನಾಯ್ಕ ಬಣಜಾರ	೧೯೪೨
೫೮. ಮರುಳನಗೌಡ	೧೯೪೨
೫೯. ಮತ್ತಿಹಳ್ಳಿ ದ್ಯಾಮಪ್ಪ ಚಿಗಟೇರಿ	೧೯೪೨
೬೦. ಮತ್ತಿಹಳ್ಳಿ ಅಜ್ಜಪ್ಪ ಚಿಗಟೇರಿ	೧೯೪೨
೬೧. ಮತ್ತಿಹಳ್ಳಿ ಚನ್ನಬಸಪ್ಪ	೧೯೪೩-೪೪
೬೨. ಮಾಲ್ವಿ ಸಣ್ಣಕೊಟ್ರಪ್ಪ	೧೯೪೩
೬೩. ಮುದುಕಪ್ಪ ಬಿ.	೧೯೪೦-೪೨
೬೪. ಮುದುಗಲ್ ನಾಗಪ್ಪಶೆಟ್ಟಿ	೧೯೪೨
೬೫. ಯಲಗಾರ ಅಜ್ಜಯ್ಯ	೧೯೪೨
೬೬. ರಂಗಪ್ಪ ಹೊನ್ನಾಳಿ	೧೯೪೨
೬೭. ಡಾ. ರಾಮರಾವ್	೧೯೩೨
೬೮. ರಾಮಭಟ್ಟ	೧೯೩೦
೬೯. ರುದ್ರಪ್ಪ ಕೆ.	೧೯೩೦
೭೦. ರುದ್ರಪ್ಪ ಎಂ.	೧೯೪೨

೭೧. ರೇವಣ್ಣ ಗೌಡ ಮಾದಿಹಳ್ಳಿ ೧೯೩೦
೭೨. ಲಕ್ಕುಂಡಿ ಶಾಮರಾವ್ ೧೯೩೦
೭೩. ಲಕ್ಕುಂಡಿ ಅನಂತಾಚಾರ್ ೧೯೩೦
೭೪. ಲಿಂಗಪ್ಪ ಹರಪನಹಳ್ಳಿ ೧೯೩೦-೩೧
೭೫. ವಸಂತನಗೌಡ ೧೯೩೦-೩೧
೭೬. ವೆಂಕಾರೆಡ್ಡಿ ಕೆ. ೧೯೪೨
೭೭. ವೆಂಕೋಬರಾವ್ ೧೯೩೦
೭೮. ವೀರಭದ್ರಪ್ಪ ಕೆ. ೧೯೩೦
೭೯. ಶಾನುಭಾಗರ ಈರಜ್ಜ ಕಂಚಿಕೆರೆ ೧೯೪೨
೮೦. ಶೆಟ್ರ ಪರಮೇಶ್ವರಪ್ಪ ೧೯೪೨
೮೧. ಶೆಟ್ರ ಚೂಡಪ್ಪ ೧೯೩೦
೮೨. ಶೇಷಗಿರಿ ರಾವ್ ೧೯೩೦
೮೩. ಶಿದ್ಲಿಂಗಯ್ಯ ಕೆ. ೧೯೪೨
೮೪. ಸೇತುರಾಮಾಚಾರ್ ಕೆ. ೧೯೪೨
೮೫. ಸಿದ್ದಪ್ಪ ವಿ. ಕಂಚಿಕೆರೆ ೧೯೪೨-೪೩
೮೬. ಹಯವದನರಾವ್ ಆರ್.ಎಸ್. ೧೯೩೦
೮೭. ಹಿರೇಮಠದ ವೀರಭದ್ರಯ್ಯ ೧೯೪೨-೪೩
೮೮. ಹೊನ್ನಳ್ಳಿ ಈಶ್ವರಪ್ಪ ೧೯೪೨-೪೩

ಹೊಸಪೇಟೆ ತಾಲ್ಲೂಕು

೦೧) ಅಪ್ಪಣ್ಣ ಆರ್. ೧೯೪೨
೦೨) ಅಡವಿರಾವ್ ಕುಲಕರ್ಣಿ ೧೯೩೦-೧೯೪೨
೦೩) ಅಸುಂಡಿ ತಿರುಮಲರಾವ್ ೧೯೪೨
೦೪) ಆಂತೋನಿ ಎಸ್ ೧೯೪೨
೦೫) ಕಟ್ಟಿ ಶ್ರೀನಿವಾಸಾಚಾರ್ ೧೯೪೨
೦೬) ಕುಸನೂರ ವಿ.ಎಸ್. ೧೯೪೩
೦೭) ಕೃಷ್ಣರಾವ್ ಡಿ. ೧೯೪೨
೦೮) ಕೃಷ್ಣಮೂರ್ತಿ (ಐ ಎನ್ ಎ) ೧೯೪೨
೦೯) ಕೃಷ್ಣಮೂರ್ತಿ ರಾಮಪ್ಪ ೧೯೪೨
೧೦) ಕೃಷ್ಣಮೂರ್ತಿ ವೈ.ಡಿ. ೧೯೪೫-೪೬
೧೧) ಕೋರಿಶೆಟ್ಟಿ ಜಂಬಣ್ಣ ೧೯೪೨
೧೨) ಕೊಟ್ರಪ್ಪ ಎಚ್ ೧೯೪೨

೧೪) ಕೋರಿಶೆಟ್ಟಿ ಸಂಗಪ್ಪ	೧೯೪೨
೧೫) ಗಣಪತಿ ಎಸ್.	೧೯೪೨
೧೬) ಗೆಣಿಕಿ ಹಾಳ್ ಭೀಮಪ್ಪ	೧೯೪೨
೧೭) ಚನ್ನಬಸವನಗೌಡ ಬಿ.	೧೯೪೮
೧೮) ಜಯರಾಮಾಚಾರ್	೧೯೪೨
೧೯) ನಂದನ ಗೌಡ ಎಸ್ ಎಸ್.	೧೯೪೨
೨೦) ಡಾ. ನಾಗನ ಗೌಡ	೧೯೪೦
೨೧) ನಾರಾಯಣ ಸ್ವಾಮಿ ಜಿ.	೧೯೪೨
೨೨) ನಾರಾಯಣರಾವ್ ಬಿ.ಎನ್.	೧೯೪೨
೨೩) ನಾರಾಯಣರಾವ್ ರಮಣಾಚಾರ್ಯ	೧೯೪೨
೨೪) ನೆಲವಿಗಿ ರಾಮಚಂದ್ರಪ್ಪ	೧೯೪೨
೨೫) ತಟ್ಟಿ ಕೃಷ್ಣರಾವ್	೧೯೩೩
೨೬) ತಳವಾರ ಶಂಕರಪ್ಪ	೧೯೪೨
೨೭) ದಳವಾಯಿ ಅಂಬಣ್ಣ	೧೯೪೨
೨೮) ದಳವಾಯಿ ಭೀಮಪ್ಪ	೧೯೪೨
೨೯) ಪತ್ತಿಗೊಂಡ ಗುರುನಾಥ ಶೆಟ್ಟಿ	೧೯೪೧
೩೦) ಪ್ರಹ್ಲಾದ ರಾವ್ ಎಸ್	೧೯೪೨
೩೧) ಬೂದಿಹಾಳ್ ಅನಂತಾಚಾರ್	೧೯೪೨
೩೨) ಬೆಲ್ಲದ ಚೆನ್ನಪ್ಪ	೧೯೪೧
೩೩) ಡಾ. ಮಂಜುನಾಥ ಕಂಪ್ಲಿ	೧೯೪೩
೩೪) ಮತ್ತಿಹಳ್ಳಿ ರಾಘವೇಂದ್ರರಾವ್	೧೯೩೦
೩೫) ಮಠದ ಮರಿಸ್ವಾಮಯ್ಯ ಪಾಟೀಲ್	೧೯೪೧
೩೬) ಮೂಲಿ ಮನೆ ಭೀಮಣ್ಣ	೧೯೪೨
೩೭) ರಾಮ್ ಭಟ್ ಜೋಷಿ	೧೯೪೨
೩೮) ರಾರಾವಿ ವೀರಣ್ಣ	೧೯೪೨
೩೯) ಲಿಂಗಪ್ಪ ಪ್ಯಾಟಿ	೧೯೪೩
೪೦) ವರ್ಧಮಾನ ಬಿ.	೧೯೪೨
೪೧) ವಡ್ಡರ್ ಹನುಮಂತಪ್ಪ	೧೯೪೨
೪೨) ವಡಿಗೇರಿ ಲಿಂಗಪ್ಪ	೧೯೪೨
೪೩) ವಿರೂಪಾಕ್ಷಯ್ಯ ಎಸ್.ಎಂ.	೧೯೪೨
೪೪) ವೆಂಕಣ್ಣ ಜಿ.	೧೯೪೨
೪೫) ವೆಂಕೋಬಾಚಾರ್ ಜಂತಗಲ್	೧೯೪೧

೪೬) ಶಿವಪ್ಪಯ್ಯ ವೆಂಕಪ್ಪಯ್ಯ ದೇಸಾಯಿ	೧೯೪೨
೪೭) ಸಜ್ಜೇದ ವೀರಣ್ಣ	೧೯೪೨
೪೮) ಡಾ. ಸಂಜೀವನಾಥ ಐಕಳ. ಕಂಪ್ಲಿ	೧೯೪೨
ಸೀರಿ ಗಣಪತಿ	೧೯೪೨
೪೯) ಹನುಮಂತ ಕೆ.	೧೯೪೨
೫೦) ಹಿಂಡಿ ಸಿದ್ದಪ್ಪ	೧೯೪೨

ತಾಲ್ಲೂಕು	ಒಟ್ಟು
ಆದವಾನಿ	೨೨
ಆಲೂರು	೧೬
ಕೂಡ್ಲಿಗಿ	೧೦೪
ಬಳ್ಳಾರಿ	೧೩೫
ರಾಯದುರ್ಗ	೧೦
ಸಂಡೂರು	೪
ಶಿರುಗುಪ್ಪ	೩
ಹಗರಿಬೊಮ್ಮನಹಳ್ಳಿ	೧೮
ಹಡಗಲಿ	೧೮
ಹರಪನಹಳ್ಳಿ	೮೮
ಹೊಸಪೇಟೆ	೫೦
ಒಟ್ಟು	೪೬೮

ಆಕರ ಸೂಚಿ

ಕೇಶವರಾವ್ ಟಿ. ಬಿ. (೧೯೭೫)
ಇಜಾರಿ ವಸುಪಾಲಪ್ಪನವರು, ಇಂಡಿಯಾ ಬುಕ್ ಹೌಸ್, ಬೆಂಗಳೂರು

ಸ್ವಾತಂತ್ರ್ಯ ಹೋರಾಟ: ಬಳ್ಳಾರಿ ಜಿಲ್ಲೆ ಕಾಣಿಕೆ. ೧೮೫೭-೧೯೪೭
(ಪ್ರಕಾಶಕರು: ಗೊತ್ತಿಲ್ಲ) ಪ್ರಕಟಣೆ ವರ್ಷ ೧೯೫೩

ಕರ್ನಾಟಕದಲ್ಲಿಯ ಸತ್ಯಾಗ್ರಹದ ವರದಿಯು (೧೯೩೦-೩೧)
ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ. ಧಾರವಾಡ ೧೯೩೧

ಗೋಪಾಲ್ ಬಾ.ರಾ. (೧೯೮೬)
ಕರ್ನಾಟಕ ಇತಿಹಾಸ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಗೋಪಾಲರಾವ್.ಎಚ್.ಎಸ್. (೧೯೯೬)
ಕರ್ನಾಟಕ ಏಕೀಕರಣ ಇತಿಹಾಸ. ನವಕರ್ನಾಟಕ ಪ್ರಕಾಶನ. ಬೆಂಗಳೂರು

ಚಂದ್ರಶೇಖರ ಎಸ್. (ಸಂ) (೧೯೯೭)
ಕರ್ನಾಟಕ ಚರಿತ್ರೆ ಸಂ: I ೧೯೦೦-೧೯೫೬
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಂದ್ರಶೇಖರ ಟಿ.ಆರ್. (೧೯೯೪)
ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ
ಶ್ರೀ ಸಿದ್ಧಲಿಂಗಾಚಾರ್ಯ ಜ್ಞಾನ ಪ್ರಕಾಶನ. ಹೂವಿನ ಹಡಗಲಿ

ಟಂಗಟೂರಿ ಪ್ರಕಾಶಂ (೧೯೭೨)
ನಾ ಜೀವಿತ ಯಾತ್ರಾ (ತೆಲುಗು) ಆತ್ಮ ಚರಿತ್ರೆ ಸಂ.೧. ಪು. ೬೬
ಎಂ. ಶೇಷಾಚಲಂ ಆಂಡ್ ಕಂ. ಸಿಕಂದರಾಬಾದ್.

ಬೆಲ್ಲದ ಚನ್ನಪ್ಪ (ಪ್ರಕಟಣೆ ವರ್ಷ ಗೊತ್ತಿಲ್ಲ)
ಹಣ್ಣೆಲೆಯ ಹಸಿರು ನೆನಪುಗಳು: ಆತ್ಮ ಚರಿತ್ರೆ
ಕಲ್ಮರೇಶ್ವರ ಪ್ರಕಾಶನ, ಹೊಸಪೇಟೆ.

ಮರುಳಸಿದ್ಧಯ್ಯ ಬಿ.ಎಂ. (೧೯೮೯)
ಸ್ವಾತಂತ್ರ್ಯ ಯೋಧನ ಸಂವೇದನೆ
ಮಹರ್ಷಿ ಶಂಭೂಕ ಪ್ರಕಾಶನ, ಬಳ್ಳಾರಿ

ರಾಮಚಂದ್ರ ತಿರುಮಲ (೧೯೯೬)
'ಹಂಪಿ ನುಂಚಿ ಹರಪ್ಪದಾಕ' (ತೆಲುಗು), ಆಂಧ್ರಪ್ರಭ
ಪುಟಗಳು : ೧೫-೧೬ ೨೬.೬.೧೯೯೬

ವಿರೂಪಾಕ್ಷ (೧೯೯೫)
ಬಳ್ಳಾರಿ ಜಿಲ್ಲೆಯಲ್ಲಿ ಕಲೆಕ್ಟರುಗಳ ಆಳ್ವಿಕೆ : (೧೮೦೦-೧೯೪೭)
ಎಂ.ಫಿಲ್. ಪ್ರೌಢ ಪ್ರಬಂಧ (ಅಪ್ರಕಟಿತ)
ಕನ್ನಡ ವಿಶ್ವವಿದ್ಯಾಲಯ, ಹಂಪಿ

ವೀರಭದ್ರರಾವ್, ಮಾದಲ (೧೯೮೬) (ತೆಲುಗು)
ಜಾತಿಯ ಸ್ವಾತಂತ್ರ್ಯ ಸಮರಂಲೊ ಆಂಧ್ರುಲ ಉಜ್ವಲ ಪಾತ್ರಂ
ಕಲ್ಚರಲ್ ರೆನಾಸಾನ್ಸ್ ಸೊಸೈಟಿ ಆಫ್ ಇಂಡಿಯಾ,
ಹೈದ್ರಾಬಾದ್

ಶಂಕರನಾರಾಯಣರಾವ್. ಎನ್.ಪಿ. (೧೯೯೧)
ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು : ರಾಷ್ಟ್ರೀಯ ಚಳುವಳಿಯ ಸಮಗ್ರ ಪರಿಚಯ
ನವ ಕರ್ನಾಟಕ ಪ್ರಕಾಶನ, ಬೆಂಗಳೂರು

ಸುಬ್ರಹ್ಮಣ್ಯಂ, ಟೇಕೂರು (೧೯೬೯)
'ನಾ ಕಂಡ ಗಾಂಧೀಜಿ' ಇಲ್ಲಿ ಉದ್ಧೃತ, ಗಾಂಧಿ ಮತ್ತು ಕರ್ನಾಟಕ, ಸಿದ್ಧವನಹಳ್ಳಿ ಕೃಷ್ಣ ಶರ್ಮ (ಸಂ.), ಪುಟಗಳು : ೪೩೨-೪೩೫, ಗಾಂಧಿ ಸ್ಮಾರಕ ನಿಧಿ, ಬೆಂಗಳೂರು

ಸೂರ್ಯನಾಥ ಕಾಮತ್ (೧೯೭೪) (ಸಂ.)
ಸ್ವಾತಂತ್ರ್ಯ ಹೋರಾಟದ ಸ್ಮೃತಿಗಳು, ಸಂ. ೧ ಮತ್ತು ೩
ಪುಟಗಳು : ಕ್ರಮವಾಗಿ ೮೭೩-೯೮೧ ಮತ್ತು ೪೩೦ ರಿಂದ ೪೩೬
ಗೀತಾ ಬುಕ್ ಹೌಸ್, ಮೈಸೂರು

Guha A.C. (1982)
Indian Struggle Quarter of a century, 1921-46, Pat-1
Publication Division, Ministry of Information and Broadcasting, G.O.I., New Delhi.

Freedom Struggle Betrayed : India 1885-1947
Research unit for Political Economy, Mumbai, 1997

Mysore State Gazetteer : Bellary District (1972)
Government of Mysore, Bangalore

Manual of Madras Presidency : (Map) No.1, 1987

Sethuram E.R. (1997)
The Saga of Freedom Struggle', March of Karnataka
Vol:35, No.8, Aug., pp:-11

Bellary District (a confidential report about the Civil Dis-obedience movement, by the District Magistrate : A. Galltti) dated --1931, pp 7-79

District Calendar of events of the Civil Dis-obedience movement August 1942 to December 1942 (a secret document of Government of Madras, Madras Record Office (26.9.1967, Madras)

Durgappa M.K. (1996)
Freedom Movement in Bellary District
(An unpublished M.Phil. thesis), Department of History, Gulbarga University, Gulbarga

Madras Presidency : An illustration of the records of government and the yearly Administration Reports (in three volumes) Government Press, Madras, 1886.

Maclean C.D., (1885)
Manual of Administration of Madras Presidency
Vol.I, Asian Educational Services, New Delhi

Mahatma Gandhi (1966)
The Collected works of Mahatma Gandhi
Vol.21 & 33, Publication Division, Govt. of India, New Delhi

Taylor G.W. (1888)
Names of the Towns and Villages in the Madras Presidency (districts and sub-districts under section 5 of the Indian Registration Act No III of 1877.

ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ 'ಕನ್ನಡ ಸಂಸ್ಕೃತಿ'ಯ ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ.

ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ ಬದುಕುಮಾಡಿದೆ. ಹಿಂದಿನದು ಕನ್ನಡ-ಸಂಸ್ಕೃತ ದ್ವಿಭಾಷಾ ಸಂದರ್ಭ, ಇಂದಿನದು ಕನ್ನಡ-ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲಿಷ್, ಬೆಳಕಾಗುತ್ತಲೇ ಬೆಂಕಿಯಾಗಬಹುದೇ? ಎಂಬ ಭಯವನ್ನು ನಮ್ಮಲ್ಲಿ ಹುಟ್ಟಿಸಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ,ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶೀ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು ಕನ್ನಡವನ್ನು ಬದುಕಿಸಬೇಕಾಗಿದೆ, ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶ ಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು, ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ, ಅದನ್ನು ತನ್ನ ಪ್ರಸಾರಾಂಗದ ಮೂಲಕ ಪ್ರಧಾನವಾಗಿ ಪೂರೈಸುತ್ತಲಿದೆ. ಈ ದಿಸೆಯಲ್ಲಿ ಬೆಳಕು ಕಂಡ ಒಂದು ಉತ್ತಮ ಕೃತಿಯಾಗಿದೆ 'ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ'.

ಭಾರತದ ಸ್ವಾತಂತ್ರ್ಯ ಹೋರಾಟ ಜಾಗತಿಕ ಮಹತ್ವದ ಒಂದು ಚಳುವಳಿಯಾಗಿದೆ. ಈ ರಕ್ತರಹಿತ ಕ್ರಾಂತಿಯಲ್ಲಿ ಕರ್ನಾಟಕ ವಹಿಸಿದ ಪಾತ್ರ ಸಣ್ಣದೇನಲ್ಲ. ಇದರ ಅಂಗವಾಗಿ ಹಳೆಯ ಬಳ್ಳಾರಿ ಜಿಲ್ಲೆ ದುಡಿದ ರೀತಿ ಏನು? ನಡೆದ ದಾರಿ ಯಾವುದು? ಇತ್ಯಾದಿ ಪ್ರಶ್ನೆಗಳಿಗೆ ನೀಡಿದ ಉತ್ತರವಾಗಿದೆ, ಈ ಪುಸ್ತಕ.

ಡಾ. ಎಂ. ಎಂ. ಕಲಬುರ್ಗಿ

ಕುಲಪತಿಗಳು